ನಮಗೆ ಸಹಕಾರ ಕೊಟ್ಟಿದ್ದಾರೆ. ತಮ್ಮೆಲ್ಲರಿಗೂ ಕೂಡ ನಾನು ಜಿಲ್ಲೆಯ ಜನತೆಯ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮುಂದೆ ಈ ಸಮಸ್ಯೆ ಏನಿದೆ, ಅದು ಇತ್ಯರ್ಥವಾಗುವಲ್ಲಿ ಆದಷ್ಟು ಶೀಘ್ರ ಕ್ರಮವನ್ನು ಕೈಗೊಳ್ಳಬೇಕೆಂಬ ಮನವಿಯನ್ನು ಮಾಡುತ್ತೇನೆ. 30ನೇ ತಾರೀಖು ಕೊಡಗು ಬಂದ್ ಮಾಡಿ ಈ ಕಡೆ ಬರಬೇಕೆಂದು ತೀರ್ಮಾನ ಮಾಡಿದ್ದೇವೆ, ಅದನ್ನು ಹಿಂತೆಗೆದುಕೊಳ್ಳಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರು ಆ ಇಡೀ ಜನತೆಯನ್ನು ವಿನಮತಿ ಮಾಡಬೇಕೆಂದು ಮುಖ್ಯಮಂತ್ರಿಯವರಿಗೆ ವಿನಂತಿಸಿ, ಎಲ್ಲರಿಗೂ ಅಭಿನಂದಿಸಿ, ನನ್ನ ಮಾತು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : 30ನೇ ತಾರೀಖು ಕೊಡಗು ಜಿಲ್ಲೆಯಿಂದ ಒಂದು ಪ್ರತಿಭಟನಾ ರ‍್ಯಾಲಿಯನ್ನು ಅಲ್ಲಿಯ ಜನತೆ ಏನು ಹಮ್ಮಿಕೊಂಡಂಥ ಒಂದು ಸಂದರ್ಭವೇನಿತ್ತು, ಆ ವಿಷಯವಾಗಿ ಈಗಾಗಲೇ ಸರ್ಕಾರ ಕ್ರಮವನ್ನು ತೆಗೆದುಕೊಂಡಿರುವುದರಿಂದ, ಕೊಡಗು ಜಿಲ್ಲೆಯ ಜನರಲ್ಲಿ ನಾನು ಈ ಸದನದ ಮೂಲಕ ವಿಶೇಷವಾದ ಮನವಿಯನ್ನು ಮಾಡುತಿದ್ದೇನೆ. 30ನೇ ತಾರೀಖಿನ ಪ್ರತಿಭಟನಾ ರ‍್ಯಾಲಿಯನ್ನು ಅವರು ಕೈಬಿಡುವ ಮೂಲಕ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವನ್ನು ಬೆಂಬಲಿಸುತ್ತಾರೆಂಬ ವಿಶ್ವಾಸದಿಂದ ಇವತ್ತು ಸದನದ ಮುಖಾಂತರ ಅಲ್ಲಿಯ ಜನತೆಗೆ ಈ ಪ್ರತಿಭಟನೆಯನ್ನು ಕೈಬಿಡಬೇಕೆಂದು ಮನವಿ ಮಾಡುತ್ತಿದ್ದೇನೆ.

2. ವಿತ್ತೀಯ ಕಾರ್ಯಕಲಾಪ :
2007–08ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಈಗಾಗಲೇ ಈ ಕೊಡಗಿನ ಜ್ವಲಂತ ಸಮಸ್ಯೆಯನ್ನು ನಗೆಹರಿಸಿ ಒಂದು ತಿಳಿ ವಾತಾವರಣ ಸದನದಲ್ಲಿ ಸೃಷ್ಟಿಯಾಗಿದೆ. 2007–08ರ ಬಜೆಟ್ ಮೇಲೆ ವಿರೋಧ ಪಕ್ಷದ ನಾಯಕರು ಮತ್ತು ಸದನದ ಎಲ್ಲ ಸದಸ್ಯರೂ ಸಾಕಷ್ಟು ಹೇಳಿದ್ದಾರೆ ಮತ್ತು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅವರು ಪ್ರಸ್ತಾಪ ಮಾಡಿದಂಥ ವಿಷಯಗಳನ್ನೇ ಹೆಚ್ಚಾಗಿ ಪ್ರಸ್ತಾಪ ಮಾಡದೇ ಯಾವ ವಿಷಯಗಳು ಹೆಚ್ಚಿನ ರೀತಿಯಲ್ಲಿ ಇಲ್ಲಿ ಬೆಳಕಿಗೆ ಬರಲಿಲ್ಲ ಅಥವಾ ಅವುಗಳ ಬಗ್ಗೆ ಹೆಚ್ಚು ಬೆಳಕು ಚೆಲ್ಲತಕ್ಕಂಥದ್ದಾಗಲಿಲ್ಲ, ಅದರ ಬಗ್ಗೆ ನಾನು ನನ್ನ

ಭಾಷಣವನ್ನು ಸೀಮಿತಗೊಳಿಸುತ್ತೇನೆ. ಅಷ್ಟು ಹೇಳಿದ ಮೇಲೆ ಇನ್ನು ಇಬ್ಬರು ಮಾತ್ರ ಯುವಕರಿದ್ದಾರೆ. ಅವರು ಮಾತನಾಡುತ್ತಾರೆ. ಅಲ್ಲಿಂದ ಉತ್ತರವನ್ನು ಒಂದು ಗಂಟೆಯ ನಂತರ ಕೊಡುತ್ತೇವೆಂದು ಅರ್ಥ ಸಚಿವರು ಕೂಡ ಹೇಳಿದ್ದಾರೆ. ನಾನು ನೇರವಾಗಿ ಪ್ರಾದೇಶಿಕ ಅಸಮತೋಲನಕ್ಕೆ injustice ಏನಾಗಿದೆ ಅದರ ಬಗ್ಗೆ ಈ ಪ್ರಸ್ತಾಪ ಮಾಡುತ್ತೇನೆ. ಈ ಅಸಮತೋಲನ ಇದು ಅನೇಕ ಸಾರಿ ನಾವು ಸದನದಲ್ಲಿ ಮಾತನಾಡಿದಾಗ ಕೆಲವು ಪ್ರಶ್ನೆಗಳು ಉದ್ಭವಿಸುವುದು ಮತ್ತು ಏನೋ ಈ ರಾಜ್ಯದಲ್ಲಿ ಪದೇ ಪದೇ ಕೆಲವು ಭಾಗದ ಬಗ್ಗೆಯೇ ಪ್ರಸ್ತಾಪ ಮಾಡುತ್ತಿದ್ದಾರೆನ್ನುವ ಭಾವನೆ ಬಂದಿರುವುದನ್ನು ನಾವು ಸಾಕಷ್ಟು ಸಲ ಕಂಡಿದ್ದೇವೆ. ಯಾವುದೇ School Subject ಬರಬಹುದು, College Subject ಬರಬಹುದು, ಬಜೆಟ್ ಅಲಾಟ್‌ಮೆಂಟ್ ವಿಷಯ ಬರಬಹುದು, ಅದು ಬಂದಾಗೆಲ್ಲ ಮಾತನಾಡಿದಾಗ ಕೆಲವು ಸದಸ್ಯರು ನಿಮ್ಮ ಕಾಲದಲ್ಲಿ ಏನು ಮಾಡಿದಿರಿ, ಅವರ ಕಾಲದಲ್ಲೇನಾಯಿತು? ನೀವು ಇದ್ದಾಗ ಮಾಡಿಕೊಂಡಿ ಲ್ಲವೇನು? ಇಂಥದ್ದನ್ನು ಹೇಳತಕ್ಕಂಥದ್ದನ್ನು ನಾವು ಕೇಳಿದ್ದೇವೆ.

ಆದರೆ ನನ್ನ ಕಳಕಳಿಯ ಮನವಿ ಏನೆಂದರೆ, ಅವರು ಸಮಾಧಾನವಾಗಿ ನಮ್ಮ ವಿಷಯವನ್ನು ತಿಳಿದುಕೊಂಡರೆ, ಖಂಡಿತವಾಗಿ ಕರ್ನಾಟಕ ರಾಜ್ಯದ ಕೆಲವು ಭಾಗದಲ್ಲಿ ಅನ್ಯಾಯವಾಗಿದೆ ಎನ್ನುವುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಮತ್ತು ರಾಜ್ಯದ ಹಿತದೃಷ್ಟಿಯಿಂದ ಮತ್ತು ರಾಜ್ಯದ ಐಕ್ಯತೆಯ ದೃಷ್ಟಿಯಿಂದ ಇಡೀ ಕನ್ನಡ ಜನತೆಯ ಪರವಾಗಿ ಅವರೆಲ್ಲರೂ ಕೂಡ ನಿಲ್ಲುತ್ತಾರೆ ಎನ್ನುವ ಭಾವನೆ ನನ್ನದು. ನಾವು ಒಬ್ಬರಿಗೊಬ್ಬರಿಗೆ ಕೆರಳಿಸಿ ಮಾತನಾಡುವುದಕ್ಕಿಂತಲೂ ಅಲ್ಲಿರತಕ್ಕಂಥ ವಸ್ತುಸ್ಥಿತಿಯನ್ನು ಮತ್ತು ನೀವು ನಡೆದುಕೊಳ್ಳುವ ವಸ್ತುಸ್ಥಿತಿಯನ್ನು, ಈ ಎರಡನ್ನೂ ತುಲನೆ ಮಾಡಿದಾಗ, ಖಂಡಿತವಾಗಿ ಅನ್ಯಾಯವಾದಂಥ ಭಾಗಕ್ಕೆ ಸರಿಪಡಿಸಬೇಕೆನ್ನುವುದನ್ನು ಒಪ್ಪಿಕೊಳ್ಳುತ್ತಾರೆನ್ನುವ ವಿಶ್ವಾಸ ನನಗಿದೆ. ಏಕೆಂದರೆ, ಎಲ್ಲರೂ ಕೂಡ ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಾಗಬೇಕು, ಈ ರಾಜ್ಯದ ಜಲ, ನೆಲ, ಉಳಿಸಿಕೊಳ್ಳಬೇಕು, ಈ ರಾಜ್ಯದಲ್ಲಿರತಕ್ಕಂಥ ಒಂದು ಮೂಲಭೂತ ಸೌಕರ್ಯಗಳನ್ನು ಎಲ್ಲರಿಗೂ ಕೊಡಬೇಕು, ಮತ್ತು ಎಲ್ಲರೂ ಸಮಾನವಾಗಿ ಬಾಳಬೇಕು, ಬದುಕಬೇಕು ಎನ್ನತಕ್ಕಂಥ ಇಚ್ಛೆ ನಮ್ಮೆಲ್ಲರಿಗೂ ಇದೆ. ಹೀಗಿರುವಾಗ ಇವತ್ತು ಏಕೆ ಈ ಬಜೆಟ್ ಈ ರೀತಿಯಾಯಿತು?

ಇದನ್ನು ನಾನು ಹೇಳತಕ್ಕಂಥದ್ದು ಅಲ್ಲ. ನಾವು ಹೇಳಿದರೆ, ಅನೇಕ ಸಾರಿ ಅವರಿಗೆ ಪದೇ ಪದೇ ಚುಚ್ಚಿಮಾತನಾಡಿದ ಹಾಗೆ ಆಗುತ್ತದೆ. ಇವರು ಇದೇ ರೀತಿಯಲ್ಲಿ ಹೇಳುತ್ತಾರೆ, ನೀವು ಏನು ಮಾಡಿದಿರಿ, ನಾವು ಏನು ಮಾಡಿದೆವು, ಎಂದು ಹೇಳುತ್ತಾರೆ. 2007–08ನೇ ಸಾಲಿನ ಬಜೆಟ್ ಮಂಡನೆ ಮಾಡಿದಾಗ ಸುಮಾರು ಅವರು ಕೇಳಿದಂಥ 47,950 ಕೋಟಿ ರೂಪಾಯಿ expenditure. ಮತ್ತೆ ಅದೇ ರೀತಿಯಾಗಿ revenue receipts ಎಲ್ಲವೂ ಕೂಡ expect ಮಾಡಿರುವುದು, 47,927 ಕೋಟಿ ರೂಪಾಯಿ Total fiscal deficits 2007–08ರಲ್ಲಿ ಸುಮಾರು 6,304 ಕೋಟಿ ರೂಪಾಯಿ ಮತ್ತು ಹಿಂದಿನ ಬಾಕಿ ಎಷ್ಟು ಎಂದರೆ,1,626 ಕೋಟಿ ರೂಪಾಯಿ ಅಂದರೆ, ಒಟ್ಟಾರೆ 6,000 ಕೋಟಿಗಿಂತಲೂ ಹೆಚ್ಚಿನ ಹಣ ಇವತ್ತು fiscal deficits ಇದೆ. ಇದು ಇದ್ದರೂ ಕೂಡ ಬೇರೆ ಬೇರೆ ರೂಪದಲ್ಲಿ ಆ ಹಣವನ್ನು ಸಂಗ್ರಹಣೆ ಮಾಡತಕ್ಕಂಥದು, ನಾವು ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ. Additional Sales tax ಇರಬಹುದು, Additional exsice duty ಇರಬಹುದು, ಮತ್ತು ಜಮೀನುಗಳನ್ನು ಮಾರಿ ನಾವು ಹಣವನ್ನು ಸಂಗ್ರಹಿಸುತೇವೆ ಎನ್ನುವುದು, ನಬಾರ್ಡ್‌ನಿಂದ ತರುವ ಸಾಲವಿರಬಹುದು, ಹೀಗೆ ಅನೇಕ ರೂಪದಲ್ಲಿ ನಾವು ಆ ಹಣ ಆರು ಸಾವಿರ ಕೋಟಿ ರೂಪಾಯಿಗಳನ್ನು ಜಮಾ ಮಾಡುತ್ತೇವೆ ಎಂದು ಹೇಳಿದರು. ಇದಲ್ಲದೇ ಸುಮಾರು ನಾಲ್ಕೂವರೆ ಸಾವಿರ ಕೋಟಿ ರೂಪಾಯಿ ಇನ್ನೂ ಅವರ ಕಮಿಟ್‌ಮೆಂಟ್ ಇದೆ. ಅಂದರೆ, fiscal deficit ಹೆಚ್ಚು ಕಡಿಮೆ ಹತ್ತು ಸಾವಿರ ಕೋಟಿ ರೂಪಾಯಿ ಬರುತ್ತದೆ. ಅದರಲ್ಲಿ ಆರು ಸಾವಿರ ಕೋಟಿ ರೂಪಾಯಿಗೆ ಅವರು ಒಂದು ಪಟ್ಟಿಯನ್ನು ಹೆಚ್ಚುಕಡಿಮೆ ಕೊಡುತ್ತಾರೆ, ಕೊಟ್ಟಿದ್ದಾರೆ, ಹೇಳಿಕೊಂಡು ಬಂದಿದ್ದಾರೆ. ಉಳಿದ ನಾಲ್ಕು ಸಾವಿರ ಕೋಟಿ ರೂಪಾಯಿಗೆ ಹೇಗೆ ಅವರು ಜಮಾ ಮಾಡುತ್ತಾರೆ, ಎಲ್ಲಿಂದ ತರುತ್ತಾರೆ, ಮತ್ತು ಇವರೇನು ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ, ಆ ಘೋಷಣೆ ಮಾಡಿರುವ ಕಾರ್ಯಕ್ರಮಕ್ಕೆ ಹೇಗೆ ದುಡ್ಡು ಕೊಡುತ್ತಾರೆನ್ನುವುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಆ ಪ್ರಶ್ನೆಯನ್ನು ಅವರು ಬಿಡಿಸಬೇಕು. ಇಲ್ಲಾಂದ್ರೆ ಕೊಟ್ಟಂಥ ವಾಗ್ದಾನಗಳನ್ನು ಉಳಿಸಿಕೊಳ್ಳಬೇಕಾದರೆ, ಈಗಾಗಲೇ ಕೆಲಸಗಳೇನು ಪ್ರಾರಂಭವಾಗಬೇಕಾಗಿತ್ತು. ಕಮಿಟೆಡ್ ವರ್ಕ್ಸ್, ಅಥವಾ ಹೊಸ ಕೆಲಸಗಳು, ಆ ಕೆಲಸ ಸುಮ್ಮನೆ ಪೇಪರ್‌ನಲ್ಲಿಟ್ಟು ಹಣ ಖರ್ಚು ಮಾಡದೇ

ಬಜೆಟ್‌ನಲ್ಲಿ ತೋರಿಸಿಕೊಂಡು ಹೋಗುವುದು ಆಗುತ್ತದೆ. ಅಥವಾ ಈ ವರ್ಷದ financial target ಏನು ಇರುತ್ತದೋ ಅಥವಾ physical target ಏನು ಇರುತ್ತದೋ ಆ physical target achieve ಮಾಡದೇ financial target ಕೂಡ ಹಣ LOC ಮೂಲಕ ರಿಲೀಸ್ ಮಾಡದೇ, ಉದಾಹರಣೆಗಾಗಿ ಎಲ್ಲಿ 200 ಕೋಟಿ ರೂಪಾಯಿಯನ್ನು ರಿಲೀಸ್ ಮಾಡಬೇಕೋ ಅಲ್ಲಿ 100 ಕೋಟಿ ರಿಲೀಸ್ ಮಾಡಿ ಕುಳಿತುಬಿಡುವುದು. ಆಗ ಏನಾಯಿತು? ಕೆಲಸವನ್ನು ನಾನು ಕಮಿಟ್ ಮಾಡಿದ್ದೇನೆ, ಕೊಟ್ಟಂಥ ವಾಗ್ದಾನವನ್ನು ಪೂರೈಸಿದ್ದೇನೆಂದು ಹೇಳುವುದು, ಆದರೆ, ಸಂಪೂರ್ಣವಾದಂಥ financial target 200 ಕೋಟಿ ಒಂದು ಕೆಲಸಕ್ಕೆ ರಿಲೀಸ್ ಮಾಡುವುದನ್ನು ಮಾಡದಿರುವುದು ಕೂಡ ಆಗಬಹುದು. ಅದಕ್ಕೆ ತಕ್ಕಂತೆ physical target achieve ಆಗುವುದಿಲ್ಲ. ಉದಾಹರಣೆಗಾಗಿ ಸಾವಿರ ಎಕರೆ ನೀರಾವರಿ ಮಾಡುತ್ತೇನೆಂದು ಹೇಳಿರುತ್ತೀರಿ. ಸಾವಿರ ಎಕರೆ ಅಲ್ಲದಿದ್ದರೂ ನೂರು ಆಗಬಹುದು ನೂರೈವತ್ತು ಎಕರೆ ಆಗಬಹುದು. ನಾವು ಮಾಡಿದ್ದೇವಲ್ಲ ಎಂದು ಹೇಳಿಕೊಳ್ಳಬಹುದು. ಆದರೆ, ನಿಮ್ಮ 47 ಸಾವಿರ ಕೋಟಿಯಲ್ಲಿ ಕೊಟ್ಟಂಥ ವಾಗ್ದಾನಗಳು ಮತ್ತು ಅದಕ್ಕೆ ಮೀರಿ ಮಾಡಿದಂಥ ವಾಗ್ದಾನಗಳು ಸುಮಾರು ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳು, ಅದು ಹೇಗೆ ನೀವು ಜೋಡಿಸುತ್ತೀರಿ? ಅದು ಎಲ್ಲಿಂದ ಬರುತ್ತದೆ? ಏನು ಆಕಾಶದಿಂದ ಬರುತ್ತದೆಯೇ ಅದಕ್ಕೆ ನಾವು ಹೇಳಿದ್ದು. ಪೊಳ್ಳು ಆಶ್ವಾಸನೆ ಕೊಡಬೇಡಿ. ಅನೇಕ ಜನರ ಮನವೊಲಿಸುವುದಕ್ಕಾಗಿ ನೀವೇನು ಬಜೆಟ್‌ನ್ನು ಮಂಡಿಸಿದಿರಿ ಅದರ ಬಗ್ಗೆ ನಾನು ಹೇಳುತ್ತಿಲ್ಲ. ಪ್ರಜಾವಾಣಿಯಲ್ಲಿ ಇವರು ಮಂಡಿಸಿದಂಥ ಬಜೆಟ್ ಬಗ್ಗೆ ಅವರು ಏನು ಹೇಳಿದ್ದಾರೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. "ರಾಜ್ಯದ ಸಮ್ಮಿಶ್ರ ಸರಕಾರ ಅಗ್ಗದ ಜನಪ್ರಿಯತೆ ದಾರಿಯನ್ನು ಈ ವರ್ಷವೂ ಬಿಟ್ಟಿಲ್ಲ" ಅಂದರೆ ಹೋದ ವರ್ಷವೂ ಬಿಟ್ಟಿಲ್ಲ, "ಉಪ ಮುಖ್ಯಮಂತ್ರಿ ಮತ್ತು ಹಣಕಾಸಿನ ಸಚಿವರಾದ ಶ್ರೀ ಬಿ.ಎಸ್.ಯಡಿಯೂರಪ್ಪ ರವರು ಶುಕ್ರವಾರ ಮಂಡಿಸಿದ ಬಜೆಟ್ ಒಂದು ರೀತಿಯಲ್ಲಿ ವಿವಿಧ ಜಾತಿ, ವರ್ಗ, ಸಂಸ್ಥೆಗಳಿಗೆ ಮತ್ತು ತಲೆಗೆ ಹೊಳೆದ್ದಿದ್ದಕ್ಕೆಲ್ಲಾ ಹಂಚಿದ ಹುಂಡಿಯ ಹಣದಂತೆ ಪಟ್ಟಿಯಾಗಿದೆ" ಇದನ್ನು ನಾನು ಹೇಳುತ್ತಿಲ್ಲ. ಪತ್ರಿಕೆಯವರು ಹೇಳಿರುವುದು. ಇದರ ಮೇಲೆ ತಾನೇ ಎಲ್ಲರ ನಂಬಿಕೆ ಇರುವುದು, ಪೇಪರ್‌ನಲ್ಲಿ ಏನು ಬಂದಿದೆ ಮತ್ತು ಜನ ಏನು ಹೇಳುತ್ತಾರೆ ಅದನ್ನು

ನೋಡಿ ಎನ್ನುತ್ತಾರೆ, ಜನರು ಈ ರೀತಿಯಾಗಿ ಹೇಳುತ್ತಾರೆ, ಪತ್ರಿಕೆಯವರು ಈ ರೀತಿಯಾಗಿ ಹೇಳುತ್ತಾರೆ, ಕನಿಷ್ಟ ಇದಕ್ಕಾದರೂ ಸರ್ಕಾರದವರು ಒಪ್ಪುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಮ್ಮ ಬಜೆಟ್ ಹೇಗೆ ಇದೆ ಎನ್ನುವುದನ್ನು ಅವರು ಹೇಳಿದ್ದಾರೆ. ಇನ್ನೊಂದು ಪತ್ರಿಕೆಯಲ್ಲಿ ಕೂಡ ಬಂದಿದೆ. ವಿಶೇಷವಾಗಿ, News wind press ಅದರಲ್ಲಿ ಕೂಡ

> "It reads more like an election manifesto with goodies big and small thrown in surplus for all sections of voters. Evidently, the document was a product of coalition handling rather than the one churned out after the through-out analysis of the impacts of each of the measures proposed and availability of funds to meet them".

ಅಂದರೆ ಈ ಪತ್ರಿಕೆಯವರು ಕೂಡ ಸ್ಪಷ್ಟವಾಗಿ, ಮೂಲಭೂತ ಸೌಕರ್ಯಗಳನ್ನು ಮತ್ತು ಈ ರಾಜ್ಯದ ಆರ್ಥಿಕಾಭಿವೃದ್ಧಿಗೆ ಪೂರಕವಾಗಿರುವುದು ಇಲ್ಲ, ಕೇವಲ ಕೆಲವು ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ, ಸಂಘಗಳಿಗೆ, ಪ್ರೋತ್ಸಾಹ ನೀಡಿ ಅವರನ್ನು ಖುಷಿಪಡಿಸುವ ಬಜೆಟ್ ಎಂದು ಇದರಲ್ಲಿ ಇದೆ. ಅದೇ ರೀತಿಯಾಗಿ, Deccan Herald ನಲ್ಲೂ ಕೂಡ ಈ ವರದಿ ಬಂದಿದೆ.

> "Though the JD(S)-BJP coalition Government has 27 more Months to go, it seems to be preparing the ground for a mid Term election. The budget proposal for 2007-08 presented to the State Legislature on Friday is an indication."

ಅಂದರೆ ಇದರೊಳಗೆ ಕೂಡ ಇದು ಎಲೆಕ್ಷನ್ ಸ್ಟಂಟ್ ಬಜೆಟ್, ಇದು ಜನಪರ ಇರುವುದಲ್ಲ, ರಾಜ್ಯದ ಅಭಿವೃದ್ಧಿಗೆ ಪೂರಕವಾಗಿರುವುದಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಹೀಗೆ ಅನೇಕ ಪೇಪರ್ ಕಟ್ಟಿಂಗ್ಸ್ ನನ್ನ ಹತ್ತಿರ ಇವೆ. ಏಕೆಂದರೆ, ಅವರು ಹೊಗಳಿರುವುದನ್ನು ತಂದು ಹೇಳುತ್ತಾರೆ, ಆದರೆ ಇದು ನಿಜವಾಗಿ ಹೇಳಿರುವುದು, editorial, ಲೇಖನಗಳು ಬಂದಿದ್ದು, ಅದರ ಬಗ್ಗೆ

ಅವರೇನೂ ಕೂಡ ಮಾತನಾಡಿಲ್ಲ. ಇದು ಒಂದು ಕಡೆ. ಅಂದರೆ, ಜನಾಭಿಪ್ರಾಯ, ಬುದ್ಧಿಜೀವಿಗಳ ಅಭಿಪ್ರಾಯ, ಪತ್ರಿಕೆಗಳ ಅಭಿಪ್ರಾಯ, ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಅದರ ಬಗ್ಗೆ ಅವರೇನು ಹೇಳುತ್ತಾರೋ ಸ್ಪಷ್ಟವಾಗಿ ಹೇಳಲಿ. ಈಗ ಕೆಲವು ಏರಿಯಾಕ್ಕೆ injustice ಆಗಿದೆ ಎನ್ನುವುದಕ್ಕೆ ಕೆಲವು ವಿಷಯಗಳನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ವಿಶೇಷವಾಗಿ ನಮ್ಮ ಗೃಹ ಸಚಿವರ ಗಮನಕ್ಕೂ ನಾನು ತರುತ್ತೇನೆ. ಈ ಸಮ್ಮಿಶ್ರ ಸರ್ಕಾರ ತಾರತಮ್ಯವಂತೂ ಖಂಡಿತ ಮಾಡಿದೆ. ಹೇಗೆ ತಾರತಮ್ಯ ಮಾಡಿದ್ದಾರೆಂಬುದರ ಬಗ್ಗೆ ದಾಖಲೆ ಸಮೇತ ಹೇಳುವುದಕ್ಕೆ ಬಯಸುತ್ತೇನೆ. 12th Finance Commission ನೆರವಿನಿಂದ ಲೋಕೋಪಯೋಗಿ ಇಲಾಖೆಗೆ ಸುಮಾರು 146 ಕೋಟಿ ರೂಪಾಯಿ ನೆರವು ಸಿಕ್ಕಿದೆ. ಈ 146 ಕೋಟಿ ರೂಪಾಯಿಗಳಲ್ಲಿ ಹಾಸನ ಜಿಲ್ಲೆಗೆ 32 ಕೋಟಿ ರೂಪಾಯಿ, ಹೊಳೆನರಸೀಪುರಕ್ಕೆ 30 ಕೋಟಿ ಅಂದರೆ, 146 ಕೋಟಿ ರೂಪಾಯಿಗಳಲ್ಲಿ 62 ಕೋಟಿ ರೂಪಾಯಿ ಹೋಯಿತು. ಇದು ತಾರತಮ್ಯವೇ ಅಥವಾ judicious discretion ಉಪಯೋಗ ಮಾಡಿದ್ದಾರೆಯೋ ಅಥವಾ ಎಲ್ಲಾ ಭಾಗಕ್ಕೆ ಸಹಾಯ ಮಾಡಬೇಕೆಂದು ಈ ರೀತಿ ಮಾಡಿದ್ದಾರೆಯೇ? ಮತ್ತೆ ಇದರ ಪೈಕಿ 101 ಕೋಟಿ ರೂಪಾಯಿ ದಕ್ಷಿಣ

(12-00 PM)

ಕರ್ನಾಟಕಕ್ಕೆ ಮತ್ತೆ ಉತ್ತರ ಕರ್ನಾಟಕಕ್ಕೆ 45 ಕೋಟಿ ರೂಪಾಯಿ ಹಂಚಿದ್ದಾರೆ. ಆದ್ದರಿಂದ, ಇದು ನ್ಯಾಯವೋ ಅಥವಾ ಅನ್ಯಾಯವೋ ಎಂಬುದನ್ನು ಮತ್ತು ಇದನ್ನು ಹೇಗೆ ಸರಿಪಡಿಸುತ್ತೀರೆಂದು ತಾವು ಹೇಳಬೇಕು. ಏಕೆಂದರೆ, ನಾವು ನೇರವಾಗಿ ಮಾತನಾಡುವುದಕ್ಕೆ ಹೋದರೆ, ನೀವು ಮಾಡಿಲ್ಲವೇ ಎಂಬ ಪ್ರಶ್ನೆಯನ್ನು ಪದೇಪದೇ ಕೇಳಿ ಸಾಕಾಗಿದೆ. ನಾವು ತಪ್ಪು ಮಾಡಿದ್ದೇವೆಂದು ತಿಳಿದುಕೊಳ್ಳಿ. ನಮಗೆ ಜನರು ಶಿಕ್ಷೆ ಕೊಟ್ಟಿದ್ದಾರೆ ಅಥವಾ ನಾವು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಿ. ಆದರೆ, ಈಗ ನೀವು ಏನು ಮಾಡಿದ್ದೀರಿ? ಇಷ್ಟೊಂದು ಅನ್ಯಾಯವನ್ನು ಯಾರೂ ಕೂಡ ಮಾಡಿಲ್ಲ. ಮತ್ತೊಂದು ಏನೆಂದರೆ, ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ನಿಧಿಯಿಂದ ಈ ವರ್ಷ 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಈ ಪೈಕಿ 222 ಕೋಟಿ ರೂಪಾಯಿ ಒಂದು ಭಾಗಕ್ಕೆ ಮತ್ತು ಉತ್ತರ ಕರ್ನಾಟಕದ 12 ಜಿಲ್ಲೆಗಳಿಗೆ 80 ಕೋಟಿ ರೂಪಾಯಿ ಹಂಚಿದ್ದೀರಿ. ಇದು ನ್ಯಾಯವೇ? ರಸ್ತೆಗಳನ್ನು ಮಾಡುವ

ಕೆಆರ್‌ಡಿಸಿಎಲ್‌ಗೆ 561 ಕೋಟಿ ರೂಪಾಯಿಗಳನ್ನು ಈ ವರ್ಷ ತಾವು ಮಂಜೂರಾತಿಯನ್ನು ಕೊಟ್ಟಿದ್ದೀರಿ. ಇದರ ಪೈಕಿ 380 ಕೋಟಿ ರೂಪಾಯಿ ಈ ಭಾಗದಲ್ಲಿ ಕೊಟ್ಟಿದ್ದೀರಿ. ಮತ್ತೆ ಇಡೀ ಉತ್ತರ ಕರ್ನಾಟಕಕ್ಕೆ 170 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ನ್ಯಾಯವೇ? ಅಥವಾ ಇದು ಅನ್ಯಾಯವೇ? ಅದೇ ರೀತಿಯಾಗಿ ಈ ರಾಜ್ಯದ ಮುಂಗಡ ಪತ್ರದಲ್ಲಿಯೂ ಕೂಡ 2007–08ನೇ ಸಾಲಿನಲ್ಲಿ Appendix-E ನಲ್ಲಿ On-going worksಗೆ 1178 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದು, 925 ಕೋಟಿ ರೂಪಾಯಿ ದಕ್ಷಿಣ ವಲಯಕ್ಕೆ ಮತ್ತು ಉಳಿದ ಸುಮಾರು 270 ಕೋಟಿ ರೂಪಾಯಿ ಉತ್ತರ ವಲಯಕ್ಕೆ ಕೊಟ್ಟಿದ್ದಾರೆ. ಇದನ್ನು ನಾನು ಹಂಚಿಲ್ಲ. ಮಾನ್ಯ ಯಡಿಯೂರಪ್ಪ ನವರು ಹಂಚಿರತಕ್ಕಂಥದು. ಯಾರೇ ಮಂತ್ರಿಗಳಾಗಿರಬಹುದು, ಅಂದರೆ, PWD minister, Minor Irrigation Minister and Animal Husbendry Minister, Home Minister, Irrigation Minister ಇರಬಹುದು. ತಮ್ಮ ಇಲಾಖೆಗೆ ಹೆಚ್ಚಿನ ಹಣ ಬೇಕೆಂದು ಸಂಬಂಧಪಟ್ಟಂಥ ಇಲಾಖೆಯ ಸಚಿವರು ಕೇಳುತ್ತಾರೆ. ಆದರೆ, ಕೊಟ್ಟವರು ಯಾರು? ಏತಕ್ಕೆ ಕೊಟ್ಟರು? ಈ ರೀತಿಯಾಗಿ ಕೊಟ್ಟರೆ ಅನ್ಯಾಯವಾಗುತ್ತದೆಂದು ನಿಮಗೆ ಗೊತ್ತಿರಲಿಲ್ಲವೇ? ನಾವು ಸಮಾನತೆ ತರುತ್ತೇವೆಂದು ಮತ್ತು ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರುತ್ತೇವೆಂದು ಒಂದು ಕಡೆ ಹೇಳುತ್ತೀರಿ. ಇವುಗಳನ್ನು ಜಾರಿಯಲ್ಲಿ ತರುವುದಕ್ಕೋಸ್ಕರ ಸದರಿ ವರದಿಯನ್ನು ನಾವು ಅನುಷ್ಠಾನದಲ್ಲಿ ತರುತ್ತಿದ್ದೇವೆಂದು ಹೇಳುತ್ತಿದ್ದೀರಿ. ಇನ್ನೊಂದು ಕಡೆ ನಿಮ್ಮ ಕೈಯಲ್ಲಿದ್ದಂಥ ಹಣವನ್ನು ಕೊಡುವಾಗ ಈ ರೀತಿಯಾಗಿ ನೀವು ಅನ್ಯಾಯ ಮಾಡಿದರೆ, ಇದಕ್ಕೆ ಯಾರು ಹೇಳಬೇಕು? ದೇವರು ಇದ್ದಾನೆಯೊ ಅಥವಾ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ. ಇವರಿಗೆ ಜನತೆ ಕ್ಷಮಿಸುತ್ತಾರೆಯೇ? ಅಥವಾ ಇವರು ಹೀಗೆಯೇ ನಡೆದುಕೊಂಡು ಹೋಗಲಿ ಎನ್ನಬೇಕೇ. ಒಂದು ಉದಾಹರಣೆಯಾಗಿದ್ದರೆ ನಾವು ಒಪ್ಪಿಕೊಳ್ಳಬಹುದಿತ್ತು. ಆದರೆ, 12th Finance Commission, Discretionary Grant, Budget ಮತ್ತೆ Appendix-E Fund ನಲ್ಲಿ ಈ ರೀತಿಯಾಗಿ ಮಾಡಿದ್ದಾರೆ. Appendix-E Fund ಬಗ್ಗೆ ನಾನು ಈಗಾಗಲೇ ಹಳೆಯ ಕೆಲಸದ ಬಗ್ಗೆ ಹೇಳಿದ್ದೆ. ಈಗ Appendix-E Fund ನಲ್ಲಿ ಹೊಸ ಕೆಲಸಗಳ ಬಗ್ಗೆ ಹೇಳುವುದಕ್ಕೆ

ಬಯಸುತ್ತೇನೆ. ಹೊಸ ಕೆಲಸಕ್ಕೆ ಸುಮಾರು 42 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದೀರಿ. ಇದರ ಪೈಕಿ 40 ಕೋಟಿ ರೂಪಾಯಿಗಳನ್ನು ದಕ್ಷಿಣ ವಲಯಕ್ಕೆ 2 ಕೋಟಿ ರೂಪಾಯಿ ಉತ್ತರ ವಲಯಕ್ಕೆ ಹಂಚಿದ್ದೀರಿ. ಈ 40 ಕೋಟಿ ರೂಪಾಯಿಗಳ ಪೈಕಿ ಹಾಸನಕ್ಕೆ 30 ಕೋಟಿ ರೂಪಾಯಿ, ರಾಮನಗರಕ್ಕೆ 8 ಕೋಟಿ ರೂಪಾಯಿ ಹಂಚಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೆ, ತಾವು ಸ್ವಲ್ಪ ಕೇಳಬಹುದಿತ್ತು. ಹಾಸನಕ್ಕೆ 30 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಕೊನೇ ಪಕ್ಷ 50–50 ಆದರೂ ತಮಗೆ ಬರಬೇಕಾಗಿತ್ತು. ಮತ್ತೆ ಶಿಕಾರಿಪುರಕ್ಕೆ 2 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಹಳೆಯ ಮೈಸೂರು ಎಂಬ ಹೆಸರಿನಲ್ಲಿ ಏನಾಗಿದೆ ಎಂದರೆ, ಎಲ್ಲಾ ಈ ಕಡೆ ಹೋಗುತ್ತಿದೆ. ಆ ಕಡೆ ನೀವೂ ಸಂತೋಷವಿಲ್ಲ. ಮತ್ತೆ ನಾವು ಟೀಕೆ ಮಾಡುವುದನ್ನು ಬಿಡುವುದಿಲ್ಲ. ನೀವು ನಮ್ಮನ್ನು ಬೈಯುವುದನ್ನು ಬಿಡುವುದಿಲ್ಲ. ಏಕೆಂದರೆ, ನಾವು ಸ್ಪಷ್ಟವಾದ ಅಂಕಿ–ಸಂಖ್ಯೆಯನ್ನು ಕೊಟ್ಟರೆ ನಿಮ್ಮ ಮನಸ್ಸು ಕರಗುತ್ತದೆಂದು ನಾನು ಈ ಮಾಹಿತಿಯನ್ನು ಕೊಡುತ್ತಿದ್ದೇನೆ. ಬಹಳ ಕಷ್ಟಪಟ್ಟು ಇದನ್ನು ಸಂಗ್ರಹ ಮಾಡಿ ನಾವು ಕೊಡುತ್ತಿದ್ದೇವೆ. ಕೆಲವು ಸಲ ತಪ್ಪಾಗಿದೆ ಎಂದು ತಿಳಿದು ಕೊಳ್ಳೋಣ. ಆದರೆ, ಮುಂದಾದರೂ ತಿದ್ದುಕೊಳ್ಳಬೇಕಲ್ಲವೇ? ಸಪ್ಲಿಮೆಂಟರಿಯಲ್ಲಿ ತಿದ್ದುಕೊಳ್ಳುವುದಕ್ಕೆ ಇವರಿಗೆ ಅವಕಾಶ ಇಲ್ಲ. ಏಕೆಂದರೆ, ಸಾಕಷ್ಟು ಗುಡಿಗುಂಡಾರಗಳಿಗೆ ಹೇಳಿಬಿಟ್ಟಿದ್ದೀರಿ. ಸುಮಾರು 130 ಕೋಟಿ ರೂಪಾಯಿಗಳು ಬಜೆಟ್‌ನಲ್ಲಿ ಇಲ್ಲದೆ ಕೇವಲ ಕಾಗದದ ಮೇಲೆ ಬರೆದು ಅಲ್ಲಿಯೇ ಪ್ರಕಟ ಮಾಡುವಂಥ ಕೆಲಸ ಮಾಡಿದ್ದೀರಿ. ಅದಕ್ಕೆ ಸಪ್ಲಿಮೆಂಟರಿ ಬಜೆಟ್ ಇಲ್ಲ. ಆದ್ದರಿಂದ, ನಮಗೆ ಸರಿಪಡಿಸತಕ್ಕಂಥದಾದರು? ಹೇಗೆ? ಮತ್ತೆ ಸೆಂಟ್ರಲ್ ರೋಡ್‌ಫಂಡ್‌ಗೆ ರಾಜ್ಯ ಸರ್ಕಾರ ಏನು ಶಿಫಾರಸ್ಸು ಮಾಡುತ್ತದೆಯೋ ಅದನ್ನು ಅವರು ಕೊಡುತ್ತಾರೆ. ಇದರಲ್ಲಿಯೂ ಕೂಡ 60 ಕೋಟಿ ರೂಪಾಯಿಗಳನ್ನು ತಮಗೆ ಬೇಕಾದಂಥ ಶಾಸಕರುಗಳಿಗೆ ಕೊಟ್ಟಿದ್ದಾರೆ. ಉಳಿದವರಿಗೆಲ್ಲಾ ಸೇರಿ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮತ್ತೆ National Highway Development Fund ಕೂಡ ಕೇಂದ್ರ ಕೊಡತಕ್ಕಂಥ ಹಣವಾಗಿದೆ. ಮಾನ್ಯ ರೇವಣ್ಣನವರು ಇಲ್ಲಿಂದ ಏನು ರೆಕಮಂಡ್ ಮಾಡುತ್ತಾರೆಯೊ ಹೆಚ್ಚು ಕಡಿಮೆ ಆ ರೆಕಮಂಡೇಶನ್‌ನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. ಇದರಲ್ಲಿ ಕೂಡ ಹೆಚ್ಚಿನ ಹಣ ಬಂದಿದೆ, ಸಂತೋಷ. ಮಂಗಳೂರು ರಸ್ತೆ ಕೆಟ್ಟಿದೆ.

ಅದನ್ನು ದುರಸ್ತಿ ಮಾಡಿಸಿ. ನಾವೇನು ಬೇಡವೆಂದು ಹೇಳುವುದಿಲ್ಲ. ಕೆಲವು ಭಾಗದಲ್ಲಿ ತಮಗೆ ಬೇಕಾದಂಥ ಶಾಸಕರುಗಳಿಗೆ ಕೊಟ್ಟಿದ್ದೀರಿ. ಆದರೆ, ಅದಕ್ಕಿಂಥಲೂ Worst road ಯಾವುದಿದೆ ಎಂಬುದನ್ನು ನೋಡಿಕೊಂಡು need-based ನೋಡಿಕೊಂಡು ಮಾಡಬೇಕಾಗಿತ್ತು. need-based ನೋಡಿಕೊಂಡು ಮಾಡತಕ್ಕಂಥ ಕೆಲಸವನ್ನು ತಾವು ಮಾಡಿಲ್ಲ. ಅಗತ್ಯ ಇರುವ ಕಡೆ ಕೊಡಬೇಕಾಗಿತ್ತಲ್ಲವೇ ಎಂದು ನಾವು ಕೇಳಿದಾಗ ನಿಮ್ಮ ಕಾಲದಲ್ಲಿ ನೀವು ಮಾಡಿಕೊಳ್ಳಬೇಕಾಗಿತ್ತಲ್ಲ ಎಂದು ಹೇಳುತ್ತೀರಿ. ಒಂದೇಕಡೆ ಎಲ್ಲರೂ ಮಾಡುವುದಕ್ಕೆ ಆಗುತ್ತದೆಯೇ? ಹಂತ ಹಂತವಾಗಿ ಮಾಡಬೇಕಾಗುತ್ತದೆ. ನಾವು ಈಗ 10 ಸ್ಕೂಲ್ ಕೇಳುತ್ತೇವೆ. 10 ಸ್ಕೂಲ್‌ಗಳನ್ನು ಒಂದೇ ಕಡೆ ಮಾಡುವುದಕ್ಕೆ ಆಗುತ್ತದೆಯೇ? ಒಂದು ಕಡೆ ಎರಡು–ಮೂರು ಮಾಡಬಹುದು. ಮುಂದಿನ ಸಾರಿಗೆ ಮತ್ತೆ 3 ಮಾಡಬಹುದು. ಆದರೆ, ನೀವು ಇಲ್ಲಿ ಮಾಡಿರತಕ್ಕಂಥ ಇಷ್ಟೊಂದು ತಾರತಮ್ಯ ನಿಜವಾಗಿಯೂ ಕೂಡ ಅನ್ಯಾಯ. ನಾನು ನೇರವಾಗಿ ಹಣಕಾಸಿನ ಸಚಿವರಲ್ಲಿ ಕೇಳುವುದೇನೆಂದರೆ, ನೀವೇನು ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದೀರಾ? ನಿಮ್ಮ ಬಜೆಟ್‌ನ್ನು ನೀವು ಏತಕ್ಕೆ ಓದುವುದಕ್ಕೆ ಹೋಗಲಿಲ್ಲ? ನಿಮ್ಮ ಹಣಕಾಸಿನ ಇಲಾಖೆ ಇದಕ್ಕೆ ಯಾವ ರೀತಿಯಾಗಿ ಅನುಮತಿಯನ್ನು ಕೊಟ್ಟಿತು? ಮಾನ್ಯ ರೇವಣ್ಣನವರೆ, ತಾವು ತಾರತಮ್ಯ ಮಾಡಿದ್ದೀರೆಂದು ನಾವು ಹೇಳಬಹುದು. ನಮ್ಮ ಪ್ರಪೋಸಲ್ ನೂರು ಕೊಡುತ್ತೇನೆಂದು ಅವರು ಹೇಳಬಹುದು. ಅದನ್ನು Scrutiny ಮಾಡಿ ಕೊಡತಕ್ಕಂಥವರು ಯಾರು? ನಾನು ಈಗಾಗಲೇ ಹೇಳಿದೆ. ಪ್ರತಿಯೊಬ್ಬ ಮಂತ್ರಿಯು ಕೂಡ ನನ್ನ ಇಲಾಖೆಗೆ ಹೆಚ್ಚಿಗೆ ಹಣ ಬೇಕು ಎಂದು ಕೇಳಿಯೇ ಕೇಳುತ್ತಾರೆ. ಆದರೆ ಕೊಡತಕ್ಕಂಥವರು, ಇದನ್ನು ಸಮತೋಲನ ಮಾಡತಕ್ಕಂಥವರು ಯಾರು? Finance Minister. ಅದಕ್ಕಾಗಿಯೇ Finance portfolio ಕೇಳಿದ್ದು. ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ. ನಾನು commerce ಗ್ರಾಜ್ಯುಯೇಟೋ ಅಥವಾ economics ಗ್ರಾಜ್ಯುಯೇಟೋ ಅದರ ಬಗ್ಗೆ ನನಗೆ ಮಾಹಿತಿ ಇದೆಯೋ ಇಲ್ಲವೋ ಎಂದು ಏಕೆ ಅದರ ಬಗ್ಗೆ ಯೋಚನೆ ಮಾಡುವುದಿಲ್ಲವೆಂದರೆ, "Finance Department ಎಂದರೆ ಎಲ್ಲರೂ ನನ್ನ ಹತ್ತಿರ ಬರುತ್ತಾರೆ. ಅವರು ಬಂದಾಗ ನನಗೆ ಬೇಕಾಗಿದ್ದು Yes ಎನ್ನುವುದು ಬೇಡವಾಗಿದ್ದು No ಎನ್ನುವುದು. ನನಗೆ deficit ತೆಗೆದುಕೊಂಡು ಏನು ಮಾಡುವುದು? Surplus ತೆಗೆದುಕೊಂಡು ಏನು

ಮಾಡುವುದು? Revenue ತೆಗೆದುಕೊಂಡು ಏನು ಮಾಡುವುದು? Tax ಬಂದರೆ ಏನು, ಹೋದರೆ ಏನು? ದುಡ್ಡು ಎಷ್ಟು ಇದೆ, 2 ಕೋಟಿ ಇದ್ದರೆ ಅದರಲ್ಲಿ ಕೊಡಿ ಒಂದು ಕೋಟಿ ರೂ.ಗಳು ಅಷ್ಟೆ". ಇದರ ಬಗ್ಗೆ ಸಮಗ್ರವಾಗಿ ಮಾಜಿ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಹೇಳಿದರು. ಸಮಗ್ರವಾಗಿ ಕರ್ನಾಟಕದ ಆಲೋಚನೆ ಇದ್ದರೆ, ಒಂದು Planning ಇದ್ದರೆ ಅಥವಾ infrastructure create ಮಾಡಬೇಕಾಗಿದ್ದರೆ, ನಾವು ಮೊದಲು ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಎನ್ನುವುದನ್ನು ತಿಳಿದುಕೊಂಡು ಯಾವುದರಿಂದ ಹೆಚ್ಚು ಉತ್ಪತ್ತಿಯಾಗುತ್ತದೆ ಅಥವಾ ಜಿಡಿಪಿ ಗ್ರೋತ್ ಆಗುತ್ತದೆ, ಅಥವಾ ಆಹಾರಧಾನ್ಯ ಹೆಚ್ಚಿಗೆ ಆಗುತ್ತದೆ ಅದನ್ನು ಅರ್ಥಮಾಡಿಕೊಂಡೇ ನಾವು ಕೊಡಬೇಕಾಗುತ್ತದೆ. ಕೆಲವರನ್ನು ಖುಷಿ ಪಡಿಸುವುದಕ್ಕೆ ಕೊಡಬಹುದು 5-10%, but ಇಲ್ಲಿ ಏನಾಗಿದೆ ಎಂದರೆ 100-100% discrimination. Irrigation Department is important. ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದಲ್ಲಿ ಸುಮಾರು 6 ರಿಂದ 10 ಸಾವಿರ ಕೋಟಿ ರೂ.ಗಳವರೆಗೆ ಅವರು ಖರ್ಚು ಮಾಡುತ್ತಾರೆ. ಹಿಂದೆ 31% ಇದ್ದ Irigationನ್ನು 17% ಗೆ ತಂದಿದ್ದೇವೆ. ಅಂದರೆ ನಾವು ರೈತರ ಪರವೇ? ರೈತರು ಉದ್ಧಾರವಾಗುವುದು ಯಾವಾಗ ಸ್ವಾಮಿ? ನೀವು ಹೇಳಿದ ಹಾಗೆ, ನೀರಾವರಿ ಬೇಕು, ಎಲೆಕ್ಟ್ರಿಸಿಟಿ ಬೇಕು, ಪಂಪ್‌ಸೆಟ್ಟಿಗೆ ಬೇಕು, ಆವಾಗ ಮಾತ್ರ ಆಗುವುದು. ನೀವು ಈ ಎರಡೂ ಇಲಾಖೆಗೆ ಹಣವನ್ನು ಕಡಿಮೆ ಕೊಟ್ಟು, ಅಲ್ಲಿಂದ divert ಮಾಡಿಕೊಂಡು ಖುಷಿಪಡಿಸುವುದಕ್ಕೋಸ್ಕರ "ನಾನು ಅವರಿಗೆ ಕೊಟ್ಟೆ, ಇವರಿಗೆ ಕೊಟ್ಟೆ" ಅಂದರೆ ಹೇಗೆ? ಈಗ ಹೌಸಿಂಗ್ ಕೊಟ್ಟರೆ, ಎಲ್ಲಾ ಬಡವರಿಗೆ ಸಿಗುತ್ತದೆ. ಜಾತಿ ಇಟ್ಟು ಏಕೆ ಕೊಡಬೇಕು? ಈಗ land reforms ನಲ್ಲಿ tenant ಇದ್ದವನೇ ಮಾಲೀಕ ಎನ್ನುವ ಒಂದು ಕಾನೂನು ಮಾಡಿದ್ದೇವೆ. ಅದರಿಂದ ಎಲ್ಲರಿಗೂ help ಆಗುತ್ತದೆ. Site ಇಲ್ಲದವನಿಗೆ Site ಕೊಡತಕ್ಕಂಥ ಕಾರ್ಯಕ್ರಮದಿಂದ ಎಲ್ಲಾ ಜನರಿಗೆ help ಆಗುತ್ತದೆ. Old age pension ಅದಕ್ಕೇನು ಜಾತಿ ಪ್ರಶ್ನೆ ಬರುತ್ತದೆಯೆ? ಯಾರಿಗೆ ವಯಸ್ಸಾಗಿದೆ ಯಾರು ಅಸಹಾಯಕರಾಗಿದ್ದಾರೆ ಎಲ್ಲರಿಗೂ ಕೂಡ ಬರುತ್ತದೆ. ಜಾತಿ ಆಧಾರಿತ ಕಾರ್ಯಕ್ರಮಗಳು ಒಂದೆರಡು, ಕೇಂದ್ರ ಸರ್ಕಾರದ್ದು Special Component

Programme ದಲ್ಲಿಯಾಗಲಿ, ರಾಜ್ಯ ಸರ್ಕಾರದ್ದು ಆಗಲಿ, ಅದು Social Welfare Departmentಗೆ ಸೀಮಿತವಾಗಿ ಇರುತ್ತದೆ. ತುಳಿತಕ್ಕೆ ಮತ್ತು ಶೋಷಣೆಗೆ ಒಳಪಟ್ಟಂತ ಜನ ಅವರಿಗೆ ಸಹಾಯ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ವಿಶೇಷವಾದಂಥ ಸವಲತ್ತುಗಳನ್ನು ಕೊಟ್ಟಿದ್ದೀರಿ, ಅದು ಅದರಲ್ಲಿ ಬರುತ್ತದೆ. ಆದರೆ ಸರ್ವೇ ಸಾಮಾನ್ಯವಾಗಿ ಎಲ್ಲರಿಗೂ ಸಹಾಯ ಮಾಡತಕ್ಕಂಥ ಕಾರ್ಯಕ್ರಮಗಳು ಅನೇಕ ಇವೆ. ಅದು B.P.L. card ಇರಬಹುದು, Housing Scheme ಇರಬಹುದು, ಸ್ತ್ರೀಶಕ್ತಿ ಕಾರ್ಯಕ್ರಮ ಇರಬಹುದು, ಬಿಸಿಯೂಟದ ಕಾರ್ಯಕ್ರಮ ಇರಬಹುದು, ಇವೆಲ್ಲಾ ಕೂಡ Welfare measures ಮತ್ತು ಸರ್ವರಿಗೂ ಸಹಾಯವಾಗತಕ್ಕಂಥದ್ದು. ಆದರೆ ಈ ಕಡೆಗೆ ಗಮನವಿಲ್ಲ. ಗಮನ ಯಾವ ಕಡೆಗೆ ಎಂದರೆ, ಮತಗಳು ಎಲ್ಲಿ ಸಿಗುತ್ತವೆ, ನಮಗೆ ಯಾರ ಬೆಂಬಲ ಸಿಗುತ್ತದೆ, ಯಾರ ಆಶೀರ್ವಾದ ಸಿಗುತ್ತದೆ ಮತ್ತು ಸಮಾಜವನ್ನು ಒಡೆದು ಆಳತಕ್ಕಂಥ ಶಕ್ತಿಗಳಿಗೆ ನಾವು ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ಹೋಗಿ ಈ ದೇಶ ಕಟ್ಟುತ್ತೇವೆ, ದೇಶವನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿದರೆ, ಇದು ಎಂದೂ ಕೂಡ ನಿಜವಾಗಲೂ ಯಾರಿಗೂ ಭೂಷಣವಲ್ಲ, ಯಾರಿಗೂ ಒಳ್ಳೆಯ ಹೆಸರು ಬರುವುದಿಲ್ಲ. ಅದರ ಜೊತೆಯಲ್ಲಿ LOC ವಿವರಣೆ ಮಾಡುವಾಗಲೂ ಕೂಡ ಈ ಸರ್ಕಾರ ಬಂದಾಗಿನಿಂದ ಸುಮಾರು 1000 ಕೋಟಿ ರೂ.ಗಳನ್ನು ಕೆಲಸಗಳಿಗೆ ವಿತರಿಸಿದ್ದಾರೆ. ಈ ಪೈಕಿ ಸುಮಾರು 700 ಕೋಟಿ ರೂ.ಗಳನ್ನು ಒಂದು ವಲಯಕ್ಕೆ, 300 ಕೋಟಿ ರೂ.ಗಳನ್ನು ಇನ್ನೊಂದು ವಲಯಕ್ಕೆ, ಇದು ನ್ಯಾಯ! ಇದರ ಬಗ್ಗೆ White paperನ್ನು ತೆಗೆಯಿರಿ. ಏಕೆಂದರೆ ನೀವು ನ್ಯಾಯವನ್ನು ಮಾಡಿದ್ದೇವೆಂದು ಹೇಳುತ್ತೀರಿ ಅಲ್ಲವೆ? ನಾನು ಒಂದು demand ನ್ನು ಮಾನ್ಯ ಅರ್ಥ ಸಚಿವರಿಗೆ ಮಾಡುತ್ತೇನೆ. ಅವರು ಯಾವ ರೀತಿಯಾಗಿ ನ್ಯಾಯ ಮಾಡಿದ್ದಾರೆ? ಯಾವ ರೀತಿಯಾಗಿ ಎಲ್ಲೆಲ್ಲಿ LOC ನ್ನು ಕೊಟ್ಟಿದ್ದಾರೆ? ಯಾವ ರೀತಿಯಾಗಿ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ? ಯಾವ್ಯಾವ ಜಿಲ್ಲೆಗಳಿಗೆ ಎಷ್ಟು ಹಣ ಇದರಿಂದ ಬಂದಿದೆ ಎನ್ನತಕ್ಕಂಥದ್ದನ್ನು ನಾವು ನೋಡಬೇಕು. ನಂಜುಂಡಪ್ಪನವರ ವರದಿ ಎಂದ ತಕ್ಷಣವೆ ಹೈದ್ರಾಬಾದ್-ಕರ್ನಾಟಕ ಒಂದೇ ಅಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ತಾವು ಯೀಲ್ಡ್ ಆಗುವುದಾದರೆ, LOC ಬಗ್ಗೆ ಮಾನ್ಯ ಖರ್ಗೆಯವರು 700 ಕೋಟಿ ಮತ್ತು 300 ಕೋಟಿ ರೂ.ಗಳ ಬಗ್ಗೆ ಹೇಳಿದರು. ತಾವು ಕಳೆದ 6 ವರ್ಷಗಳ ಹಿಂದಿನಿಂದಿ ಈ ಸರ್ಕಾರ ಬರುವುದಕ್ಕೆ ಮುಂಚೆ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಬಿಲ್ ಪೆಂಡಿಂಗ್ ಇತ್ತು ಎನ್ನುವುದನ್ನು ದಯಮಾಡಿ ಈ ಸಭೆಗೆ ತಿಳಿಸಬೇಕಾಗುತ್ತದೆ. ಏಕೆಂದರೆ 2000 ರಿಂದ 2004 ರವರೆಗೆ ಸುಮಾರು 380 ಕೋಟಿ ರೂ.ಗಳು 6 ವರ್ಷದಲ್ಲಿ ಬಾಕಿ ಇತ್ತು. ಆ ಹಣವನ್ನು ಪೂರ್ತಿಯಾಗಿ ರಿಲೀಸ್ ಮಾಡಿದ್ದೇವೆ, ಬೇಕಾದರೆ ತಾವು ದಯಮಾಡಿ ಅದನ್ನು ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬಾಕಿ ಕೊಡುವುದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ. ಬಾಕಿ ಆ ಕಡೆ ಮತ್ತು ಈ ಕಡೆ ಇರಬಹುದು. ನೀವು white paper ನಲ್ಲಿ ನೀವು ಏನೇನು ಕೊಡಬೇಕು ಕೊಡಿ. ನಾನು ನನ್ನ ಹತ್ತಿರ ಇರುವ ಅಂಕಿಅಂಶವನ್ನು ಸದನದ ಮುಂದೆ ಇಡುತ್ತೇನೆ. ತಪ್ಪು ಇದ್ದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಇದನ್ನು ಸರಿಪಡಿಸತಕ್ಕಂತ ಕೆಲಸವಾಗಬೇಕು. ಇದೇ ರೀತಿಯಾಗಿ ಹೋದರೆ ಏನಾಗುತ್ತದೆ? ನಮ್ಮ ಒಂದೊಂದು ಮಾತಿಗೂ ಬಣ್ಣವನ್ನು ಕಟ್ಟುತ್ತಾರೆ. ಈ ಮಾತುಗಳನ್ನು ಬೇರೆಯವರು ಆಡಿದರೆ ಯಾರೂ ಬಣ್ಣವನ್ನು ಕಟ್ಟುವುದಿಲ್ಲ. ಇದು ನಮ್ಮ ದುರ್ದೈವ. ಸಾಕಷ್ಟು ಬೇರೆ ಬೇರೆ ಕಡೆಯಲ್ಲಿಯೂ ಕೂಡ ಅನ್ಯಾಯವಾಗಿದೆ.

ಶ್ರೀ ಎಸ್.ಎಸ್.ಪಾಟೀಲ್ : ಹಿಂದೆ ನೋಡಿ ಸಾಕಷ್ಟು ಶಾಸಕರು ಮಾತನಾಡುತ್ತಿದ್ದಾರೆ. ಜಾತ್ರೆ ತರಹ ಇದೆ ನೋಡಿ. ಸೀನಿಯರ್ಸ್ ಮಾತನಾಡುವಾಗ ಕೇಳುವುದಾದರೂ ಕಲಿಯಲಿ.

ಅಧ್ಯಕ್ಷರು : ಹಿರಿಯ ಸದಸ್ಯರು ಏನು ಮಾತನಾಡುತ್ತಾರೆ ಕೇಳಿ. ರೂಲಿಂಗ್ ಪಾರ್ಟಿ ಎಂದರೆ ಬಜೆಟ್‌ಗೆ ಕೈ ಎತ್ತಿಬಿಟ್ಟು ಮಿನಿಸ್ಟರ್ ಹತ್ತಿರ ಬರೆಸಿಕೊಳ್ಳುವುದು ಅಲ್ಲ.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ : ಅವರು ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ನಬಾರ್ಡ್ ಕೆಲಸಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷರಾಗಿದ್ದರು, PWD ಹಂಚಿಕೆಯಲ್ಲಿ, ಅವರು ಕ್ಷೇತ್ರವಾರು ಎಷ್ಟೆಷ್ಟು ಹಂಚಿದ್ದಾರೆ? ದಯಮಾಡಿ ಅವರು ಮಾಹಿತಿಯನ್ನು ಕೊಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದೇ ಸರ್ಕಾರದಲ್ಲಿ ಮಾಹಿತಿ ಇದೆ. ಈಗ ಅದರ ಅಧ್ಯಕ್ಷರು ಮಾನ್ಯ ರೇವಣ್ಣನವರು ಇದ್ದಾರೆ. ಅವರ ಹತ್ತಿರ ತೆಗೆದುಕೊಂಡು ಟೀಕೆ ಮಾಡಿ. Junior College, Degree College, High School ಬಗ್ಗೆ ನಾನು ಹೇಳುವುದಿಲ್ಲ, ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ರೇವಣ್ಣನವರು ಇದನ್ನು ನಾವು ಸರಿಪಡಿಸುತ್ತೇವೆಂದು ಇದರ ಕೆಲಸವನ್ನು ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಅವರ ಗಮನಕ್ಕೆ ತಂದಾಗ BAC ಯಲ್ಲಿ ಅವರು ಸರಿಪಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಅದನ್ನು ಇಲ್ಲಿಗೆ ನಿಲ್ಲಿಸಿ ಬಿಡುತ್ತೇನೆ. ಇದರ ಬಗ್ಗೆ ಸಾಕಷ್ಟು ಇಲ್ಲಿ ಚರ್ಚೆಯಾಗಿದೆ, ಎಷ್ಟು ಅನ್ಯಾಯವಾಗಿದೆ ಎಂದು ಹೇಳಿದ್ದಾರೆ ಏನು discrimination ಆಗಿದೆ ಎನ್ನುವುದನ್ನು ನಿಮ್ಮ ಗಮನಕ್ಕೆ ತಂದಿದ್ದಾರೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅರ್ಥ ಸಚಿವರು ಅವರ first ಬಜೆಟ್‌ನಲ್ಲಿ 273 ಆಶ್ವಾಸನೆಗಳನ್ನು ಕೊಟ್ಟಿದ್ದರು. ಅದರಲ್ಲಿ 56 ಆಶ್ವಾಸನೆಗಳನ್ನು Supplementary ಆಗಿ ಮತ್ತೆ announce ಮಾಡಿದರು. First budget ನಲ್ಲಿ 273 ಆಶ್ವಾಸನೆಗಳನ್ನು ಆಮೇಲೆ Supplementary budget ನಲ್ಲಿ ಪುನಃ ಅವರು ಕಾಗದದ ಮೇಲೆ ಬರೆದುಕೊಂಡು ಬಂದು 56 ಆಶ್ವಾಸನೆಗಳನ್ನು ಅಂದರೆ ಒಟ್ಟು 329 ಆಶ್ವಾಸನೆಗಳನ್ನು ಮೊದಲನೇ ಬಜೆಟ್‌ನಲ್ಲಿ ಕೊಟ್ಟರು. ಈ ಕರ್ನಾಟಕ ರಾಜ್ಯದ ಬಜೆಟ್‌ನಲ್ಲಿ ಇತಿಹಾಸವನ್ನು ಸೃಷ್ಟಿಮಾಡಿದರು. ಇಷ್ಟೊಂದು ಆಶ್ವಾಸನೆಗಳನ್ನು ಕೊಟ್ಟರು. 2006-07ರಲ್ಲಿ ಪುನಃ ಅವರು regular budgetನ್ನು Present ಮಾಡಿದಾಗ 121 ಆಶ್ವಾಸನೆಗಳನ್ನು ಕೊಟ್ಟರು. ಆಮೇಲೆ 273, ಆಮೇಲೆ 43, Promiss are repeated. ಅಂದರೆ ಇದರೊಳಗಡೆ ಸುಮಾರು 273ರಲ್ಲಿ 43 ಈ ವರ್ಷ Promosesನ್ನು repeat ಮಾಡಿದ್ದಾರೆ. 99 Promisesಗಳನ್ನು fulfil ಮಾಡಬೇಕಾದರೆ ಯಾವುದು ಬಜೆಟ್‌ನಲ್ಲಿಲ್ಲ, ಅದು ಸುಮಾರು 1,293 ಕೋಟಿ ರೂಪಾಯಿ. ಈಗ fiscal deficit ಅವರೇ ತೋರಿಸಿರುವ ಪ್ರಕಾರ ಆರು ಸಾವಿರ ಕೋಟಿ ರೂಪಾಯಿಗಳು. ಆರು ಸಾವಿರ ಕೋಟಿ ರೂಪಾಯಿಗಳು ನಾವು Sales tax ಹೆಚ್ಚು ಮಾಡುತ್ತೇವೆ. Auctionನಲ್ಲಿ ಹಣ ಬರುತ್ತದೆ, Exciseನಲ್ಲಿ ಬರುತ್ತದೆಂದು ಹೇಳಿ ತೋರಿಸಿದರು. ಆದರೆ ಈ

ಒಂದು ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು additional ಆಗಿ Promisesಗಳು repeat ಆಗಿದೆ. ಅದಕ್ಕೆ 1,293 ಕೋಟಿ ರೂಪಾಯಿಗಳು ಬೇಕು. ಅದನ್ನು ಇವರು ಎಲ್ಲಿಂದ ತರುತ್ತಾರೆ? ಆ Promiseಗಳನ್ನು ಯಾವ ರೀತಿಯಾಗಿ ಇವರು fulfil ಮಾಡುತ್ತಾರೆ, ಏಕೆಂದರೆ ನಾವುಗಳು ಹೋದಲ್ಲೆಲ್ಲವೂ ಕೂಡ ಮಾನ್ಯ ಯಡಿಯೂರಪ್ಪನವರು ಕೇಳಿದ ತಕ್ಷಣ ದುಡ್ಡು ಕೊಡುತ್ತಾರೆ, ನಿಮಗೆ ಹೇಳಿದರೆ ನೋಡೋಣ, examine ಮಾಡೋಣ, ಕೇಳುತ್ತೇನೆ, ಹೇಳುತ್ತೇನೆ, ಎಂದು ಹೇಳುತ್ತೀರಿ, ಅವರ ಸರ್ಕಾರ ಬಂದ ಮೇಲೆ ಯಾವುದಕ್ಕೆ ಕೇಳುತ್ತೇವೆ, ಅದಕ್ಕೆ ಜೋ ಮಾಂಗೇಗಾ ಓ ಮಿಲೇಗಾ, ಅಲ್ಲಾವುದ್ದೀನ್ ಚಿರಾಗ್ ಇದ್ದಹಾಗೆ. ಅದು ಒಂದು ಕಡೆ. Additional announcements 56 schemeಗಳಿಗೆ 220 ಕೋಟಿ ರೂಪಾಯಿಗಳು ಬೇಕು. ಇವೆಲ್ಲವನ್ನೂ ಕೂಡ ಬಜೆಟ್‌ನ ದಿವಸ announce ಮಾಡಿರುವಂತಹದ್ದು, ಇಲ್ಲಾ ಬಜೆಟ್‌ನಲ್ಲಿ ಪ್ರಿಂಟ್ ಆಗಿರುವಂತಹದ್ದು, ಇಲ್ಲಾ ಚೀಟಿಯಲ್ಲಿ ಬರೆದುಕೊಂಡು ಬಂದು announce ಮಾಡಿರುವಂತಹ Promises. ನಾನು ಬೇರೆ ಏನೂ ಕೂಡ ಹೇಳುತ್ತಿಲ್ಲ. ನಾವು ಎಲ್ಲಾ ಇಂತಹ Promiseಗಳನ್ನು ಲೆಕ್ಕಹಾಕಿದರೂ ಕೂಡ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ತರಬೇಕಾಗುತ್ತದೆ, ಇವರು ಎಲ್ಲಿಂದ ತರುತ್ತಾರೋ ಹೇಗೆ ಮಾಡುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಪ್ರಾರಂಭದಲ್ಲಿ ಏನು ಹೇಳಿದಿರಿ, ಅವರಿಗೆ economic background ಇದೆಯೋ ಅಥವಾ ಇಲ್ಲವೋ, background of knowledge of economics, ಅವರು Commerce graduate ಹೌದೋ ಅಲ್ಲವೋ, ಅವರಿಗೆ ಅದರಲ್ಲಿ ಪರಿಣತಿ ಇದೆಯೋ ಅಥವಾ ಇಲ್ಲವೋ, ಅಂತ ಅವರು ಅಲ್ಲಿಗೆ ಮಾತನ್ನು ನಿಲ್ಲಿಸಿದರು. ಈಗ fiscal deficit ಆರು ಸಾವಿರ ಕೋಟಿ ರೂಪಾಯಿಗಳು ಎಂದರು. Promises, Additional Promises, Total ಎಷ್ಟು ಇವೆ? ಹಣ ಎಲ್ಲಿದೆ? ನೀವು ಏನು What are you trying to make out? ನಮಗೆ, we are not able to understand. ಅಂದರೆ ಅವರಿಗೆ far-reaching effect ಏನಾಗುತ್ತದೆ ಎನ್ನುವುದರ ಅಂದಾಜು ಇಲ್ಲದೇ reckless ಆಗಿ,

erratic ಆಗಿ administer ಮಾಡುತ್ತಿದ್ದಾರೆಂತಲೋ ಅಥವಾ treasury ಯಲ್ಲಿ ಅವರಿಗೆಷ್ಟು ಧಾರಾಳವಾಗಿ ಹಣವನ್ನು ಕೊಟ್ಟರು, ಹಣ ಇದೆ ಎನ್ನುವಂತಹದ್ದು ನಮಗೆ ಅರ್ಥವಾಗುತ್ತಿಲ್ಲ, ನೀವು ವಿವರಿಸಿ ಹೇಳಿದರೆ we will be thankful to you.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಮಯದ ಅಭಾವ ಇರುವುದನ್ನು ನಾನು ತಿಳಿದುಕೊಂಡೇ ಮಾತನಾಡುತ್ತಿದ್ದೇನೆ. ಪುನಃ ಆ ಮಾತು ನನ್ನ ಬಾಯಲ್ಲಿ ಬರಲಿ ಎಂದು ತಾವು ಹೇಳುತ್ತಿದ್ದೀರಿ. ನಾನು Commerce graduate ಇರಬೇಕು, Arts graduate ಇರಬೇಕೆಂದು ನಾನು ಹೇಳುವುದಿಲ್ಲ. ಸಾಮಾನ್ಯ ಮನುಷ್ಯನಿಗೆ ಕಾಮನ್‌ಸೆನ್ಸ್ ಬೇಕು. ಈಗ ಇಲ್ಲಿ ಮಾನ್ಯ ಉದಾಸಿಯವರು ಇದ್ದಾರೆ, ಅವರು ಹತ್ತಾರು languageಗಳನ್ನು ಮಾತನಾಡುತ್ತಾರೆ. ಅವರಿಗೆ Economics graduation ಏನು ಬೇಕಾಗಿಲ್ಲ. He can manage crores & millions of rupees of budget. ಅದಕ್ಕೆ ಇದಕ್ಕೆ ಡಿಗ್ರಿ ಬೇಕೆಂದು ಇಲ್ಲ, ಡಿಗ್ರಿ ಇಲ್ಲದೇ ಇದ್ದರೂ ಕೂಡ ನಡೆಯುತ್ತದೆ. ನಾನು ಏನು ಹೇಳುತ್ತೇನೆಂದರೆ, ರಾಜ್ಯದ ಹಿತದೃಷ್ಟಿಯಿಂದ ನಿಮ್ಮಲ್ಲಿ ಹಣ ಎಷ್ಟು ಇದೆ, ನಾವು ಎಷ್ಟು ಹಣವನ್ನು ಖರ್ಚು ಮಾಡಬಹುದು, ಇಲ್ಲ ನಿಮಗೆ ಗೊತ್ತಿಲ್ಲವೆಂದರೆ, ನಿಮ್ಮ ಅಧಿಕಾರಿಗಳು ಹೇಳುವುದನ್ನಾದರೂ ಕೂಡ ಕೇಳಬೇಕಲ್ಲವೇ? ಇಲ್ಲಾ ಅದು ಹಾಗೆಯೇ ಇರುತ್ತದೆ, ಕೊಡಿ ನಾನು announce ಮಾಡುತ್ತೇನೆ ಎಂದು ಹೇಳುತ್ತೀರಿ. ಅವರುಗಳು ಹೆದರಿಕೊಂಡು ಅಧಿಕಾರಿಗಳು ಆಯಿತು ಸಾರ್ ಎಂದು ಹೇಳುತ್ತಾರೆ. ಏತಕ್ಕಾಗಿ ಹೇಳೂತ್ತಾರೆಂದರೆ ಇವರ ಕಿರಿಕಿರಿ ಹೋಗಲಿ ಇದು ಒಂದು ಎಂದು ಹೇಳುತ್ತಾರೆ. ಆದರೆ ನ್ಯಾಯವಾಗಿ ನೋಡಿದಾಗ ನಿಮ್ಮ receipts, ನಿಮ್ಮ ಹಣ ಬರುತ್ತಿದೆ, ಎಷ್ಟು ಬರುತ್ತಿದೆ, ಇನ್ನು expect ಎಷ್ಟು ಮಾಡುತ್ತೀರಿ, Over-all ಇನ್ನು increase ಎಷ್ಟು ಬರಬಹುದು, ತಿಳಿದುಕೊಂಡು ಕೊಟ್ಟಿದ್ದರೆ ಅದನ್ನು ನಾನು ಒಪ್ಪುತ್ತೇನೆ. ಅವೆಲ್ಲವನ್ನು ನೀವು ತಿಳಿದುಕೊಂಡೇ ಈ ಬಜೆಟ್‌ನಲ್ಲಿ ಆರು ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿರುವುದು. ಇದು erratic. ಇದು reckless ಮನಸ್ಸಿಗೆ ಬಂದಂತೆ ಹಂಚುವುದು, ನಾನು ಮೊದಲೇ ಹೇಳಿದನೆಲ್ಲಾ.

ಅಧ್ಯಕ್ಷರು : ನೀವು Clarification ನ್ನು ಕೇಳುತ್ತಿದ್ದೀರಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು Clarification ಇಲ್ಲವಲ್ಲಾ ಅಧ್ಯಕ್ಷರೆ, ನಾನು ನನ್ನದೇ ಆದಂತಹ ಭಾಷೆಯಲ್ಲಿ ಅಂದರೆ ಮಾನ್ಯ ರಮೇಶ್ ಕುಮಾರ್‌ರವರಷ್ಟು ಭಾಷೆಯಲ್ಲಿ ನಾನು ಪ್ರವೀಣನಲ್ಲ. ಅದಕ್ಕೆ ಮಾನ್ಯ ಮಾಧುಸ್ವಾಮಿಯವರಾಗಲಿ, ಅವರಾಗಲಿ, ಭಾಷೆಯಲ್ಲಿ ಪ್ರಭುತ್ವ ಹೊಂದಿದ್ದಾರೆ. ಆದರೆ ನಾವು ಇರತಕ್ಕಂತಹ ಭಾಷೆಯಲ್ಲಿ ನೇರವಾಗಿ ಹೇಳುವಂತಹದ್ದು. ಅದನ್ನು ನಾನು ನೇರವಾಗಿ ಹೇಳುವಾಗ ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತೇನೆಂದರೆ, ನಿಮ್ಮ ಬಜೆಟ್‌ನ್ನು ನೋಡಿಕೊಂಡು ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವುದನ್ನು ಅರ್ಥಮಾಡಿಕೊಂಡು ಕೊಡಬೇಕು. ಏಕೆಂದರೆ ಇಡೀ ರಾಜ್ಯ ನಿಮ್ಮ ಕೈಯಲ್ಲಿ ಇದೆ. ಜನರು ನಿಮ್ಮಿಂದ ಏನು ಅಪೇಕ್ಷೆಯನ್ನು ಮಾಡುತ್ತಾರೆ? ನಾವು ಹಿಂದಿನ ಸಮ್ಮಿಶ್ರ ಸರ್ಕಾರಕ್ಕಿಂತಲೂ ಹಿಂದಿನ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕಿಂತಲೂ ಇವರು ಆರ್ಥಿಕ ಬೆಳವಣಿಗೆ ಹೆಚ್ಚಿನ ದೃಷ್ಟಿಯಿಂದ ಮಾಡಿದ್ದಾರೆನ್ನುವಂತಹದ್ದು ಬರಬೇಕು. ಆರ್ಥಿಕ ಬೆಳವಣಿಗೆಯಾಗಬೇಕಾದರೆ ನೀವು ಯಾವುದರಲ್ಲಿ ತೋರಿಸಬೇಕೆಂದರೆ, ನೀವು ನೀರಾವರಿಯಲ್ಲಿ, ವಿದ್ಯುತ್ ಉತ್ಪಾದನೆಯಲ್ಲಿ ಹಾಗೂ ಎಜುಕೇಷನ್‌ನಲ್ಲಿ, ಹೆಲ್ತ್‌ನಲ್ಲಿ ತೋರಿಸಬೇಕು. ಈ ಎಲ್ಲಾ Human indicators ಏನು ಇದೆ, ಇದರಲ್ಲಿ ನಿಮ್ಮ reflection ಆದಾಗ ಮಾತ್ರ, ನೀವು ಒಳ್ಳೆಯ ಬಜೆಟ್ ಕೊಟ್ಟಿದ್ದೀರೆಂದು ಆಗುತ್ತದೆ. ಅದು ಬರೀ 1 ಕೋಟಿ, 2 ಕೋಟಿ, 4 ಕೋಟಿ ರೂ. ಅವನಿಗೆ ಕೊಟ್ಟಿದ್ದೀರೆಂದರೆ, ಜಾತಿಯ ಹೆಸರಿನಲ್ಲಿ ಕೊಟ್ಟರು, ಎಂದು ಅಲ್ಲ. ನೀವು ಕಲ್ಯಾಣಮಂಟಪಗಳನ್ನು ಕಟ್ಟಿಸಬೇಕು, ಮಾಡಿ ಸ್ವಾಮಿ. Community Hall, ಈ ಬಗ್ಗೆ ಒಂದು ಯೋಜನೆಯನ್ನು ತಂದುಬಿಡಿ. ಇಂತಹ ಬಡವರಿಗೆ ಅವರವರ Locality ಯಲ್ಲಿ ಒಂದು Community Hall. ಅದನ್ನು ಬಿಟ್ಟು ಈ ಊರಿನಲ್ಲಿ ಒಂದು Community Hall, ಆ ಊರಿನಲ್ಲಿ ಒಂದು Community Hall, ಈ ಜಾತಿಗೆ ಒಂದು Community Hall, ಇದು ಯಾವ ನೀತಿ? ಇದರಿಂದ ಏನಾಗುತ್ತದೆಂದರೆ, ಇರಬಹುದು ನೀವು ಅಧಿಕಾರದಲ್ಲಿ ಒಂದು ವರ್ಷ ಇರಬಹುದು, ಅಥವಾ ಎರಡು ವರ್ಷ ಇರಬಹುದು. ಇವತ್ತು ತಾವು ಏನು ಹೇಳುತ್ತಿದ್ದೀರಿ; ಆದರೆ ಈ ಮಾತುಗಳನ್ನು ನೀವು ಸಮಾಜದಲ್ಲಿ ಬಿಟ್ಟು ಹೋದರೆ ನಾಳೆ ಇನ್ನೊಬ್ಬರು ಅದೇ ರೀತಿಯಾಗಿ ಮಾಡುತ್ತಾರೆ. ಅದಕ್ಕೆ at least ನಮ್ಮ ಕರ್ನಾಟಕ

ರಾಜ್ಯದಲ್ಲಿ ಯಾವುದೇ ಸರ್ಕಾರ ಇರಬಹುದು, right from Kengal Hanumanthaiah ಅಥವಾ K.C.Reddy ಅವರಿಂದ ನೀವು ಹಿಡಿದು ಕೊಂಡು ಬನ್ನಿ. ಯಾವಾಗಲೂ ಕೂಡ ಅವರು ಕಾನೂನು ಬಿಟ್ಟು deviate ಆಗಿಲ್ಲ. Rule of Lawಗೆ respect ಕೊಟ್ಟಿದ್ದಾರೆ. ಕಾನೂನು ಪ್ರಕಾರವಾಗಿ ನಡೆದುಕೊಂಡಿದ್ದಾರೆ. ಸಣ್ಣಪುಟ್ಟ ವ್ಯತ್ಯಾಗಳು ಇದ್ದರೂ ಕೂಡ ಅದನ್ನು ಕಾನೂನಿನಲ್ಲಿ ತಂದು ಸರಿಪಡಿಸಿಕೊಂಡು ಮುಂದೆ ಹೋಗಿದ್ದಾರೆ. ಅದಕ್ಕಾಗಿ ಕಾನೂನು ಇರಲಿ, ಇಲ್ಲದೇ ಇರಲಿ ಕೊಟ್ಟು ಕೊಂಡು ಹೋಗಿ, Judicious distribution ಎಂದರೆ ಏನು? ನ್ಯಾಯವಾಗಿ ಹಂಚಬೇಕು. ನೀವೇನು ಮಾಡಿದ್ದೀರಿ? ನಿಮ್ಮ ಮನಸ್ಸು ಬಂದವರಿಗೆ ಹೊಟ್ಟೆ ತುಂಬಾ ಊಟ ಹಾಕುವುದು, ಅಜೀರ್ಣ ಆದವರಿಗೆ ಹಾಕುವುದು, ಇನ್ನೊಬ್ಬ ಅವನು ಉಪವಾಸ ಬಿದ್ದು ಸಾಯುತ್ತಿದ್ದರೂ ಅವನ ಕಡೆ ನೋಡುವ ಹಾಗಿಲ್ಲ. ಅವನು ಹಿಂದೆ ತಿಂದವನಲ್ಲಾ ಅವನು ಸಾಯಲಿ ಎಂದು ಹೇಳುತ್ತೀರಿ. ಅಂದರೆ ಹಿಂದೆ ಊಟ ಮಾಡಿದ್ದರೆ, ಇವತ್ತು ಊಟವನ್ನು ಕೊಡಬಾರದು ಎಂದು ಇದೆಯಾ? ಅಥವಾ ಅವನು ಸಾಯಬೇಕಾ ಇವತ್ತು? ಅದಕ್ಕೆ ಏನಾದರೂ ಅರ್ಥ ಬರಬೇಕಲ್ಲವೇ?

(12-00 PM)

ನಾನು ಏತಕ್ಕಾಗಿ ಹೇಳಿದೆ ಎಂದರೆ, ಈ ಆಶ್ವಾಸನೆಗಳು, ಈ ಹಣ ಇಟ್ಟಿರುವುದನ್ನು ನೋಡಿದಾಗ ಉಳಿದ infrastructure development ಮಾಡುವುದಕ್ಕೆ ಇದರಲ್ಲಿ ಎಲ್ಲಿಯೂ ಕೂಡ ಹೆಚ್ಚಿನ ಹಣ ಇಲ್ಲ.

ಇನ್ನೊಂದು ಏನೆಂದರೆ ವಿಶೇಷವಾಗಿ ನೀವು ಕೇಳಿದಿರಿ, ಏಕೆ ಇಷ್ಟೊಂದು ಕಡಿಮೆ ಬರುತ್ತದೆ, ಅವರು ಹೇಳಿದ ಪ್ರಕಾರ Farm loan waiver ನಿಂದ 2,300–00 ಕೋಟಿ ರೂ.ಗಳು ಅರ್‍ಯಾಕ್ Sale ನಿಂದ ಲುಕ್ಸಾನು ಆಗುವುದು 1,902–00 ಕೋಟಿ ರೂ.ಗಳು. ಆಮೇಲೆ Pay revision ನಿಂದ ಸುಮಾರು 800–00 ಕೋಟಿ ರೂ.ಗಳು. ಲಾಟರಿ ನಿಷೇಧದಿಂದ ಸುಮಾರು 280–00 ಕೋಟಿ ರೂ.ಗಳು. ರೂ. 2,300+1900 ಅಂದರೆ ಇದೇ 4,000 ಕೋಟಿ ರೂ.ಗಳಾಯಿತು, ಹೆಚ್ಚು ಕಡಿಮೆ 7,000–00 ಕೋಟಿ ರೂ.ಗಳು ಅಥವಾ 6,000 ಚಿಲ್ಲರೆ ಕೋಟಿ ರೂ.ಗಳು ಆಗುತ್ತದೆ, ಇಷ್ಟು ಹಣವನ್ನು ನೀವು ಸಂಗ್ರಹಿಸುವುದು ಒಂದು ಕಡೆ. ಈ excess

ಆಶ್ವಾಸನೆಯನ್ನು ಕೊಟ್ಟಿದ್ದು ಇನ್ನೊಂದು ಕಡೆ ಇದು normal ಆಗಿ ನಿಮಗೆ deficit ಬರುತ್ತದೆ. ಏಕೆಂದರೆ ಇದನ್ನೆಲ್ಲಾ waiver ಮಾಡಿದರೆ ದುಡ್ಡು ಬೇಕು, ಲಾಟರಿ ನಿಷೇಧಿಸಿದಿರಿ, ಅರ್ರ್ಯಾಕ್ ಬ್ಯಾನ್ ಮಾಡಿದಿರಿ, ಅದರ ದುಡ್ಡು, ಇವೆಲ್ಲಾ ಲುಕ್ಸಾನು ಸೇರಿದರೆ 6,500 ಕೋಟಿ ರೂ.ಗಳು ಹೆಚ್ಚು ಕಡಿಮೆ ಆಗುತ್ತದೆ. ಅದಕ್ಕೆ ನೀವು ಏನು ಹೇಳಿದಿರಿ, 700–00 ಕೋಟಿ ರೂ.ಗಳನ್ನು ನಾನು Commercial Tax ನಲ್ಲಿ ಮೊಬಿಲೈಸ್ ಮಾಡುತ್ತೇನೆ. 300–00 ಕೋಟಿ ರೂ.ಗಳನ್ನು ಲ್ಯಾಂಡ್ ಮಾರಿ ಹಣವನ್ನು ಸಂಗ್ರಹ ಮಾಡುತ್ತೇವೆ. 1,000–00 ಕೋಟಿ ರೂ.ಗಳಾಯಿತು, ಆಮೇಲೆ ಈ Short-fall ಎಲ್ಲವನ್ನು ನಾವು ನೋಡಿದಾಗ 10, 586–00 ಕೋಟಿ ರೂ.ಗಳು Short-fall ಬರುತ್ತವೆ, ಇದನ್ನು ಯಾವ ರೀತಿಯಾಗಿ manage ಮಾಡುತ್ತಾರೋ, ಯಾವ ರೀತಿಯಾಗಿ figures jugglery ಮಾಡಿ ಹೇಳುತ್ತಾರೋ ಎಂದು ನಾವು ಕಾಯಬೇಕು, ನೋಡಬೇಕು. ಇದರ impact ಈಗ ಗೊತ್ತಾಗುವುದಿಲ್ಲ. ಮುಂದಿನ ಏಪ್ರಿಲ್ 1 ಕ್ಕೆ ಪುನಃ ಇವರೇನು ಬಜೆಟ್ ಮಂಡಿಸುತ್ತಾರೆ, ಅದರ effect ಮಾರ್ಚ್ 31ಕ್ಕೆ ಗೊತ್ತಾಗುತ್ತದೆ. ಅಲ್ಲಿಯವರೆಗೆ ಹೀಗೆ ತಿರುಗಿಸಿ ಕೊಳ್ಳುತ್ತಾ ಹೋಗುತ್ತಾರೆ. ಇಲ್ಲದೇ ಹೋದರೆ ನಾನು ಹೇಳಿದ ಹಾಗೆ 500–00 ರೂ.ಗಳ ಬಜೆಟ್‌ನಲ್ಲಿ ಪ್ರಿಂಟ್ ಮಾಡುವುದು, 200–00 ರೂ.ಗಳು ಖರ್ಚು ಮಾಡುವುದು, 300–00 ರೂ.ಗಳಿಗೆ ಮಾಮೂಲಿ ಕೆಲಸ ಪ್ರಾರಂಭ ಮಾಡಿದ್ದೇವೆಂದು ಹೇಳುವುದು. ರೇವಣ್ಣನವರು ನಮ್ಮ ಎಲ್ಲರ ಕೆಲಸ ಪ್ರಾರಂಭ ಮಾಡುತ್ತಾರೆ, ಆದರೆ ಅವರ ಕೆಲಸ ಮಾತ್ರ quick ಆಗಿ ಪ್ರಾರಂಭ ಮಾಡಿಕೊಂಡು ಬಿಡುತ್ತಾರೆ, ಆ ಕೆಲಸವನ್ನು ಮುಕ್ತಾಯ ಮಾಡಿಯೇ ಬಿಡುತ್ತಾರೆ. ನಮ್ಮ allotment order ನಮ್ಮ ಕೈಗೆ ಸಿಗುವ ತನಕ ಅವರ ರಸ್ತೆ ಕೆಲಸ ಮುಗಿದಿರುತ್ತದೆ. ಅಂದರೆ ಏನಾಯಿತು? ನೀವು 300--00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದರೂ ಕೂಡ, ನೇರವಾಗಿ ಈಗಾಗಲೇ ಅವರು ಹೇಳಿದರಲ್ಲ, ಬಾಕಿ, arrears 200--00 ಕೋಟಿ ರೂ.ಗಳು Payment ಆಗಿರುತ್ತದೆ. "ನಾವೇನು ಮಾಡೋಣ? ನಿಮ್ಮಲ್ಲಿ ಕೆಲಸ ಮಾಡಿಲ್ಲ. ನಿಮ್ಮ ಇಂಜಿನಿಯರ್ ಸರಿಯಿಲ್ಲ ನಾನೇನು ಮಾಡಲಿ" ಎನ್ನುತ್ತಾರೆ. ಅದು ಈ ರೀತಿಯ tactics. ಈ ಬಜೆಟ್ಟಿನಲ್ಲಿ ನಮಗೆ ತೋರಿಸುವುದು ಒಂದು, ಮಾಡುವುದು ಮತ್ತೊಂದು, ನಡೆದುಕೊಳ್ಳುವುದು ಒಂದು, allotment

ಒಂದು, L.O.C. ಬಿಡುಗಡೆ ಮಾಡುವುದು ಒಂದು, ಇವೆಲ್ಲಾ ನಡೆಯುತ್ತಿದೆ. ಅದಕ್ಕೆ ನೀವು ಬಹಳ ಚಾಣಾಕ್ಷರು. ನೀವು ತೋರಿಸುವ ಕಾಗದವನ್ನು ತೋರಿಸುವುದು, ನಮ್ಮ ಕೆಲಸ ಪ್ರಾರಂಭ ಮಾಡಿದಂತೆ ಹೇಳುವುದು, sanction ತೆಗೆದುಕೊಳ್ಳುವುದು. ನಿಮ್ಮ ಕೆಲಸವನ್ನು ಮುಗಿಸುತ್ತೀರಿ. ಅದಕ್ಕೆ ಪೇಮೆಂಟ್ ಆಗಿರುತ್ತದೆ. ನಾವು ನಮ್ಮ ಕೆಲಸಕ್ಕೆ ಇನ್ನು ಅಡ್ಡಾಡುತ್ತಿರುತ್ತೇವೆ. ನಮ್ಮ ಕೆಲಸಕ್ಕೆ ಇನ್ನೂ ಟೆಂಡರ್ call for ಮಾಡುವುದರಲ್ಲೇ ಅದನ್ನು ಇಟ್ಟುಬಿಡುವುದು. Finance recommend ಮಾಡಿದರೂ ಪೂರಾ ಅವರೇ ಎತ್ತಿಕೊಂಡರೆ ಏನು ಮಾಡುವುದು? ಈ ರೀತಿ ನಡೆದರೆ ನಿಜವಾಗಲೂ ಇದು ಅನ್ಯಾಯವಾಗಿದೆ, ಅದಕ್ಕೆ ಅವರು mind apply ಮಾಡಬೇಕು. ನಾವು ಮಾತನಾಡಿದರೆ ಬೇಕೆಂದು ಅವರಿಗೆ ಚುಚ್ಚಿ ಮಾತನಾಡುತ್ತಾರೆಂದು ತಿಳಿದುಕೊಳ್ಳುತ್ತಾರೆ. ನಾನು ಆ ರೀತಿ ಮಾಡುತ್ತೇನೆಯೇ ಎಂದೆಲ್ಲಾ ಅವರು ಮಾತನಾಡುತ್ತಾರೆ. ಸಹಜವಾಗಿ ಅವರು ತಿಳಿದುಕೊಳ್ಳಬೇಕು. ಈಗ ನಮಗೆ ಗೊತ್ತಾಗುವುದಿಲ್ಲ. ಎಷ್ಟೋ ಸಲ ನಾವು ಪ್ರಾರಂಭದಲ್ಲಿ ಬಂದಾಗ, ಮಂತ್ರಿಗಳಾದಾಗ ಉದಾಹರಣೆಗೆ ನನು 1976 ರಲ್ಲಿ ಮಂತ್ರಿಯಾದಾಗ ನಮಗೂ ಕೂಡ ಕೆಲವು ವಿಷಯಗಳು ಗೊತ್ತಾಗುತ್ತಿರಲಿಲ್ಲ. ಬೇರೆ ಅಧಿಕಾರಿಗಳಿಂದ, Senior leaders ಗಳನ್ನು ಕೇಳುತ್ತಿದ್ದೆವು. ಅಥವಾ ಹೊರಗಡೆ ಬಂದು ಯಾವುದೇ ವಿಷಯದ ಬಗ್ಗೆ ಏನು ಮಾಡಬೇಕೆಂದು ಅವರಿಂದ ತಿಳಿದುಕೊಳ್ಳುತ್ತಿದ್ದೆವು. ಗೊತ್ತಿಲ್ಲದಿರುವುದನ್ನು ತಿಳಿದುಕೊಳ್ಳುವು ದರಲ್ಲಿ ತಪ್ಪೇನಿದೆ? ಆದರೆ ಇವರು ಹಾಗಲ್ಲ, ಅರ್ಧಂಬರ್ಧ ತಿಳಿದುಕೊಂಡು, "ಬಿಟ್ಟುಬಿಡಿ ನಮಗೆ ಎಲ್ಲಾ ಗೊತ್ತಾಯಿತು" ಎಂದು ಈ ರೀತಿಯಾಗಿ ಅಧ್ವಾನ ಮಾಡುವುದು. ಈ ರೀತಿಯಾಗಿ ನಮಗೆ ಅನ್ಯಾಯವಾಗುತ್ತದೆ. ಇದನ್ನು ಸರಿಪಡಿಸಿ, ಎಂದು ನಿಮ್ಮ ಸಮಯವನ್ನು ತೆಗೆದುಕೊಳ್ಳುವುದು, ಆ ಕಡೆಯಿಂದ ಎಲ್ಲರಿಂದಲೂ ನಾವು ಬೈಸಿಕೊಳ್ಳುವುದು. ಅದಕ್ಕೆ ಅಧ್ಯಕ್ಷರೇ, ತಮ್ಮಲ್ಲಿ ನಾನು ವಿಶೇಷವಾಗಿ ಕೇಳಿಕೊಳ್ಳುವುದು ಈಗ ನಂಜುಂಡಪ್ಪ ವರದಿಯನ್ನು ಜಾರಿಗೆ ತಂದರೆ ಇಡೀ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಕೇವಲ ಹೈದರಾಬಾದ್ ಕರ್ನಾಟಕಕ್ಕೆ ಅಲ್ಲ, ಹೈದರಾಬಾದ್ ಕರ್ನಾಟಕದಲ್ಲಿ ಸುಮಾರು 39 ಕ್ಷೇತ್ರಗಳು ಮಾತ್ರ ಇವೆ, ಇನ್ನೂ 224 ಕ್ಷೇತ್ರಗಳಿವೆ. ಅದರಲ್ಲಿ ತುಮಕೂರಿನಲ್ಲಿ ಕೆಲವು ತಾಲ್ಲೂಕುಗಳು ಬರುತ್ತವೆ, ಕೋಲಾರದಲ್ಲಿ, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಯಲ್ಲಿ ಬರುತ್ತವೆ. ಬೆಂಗಳೂರಿನಲ್ಲಿ ಕೆಲವು

ಭಾಗಗಳು ಬರುತ್ತವೆ, ಇವೆಲ್ಲಾ ಕೂಡ ಇವೆ. ಅದಕ್ಕೆ ನೀವು ವಿಶೇಷವಾಗಿ 1,570–00 ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳಿದಿರಿ, ಅಲ್ಲೇನಿದೆ? ಅದು ರೆಗ್ಯುಲರ್ ಬಜೆಟ್‌ನಲ್ಲಿ ತೆಗೆದು ಆ ಕಡೆ ಇಟ್ಟಿದ್ದಾರೆ. ಅದೆಷ್ಟು ತಾಲ್ಲೂಕುಗಳಿಗೆ ಹಣ ಬರುತ್ತದೆಯೋ, ಅದನ್ನು ಕ್ರೋಢೀಕರಿಸಿ ಒಂದು ತೋರಿಸುವುದು. ಅಂದರೆ ಒಂದು ತಾಲ್ಲೂಕಿನಲ್ಲಿ ಏನು ಪ್ರೋಗ್ರಾಮ್ಸ್ ಇವೆ, ಅದನ್ನು ಒಂದು ಕಡೆ ಸೇರಿಸಿ ತೋರಿಸಿ ಬಿಡುವುದು, 1500 ಕೋಟಿ ರೂ.ಗಳನ್ನು ಇಷ್ಟು ಇದೆ ಎಂದು ತೋರಿಸಿ ಬಿಡುವುದು, ಇದು Over-all ಇಡೀ ರಾಜ್ಯಕ್ಕೆ ಎಲ್ಲರಿಗೂ ಏನು ಕೊಡುತ್ತೀರಿ, ಕೊಟ್ಟ ಮೇಲೆ Weightage minimum ಏನೆಂದರೆ 2000–00 ಕೋಟಿ ರೂ.ಗಳು ಇದಕ್ಕೆ ಕೊಡಬೇಕು ಎಂದು ಇದೆ ಮತ್ತು ಅದರಲ್ಲಿ percentage fix ಮಾಡಿದ್ದಾರೆ. Most Backward ಅದಕ್ಕೆ 50% ಖರ್ಚು ಮಾಡಬೇಕು, ಆಮೇಲೆ more backward ಅದಕ್ಕೆ 24% ಖರ್ಚು ಮಾಡಬೇಕು. Backward ಗೆ 16% ಖರ್ಚು ಮಾಡಬೇಕು. ಇದು ನಂಜುಂಡಪ್ಪನವರ ಸೂತ್ರ: 16–24–50. ಆ most backward ತಾಲ್ಲೂಕುಗಳಲ್ಲಿ ಏನಿವೆ ಅದನ್ನು ತೆಗೆದು ನೋಡಿ ಎಷ್ಟರ ಮಟ್ಟಿಗೆ ಹಣ ಇಟ್ಟಿದ್ದಾರೆ? ಆ ಸೂತ್ರವನ್ನು ಬದಲಾಯಿಸಿ ಇವರೇನು ಮಾಡಿದರು ಅಂದರೆ Most backwardಗೆ 50%, More backwardಗೆ 30%, backwardಗೆ 20% ಅಲ್ಲಿ ಹೆಚ್ಚು ಕಡಿಮೆ ಏನಾಯಿತು? ಸುಮಾರು 16 ಇದ್ದಲ್ಲಿ 20 ಆಯಿತು, 24 ಇದ್ದಲ್ಲಿ 30 ಆಯಿತು, ಅದು ಯಥಾ ಸ್ಥಿತಿಯಲ್ಲಿ ಉಳಿಯಿತು. So, ಇವೆಲ್ಲಾ ಕೂಡ ನಿಜವಾಗಲೂ ಅನ್ಯಾಯ, ಅದನ್ನು ಸರಿಪಡಿಸಬೇಕು ಎಂದು ಹೇಳಿ ಶ್ರೀ ಬಿ.ಎಸ್.ಪಾಟೀಲ್ ರವರು ಒಂದು ಸೆಮಿನಾರ್ ಇಟ್ಟರು. ನಂಜುಂಡಪ್ಪ ವರದಿಯನ್ನು ಏನು ಸಲ್ಲಿಸಿದ್ದಾರೆ, ಅದರಲ್ಲಿರುವ ಸದಸ್ಯರು openly ಹೇಳಿದರು. ಈ ಬಜೆಟ್ ಮೋಸ, ಈ ಹಣದಿಂದ ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡಲಿಕ್ಕೆ ಸಹಾಯವಾಗುವುದಿಲ್ಲ. ಇದರಿಂದ ತೊಂದರೆ ಇದೆಯೇ ಹೊರತು, ನಿಮಗೆ ಈಗ ಇಟ್ಟಂತಹ ಹಣದಲ್ಲಿ ಸುಮಾರು ಹೆಚ್ಚು ಕಡಿಮೆ 128–00 ಕೋಟಿ ರೂ.ಗಳು ಖೋತಾ ಇದೆ ಹೊರತಾಗಿ, ಇದರಿಂದ ನಿಮಗೆ ಪ್ರಯೋಜನ ಇಲ್ಲ ಎನ್ನತಕ್ಕಂಥ ಮಾತನ್ನು ಸದಸ್ಯರು ಹೇಳಿದ್ದಾರೆ. ಯಾವ ಸದಸ್ಯರು ರಿಪೋರ್ಟ್ ಕೊಟ್ಟರು, ಅವರನ್ನು ನಿಮ್ಮ Legislators Homeನಲ್ಲಿ

Conference Hallನಲ್ಲಿ ಕರೆದು ಪ್ರತಿಯೊಂದರಲ್ಲಿ ಏನಿದೆ ಎಂದು ತಿಳಿದುಕೊಳ್ಳೋಣವೆಂದು, ನಾವು ಅಲ್ಲಿ ಕುಳಿತು ಸುಮಾರು ಎರಡು ಗಂಟೆ ಅವರ ಹತ್ತಿರ ಚರ್ಚೆ ಮಾಡಿ ಅವರ ಭಾಷಣ ಕೇಳಿದ್ದೇವೆ, ಅವರೇ ಹೇಳಿದ್ದಾರೆ, ಇದರಲ್ಲಿ ಅನ್ಯಾಯ ಆಗಿದೆ. ಆ ಅನ್ಯಾಯವನ್ನು ಸರಿಪಡಿಸುವುದು ಹೇಗೆ? ಮೊದಲನೆಯ ನಂಜುಂಡಪ್ಪ ವರದಿ ರಿಪೋರ್ಟ್ ಪ್ರಕಾರ 60.24.16 ಎರಡನೆಯದಾಗಿ ಸರ್ಕಾರ ಸುತ್ತೋಲೆ ಹೊರಡಿಸಿದ್ದು 50–30–20. So, ಇದನ್ನು ಸ್ವಲ್ಪ ಸರಿಪಡಿಸಿಕೊಳ್ಳುವುದು ಆಗಬೇಕು. ಆಮೇಲೆ ಎಂ.ಪಿ.ಪ್ರಕಾಶ್‌ರವರು ಒಪ್ಪಿಕೊಂಡರು. ಇದು ಅನ್ಯಾಯವಾಗಿದೆ, ನಾನು ಹಿಂದುಳಿದ ತಾಲ್ಲೂಕು ಪ್ರತಿನಿಧಿಯಾಗಿ ಅದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಸರ್ಕಾರದಲ್ಲಿ ಇದನ್ನು ಅನುಷ್ಠಾನಕ್ಕೆ ತರುವುದು ಬಹಳ ಕಷ್ಟವೆಂದು ಹೇಳಿದರು. ಅದಕ್ಕೆ ಹಣಕಾಸಿನ ಸಚಿವರು ಇದನ್ನು ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳಿದ್ದರು. ಇದು ಕಷ್ಟವೆಂದು ನೀವು ಮೊದಲಿನಿಂದಲೇ ಹೇಳಿದ್ದರೆ ಇದಕ್ಕೆ Problem ಇರಲಿಲ್ಲ. ಆದರೆ ಅನುಷ್ಠಾನ ತರಲಿಕ್ಕೆ ನಾವು ಬದ್ಧರಾಗಿದ್ದೇವೆಂದು ಹೇಳಿ, ಅಲ್ಲಿ ಬಂದು ನಾನು ಪ್ರತಿನಿಧಿಯಾಗಿ ನಿಮ್ಮ ಜೊತೆಯಲ್ಲಿದ್ದೇನೆ. ಅಂದರೆ ಪ್ರೀತಿ ನಿಮ್ಮ ಜೊತೆಯಲ್ಲಿ, ಲಗ್ನ ಇನ್ನೊಬ್ಬರ ಜೊತೆಯಲ್ಲಿ ಎಂದಾಗುತ್ತದೆ. ಹೈದರಾಬಾದ್ ಕರ್ನಾಟಕದವರ ಸಮಸ್ಯೆ ನನಗೆ ಗೊತ್ತಿದೆ. ನಿಮ್ಮ ಮೇಲೆ ನಮಗೆ ಬಹಳ ಪ್ರೀತಿಯಿದೆ, ಆದರೆ ಏನು ಮಾಡುವುದು ಯಡಿಯೂರಪ್ಪನವರು ಕುಮಾರಸ್ವಾಮಿಯವರ ಜೊತೆ ಲಗ್ನ ಮಾಡಿಕೊಂಡಿದ್ದಾರೆ. ನಾನು ಅಲ್ಲಿರಬೇಕಾಗುತ್ತದೆ, ಅದಕ್ಕೆ ಅದರ ಬಗ್ಗೆ ಮಾತನಾಡುವುದಿಲ್ಲವೆಂದು ಹೇಳಿ ಎಂ.ಪಿ. ಪ್ರಕಾಶ್‌ರವರು ತಪ್ಪಿಸಿಕೊಂಡು ಬಿಟ್ಟರು. ಹೀಗೆ ಒಂದಲ್ಲ, ಅನೇಕ ಉದಾಹರಣೆಗಳನ್ನು ನಾನು ಕೊಡಬಹುದು, ಆದರೆ ಸಮಯದ ಅಭಾವವಿದೆ. ಇನ್ನೂ ಮಾತನಾಡು ವವರು ಇದ್ದಾರೆ. ಇಷ್ಟು ಮಾತ್ರ ನಿಮಗೆ ಹೇಳುತ್ತೇನೆ ಮಾನ್ಯ ಅಧ್ಯಕ್ಷರೆ, ಬಜೆಟ್ ತೆಗೆದು ನೋಡಿದರೆ ಎಷ್ಟು ಅನ್ಯಾಯ, ಯಾವ್ಯಾವ ಭಾಗದಲ್ಲಿ, ಯಾವ್ಯಾವ ಜಿಲ್ಲೆಗಳಲ್ಲಿ ಆಗಿದೆ ಎಂದು ಒಂದು White paper publish ಆದರೆ ಅವರಿಗೆ ಗೊತ್ತಾಗುತ್ತದೆ. ಇದು ಬಂದು. ಈಗ ಎಲ್ಲ ಕ್ಷೇತ್ರಗಳಿಗೂ ಒಂದೋ, ಎರಡೋ ಕೊಟ್ಟರೆ, ನೀವು ಯಾರಿಗೆ ಎಷ್ಟು ಕೊಡುತ್ತೀರಿ? ಬೇಕಾದರೆ, ನೀವು ಮಂತ್ರಿಗಳಾಗಿ ಒಂದೆರಡು ಹೆಚ್ಚಿಗೆ ತೆಗೆದುಕೊಳ್ಳಲು ಅಡ್ಡಿಯಿಲ್ಲ. ಏಕೆಂದರೆ, ಸರಿ ಸಮಾನವಾಗಿ ರಾಜ್ಯ ಬೆಳೆಯಬೇಕಲ್ಲ, ಜಿಲ್ಲೆಗಳು

ಬೆಳೆಯಬೇಕಲ್ಲ. ಆ ದೃಷ್ಟಿಯಿಂದ ನೀವು ನೋಡಬೇಕು. ಈಗ ಆಲಮಟ್ಟಿ, ನೀರು ಇದ್ದಲ್ಲೇ ಕಟ್ಟುವುದು ಇರುತ್ತದೆ. ಅದೇ ರೀತಿ ನಾರಾಯಣಪುರ ಡ್ಯಾಮ್, ಅಲ್ಲೇ ಕಟ್ಟಬೇಕಾಗುತ್ತದೆ. ಹೇಮಾವತಿಗೆ ಸಂಬಂಧಿಸಿದಂತೆ ಹಾಸನದಲ್ಲೇ ಕಟ್ಟಬೇಕಾಗುತ್ತದೆ. ಹೇಮಾವತಿಗೆ ಅಷ್ಟು ಖರ್ಚು ಮಾಡಿದ್ದೀರಿ. ಕೋಲಾರದಲ್ಲಿ ಏಕೆ ಕಟ್ಟಿಲ್ಲವೆಂದು ನೀವು ಕೇಳುವುದಕ್ಕಾಗುತ್ತದೆಯೇ? ಯಾವುದಕ್ಕೆ ಆದ್ಯತೆ ಕೊಡಬೇಕು? ಎಲ್ಲಿ ನೀರಾವರಿಯಾಗುತ್ತದೋ ಅಲ್ಲಿ ಕೊಡಬೇಕು. ಈಗ ಸಣ್ಣ ನೀರಾವರಿಗೆ ಕೋಲಾರದಲ್ಲೇ ಆದ್ಯತೆ ಕೊಡಬೇಕಾಗುತ್ತದೆ, ಚಿತ್ರದುರ್ಗದಲ್ಲೇ ಕೊಡಬೇಕು. ಏಕೆಂದರೆ, ಅಲ್ಲಿ ಹರಿಯುವ ಬೇರಾವುದೇ ದೊಡ್ಡ ನದಿಗಳಿಲ್ಲ, ಅಲ್ಲಿ ದೊಡ್ಡ ದೊಡ್ಡ ಕಾಲುವೆಗಳು ಬರುವುದಿಲ್ಲ. ಅದಕ್ಕೋಸ್ಕರ, ಯಾವ ಭಾಗದಲ್ಲಿ ನಾವು ಒತ್ತು ಕೊಡಬೇಕು, ಯಾವ ಪ್ರೋಗ್ರಾಂ ಮಾಡಬೇಕೋ, ಅದನ್ನು ಮಾಡಲೇಬೇಕು. ಸಣ್ಣ ನೀರಾವರಿಗೆ ಕೋಲಾರಕ್ಕೆ ನಾವು 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಕೇಳುವುದರಲ್ಲಿ ಅರ್ಥವಿಲ್ಲ. ಅಲ್ಲಿ ನೀರಾವರಿಗೇ ಆದ್ಯತೆ ಕೊಡಬೇಕು, 10 ಕೋಟಿ, 20 ಕೋಟಿ, 3 ಕೋಟಿ, ರೂ.ಗಳು ಇರಬಹುದು. ಅದು ಮೈಸೂರು ಇರಬಹುದು, ಹಾಸನ ಇರಬಹುದು, ಬಿಜಾಪುರದ ಆಲಮಟ್ಟಿ ಇರಬಹುದು, ಗುಲ್ಬರ್ಗಾದ ನಾರಾಯಣಪುರ ಇರಬಹುದು, ಅಥವಾ ತುಂಗಭದ್ರಾ ಇರಬಹುದು. ಆ ಕಾಲುವೆಗಳಿಗೆ ಎಷ್ಟು ಆದ್ಯತೆ ಕೊಡಬೇಕು, ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದು ಸಹಜ. ಆದರೆ, ಹೈಸ್ಕೂಲ್‌ಗಳು, ಕಾಲೇಜುಗಳು, ಮನೆಗಳು, ಅನಂತರ ಕಮಿಟಿಗಳು, ನೀವು ಕಾನೂನು ಪ್ರಕಾರ ಮಾಡುವುದನ್ನೂ ಮಾಡಲಿಲ್ಲವೆಂದರೆ, ನಿಜಕ್ಕೂ ಕೂಡ ಇದು ಅನ್ಯಾಯ ಮತ್ತು ಈ ಸದನದಲ್ಲಿ ನಾವು ನಂಬಿಕೆ ಇಟ್ಟು ಏನು ಕೆಲವು ಕಾನೂನುಗಳನ್ನು ಮಾಡುತ್ತೇವೆ, ಆ ಕಾನೂನಿಗೆ ವಿರುದ್ಧವಾಗಿ ನಾವೆಲ್ಲರೂ ನಡೆದುಕೊಂಡಂಥಾಗುತ್ತದೆ. ಈಗ ನೋಡಿ, Land Grant Committees. ಕೆಲವು ಕಡೆ ಕಾನೂನಿನ ಪ್ರಕಾರ ಯಾರ jurisdiction ಹೆಚ್ಚಿಗೆ ಇರುತ್ತದೋ, ಅವರಿಗೇ ಕೊಡಬೇಕೆಂದಿರುತ್ತದೆ. ಆದರೆ, ಇಲ್ಲಿ ಏನಾಗಿದೆಯೆಂದರೆ, ಯಾರಿಗೆ ಒಂದು ಹೋಬಳಿ, ಎರಡು ಹೋಬಳಿ ಇದೆಯೋ, ಅವರು ಅಧ್ಯಕ್ಷರು, ನಾಲ್ಕು ಹೋಬಳಿಗಳಿದ್ದವರು ಸದಸ್ಯರು. ಈಗ ಶ್ರೀಮತಿ ಭಾಗೀರಥಿಯವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಮಗೆ Complaint ಬಂದಿತ್ತು, ಅದೇ ರೀತಿ ಜಯಪ್ರಕಾಶ್ ಹೆಗ್ಡೆಯವರ

ಕ್ಷೇತ್ರಕ್ಕೆ ಸಂಬಂಧಿಸಿದಂತೆಯೂ Complaint ಇತ್ತು. ಅಂದರೆ, ಹೀಗೆ blatantly ಇದನ್ನು ಕಂಡೂ ನಾವು ಅನ್ಯಾಯ ಮಾಡುವುದು ಸರಿಯೇ? ಅದು ನಿಮ್ಮ ಕೈಯ್ಯಲ್ಲಿದೆ. ಏನೋ ನಿಮ್ಮ ಕೈಯಲ್ಲಿ ಇಲ್ಲದೇ ಇರತಕ್ಕಂಥಾದ್ದು, ಆಕಸ್ಮಿಕವಾಗಿ ಆಗಿದ್ದು, ಅದಕ್ಕೆ ಯಾರೂ blame ಮಾಡುವುದಿಲ್ಲ. ಇದು natural calamity ಇವೆಲ್ಲವೂ man-made calamities. ನೀವು ಸೃಷ್ಟಿಸಿದ ಕೆಲಸಗಳು. ಅದಕ್ಕೋಸ್ಕರ, ಇವುಗಳನ್ನು ಸರಿಪಡಿಸಬೇಕು. ಇದರಿಂದ ಈ ಕಾರ್ಯಕ್ರಮಗಳಲ್ಲಿ ನೀವು with vengeance act ಮಾಡಬಾರದು. ಏಕೆಂದರೆ, ಯಾವಾಗಲೂ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಾಗ ಜನರ ಹಿತದೃಷ್ಟಿಯಿಟ್ಟುಕೊಂಡು ನಾವು ಮಾಡಬೇಕೇ ಹೊರತು, ಕೇವಲ ಒಬ್ಬರು, ಇಬ್ಬರು ಎಂದು ಕೇಳಿ ತಿಳಿದುಕೊಂಡು, ನಾವು ಪಕ್ಷಪಾತ ಮಾಡಿದರೆ ಖಂಡಿತವಾಗಿಯೂ ಇದು ಸರಿಯಲ್ಲ. ಅನಂತರ, ಗ್ರಾಮ ವಾಸ್ತವ್ಯ. ಈಗಾಗಲೇ ಇದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ್ದಾರೆ. ಗ್ರಾಮ ವಾಸ್ತವ್ಯ ಮಾಡಬೇಡಿ, ಇಲ್ಲೇ ವಿಧಾನಸೌಧದಲ್ಲಿ ವಾಸ್ತವ್ಯ ಮಾಡಿ ಎಂದು ಹೇಳಿದ್ದಾರೆ. ಆದುದರಿಂದ, ಪುನಃ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅನಂತರ, ಇನ್ನೊಂದು, PLD Banksಗೆ ಹೊಸ Circular ಗಳನ್ನು issue ಮಾಡಿದ್ದಾರೆ. ಇದು ದಿನಾಂಕ: 16-6-2007 ರಂದು ಹೊರಡಿಸಿರುವ ಸುತ್ತೋಲೆಯಾಗಿದೆ. ಏನೆಂದರೆ, ಶೇಕಡ 15ರಷ್ಟು ಬಡ್ಡಿ ವಿಧಿಸಿದ್ದಾರೆ. ಇದು ಮಾಧುಸ್ವಾಮಿಯವರಿಗೆ ಗೊತ್ತಿರಬಹುದು. ಈಗ ನಾವು ಎಲ್ಲ ಕಡೆ 4% ಕೊಡುತ್ತೇವೆಂದು ಘೋಷಣೆ ಮಾಡಿದ್ದೇವೆ. ಆದರೆ, Circularನಲ್ಲಿ ಏನು ಹೇಳುತ್ತಾರೆಂದರೆ, ಏಳೂವರೆ ಪರ್ಸೆಂಟ್ ರೈತನೇ ಕೊಡಬೇಕು. ಅಂದರೆ, ನಾಲ್ಕೂವರೆ ಪರ್ಸೆಂಟ್ ವಿಧಿಸಿದಲ್ಲಿ, ಇವರಿಗೇನು ಲಾಭ? ಇವರಿಗೇನೂ ಲಾಭವಾಗುವುದಿಲ್ಲ. ಅದಕ್ಕೋಸ್ಕರ, ದಯವಿಟ್ಟು ಈ Circular ಅನ್ನು withdraw ಮಾಡಿಕೊಂಡು, 4% ಗೆ ಸೀಮಿತವಾಗಿ ಮಾಡುವುದಾಗಬೇಕು. ಇದರ ಶೇಕಡ 7.5ರಷ್ಟು ರೈತರೇ ಭರಸಬೇಕೆಂದೂ, ಉಳಿದ ಶೇಕಡ 7.5ರಷ್ಟು ಸರ್ಕಾರದಿಂದ ಭರಿಸಿಕೊಳ್ಳಲಾಗುವುದು. ಕೃಷಿ ಸಾಲ ಹೊರತುಪಡಿಸಿ ಉಳಿದ ಯೋಜನೆಗಳಿಗೆ ಶೇಕಡ 17ರ ಬಡ್ಡಿ ದರವನ್ನು ಫಲಾನುಭವಿಗಳೂ ಪೂರ್ಣವಾಗಿ ಭರಸಬೇಕು. ಈ ರೀತಿಯಾಗಿ Circular ಅನ್ನು issue

ಮಾಡಿದ್ದಾರೆ. ಅದಕ್ಕೋಸ್ಕರ, ರೈತರಿಗೆ ಒಂದು ಕಡೆ ಸಹಾಯ ಮಾಡುತ್ತೇವೆಂದು ಹೇಳುತ್ತೀರಿ, ಇನ್ನೊಂದು ಕಡೆ ಅವರ ಕಾಲು ಹಿಡಿದು ಎಳೆಯುತ್ತೀರಿ. ಇಂತಹ ದ್ವಂದ್ವ ನೀತಿಯನ್ನು ತಾವು ದಯವಿಟ್ಟು ತಳೆಯವಾರದು. ಇದನ್ನು ಸರಿಪಡಿಸಿ, ಸಹಾಯ ಮಾಡಬೇಕು. ಈಗಾಗಲೇ ನೂರು ವರ್ಷದ ಕಾರ್ಯಕ್ರಮವನ್ನು ಬಹಳ ಜೋರಾಗಿ ಮೈಸೂರಿನಲ್ಲಿ ಆಚರಿಸಿದರು. ಆ ಕಾರ್ಯಕ್ರಮಕ್ಕೆ ಜಿ.ಟಿ.ದೇವೇಗೌಡರು, ಮುಖ್ಯಮಂತ್ರಿಗಳು ಹೋಗಿದ್ದರು. ವಿರೋಧ ಪಕ್ಷದ ನಾಯಕರೂ ಹೋಗಿದ್ದರು. ಅಲ್ಲಿಗೆ ಶರದ್‌ಪವಾರ್‌ರವರು ಬಂದಿದ್ದರು. ಸಾಕಷ್ಟು ಜನ ಘಟಾನುಘಟಿಗಳೆಲ್ಲರೂ ಆ ಕಾರ್ಯಕ್ರಮಕ್ಕೆ ಹೋಗಿದ್ದಾರೆ. ಆದರೆ, ಅದಕ್ಕೆ ನಿಜವಾದ. ಶತಮಾನೋತ್ಸವದ ಅರ್ಥ ಬರಬೇಕೆಂದರೆ, ಇದನ್ನು withdraw ಮಾಡಿಕೊಂಡು ಹೊಸ G.O.issue ಮಾಡಿ.. ..

ಶ್ರೀ ಕೆ.ಶ್ರೀನಿವಾಸಗೌಡ : ಮಾನ್ಯ ಖರ್ಗೆಯವರು ಏನೋ ಹೊಸ ವಿಷಯ ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ದಿನಾಂಕ: 16-6-2007ರಂದು ಹೊರಡಿಸಿರುವ ಸರ್ಕಾರಿ ಆದೇಶದ ಬಗ್ಗೆ ನಾನು ಹೇಳುತ್ತಿದ್ದೇನೆ. ಹೊಸ Circular ಬಗ್ಗೆ ಹೇಳುತ್ತಿದ್ದೇನೆ. ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಅದನ್ನು ತಕ್ಷಣವೇ ಸರಿಪಡಿಸಬೇಕು. ವಿಶೇಷವಾಗಿ, ಇನ್ನೊಂದು, Money Lending Regulation Act ತರುವುದು ಬಹಳ ಮುಖ್ಯ. ಏಕೆಂದರೆ, ಹಳ್ಳಿಗಳಲ್ಲಿ ಒಂದು ನೂರು ರೂಪಾಯಿ ಕೊಟ್ಟರೆ, ನೂರು ರೂಪಾಯಿಯನ್ನೂ ವಸೂಲು ಮಾಡುತ್ತಾರೆ. ಅಲ್ಲಿ ಸಾಕಷ್ಟು exploitation ಆಗುತ್ತದೆ. ಏಕೆಂದರೆ, ಅಲ್ಲಿ ಯಾವುದೇ ಕಾನೂನು ಇಲ್ಲ. ಅದಕ್ಕೋಸ್ಕರ, ಅವರು ಏನು ಮಾಡುತ್ತಾರೆಂದರೆ, ಯಾವುದೋ 10 ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಹೊಲ ಇದ್ದರೆ, ಅವರು 20 ಸಾವಿರವೋ, 25 ಸಾವಿರವೋ ಕೊಟ್ಟು entire ಹೊಲವನ್ನೇ ಬರೆಸಿಕೊಡುತ್ತಾರೆ. ಕೊನೆಗೆ, ಅಲ್ಲಿ ಹೊಲ, ಮನೆ, ಇಂತಹುದೆಲ್ಲವನ್ನೂ ಬರೆಸಿಕೊಂಡು ಕೊನೆಗೆ, ಒಂದು ರೂಪಾಯಿ, ಎರಡು ರೂಪಾಯಿ ಹಾಕಿ, ಚಕ್ರ ಬಡ್ಡಿ ಹಾಕಿ, ಅವರ ಹೊಲಗಳನ್ನು ಬರೆಸಿಕೊಳ್ಳುವ ಅನೇಕ ಉದಾಹರಣೆಗಳಿವೆ. ಅದಕ್ಕೋಸ್ಕರ, ದಯವಿಟ್ಟು ಈಗಾಗಲೇ RBI ನವರು ಒಂದು model Act ತರುತ್ತಿದ್ದಾರೆಂದು ಪತ್ರಿಕೆಯಲ್ಲಿ ಬಂದಿತ್ತು.

ದಯವಿಟ್ಟು ಈ model Act ಅನ್ನು ಕೂಡ ನೀವು adopt ಮಾಡಿಕೊಂಡು Money Lending Regulation Act ಎಂದು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರಬೇಕು. ಏಕೆಂದರೆ, ಈ ಹಿಂದೆ ದೇವರಾಜ್ ಅರಸುರವರು ಇದ್ದಾಗ Debt Relief Act ಇತ್ತು. ಅದು ಇನ್ನೂ ಅಸ್ತಿತ್ವದಲ್ಲಿದೆ. ಅದನ್ನು one-time implement ಮಾಡಿ ಬಡವರ, ಸಾಲಗಳನ್ನು ಮಾಫಿ ಮಾಡುವುದು even private ನಲ್ಲಿದ್ದರೂ, ಅವರು ಅದನ್ನು ಹೊರಗಡೆ exhibition ಮಾಡಿ, ಮಾಫಿ ಮಾಡುವುದು. ನೀವು ನೋಡಿದ್ದೀರಾ? Debt Relief Act ನಲ್ಲಿ ಅವರು ಗಿರವಿ ಇಟ್ಟಂತಹ ಬಂಗಾರ, ಮನೆಗಳು, ಬಾಂಡೆಗಳು, ಹೊಲಗಳು, ಎಲ್ಲವನ್ನೂ ಬಿಡಿಸಿ ಕೊಟ್ಟರು. ಆ ಕಾನೂನು ಅಸ್ತಿತ್ವದಲ್ಲಿದೆ. ನೀವೂ ಅದನ್ನು ಜಾರಿಗೆ ತರಬೇಕು. ಎರಡನೆಯದಾಗಿ, ಹಳ್ಳಿಗಳಲ್ಲಿ ಬಡ್ಡಿ ಪಡೆದುಕೊಳ್ಳುವ ಸಾಹುಕಾರರುಗಳನ್ನು RBI model ಆದ Money Lending Regulation Act ಮೇಲೆ ತಾವು regulate ಮಾಡಬೇಕೆಂಬುದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇನ್ನು ನನ್ನ ಸಣ್ಣ ಪುಟ್ಟ ಕೆಲವು ಬೇಡಿಕೆಗಳಿವೆ. ಅಂದರೆ, ಗುಲ್ಬರ್ಗಾದಲ್ಲಿ Airport. ಆ Airportಗೆ 500 ಎಕರೆಗಳಷ್ಟು ಜಾಗವನ್ನು consent ಮೇಲೆ acquire ಮಾಡಿ, ಅದಕ್ಕೆ fencing ಹಾಕಿಕೊಂಡಿದ್ದಾರೆ. ಅದಕ್ಕೆ ಇಲ್ಲಿಯವರೆಗೂ ಅದಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟು run-way ಮಾಡುವುದು ಆಗಿಲ್ಲ. ಆದರೆ, 'ಅದನ್ನು ಮಾಡಿದ್ದೇನೆ, ಇದನ್ನು ಮಾಡಿದ್ದೇನೆ' ಎಂದು ಎಲ್ಲವನ್ನೂ ಹೇಳುತ್ತಾರೆ. ಅಧ್ಯಕ್ಷರೆ, 500 ಎಕರೆ, you belive it or not, consent ಮೇಲೆ ರೈತರು ಕೊಟ್ಟರು. ಡಾ: ತಂಗಾ, ಪಾಪ! ಅದು ಅವರ ಊರು. ಆ ಊರಿನ ರೈತರು ಸಹ ನಮಗೆ ಸಹಾಯ ಮಾಡಿದರು. ನಾವೆಲ್ಲರೂ ಸೇರಿ ನಮ್ಮ ಮುಖ್ಯಮಂತ್ರಿಯವರಿದ್ದಾಗ ಕೆಲವು ಭೂಮಿಯನ್ನು ತೆಗೆದುಕೊಂಡು ಕೊನೆಗೆ, ಏರ್ ಪೋರ್ಟ್‌ಗೆಂದು 500 ಎಕರೆಗಳನ್ನು ಇಟ್ಟಿದ್ದೇವೆ. ಅದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಟ್ಟರೆ ಆ ಏರ್ ಪೋರ್ಟ್ ಕಂಪ್ಲೀಟ್ ಆಗುತ್ತದೆ. ಆದರೆ ನಾವು ಪತ್ರ ಬರೆದು ಸಾಕಾಯಿತು, ಹೇಳಿ ಹೇಳಿ ಸಾಕಾಯಿತು ಮುಖ್ಯಮಂತ್ರಿಗಳು ಮತ್ತು ರೇವಣ್ಣನವರು ಹಾಸನದ್ದನ್ನು ಬಹಳ ಸ್ಪೀಡಾಗಿ ನಡೆಸಿದರು, ಆದರೆ ನಮ್ಮ ಗುಲ್ಬರ್ಗಾದ್ದು ಏಕೋ ಹಿಂದೆ ಬಿದ್ದಿದೆ ಗೊತ್ತಿಲ್ಲ. ಆದ್ದರಿಂದ, ಇದಕ್ಕೆ ತಕ್ಷಣ ಲ್ಯಾಂಡ್ ಎಲ್ಲಾ ಇದೆ, ಇದನ್ನು

ಪ್ರಾರಂಭ ಮಾಡಿಸಬೇಕು, ಪ್ರಾರಂಭ ಮಾಡಿದರೆ ಆ ಭಾಗದಲ್ಲಿ ಮರಾಠವಾಡ ಮತ್ತು ಹೈದ್ರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಬಿಜಾಪುರ ಜಿಲ್ಲೆಗೂ ಇದರ ಅನುಕೂಲವಾಗುತ್ತದೆ. ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಗಮನ ಕೊಡಬೇಕು. ಜೊತೆಗೆ ಇದು ಒಂದು land-mark ಆಗುತ್ತದೆ. ಹಣ ಕಡಿಮೆ, ಸವಲತ್ತು ಜಾಸ್ತಿ. Mostly World Bank ನವರು ಅವರು ಇವರು visit ಮಾಡಬೇಕಾದರೆ ಕೂಡ ಅನುಕೂಲ ಆಗುತ್ತದೆ. ಏಕೆಂದರೆ, ಅವರು ಅಲ್ಲಿಂದಲೇ ನಾರಾಯಣಪುರ ಡ್ಯಾಂ, ಆಲಮಟ್ಟಿ ಡ್ಯಾಂ, ಭೀಮರಾಯನ ಗುಡಿಗೆ ಹೋಗಬೇಕು. ಇಂಥ ಎಲ್ಲಾ ಪ್ರಾಜೆಕ್ಟ್ ನೋಡಬೇಕಾದರೆ ಕಂಡಿತವಾಗಿ ಅಲ್ಲಿ ಏರ್‌ಪೋರ್ಟ್‌ನ ಅವಶ್ಯಕತೆ ಇದೆ. ಅದಕ್ಕಾಗಿ ನಾನು ಅವರಿಗೆ ಕೇಳಿಕೊಳ್ಳತಕ್ಕದ್ದು, ಇದು ತಕ್ಷಣ ಆಗಬೇಕು. ಹೈಕೋರ್ಟ್ building ಕೂಡ ಹಾಗೇ ಆಗಿದೆ. ಅದು ಏಕೋ ಏನೋ ನನಗೆ ಗೊತ್ತಿಲ್ಲ. ಧಾರವಾಡದ್ದು ಬಹಳ fast ಆಗಿ ನಡೆದಿದೆ, ಸಂತೋಷ. ಆದರೆ, ಗುಲ್ಬರ್ಗಾದ್ದು ಕುಂಟಿಕೊಂಡು ನಡೆದಿದೆ. ಅದರ ಬಗ್ಗೆ ಕೂಡ ಗಮನ ಇಲ್ಲ. ಹೀಗೆ ಕೆಲವು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜೀವ್‌ಗಾಂಧಿ ವಿಶ್ವವಿದ್ಯಾನಿಲ ಯವಂತೂ ರಾಮನಗರಕ್ಕೆ ಹೋಯಿತು. ಕನಿಷ್ಠ ಪಕ್ಷ ಅದರ ಒಂದು ರೀಜನಲ್ ಸೆಂಟರ್‌ನ್ನಾದರೂ ನಮ್ಮ ಹೈದ್ರಾಬಾದ್-ಕರ್ನಾಟಕದಲ್ಲಿ, ಗುಲ್ಬರ್ಗಾದಲ್ಲಿ ಮಾಡಿ. ಯಾವ ರೀತಿಯಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಬ್ರಾಂಚ್ ಬೆಂಗಳೂರಿನ ಲ್ಲಿದೆಯೋ, ಈಗ ರಾಮನಗರದಲ್ಲಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ full-fledged university ಆಗಿದೆಯೋ, ಆದರೆ ಆ ಭಾಗಕ್ಕೆ ಅನುಕೂಲ ಆಗತಕ್ಕ ಕೆಲವು powers ಕೊಟ್ಟು, ಅಲ್ಲಿ ಒಂದು ರೀಜನಲ್ ಸೆಂಟರ್‌ನ್ನು ಮಾಡುವ ಕೆಲಸ ಮಾಡಿದರೆ ಕೊನೆಯ ಪಕ್ಷ ಆ ಭಾಗದ ಜನರಿಗೆ ಅನುಕೂಲ ಆಗುತ್ತದೆ. ಬೆಳಗಾಂಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲ ಯವನ್ನು ಮಾಡಿದ್ದೀರಿ. ಮಹಿಳಾ ವಿಶ್ವವಿದ್ಯಾನಿಲಯ ಬಿಜಾಪುರದಲ್ಲಿದೆ, ರಾಮನಗರಕ್ಕೆ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಹೋಗುತ್ತಿದೆ, ಕೃಷಿ ವಿಶ್ವವಿದ್ಯಾನಿಲಯವನ್ನು ರಾಯಚೂರಿಗೆ ಮಾಡಲು ಬೇಡಿಕೆ ಇದೆ, 700 ಎಕರೆ ಜಮೀನು ಸಹ ಇದೆ ಎಲ್ಲಾ ಇದೆಯೆಂದು Experts Committee ಸಹ ಹೇಳಿದೆ. ಇದಕ್ಕೆ ಬಜೆಟ್ ಸಹ ಬೇಕಾಗಿಲ್ಲ. ಏಕೆಂದರೆ, ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ದವರಲ್ಲೇ ಇವತ್ತು ಕೋಟಿಗಟ್ಟಲೆ ಹಣ ಇದೆ. ಅದರಲ್ಲಿ

50–60 ಕೋಟಿ ಖರ್ಚು ಮಾಡಿ ಒಂದು ರೀಜನಲ್ ಸೆಂಟರ್‌ನ್ನು ಅಲ್ಲಿ ಮಾಡಿದರೆ ಅನುಕೂಲ ಆಗುತ್ತದೆ. ಇಲ್ಲದಿದ್ದರೆ ಸಣ್ಣ ಸಣ್ಣ ಕೆಲಸಕ್ಕಾಗಿ, ನರ್ಸಿಂಗ್ ಸ್ಕೂಲ್ ಇರಬಹುದು, ಬಿ.ಫಾರ್ಮ್ ಡಿ.ಫಾರ್ಮ್ ಇರಬಹುದು ಎಲ್ಲದಕ್ಕೂ ಅಲ್ಲಿಂದ ರಾಮನಗರಕ್ಕೆ ಬರಬೇಕು ಬೆಂಗಳೂರಿಗೆ ಆಗ ಬಂದಾಗ ಹತ್ತು ಕೆಲಸದ ಜೊತೆಯಲ್ಲಿ ಒಂದು ಕೆಲಸ ಮಾಡಿಕೊಂಡು ಹೋಗುತ್ತಿದ್ದರು. ಆದರೆ, ಈಗ exclusive ಆಗಿ ಆ ಕೆಲಸಕ್ಕಾಗಿಯೇ ಪುನಹ ಇಲ್ಲಿಂದ 40 ಕಿಲೋಮೀಟರ್ ದೂರ ಹೋಗಬೇಕಾಗಿದೆ. ಅದಕ್ಕಾಗಿ ಒಂದು ರೀಜನಲ್ ಸೆಂಟರ್‌ನ್ನು ಘೋಷಣೆ ಮಾಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನೇಕ Up-gradation ಮಾಡತಕ್ಕ ರಸ್ತೆಗಳು ಇದೆ. ಸಾಕಷ್ಟು ಸಲ ಹೇಳಿದ್ದೇವೆ. ಯಡಿಯೂರಪ್ಪನವರು ಏನು ಮಾಡುತ್ತಿದ್ದಾರೊ ಗೊತ್ತಿಲ್ಲ. ಎಲ್ಲೋ ಯಾರೋ ಕರೆದಿದ್ದಾರೆ ಎಂದು ಯಾವ ಸಭೆಗೆ ಹೋಗಿದ್ದಾರೋ ಗೊತ್ತಿಲ್ಲ. ಇದುವರೆಗೂ ಎಂಡೋಮೆಂಟ್ ಸಚಿವರು ಇದ್ದರು. ಈಗ ಎಲ್ಲಿ ಹೋದರೋ ಗೊತ್ತಿಲ್ಲ. ಎಂಡೋಮೆಂಟ್‌ನಲ್ಲೂ ತಾರತಮ್ಯ ಮಾಡುತ್ತಿದ್ದಾರೆ. ನಾಗರಾಜಶೆಟ್ಟಿಯವರು ಅವರ ದೇವರುಗಳಿಗೆ ದುಡ್ಡು ಕೊಟ್ಟು ಕೊಟ್ಟು ದಪ್ಪ ಮಾಡುತ್ತಿದ್ದಾರೆ. ನಮ್ಮ ದೇವರು ಮತ್ತು ಗುಡಿಗಳು ಸೊರಗುತ್ತಿವೆ. ದುಡ್ಡೇ ಇಲ್ಲ. Even lapse ಆಗತಕ್ಕ funds ಕೂಡ ಅವರ ಶಾಸಕರಿಗೇ ಕೊಟ್ಟು discretion ಎಂದು ಹೇಳಿ ಅಲಾಟ್‌ಮೆಂಟ್ ಮಾಡಿ, ಬಿ.ಜೆ.ಪಿ. ಶಾಸಕರ ದೇವರು ಬೇರೆ, ಕಾಂಗ್ರೆಸ್ ದೇವರು ಬೇರೆ, ಕಮ್ಯೂನಿಸ್ಟ್ ಬಿಟ್ಟುಬಿಡಿ, ಬೇರೆ ಉಳಿದಂತಹ ದೇವರುಗಳು ಬೇರೆ, ಈ ದೇವರುಗಳು ಸೊರಗಬೇಕು ನಿಮ್ಮ ದೇವರುಗಳು ತಿಂದು ದಪ್ಪ ಆಗಬೇಕೋ? ನನಗೇನೋ ಗೊತ್ತಿಲ್ಲ. ಇದರಲ್ಲಿ ತಾರತಮ್ಯ. ಇವರ ಮನೋಭಾವನೆ ಹೇಗಿದೆ ನೋಡಿ.

ಶ್ರೀ ಧರ್ಮಸಿಂಗ್ : ಆ ರೀತಿ ನಿಮ್ಮಲ್ಲೇ ಕೊಟ್ಟು ಕೊಟ್ಟು ಉಳ್ಳಾಲದಲ್ಲಿ ಸೋತಿದ್ದೀರಿ. ಮತ್ತೆ ಏಕೆ ಕೊಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಾರ್ವಜನಿಕರಿಗೆ ಅನುಕೂಲವಾಗತಕ್ಕ ಗುಡಿ. ಗುಡಿಯೊಳಗಿನ ದೇವರ ಮೇಲೆ ನಂಬಿಕೆ ಇದೆಯೋ ಇಲ್ಲವೋ ಬೇರೆ ವಿಚಾರ. ಆದರೆ ಸಾರ್ವಜನಿಕರು ಊರಿನ ಜನರು ಒಂದು ಕಡೆ ಸೇರಲು, ಕೂಡಲು ಇರುವ ಸ್ಥಳ. ಅದಕ್ಕಾಗಿ ನಾವು ಎಲ್ಲರೂ ಕೂಡ ಎಲ್ಲರನ್ನೂ ಸರಿಸಮಾನ ದೃಷ್ಟಿಯಿಂದ ನೋಡಬೇಕು. ಆದರೆ ಅಲ್ಲಿಯೂ ತಾರತಮ್ಯ. ಮನೆಗಳನ್ನು ಕೊಡುವುದರಲ್ಲಿ, ಗ್ರಾಂಟ್ಸ್ ಕೊಡುವುದರಲ್ಲಿ, ಶಾಲಾ ಕಾಲೇಜು

ಕೊಡುವುದರಲ್ಲಿ, ರಸ್ತೆ ಮಾಡುವುದರಲ್ಲಿ ತಾರತಮ್ಯ ಇದೆ. ಆದರೆ ದೇವರಿಗೆ ಎಂಡೋಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ಹಣ ಕೊಡುವುದರಲ್ಲೂ ತಾರತಮ್ಯವಾಗಿದೆ. ಅವರಿಗೆ ಬೇಕಾದರೆ ನಾಗರಾಜಶೆಟ್ಟಿಯವರು ತಮ್ಮ ಶಾಸಕರಿಗೆ ಬೇಕಾದ್ದು ಬರೆದುಕೊಡಿ ಎಂದು ಹೇಳುತ್ತಾರೆ. ಹಿಂದೆ ಆರಾಧನ ಯೋಜನೆಯಲ್ಲಿ ಲ್ಯಾಪ್ಸ್ ಆಗಿರುವ ಹಣವನ್ನು ವಾಪಸ್ ತೆಗೆದುಕೊಂಡು 5 ಲಕ್ಷ ಹಣ ವಿತರಣೆ ಮಾಡಿದ್ದಾರೆ. ಹೀಗಾದರೆ ನಮ್ಮ ದೇವರು ಏನು ಮಾಡಬೇಕು? ಉಪವಾಸ ಇರಬೇಕೇ? ಅವರನ್ನು ಬಂದು ಕಾಣಬೇಕೆ? ಇಲ್ಲದಿದ್ದರೆ ಎಲ್ಲಾ ದೇವರುಗಳಿಗೆ ನಿಮಗೆ ಏನಾದರೂ ಸ್ವಚ್ಛ ಆಗಬೇಕು, ಸುಧಾರಣೆ ಆಗಬೇಕು ಎಂದರೆ ನಾಗರಾಜಶೆಟ್ಟಿಯವರನ್ನು ಕಾಡಿ ಎಂದು ಹೇಳಿ. ಆಗ ಗೊತ್ತಾಗುತ್ತದೆ.

ಶ್ರೀ ಎಂ.ಟಿ.ಬಿ.ನಾಗರಾಜ್ : ಆರಾಧನ ಸಮಿತಿಗಳ ಬಗ್ಗೆ ತಾಲ್ಲೂಕು ಕಛೇರಿಗಳಲ್ಲಿ 7–8 ಲಕ್ಷ ಹಣ ಮೂರು ವರ್ಷದಿಂದ ಕೊಳೆಯುತ್ತಿದೆ. ಇವರು ಬಂದು 18 ತಿಂಗಳುಗಳಾದರೂ ಯಾವ ತಾಲ್ಲೂಕಿನಲ್ಲೂ ಆರಾಧನ ಸಮಿತಿಗಳನ್ನು ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾಗಿ ಇವರು ಪ್ರಿಜ್ಯುಡೀಸ್ ಆಗಿ ವರ್ತಿಸುತ್ತಿದ್ದಾರೆ. ಪ್ರತಿಯೊಂದು ಯೋಜನೆಯಲ್ಲೂ ಪ್ರಿಜ್ಯುಡೀಸ್. ತಮ್ಮದೇ ಆದಂಥ ಅಜೆಂಡಾ. ಬಿ.ಜೆ.ಪಿ. ಅಜೆಂಡಾ ದೇವರಿಗೂ ಈ ರೀತಿ ಮಾಡುತ್ತಾರೆಂದರೆ, naturally ಅದಕ್ಕೇ ಇವರು ಅಧಿಕಾರಕ್ಕೆ ಎಂದೂ ಬರುವುದಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಅವರಿಗೆ ಬೇಕಾದ ದೇವರುಗಳಿಗೆ ದುಡ್ಡು ಕೊಟ್ಟರೆ ನಮ್ಮ ದೇವರು ಏನು ಮಾಡಬೇಕು? ಅವರಿಗೆ ನಮ್ಮ ದೇವರು ಶಾಪ ಹಾಕುತ್ತಾರೆಯೇ? ಇಲ್ಲವೇ? ಆಶೀರ್ವಾದ ಮಾಡುತ್ತಾರೆಯೇ ಇತ್ಯರ್ಥ ಆಗಬೇಕು.

ಶ್ರೀ ಎಸ್. ರಾಜೇಂದ್ರನ್ : ಪಿಶಾಚಿಗಳನ್ನೂ ದೇವರು ಎಂದು ಪೂಜೆ ಮಾಡುತ್ತಾರಲ್ಲ ಅದಕ್ಕೆ ಏನು ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ನೀವು ಕೆಲವೇ ದೇವರುಗಳಿಗೆ ಸಹಾಯ ಮಾಡುತ್ತಿರುವುದು, ಸರಿಯಾದ ಕ್ರಮವಲ್ಲ. ದೇವರುಗಳ ಪರವಾಗಿ ಹಕ್ಕುಚ್ಯುತಿ ತರಬೇಕಾಗುತ್ತದೆ.

ಶ್ರೀ ಬಿ.ನಾಗರಾಜಶೆಟ್ಟಿ (ಧಾರ್ಮಿಕ ದತ್ತಿ ಸಚಿವರು) : ಹಿರಿಯ ನಾಯಕರು ಕರ್ನಾಟಕ ರಾಜ್ಯದ ಪ್ರತಿಯೊಬ್ಬ ಶಾಸಕರ ದೇವಸ್ಥಾನ, ಗುಡಿ

ಅಭಿವೃದ್ಧಿಯಾಗಬೇಕು ಎಂಬ ಬಗ್ಗೆ ಹೇಳಿದ್ದಾರೆ. ನಮಗೆ ಸುಮಾರು 40 ಕೋಟಿ ರೂಪಾಯಿ ಮಾತ್ರ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಿಗೆ, ಉಪ ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ, 40–45 ಕೋಟಿ ರೂ. ಕೊಟ್ಟರೆ ಈ ವರ್ಷ ರಾಜ್ಯದ ಎಲ್ಲಾ ದೇವಸ್ಥಾನಗಳ ಅಭಿವೃದ್ಧಿಗಾಗಿ ಎಲ್ಲರಿಗೂ ಸುಖ, ಶಾಂತಿ, ನೆಮ್ಮದಿ ಸಿಗುತ್ತದೆ. ಇಡೀ ದೇಶದಲ್ಲಿ ಇದು ಒಂದು ಒಳ್ಳೆಯ ರಾಜ್ಯ ಆಗುತ್ತದೆ.

(ಗೊಂದಲ)

ಶ್ರೀ ವಿ.ಸೋಮಣ್ಣ : ಧಾರ್ಮಿಕ ದತ್ತಿ ಸಚಿವರು ನನಗೆ ಇರುವುದೇ 5–6 ಕೋಟಿ, ನನಗೆ 50 ಕೋಟಿ ರೂ. ಕೊಟ್ಟರೆ ನಮಗೆ ಹೇಗೆ ಬೇಕೋ ಹಾಗೆ ಉಪಯೋಗಿಸುತ್ತೇವೆ ಎಂದು ಹೇಳಿದರು. ಇದುವರೆಗೆ ಧಾರ್ಮಿಕ ದತ್ತಿ ಇಲಾಖೆ ಒಂದೊಂದು ಕ್ಷೇತ್ರಕ್ಕೆ ಇಷ್ಟಿಷ್ಟು ಹಣವೆಂದು ಕೊಡುತ್ತಿತ್ತು. ಅಷ್ಟನ್ನು ನೀವು ಬಿಡುಗಡೆ ಮಾಡಿದರೆ ಸಾಕಾಗಿದೆ. ನಾವು ಯಾರಿಗೆ ಕಾಗದ ಕಳುಹಿಸುವುದು? ನಿಮಗೆ ಕಾಗದ ಕಳುಹಿಸಿದರೆ ನಮ್ಮ ಕಾಗದ ನಡೆಯುವುದಿಲ್ಲ. ನಿಮಗೆ ನಡೆಯತಕ್ಕ ಕಾಗದಗಳೇ ಬೇರೆ. ದಯಮಾಡಿ ಬೇರೆ ಬೇರೆ ಯಾವ ರೀತಿಯಾಗಿ ಕ್ಷೇತ್ರಗಳಿಗೆ ಕೊಡುತ್ತಿದ್ದೀರಿ ಆ ರೀತಿ ಕೊಡಿ ಸಾಕು. ನಿಮಗೆ 50 ಕೋಟಿ ಕೊಡುವುದೂ ಬೇಡ. ನೀವು ಅದನ್ನೆಲ್ಲ ದಕ್ಷಿಣ ಕನ್ನಡಕ್ಕೆ ನಿಮಗೆ ಬೇಕಾದವರಿಗೆ ತೆಗೆದುಕೊಂಡು ಹೋಗುವುದೂ ಬೇಡ. ನಮ್ಮ ನಾಯಕರಾದ ಖರ್ಗೆಯವರು ಹೇಳಿದಂತೆ ಎಲ್ಲಾ ದೇವರಿಗೂ ಸ್ವಲ್ಪ ತೃಪ್ತಿ ಮಾಡುವ ಕೆಲಸ ಮಾಡಿ. ಇಲ್ಲದಿದ್ದರೆ ನೀವೇ ಅತೃಪ್ತರಾಗಿ ಕಷ್ಟವಾಗಿಬಿಡುತ್ತದೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ : ಕ್ಷೇತ್ರವಾರು ಬಂದಿರುವುದನ್ನು ವಿತರಣೆ ಮಾಡಲು ಮೊದಲು ಕಮಿಟಿ ಮಾಡಿ ಎಲ್ಲಾ ಕ್ಷೇತ್ರದಲ್ಲಿ. ಕೇವಲ ನಿಮ್ಮದನ್ನು ಮಾಡಿಕೊಳ್ಳಬೇಡಿ. ನಮ್ಮದೆಲ್ಲ ಪೆಂಡಿಂಗ್ ಇದೆ.

ಶ್ರೀ ಬಿ.ನಾಗರಾಜಶೆಟ್ಟಿ : ಆರಾಧನ ಸಮಿತಿ ಈಗಾಗಲೇ 90 ಭಾಗ ಆಗಿದೆ. ಕಳೆದ ವರ್ಷ 5 ಲಕ್ಷ ಪ್ರತಿಯೊಬ್ಬರ ಅಕೌಂಟ್‌ಗೂ ಹೋಗಿದೆ. ಈ ವರ್ಷ ಸಹ ಪ್ರಥಮ ಕಂತಿನ 3,33,000 ರೂಪಾಯಿ ಎಲ್ಲಾ ಶಾಸಕರ ಅಕೌಂಟ್‌ಗೆ ಹೋಗಿದೆ.

ಶ್ರೀ ಕೆ.ಅಭಯಚಂದ್ರ : ಪ್ರತಿಯೊಬ್ಬರಿಗೂ 5 ಲಕ್ಷ ಎಂದು ಹೇಳಬೇಡಿ. ಆ ಆದೇಶ Withdraw ಆಗಿದೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಹೇಳುವುದನ್ನು ಕೇಳಿ. ಅವರು ಹೇಳುವುದಕ್ಕೆ ಮೊದಲೇ ಎಲ್ಲರೂ ನಿಂತುಕೊಂಡರೆ ಹೇಗೆ?

(ಗೊಂದಲ)

ಶ್ರೀ ಎಸ್.ಎಲ್.ಧರ್ಮೇಗೌಡ : ....ಅವರವರ ಕ್ಷೇತ್ರಗಳಿಗೆ ಹಣ ಬಿಡುಗಡೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಅವರು ಐದು ರೂಪಾಯಿಗಳನ್ನೂ ಸಹ ಬಿಡುಗಡೆ ಮಾಡಿಲ್ಲ. xx xx xx ಈ ಮಾತನ್ನು ನಾವೆಲ್ಲರೂ ಪಕ್ಷಾತೀತವಾಗಿ ಹೇಳುತ್ತಿದ್ದೇವೆ. 5 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳುತ್ತಾರೆ, ಆದರೆ 5 ರೂಪಾಯಿಯನ್ನೂ ಸಹ ಅವರು ಬಿಡುಗಡೆ ಮಾಡಿಲ್ಲ. x x x

(ಗೊಂದಲ)

ಶ್ರೀ ಬಿ.ನಾಗರಾಜಶೆಟ್ಟಿ : ಮಾನ್ಯ ಅಧ್ಯಕ್ಷರೆ, ಎಲ್ಲಾ ಜಿಲ್ಲಾಧಿಕಾರಿಗಳಿಂದ ಹಣ ಮುಟ್ಟಿದೆ ಎಂಬುದಕ್ಕೆ ನಾನು confirmation ಅನ್ನು ತೆಗೆದು ಕೊಂಡಿದ್ದೇನೆ.

(ಗೊಂದಲ)

ಅಧ್ಯಕ್ಷರು : ಪ್ರತಿಯೊಂದು ತಾಲ್ಲೂಕಿನ ಆರಾಧನಾ ಕಮಿಟಿಗಳಿಗೂ ಕೂಡ ಹಣ ಮುಟ್ಟಿದೆಯೇ?

ಶ್ರೀ ಬಿ.ನಾಗರಾಜ ಶೆಟ್ಟಿ : ಹೌದು ಸಾರ್, ಹೋಗಿದೆ.

ಅಧ್ಯಕ್ಷರು : ಎಷ್ಟು ಹೋಗಿದೆ?

ಶ್ರೀ ಬಿ.ನಾಗರಾಜ ಶೆಟ್ಟಿ : ಈ ವರ್ಷ 3 ಲಕ್ಷ 30 ಸಾವಿರ ರೂ.ಗಳು ಎಲ್ಲರಿಗೂ ಹೋಗಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು "ಎಲ್ಲಾ ಜಿಲ್ಲಾಧಿಕಾರಿಗಳಿಂದ confirmation ತೆಗೆದುಕೊಂಡಿದ್ದೇನೆ. ಎಲ್ಲರಿಗೂ ದುಡ್ಡು ಹೋಗಿದೆ" ಎಂದು ಹೇಳುತ್ತಿದ್ದಾರೆ.

---

xx xx xx ಮಾನ್ಯ ಸಭಾಧ್ಯಕ್ಷರ ಆದೇಶದ ಪ್ರಕಾರ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಣ ಬಿಡುಗಡೆ ಆಗಿದ್ದರೆ, ಅದಕ್ಕೆ ಸಂಬಂಧಪಟ್ಟ GO ಅನ್ನು ಸದನದ ಮುಂದಿಟ್ಟರೆ ಮುಗಿದು ಹೋಯಿತು.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ಹಣ ಬಿಡುಗಡೆ ಮಾಡಿರುವುದಕ್ಕೆ ನಮ್ಮ ಸರ್ಕಾರದ ಆದೇಶ ಕೂಡ ಇದೆ. ಆದ್ದರಿಂದ, ಆ GO ಬೇಕಾದರೆ ತರಿಸಿ, ಪ್ರತಿಯೊಬ್ಬ ಸದಸ್ಯರಿಗೂ ಸಹ ಕೊಡುತ್ತೇವೆ. ನಿಮ್ಮ ಅಧ್ಯಕ್ಷತೆಯಲ್ಲಿ ಇರುವಂತಹ ಆರಾಧನಾ ಸಮಿತಿಯಲ್ಲಿ ತಾವು ಏನಾದರೂ ಮಾಡಬಹುದು. 3 ಲಕ್ಷ 30 ಸಾವಿರ ರೂ.ಗಳನ್ನು ಪ್ರತಿಯೊಂದು ಆರಾಧನಾ ಕಮಿಟಿಗೆ ಕಳುಹಿಸಿಕೊಟ್ಟಿರತಕ್ಕಂಥ GO ವನ್ನು ನಾವು ಎಲ್ಲಾ ಸದಸ್ಯರಿಗೂ ಮುಟ್ಟಿಸುತ್ತೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಖರ್ಗೆಯವರು ಮಾತನಾಡಿ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್ : ಕೆಲವು ಕಡೆಗಳಲ್ಲಿ ನಾಮಿನೇಷನ್ ಹಾಕಿಲ್ಲವೆಂದು ಕಮಿಟಿಯೇ ಇಲ್ಲವೆಂದು ಮಾಡಿದ್ದಾರೆ. ಆದ್ದರಿಂದ ನಾಮಿನೇಷನ್ ಮಾಡದಿದ್ದರೂ ಕಮಿಟಿ ನಡೆಸಬಹುದು ಎಂದು ಒಂದು ಆದೇಶವನ್ನು ಸರ್ಕಾರದವರು ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್ : ನಾಮಿನೇಷನ್ ಯಾವಾಗಾದರೂ ಹಾಕಿ. ಕಮಿಟಿಗಳು ಇವೆ. ಎಲ್ಲಾ ಡಿ.ಸಿ.ಗಳಿಗೂ ನಡೆಸುವಂತೆ ಆದೇಶ ಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ದೇವರ ಪಕ್ಷದಿಂದ ಗೆದ್ದು ಬಂದಿದ್ದಾರೆ. ಅವರು ಆ ದೇವರಿಗೆ ಯಾವತ್ತೂ ಸುಳ್ಳು ಹೇಳಬಾರದು. ದೇವರ ಹೆಸರು ಹೇಳಿಕೊಂಡು, ಕುಂಕುಮ ಹಚ್ಚಿಕೊಂಡು, ಅರಿಶಿನ ಹಚ್ಚಿಕೊಂಡು, ವಿಭೂತಿ ಹಚ್ಚಿಕೊಂಡು ದೇವರ ಪಕ್ಷದಿಂದ ಗೆದ್ದು ಬಂದಿರುವ

ಜನ ನೀವು. ಆ ದೇವರಿಗೆ ಮೋಸ ಮಾಡಿ ಸುಳ್ಳು ಹೇಳುವ ಕೆಲಸವನ್ನು ನೀವು ಮಾಡಬಾರದು.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕೆಲವೊಂದು ದೇವರಿಗೆ ಇವರು ಅನ್ಯಾಯ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಹಿಂದೆ ನಮ್ಮ ಹಳ್ಳಿಗಳಲ್ಲಿ 'ಸುಳ್ಳು ಹೇಳಬೇಡಪ್ಪ, ದೇವರು ಕಣ್ಣು ಕಿತ್ತುಕೊಂಡು ಬಿಡುತ್ತಾನೆ' ಎಂದು ಹೇಳುತ್ತಿದ್ದರು. ಈಗ ನೀವೇನಾದರೂ ಸುಳ್ಳು ಹೇಳಿದರೆ, ಏನು ಕಿತ್ತುಕೊಂಡು ಬಿಡುತ್ತಾನೆ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಾರ್, ನಾನು ಎಲ್ಲರ ಪರವಾಗಿ ಕೇಳಿಕೊಂಡಿದ್ದೇನೆ. ಕನಿಷ್ಟ....

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುತ್ತಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಡಾ: ಕೆ.ಅನ್ನದಾನಿ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರಕ್ಕೆ ಆರಾಧನಾ ಸಮಿತಿಗಳು ಬಂದಿಲ್ಲ ಮತ್ತು ದುಡ್ಡನ್ನೂ ಸಹ ಕೊಟ್ಟಿಲ್ಲ. ಯಾರ್ಯಾರಿಗೆ ಎಷ್ಟೆಷ್ಟು ದುಡ್ಡು ಕೊಟ್ಟಿದ್ದಾರೆ ಎಂಬುದರ ಲಿಸ್ಟ್ ಅನ್ನು ಮಾನ್ಯ ಸಚಿವರು ಸದನಕ್ಕೆ ಕೊಡಲಿ. ಮಾನ್ಯ ಸಚಿವರು ದೇವರುಗಳ ನಡುವೆ ತಾರತಮ್ಯ ಮಾಡಿದರೆ, ನಮ್ಮ ಊರಿನಲ್ಲಿ ದಂಡಿನ ಮಾರಮ್ಮ ಎಂಬ ದೇವರೊಂದಿದೆ. ಅದನ್ನು ತಂದು ಮಾನ್ಯ ಸಚಿವರ ಛೇಂಬರ್‌ನಲ್ಲಿ ಕೂಡು ಬಿಡುತ್ತೇವೆ, ದಂಡು ಸಮೇತವಾಗಿ.

(ಗೊಂದಲ)

ಅಧ್ಯಕ್ಷರು : ಅದರ ಬಗ್ಗೆಯೇ ಎಷ್ಟು ಹೊತ್ತು ಮಾತನಾಡುತ್ತೀರಿ?

(ಗೊಂದಲ)

ಶ್ರೀ ಎಂ.ಪಿ.ರೇಣುಕಾಚಾರ್ಯ : ಪ್ರೌಢಶಾಲೆ, ಪಿ.ಯು.ಸಿ. ಕಾಲೇಜ್, ಹಾಸ್ಟೆಲ್ ಕೊಟ್ಟಿರುವುದನ್ನು ತೆಗೆದು ನೋಡಲಿ. ಅದರಿಂದ ಎಲ್ಲೆಲ್ಲಿ ತಾರತಮ್ಯ ಇದೆ ಎಂದು ಗೊತ್ತಾಗುತ್ತದೆ...

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಆಡಳಿತ ಪಕ್ಷದವರೇ ಒಬ್ಬರ ಮೋಲೊಬ್ಬರು ಪರಸ್ಪರ ಆರೋಪಗಳನ್ನು ಮಾಡುತ್ತಿದ್ದಾರೆ. ಈ ಸರ್ಕಾರ ಉಳಿಯುತ್ತದೆಯೇ? ಸರ್ಕಾರ ಪತನವಾಗುವ ಕಾಲ ಬಂತು.....

(ಗೊಂದಲ)

ಅಧ್ಯಕ್ಷರು : ಮಾನ್ಯ ಖರ್ಗೆಯವರು ಮಾತನಾಡಲು ಎದ್ದು ನಿಂತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ಉತ್ತರವನ್ನು ಕೊಡುವಾಗ ಬಹುಶಃ ವಿಶೇಷವಾಗಿ ತಾರತಮ್ಯ ಆಗಿರುವುದನ್ನು ಸರಿಪಡಿಸತಕ್ಕಂಥದ್ದು, ಡಾ: ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಯಾವ ರೀತಿ ಹಣವನ್ನು ಒದಗಿಸತಕ್ಕಂಥದ್ದು, ಚಾಲ್ತಿಯಲ್ಲಿದ್ದ ಕೆಲಸಗಳನ್ನು ಒಂದೇ ಕಡೆ ಆಗಿದ್ದನ್ನು ತಪ್ಪಿಸಿ, ಎಲ್ಲಾ ಕಡೆಗೆ ಕೊಡತಕ್ಕಂಥದ್ದು, ಅದೇ ರೀತಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ.......

(ಗೊಂದಲ)

ಅಧ್ಯಕ್ಷರು : ಏನು ನೀವಿಲ್ಲಿ ಜಗಳ ಮಾಡುತ್ತಿದ್ದೀರಾ?

(ಗೊಂದಲ)

ಶ್ರೀ ಎಂ.ಪಿ.ರೇಣುಕಾಚಾರ್ಯ : xx xx xx

(ಗೊಂದಲ)

ಅಧ್ಯಕ್ಷರು : ಈ ತರಹ ಮಾತನಾಡುವುದು ಸರಿಯಲ್ಲ. ನೀವು ವಿಧಾನ ಸಭೆಗೆ ಬಂದಿದ್ದೀರೋ ಅಥವಾ ಕುಸ್ತಿ ಮನೆಗೆ ಬಂದಿದ್ದೀರೋ ನಿಮಗೇನಾದರೂ ಬುದ್ಧಿ ಇದೆಯೇ? ನೀವು ಪರಸ್ಪರ ಮಾತನಾಡುವುದಿದ್ದರೆ, ಹೊರಗಡೆ ಹೋಗಿ ಮಾತನಾಡಿಕೊಳ್ಳಿ. ಎಲ್ಲದಕ್ಕೂ ಒಂದು ಸಮಿತಿ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೊನೆಯದಾಗಿ ಎರಡೇ ಎರಡು ವಿಯಷಗಳನ್ನು ಪ್ರಸ್ತಾಪ ಮಾಡಿ, ನನ್ನ ಮಾತನ್ನು ಮುಗಿಸಿ ಬಿಡುತ್ತೇನೆ. Social Welfare Minister ಇಲ್ಲೇ ಇದ್ದಾರೆ.....

---

xx xx xx ಮಾನ್ಯ ಸಭಾಧ್ಯಕ್ಷರ ಆದೇಶದ ಪ್ರಕಾರ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು : ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : Social Welfare Minister ಇಲ್ಲೇ ಇದ್ದಾರೆ. Backward class hostels ಗಳಿಗೆ SC/ST hostel ಗಳಿಗೆ ಪ್ರತಿ ತಿಂಗಳು per head ಇಂತಿಷ್ಟು ಖರ್ಚು ಮಾಡಬೇಕೆಂದು ಏನು ನಿಗದಿ ಮಾಡಿದ್ದಾರೆ, ಆ ಮೊತ್ತ ಬಹಳ ಕಡಿಮೆ ಇದೆ. ಸುಮಾರು ತಲಾ 450 ರೂ.ಗಳನ್ನು ಕೊಡುತ್ತಿದ್ದಾರೆ. ಆ ಹಣ ಈ ಕಾಲದಲ್ಲಿ ಸಾಕಾಗುವುದಿಲ್ಲ. ಕನಿಷ್ಟ ಪಕ್ಷ ತಲಾ 600 ರೂ.ಗಳನ್ನು ಬಿಸಿಎಂ ಹಾಸ್ಟೆಲ್ ಮತ್ತು ಎಸ್.ಸಿ./ಎಸ್.ಟಿ. ಹಾಸ್ಟೆಲ್ ಗಳಲ್ಲಿರುವ ವಿದ್ಯಾರ್ಥಿಗಳಿಗೆ ಕೊಡಬೇಕು. ಹಾಗಿದ್ದರೆ ಮಾತ್ರ ಆ ಮಕ್ಕಳಿಗೆ ಹೊಟ್ಟೆ ತುಂಬಾ ಊಟ ಸಿಗುತ್ತದೆ. ನನಗೆ ಗೊತ್ತಿದ್ದಂತೆ ಅನೇಕ Superintendentsಗಳೂ ಸಹ ಹಾಸ್ಟೆಲ್‌ಗಳಲ್ಲೇ ತಿನ್ನುತ್ತಾರೆ. ಅಲ್ಲಿ Supervise ಮಾಡುವವರೂ ಸಹ ಅಲ್ಲೇ ಬಂದು ತಿನ್ನುತ್ತಾರೆ. ಅಲ್ಲಿ ಯಾರೂ ನೋಡುವವರು ಇರುವುದಿಲ್ಲ. ಅದರಲ್ಲೂ interior ನಲ್ಲಿ ಇರತಕ್ಕಂಥ ಹಾಸ್ಟೆಲ್‌ಗಳಲ್ಲಿ, ಅದು SC/ST ಇರಬಹುದು, BCM ಇರಬಹುದು, ಯಾವುದೇ ವರ್ಗ ಇರಬಹುದು, ಅಲ್ಲಿಯಂತೂ ಯಾರೂ ನೋಡುವವರೇ ಇರುವುದಿಲ್ಲ. ಅಲ್ಲಿ ರೇಷನ್ ಅಂಗಡಿಯಿಂದ ತರುತ್ತಾರೆ. ಅದೂ ಕೂಡ ಕೆಲವು ಸಲ ಸರಿಯಾಗಿರುವುದಿಲ್ಲ. ಎಲ್ಲಾ rejected ಮಾಲುಗಳನ್ನು ತಂದು ಅಲ್ಲಿ ಹಾಕಿಬಿಟ್ಟಿರುತ್ತಾರೆ. ಆದ್ದರಿಂದ, ದಯವಿಟ್ಟು ಅದನ್ನು enhance ಮಾಡಿ. ನೀವು Old-age pension ಅನ್ನು enhance ಮಾಡಿದ್ದೀರಿ,...

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : Pooled Amount 130 ಕೋಟಿ ರೂ.ಗಳು ಇನ್ನೂ ಬಿಡುಗಡೆ ಆಗಿಲ್ಲ. ಹೋದ ವರ್ಷದ್ದು lapse ಆಗಿದೆ. ಅದು ಎಷ್ಟು lapse ಆಗಿದೆ? ಎಂದು ಅವರನ್ನು ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಸಾಲುವುದಿಲ್ಲವೆಂದು ನೀವು ನೌಕರರ ಭತ್ಯೆಯನ್ನು ಹೆಚ್ಚಿಗೆ ಮಾಡಿದ್ದೀರಿ. ಒಂದು ಕಡೆ Old-age pension ಸಹ ಹೆಚ್ಚಿಗೆ ಮಾಡಿದ್ದೀರಿ. ಇತರ ಬೇರೆ ಬೇರೆ ಎಲ್ಲರಿಗೂ ಕೂಡ ನೀವು enhance ಮಾಡುತ್ತಿದ್ದೀರಿ. ಅದೇ ರೀತಿಯಲ್ಲಿ ಹಾಸ್ಟೆಲ್‌ಗಳಲ್ಲಿರುವ

ಮಕ್ಕಳಿಗೆ ಕೊಡುವುದನ್ನೂ ಸಹ ಹೆಚ್ಚಿಗೆ ಮಾಡಬೇಕು. ಮಕ್ಕಳು ಓದಬೇಕು, ಬರೆಯಬೇಕು, ವಿದ್ಯಾವಂತರಾಗಬೇಕು ಮತ್ತು ಮುಂದಿನ ಪೀಳಿಗೆಯಲ್ಲಿ ಒಳ್ಳೆಯ ನಾಗರಿಕರಾಗಿ ಬಾಳಬೇಕು, ಬದುಕಬೇಕು ಎಂದರೆ ಅವರಿಗೂ ಕೂಡ rate enhance ಮಾಡತಕ್ಕದ್ದು ಅಗತ್ಯವಾಗಿದೆ. Inflation ಏನಾಗಿದೆ, ಆ ದೃಷ್ಟಿಯಿಂದ ಇದನ್ನು enhance ಮಾಡತಕ್ಕಂಥದ್ದು ಉತ್ತಮ. ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರು ಕುಳಿತು ಇದನ್ನು settle ಮಾಡಿ. ಎಲ್ಲಾ ದೇವರ ಗುಡಿಗಳಿಗೆ ಹಣ ಬಿಡುಗಡೆ ಮಾಡಲು 60–70 ಕೋಟಿ ರೂ.ಗಳನ್ನು ನಾನು ಕೇಳಿದ್ದೇನೆಂದು ಆಗಲೇ ಮಾನ್ಯ ಸಚಿವರು ಹೇಳಿದರು. ಬೇಕಾದರೆ ಅದಕ್ಕೆ ಸದ್ಯಕ್ಕೆ Stay ಕೊಡಲಿ. ಈ ಕೆಲಸವನ್ನಾದರೂ ಮಾಡಿ. ಇದು ಬಹಳ ಮುಖ್ಯವಾದುದು. ಕೆಲವು ಕಡೆ ಸರಿಯಾಗಿ kitchen ಇಲ್ಲ, equipments ಇಲ್ಲ, ಬಹಳ ದುಸ್ಥಿತಿಯಲ್ಲಿವೆ. ಅದಕ್ಕಾಗಿ ಒಂದು Vigilance Committee ಮಾಡಿ. ಆ ಸಮಿತಿಗೆ non-official ಅಥವಾ ಇತರರನ್ನು ನೇಮಕ ಮಾಡಿದರೆ ಸರಿಯಾಗುವುದಿಲ್ಲ. ಎಲ್ಲೆಲ್ಲಿ Sub-Division levelನಲ್ಲಿ Assistant Commissioner ಇರುತ್ತಾರೋ, minimum ಆ gradeನಲ್ಲಿ ಇರತಕ್ಕಂಥ ಅಧಿಕಾರಿಯನ್ನು ಸದರಿ ಸಮಿತಿಗೆ ನೇಮಿಸಿ. ಅವರ jurisdictionನಲ್ಲಿ ಒಬ್ಬೊಬ್ಬರು ಐದೈದು ಹಾಸ್ಟೆಲ್‌ಗಳನ್ನು visit ಮಾಡಬೇಕು ಮತ್ತು ಅಲ್ಲಿನ ಸ್ಥಿತಿಗಳನ್ನು ನೋಡಬೇಕೆಂದು Circular ಒಂದನ್ನು ಹೊರಡಿಸಿ. ಅವರಿಂದ report ವೊಂದನ್ನು ತರಿಸಿಕೊಳ್ಳಿ. Assistant Commissioner ಗಳಿಂದ ಬರುವ ಆ ರಿಪೋರ್ಟ್ ಅನ್ನು ಮಾನ್ಯ ಸಚಿವರು ಕನಿಷ್ಟ ಮೂರು ತಿಂಗಳಿಗೊಮ್ಮೆಯಾದರೂ review ಮಾಡಿದರೆ ಸ್ವಲ್ಪ ಹಾಸ್ಟೆಲ್‌ಗಳ ಪರಿಸ್ಥಿತಿ ಸರ್ಕಾರಕ್ಕೂ ಗೊತ್ತಾಗುತ್ತದೆ. ದಯವಿಟ್ಟು ತಾವು ಆ enhancement ಅನ್ನು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ, ಆ ಮಕ್ಕಳಿಗೂ ಅನುಕೂಲವಾಗುತ್ತದೆ. ಅವರಿಗೆ ಹೊಟ್ಟೆ ತುಂಬಾ ಅನ್ನ ಸಿಗುತ್ತದೆ. ಈ inflation ಹೆಚ್ಚಿಗೆಯಾದ ಮೇಲೆ ಅನೇಕ ಮಕ್ಕಳಿಗೆ ತೊಂದರೆಯಾಗಿದೆ. ದಯವಿಟ್ಟು ಇದರ ಕಡೆ ಗಮನ ಕೊಡಬೇಕು. ಇನ್ನೊಂದು ಬಹಳಷ್ಟು Institutions autonomous ಎಂದು declare ಮಾಡಿಕೊಂಡಿದ್ದು ಅವರು

ಏನು ಮಾಡಿಕೊಂಡಿದ್ದಾರೆಂದರೆ, ಅವರದೇ rules ನಮ್ಮದೇ admission ನಮಗೆ ಹೇಗೆ ಬೇಕು ಹಾಗೆ ಮಾಡಿಕೊಳ್ಳುವುದು ಎಂದು ಹೇಳಿ, ಅವರದೇ exam, ಬೇಕಾದವರಿಗೆ ಪಾಸ್ ಮಾಡುವುದು, ಬೇಡವಾದವರಿಗೆ fail ಮಾಡುವುದು ಇವೆಲ್ಲಾ ಮುಂದೆ ನಡೆಯುತ್ತವೆ. ಅದು ಈಗ ಗೊತ್ತಾಗುವುದಿಲ್ಲ. ಮುಂದೆ ಇದರ ಬಗ್ಗೆ ಯಾವಾಗ ಸಂಪೂರ್ಣವಾಗಿ ಸ್ವಾತಂತ್ರ್ಯ ಸಿಕ್ಕಿ ಅವರಿಗೆ ಸಂಪೂರ್ಣವಾಗಿ admission ಬಂದಾಗ ಅವರು ಕೈತೋರಿಸುತ್ತಾರೆ, ಈಗ ಸಧ್ಯಕ್ಕೆ ತೋರಿಸುವುದಿಲ್ಲ. ಅವುಗಳ ಮೇಲೆ ಏನು ಹತೋಟಿ ಇಲ್ಲ. Roster ಇಲ್ಲ, ಬುದ್ಧಿಜೀವಿ ವಿದ್ಯಾರ್ಥಿಗಳು ಇರುತ್ತಾರೆ, ಅಲ್ಲಿ ಒಂದು institution ಇದ್ದರೆ, ಅಲ್ಲಿ ಇನ್ನೊಂದು institution ಕೊಡುವುದಿಲ್ಲ. ಹೀಗಾಗಿ ಸಾಕಷ್ಟು ತೊಂದರೆಗಳು merit ಹುಡುಗರಿಗೆ ಮತ್ತು ಬುದ್ಧಿವಂತ ವಿದ್ಯಾರ್ಥಿಗಳಿಗೆ ಆಗುತ್ತಿದೆ. ಅದಕ್ಕಾಗಿ ಹತೋಟಿಯಲ್ಲಿ ಇಡತಕ್ಕಂಥದ್ದಕ್ಕೆ ಒಂದು ವಿಶೇಷವಾದ ಕಾನೂನನ್ನು ಪಾಸ್ ಮಾಡಿದರೂ ಕೂಡ ಚಿಂತೆ ಇಲ್ಲ. ಅದು ಪಾಸ್ ಮಾಡಬೇಕು. ಏಕೆಂದರೆ ಕೇಂದ್ರ ಸರ್ಕಾರದವರು ಕೊಡುತ್ತಾರೆಂದು ನಾವು ಸುಮ್ಮನೆ ಕುಳಿತುಕೊಂಡರೆ ನಮ್ಮ ಕರ್ತವ್ಯ ಲೋಪವಾಗುತ್ತದೆ. ಮುಂದಿನ ಪೀಳಿಗೆಗೆ ನಾವು ಸಹಾಯ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ದಯವಿಟ್ಟು ಇದರ ಕಡೆ ಅವರು ಗಮನ ಕೊಡಬೇಕು ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. Home Minister ಗಮನಕ್ಕೆ ತಂದಿದ್ದೇನೆ. ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಇಲ್ಲಿರತಕ್ಕಂಥ ಮಂತ್ರಿಗಳ ಗಮನಕ್ಕೆ ಯಾವ ರೀತಿಯಾಗಿ discrimination ಆಗಿದೆ ಮತ್ತು injustice ಆಗಿದೆ ಮತ್ತು ಪ್ರತಿಯೊಂದು ಕಾರ್ಯಕ್ರಮದಲ್ಲಿ ಕೂಡ ತೊಂದರೆಯಾಗಿದೆ ಎನ್ನತಕ್ಕಂಥದ್ದನ್ನು ತಂದಿದ್ದೇವೆ. ತಂದ ಮೇಲೆ ಈ ಬಜೆಟ್‌ಗೆ ನಾವು ಮನ್ನಣೆ ಕೊಡಬೇಕಾ, ಅಧ್ಯಕ್ಷರೆ? ಈ ಬಜೆಟ್‌ಗೆ ನಾವು ಒಪ್ಪಬೇಕೆ ಬೇಡವೆ? ಇಷ್ಟು discrimination ಮಾಡಿದ ಮೇಲೆ ಹೇಗೆ ಒಪ್ಪಬೇಕು. ನೀವು ಒಪ್ಪಲ್ಲ. ಈ ಬಜೆಟ್ ಬಗ್ಗೆ ನಿಮಗೂ ಈಗ ಮನವರಿಕೆಯಾಗಿರಬಹುದು. ಅದಕ್ಕಾಗಿ ನಾನು ಕೂಡ ಈ ಬಜೆಟ್ ಒಪ್ಪುವುದಿಲ್ಲ. ಈ ಬಜೆಟ್‌ನ್ನು ವಿರೋಧಿಸಿ, ಇದನ್ನು ಜನಪರ ಎಂದು ಅವರು ಹೇಳಿಕೊಂಡಿದ್ದಾರೆ ಹೊರತಾಗಿ, ನಾನು ಈಗಾಗಲೇ ಓದಿ ಹೇಳಿದಂತೆ ಇದು populistic election ದೃಷ್ಟಿಯಿಂದ, ವೈಯಕ್ತಿಕವಾಗಿ

ಪ್ರಚಾರ ಪಡೆಯುವುದಕ್ಕೋಸ್ಕರ ಮಂಡಿಸಿದಂಥ ಒಂದು ಬಜೆಟ್ ಆಗಿದೆ. ಇದರಿಂದ ಮೂಲಭೂತ ಸೌಕರ್ಯಕ್ಕೆ ಅನುಕೂಲವಿಲ್ಲ. ಅಭಿವೃದ್ಧಿ ಪರ ಇಲ್ಲ ಮತ್ತು ಸಾರ್ವಜನಿಕರಿಗೆ, ರೈತರಿಗೆ, ಬಡವರಿಗೆ ಯಾವುದೇ ರೀತಿಯಿಂದ ಹಿತವಾಗತಕ್ಕಂಥ ಬಜೆಟ್ ಅಲ್ಲವೆಂದು ವಿರೋಧಿಸಿ, ತಾವು ನನಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ನಾನು ಮಾತನಾಡುತ್ತೇನೆಂದು ಎಲ್ಲರೂ ಕೈ ಎತ್ತುವ ಪ್ರಶ್ನೆ ಇಲ್ಲ. ಈ ಭಾಷಣ ಮುಗಿದ ಮೇಲೆ ಮುಗಿಸಬೇಕೆಂದು ತೀರ್ಮಾನವಾಗಿದೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಸರ್ ಈ ಕಡೆ ಕೊಡಬಾರದು ಎಂದು ಏನಾದರೂ ನಿರ್ಧಾರವಾಗಿದೆಯೇ? ಇದು ಸರಿಯಾದುದು ಅಲ್ಲ.

(ಗೊಂದಲ)

ಅಧ್ಯಕ್ಷರು : ಈ ಕಡೆ ಮತ್ತು ಆ ಕಡೆಯಿಂದ ಇಬ್ಬಿಬ್ಬರ ನೇಮ್‌ನ್ನು ಕಳುಹಿಸಿ ಕೊಟ್ಟರೆ ಅವರಿಗೆ ಮಾತ್ರ ಕೊಡುತ್ತೇನೆ, ಎಲ್ಲರೂ ಕೈ ಎತ್ತಿದವರಿಗೆ ಕೊಡುವುದಕ್ಕಾಗುವುದಿಲ್ಲ. Chief Whip ಅವರೆ ನಿಮಗೆ ಹೇಳುತ್ತಿರುವುದು.

(ಗೊಂದಲ)

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಈ ಸಲ ತಮ್ಮ ಮೇಲೆ ಆಪಾದನೆ ಇದೆ. ಸಾಕಷ್ಟು ಜನರಿಗೆ ಅವಕಾಶ ಕೊಟ್ಟಿದ್ದೀರಿ ಅದರ ಬಗ್ಗೆ ಏನು ಆಪಾದನೆ ಇಲ್ಲ. ಆದರೆ ಈಗ ದಿನೇಶ್ ಗುಂಡೂರಾವ್, ಶಿವಾನಂದ ಪಾಟೀಲ್, ಯು.ಟಿ.ಖಾದರ್ ಅವರಿಗೆ ಕೊಡಬೇಕು. ಇವತ್ತು ಏನು ಇದು ಕೌನ್ಸಿಲ್‌ಗೆ ಹೋಗುತ್ತದಾ?

ಅಧ್ಯಕ್ಷರು : ಈ ಕಡೆ ಮೂರು ಕೊಟ್ಟರೆ, ಆ ಕಡೆ ಮೂರು ಜನರಿಗೆ ಕೊಡಬೇಕಾಗುತ್ತದೆ. ಇವತ್ತು ಕೆಲವೊಂದು Senior Minister ಗಳು ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಧರ್ಮಸಿಂಗ್ : Senior Minister ಯಾರು ಬರುವುದೇ ಇಲ್ಲ. ಯಾರು ಉತ್ತರ ಕೊಡುತ್ತಾರೆ?

ಅಧ್ಯಕ್ಷರು : ಕೊಡುತ್ತಾರೆ. 3 ಗಂಟೆಯಿಂದ ಉತ್ತರ ಸರ್. Senior Ministers ಕೆಲವರಾದರೂ ಉತ್ತರವನ್ನು ಕೊಡಲಿ. ಆಯಿತು ಈ ಕಡೆಯಿಂದ ಆ ಕಡೆಯಿಂದ 3 ಜನರಿಗೆ ಮಾತ್ರ.

ಶ್ರೀ ಹೆಚ್.ಡಿ.ಬಸವರಾಜು : ಸರ್ ಎಡ ಬಲ ಅಷ್ಟೇ ಅಲ್ಲ ತಾವು ಈ ಕಡೆಗೂ ನೋಡಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ದಿನೇಶ್ ಗುಂಡೂರಾವ್‌ರವರೆ, ಸಮಯ ಸಾಕಷ್ಟು ಕಡಿಮೆ ಇರುವುದರಿಂದ 15 ನಿಮಿಷದಲ್ಲಿ ದಯಮಾಡಿ ಮುಗಿಸಿ ಕೊಡಬೇಕು. ಈ ಕಡೆಯವರು ಮಾತನಾಡಬೇಕಾಗಿರುವುದರಿಂದ ಬಹಳ ಮುಖ್ಯವಾಗಿ ಏನು ಹೇಳಬೇಕು ಹೇಳಿ. ಮುಗಿಸಿ ಬಿಡಿ.

ಶ್ರೀ ಆರ್.ದಿನೇಶ್ ಗುಂಡೂರಾವ್ (ಗಾಂಧಿ ನಗರ) : ಮಾನ್ಯ ಅಧ್ಯಕ್ಷರೆ, ತಾವು ಹೇಳುವುದು ನನಗೆ ಅರ್ಥವಾಯಿತು, ನಾವು ನಿಮಗೆ ಸಹಕಾರವನ್ನು ನೀಡುತ್ತೇವೆ. ಇವತ್ತು ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಸಾಕಷ್ಟು ಹೇಳಿಕೆಗಳನ್ನೂ ಕೂಡ ನೀಡುತ್ತಿದ್ದಾರೆ. ಹಿಂದೆ ಎಂದೂ ಆಗದಿರತಕ್ಕಂಥ ಕೆಲಸಗಳನ್ನು ನಾವು ಮಾಡುತ್ತಿದ್ದೇವೆ, ಹಿಂದೆ 50 ವರ್ಷಗಳಲ್ಲಿ ಏನಾಗಿತ್ತು, ನಾವು ಇವತ್ತು ಏನು ಮಾಡುತ್ತಿದ್ದೇವೆಂದು ಮಾತಿನ ಮೇಲೆ ಮಾತು ಮಾತನಾಡುತ್ತಿದ್ದಾರೆ. ಬಹುಶಃ ನಾವು ಈ ಸರ್ಕಾರದ ಒಂದು ವಿತ್ತೀಯ ಚಟುವಟಿಕೆ ಮತ್ತು ಕಾರ್ಯಕ್ರಮಗಳ ಬಗ್ಗೆ ಈಗಲೇ ಹೇಳುವುದಕ್ಕಾಗುವುದಿಲ್ಲ. ಬಹುಶಃ ಹಿಂದಿನ ಸರ್ಕಾರಗಳು ಮಾಡಿರತಕ್ಕಂಥ ಕೆಲಸಗಳಿಂದ ಹೇಗೆ ಹಿಂದಿನ ಸರ್ಕಾರಗಳು ಆರ್ಥಿಕ ಒಂದು ಶಿಸ್ತನ್ನು ಕಾಪಾಡಿಕೊಂಡು ಬಂದಿರತಕ್ಕಂಥ ಹಿಂದಿನ ಕಾರ್ಯಕ್ರಮಗಳ ಮುಖಾಂತರ ರಾಷ್ಟ್ರದಲ್ಲಿ ಇವತ್ತು ಒಂದು ಸಂಪತ್ ಭರಿತ ರಾಜ್ಯವಾಗಿತ್ತು. ಅದರ ಪರಿಣಾಮ ಇವರಿಗೆ ಅನುಕೂಲವಾಗುತ್ತಿದೆ. ಎಲ್ಲೋ ಒಂದು ಕಡೆ ನಮಗೆ ಏನು ಅನಿಸುತ್ತದೆಂದರೆ, ಅಶಿಸ್ತಿನ ಒಂದು ವಾತಾವರಣ ನಿರ್ಮಾಣವಾಗಿದೆ. ವಿತ್ತೀಯ ವಿಚಾರದಲ್ಲಿ ಇವತ್ತು ರಾಜ್ಯದಲ್ಲಿ ಎಲ್ಲೋ ಒಂದು ಕಡೆ ಇವತ್ತು ನಾವು ದಾರಿ ತಪ್ಪುತ್ತಿದ್ದೇವೆ. ಇದರ ಪರಿಣಾಮ ಮುಂದಿನ ದಿವಸಗಳಲ್ಲಿ ಇದು ರಾಜ್ಯಕ್ಕೆ ಒಂದು ಸಮಸ್ಯೆಯಾಗಿ ಉದ್ಭವವಾಗುತ್ತದೆಂದು ನಮಗೆ ಅನಿಸುತ್ತದೆ. ಈ ಸರ್ಕಾರದ ಬಗ್ಗೆ ಏನು ಅನಿಸುತ್ತದೆಂದರೆ, ಅವರಿಗೆ ಆತ್ಮ ವಿಶ್ವಾಸವಿಲ್ಲ. ಇದು ಮುಂದೆ ಕೂಡ ಇರುತ್ತದೋ ಇಲ್ಲವೋ ಎಂದು,

ಎಲ್ಲವನ್ನೂ ಇದೇ ಅವಧಿಯಲ್ಲಿ ಮಾಡಿಬಿಡಬೇಕು. ಅಕ್ಟೋಬರ್ 3ನೇ ತಾರೀಖು ಆದ ಮೇಲೆ ಏನಾಗುತ್ತದೆಂದು ನಮಗೆ ಗೊತ್ತಾಗುವುದಿಲ್ಲ. ಆದ್ದರಿಂದ ಏನೇನು ನಮ್ಮ ಆಲೋಚನೆಗಳು ಇವೆ, ಜನಪ್ರಿಯತೆಯನ್ನು ಹೇಗೆ ಪಡೆಯಬೇಕು, ಅವೆಲ್ಲವನ್ನೂ ಇದೆ ಒಂದು ಬಜೆಟ್‌ನಲ್ಲಿ ಮಾಡಿಬಿಡೋಣವೆಂದು ಅವರು ಹೊರಟಿದ್ದಾರೆ. ಇದು ಮುಂದಾಲೋಚನೆ ಇಲ್ಲದೇ ಇರತಕ್ಕಂಥ ಒಂದು ಬಜೆಟ್ ಯಾವುದೇ ಒಂದು ಸರ್ಕಾರ ಇವತ್ತು ಒಂದು ರಾಜ್ಯವನ್ನು ಕಟ್ಟಬೇಕೆಂದು ಎಂಬ ಆಸೆ ಅವರಿಗೆ ಇದ್ದಿದ್ದರೆ ಇವತ್ತು ಆಸ್ತಿ ಹೊಣೆಯನ್ನು ನಿರ್ವಹಣೆ ಮಾಡತಕ್ಕಂಥದ್ದು, ರಾಜ್ಯದ ಆರ್ಥಿಕ ವ್ಯವಸ್ಥೆಗೆ ಹೆಚ್ಚು ಒತ್ತು ಕೊಡತಕ್ಕಂಥ ಕ್ಷೇತ್ರಗಳಿಗೆ ಅವರು ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿತ್ತು. ಬಹುಶ ಹಿಂದಿನ ಎಸ್.ಎಂ.ಕೃಷ್ಣ ಸರ್ಕಾರ ಇದ್ದಾಗ ಬಹಳ ಸಮಸ್ಯೆಗಳು ಇತ್ತು. ಆಗ ಇಷ್ಟೊಂದು ಹಣಕಾಸಿನ ವ್ಯವಸ್ಥೆ ಇರಲಿಲ್ಲ. ಬರಗಾಲ, ಅನೇಕ ಸಮಸ್ಯೆಗಳು ಇದ್ದವು. ಆದರೆ ಇವರಿಗೆ ಒಳ್ಳೆಯ ಒಂದು ಸುವರ್ಣ ಅವಕಾಶ ಇದೆ. ಏನೆಂದರೆ, ನೀರಾವರಿ ಯೋಜನೆಗಳು, ಇಂಧನ ಕ್ಷೇತ್ರದಲ್ಲಿ ಇಂತಹ ಮೂಲಭೂತ ವ್ಯವಸ್ಥೆಯನ್ನು ನಿರ್ಮಾಣ ಮಾಡಿದಂಥ ಕ್ಷೇತ್ರದಲ್ಲಿ ಇವರು ಹೆಚ್ಚು ಆದ್ಯತೆಯನ್ನು ಕೊಡದೇ ಕೇವಲ ಜನಪ್ರಿಯತೆಗೋಸ್ಕರ ಮಾಡುರತಕ್ಕಂಥ ಕಾರ್ಯಕ್ರಮಗಳಿಂದ ಇವತ್ತು ರಾಜ್ಯಕ್ಕೆ ಒಂದು ರೀತಿಯ ಸಮಸ್ಯೆಯಾಗುತ್ತಿದೆ. ಆದ್ದರಿಂದ ಇದು ಮುಂದೆ ಮಾನ್ಯ ಯಡಿಯೂರಪ್ಪನವರ ಬಗ್ಗೆ ನಾವು ಏನಾದರೂ Certificate ಕೊಡಬೇಕೆಂದು ಇದ್ದರೆ ಅದು ಈಗಲೇ ಕೊಡುವುದಕ್ಕಾಗುವುದಿಲ್ಲ. ಮುಂದಿನ ದಿವಸಗಳಲ್ಲಿ ಜನ ಇದರ ಬಗ್ಗೆ ಬಹುಶಃ ತೀರ್ಮಾನ ಕೊಡುತ್ತಾರೆ. ಹೇಗೆ ಈ ಸರ್ಕಾರ ಬಂದ ಮೇಲೆ ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಕೆಟ್ಟಿತ್ತು, ಹೇಗೆ ಒಂದು ದುಸ್ಥಿತಿಗೆ ಈ ರಾಜ್ಯ ಹೋಯಿತು ಎಂದೂ ಕೂಡ ಮುಂದಿನ ದಿನಗಳಲ್ಲಿ ಅರ್ಥವಾಗುತ್ತದೆ. ಇವತ್ತು ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ನೋಡಿ, 16 ಸಾವಿರ ಕೋಟಿ ರೂ.ಗಳನ್ನು ಈ ವರ್ಷ ಅವರು ನೀರಾವರಿಗೆ ಖರ್ಚು ಮಾಡುತ್ತಿದ್ದಾರೆ. ಒಟ್ಟು ಅವರು 50–60 ಸಾವಿರ ಕೋಟಿ ರೂ.ಗಳ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದನ್ನು ಏಕೆ ಇವರಿಗೆ ಮಾಡುವುದ ಕ್ಕಾಗುತ್ತಿಲ್ಲ? ಇವರಿಗೆ ಏನು ಕಡಿಮೆ ಇತ್ತು? ಹಣ ಬೇಕಾದಷ್ಟು ಇದೆ. ನಿಮ್ಮ treasuryಗೆ ತೆರಿಗೆ ಹಣ ಹರಿದು ಬರುತ್ತಿದೆ. ಏಕೆ ನೀವು ಆ ಕ್ಷೇತ್ರಕ್ಕೆ ಆದ್ಯತೆಯನ್ನು ಕೊಡಲಿಲ್ಲ? ಸಾಲ ಮನ್ನಾ ಮಾಡುವ

ಒಂದು ಜನಪ್ರಿಯ ಯೋಜನೆಗೆ ತಾವು ಕೈ ಹಾಕಿದಿರಿ. ಅದನ್ನು ಯಾರೂ ಮಾಡಬೇಕೆಂದು ಕೇಳಲಿಲ್ಲ. ಆದರೆ ಅದನ್ನು ನೀವು ಮಾಡಿದ ಮೇಲೆ, ಅದರ ಆರ್ಥಿಕ ಪರಿಣಾಮ ಏನು? ಇವತ್ತು ಆ ರೈತರಿಗೆ ಎಷ್ಟು ತೊಂದರೆ ಆಗಿದೆ? ಅದರ ಬಗ್ಗೆ ಹೆಚ್ಚು ಚರ್ಚೆ ಆಗಿರುವುದರಿಂದ ನಾನು ಹೆಚ್ಚಿಗೆ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ಸಮಯ ಕೂಡ ಕಡಿಮೆ ಇದೆ. ಇದಕ್ಕೆ ಒಂದು ರೀತಿಯ ಮುಂದಾಲೋಚನೆ ಇಲ್ಲ. ಅಥವಾ ರಾಜ್ಯ ಕಟ್ಟತಕ್ಕಂಥ ಒಂದು ಮುತ್ಸದ್ದಿ ರಾಜಕಾರಣ ಈ ಸರ್ಕಾರ ಮಾಡುತ್ತಿಲ್ಲ. ಕಾರ್ಯಕ್ರಮ ಹಾಕಿಕೊಂಡಿಲ್ಲ. ತಾರತಮ್ಯ ಇರುವ ಬಗ್ಗೆ ಈಗಾಗಲೇ ಎಲ್ಲರೂ ಕೂಡ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಸಕರು ಇರುವ ಕಡೆ ಒಂದು ರೀತಿ, ಅವರ ಪಕ್ಷಗಳಲ್ಲಿ ಇರುವ ಭಿನ್ನಾಭಿಪ್ರಾಯ ನಮಗೆ ಅರ್ಥವಾಗುತ್ತಿದೆ, ಮುಜರಾಯಿ ಇಲಾಖೆ ಮತ್ತಿತರೆ ಇಲಾಖೆಗಳು ಏನಿವೆ ಅವುಗಳನ್ನು JD(S) ನವರಿಗೆ ಕೊಡುವುದಿಲ್ಲ. JD(S) ಇಲಾಖೆಗಳಿರುವುದು BJP ಯವರಿಗೆ ಕೊಡುವುದಿಲ್ಲ. ಅವರಲ್ಲಿ ಕೂಡ ತಾರತಮ್ಯ ಇದೆ. ಅವರ ಇಲಾಖೆ ಅವರ ಪಕ್ಷಕ್ಕೆ. ಈ ರೀತಿಯ ಯೋಚನೆಗಳು ಇರತಕ್ಕಂಥಾದ್ದು ನಿಜವಾಗಿಯೂ ಬಹಳ ದುರ್ದೈವದ ವಿಚಾರ. ಇದು ಸಾಮರಸ್ಯ ಇಲ್ಲದೇ ಇರತಕ್ಕಂತಹ ಸರ್ಕಾರ ಎಂದು ಹೇಳಿದರೆ ತಪ್ಪಾಗಲಾರದು. ಇನ್ನು ಬೆಂಗಳೂರಿನ ವಿಚಾರದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಇವರು ಬೃಹತ್ ಬೆಂಗಳೂರು ಎಂದು ಮಾಡಿದರು. ಬೃಹತ್ ಬೆಂಗಳೂರು ಎಂದು ಮಾಡಿ, ಅದಕ್ಕೆ ಏನು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು ಅದನ್ನು ಮಾಡಿಕೊಂಡಿಲ್ಲ. ಇವತ್ತಿನ ದಿವಸ ಬೆಂಗಳೂರು ಮಹಾನಗರ ಪಾಲಿಕೆ ಸುತ್ತಮುತ್ತಲಿನ ಎಂಟು CMC ಗಳನ್ನು ಸೇರಿಸಿಕೊಂಡು ಬೃಹತ್ ಬೆಂಗಳೂರು ಮಾಡಿದರು. ಆದರೆ ಇವತ್ತು ಅದರ ಪರಿಣಾಮ ಏನಾಗಿದೆ? ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ನಮ್ಮ ನಗರಗಳಲ್ಲಿ ಅಶಿಸ್ತು ಹೇಗೆ ಪ್ರಾರಂಭವಾಗಿದೆ? ಅನೇಕ ಹುದ್ದೆಗಳನ್ನು ಇವತ್ತಿನದಿವಸ ಭರ್ತಿ ಮಾಡಿಕೊಳ್ಳಬೇಕಾಗಿದೆ. Health Inspector ಗಳಿಲ್ಲ, Health Department ನೋಡಿಕೊಳ್ಳತಕ್ಕಂತಹ ಜನಗಳಿಲ್ಲ. Revenue ಇಲಾಖೆ ಜನಗಳಲ್ಲಿ ಜನ ಇಲ್ಲ. ಕನಿಷ್ಟ ಇನ್ನೂ 2,000 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ನಗರ ಪಾಲಿಕೆ ಸದಸ್ಯರುಗಳು ಕೂಡ ಇಲ್ಲ, ಚುನಾವಣೆ ಮಾಡಲಿಲ್ಲ, ಇದೆಲ್ಲಾ ಆಗಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೃಹತ್ ಬೆಂಗಳೂರನ್ನು ಕಟ್ಟತಕ್ಕಂತಹ ಕೆಲಸ ತಾವು

ಮಾಡಬೇಕಾಗಿತ್ತು ಅದರಲ್ಲಿ ಎಡವುತ್ತಿದ್ದೀರಿ. ಇವರು ತಾರತಮ್ಯದ ಬಗ್ಗೆ ಮಾತನಾಡುತ್ತಾರೆ. ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯದ ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಯೋಜನೆಯನ್ನು ಕೊಟ್ಟಿದ್ದಾರೆ. ಇವರು ಈ ಯೋಜನೆಯನ್ನು ಉಪಯೋಗಿಸಿಕೊಂಡು ಕೆಲಸಗಳನ್ನು ಮಾಡಬೇಕು. ಈ ರೀತಿ ಸಾವಿರಾರು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ, ಎಂದೂ ಕೂಡ ಮಹಾನಗರ ಪಾಲಿಕೆಗೆ ಕೊಟ್ಟಿರಲಿಲ್ಲ. ಆದರೆ ಇವತ್ತು ಈ ನರ್ಮ್ ಯೋಜನೆಯಡಿಯಲ್ಲಿ ಈ ಸರ್ಕಾರಕ್ಕೆ ಒಳ್ಳೆಯ ಅವಕಾಶವಿತ್ತು. ಈ ಯೋಜನೆಯಲ್ಲಿ ಬೇರೆ ರಾಜ್ಯಗಳು ಹೇಗೆ ಆಧ್ಯತೆ ಮೇಲೆ ಹಣವನ್ನು ತೆಗೆದುಕೊಳ್ಳತಕ್ಕಂತಹ ಪ್ರಯತ್ನ ಮಾಡಿದ್ದಾರೆ? ಆಂಧ್ರಪ್ರದೇಶದವರು ಇದೇ ನರ್ಮ್ ಯೋಜನೆ ಅಡಿಯಲ್ಲಿ 80 projectಗಳನ್ನು ಅಪ್ರೂವಲ್‌ಗಾಗಿ ದೆಹಲಿಗೆ ಕಳುಹಿಸಿದ್ದಾರೆ. ಅದೇ ರೀತಿಯಾಗಿ ಮಹಾರಾಷ್ಟ್ರದವರು 100 projectಗಳನ್ನು ಕಳುಹಿಸಿದ್ದಾರೆ. ಗುಜರಾತ್‌ನವರು 77 ಪ್ರಾಜೆಕ್ಟ್‌ಗಳನ್ನು ಕಳುಹಿಸಿದ್ದಾರೆ. ನಾವು ಬೆಂಗಳೂರು ಮತ್ತು ಮೈಸೂರು ಎರಡು ನಗರಗಳಿಂದ ಕೇವಲ 40 ಪ್ರಾಜೆಕ್ಟ್‌ಗಳನ್ನು ಕಳುಹಿಸಿದ್ದೇವೆ.

ಶ್ರೀ ಹೆಚ್.ಡಿ.ಬಸವರಾಜು : ಮಾನ್ಯ ಅಧ್ಯಕ್ಷರೆ, 40 project ಗಳನ್ನು ಮಾಡದೇ ಇರುವವರು 100 ಪ್ರಾಜೆಕ್ಟ್‌ಗಳನ್ನು ಮಾಡಿ ಬಿಡುತ್ತಾರಾ? 40 ಪ್ರಾಜೆಕ್ಟ್‌ಗಳನ್ನು ಮೊದಲು ಮಾಡಲಿ.

ಶ್ರೀ ವಿ.ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ದಿನೇಶ್ ಗುಂಡೂರಾವ್ ರವರು ಹೇಳತಕ್ಕಂಥಾದ್ದನ್ನು ಮಾನ್ಯ ಬಸವರಾಜುರವರು ಅರ್ಥ ಮಾಡಿಕೊಂಡಿಲ್ಲ. ಈ projectನ ನಾರ್ಮ್ಸ್ ಹೇಗಿವೆ? ಶೇ.80 ರಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. 1,600 ಕೋಟಿ ರೂಪಾಯಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ಕೊಡತಕ್ಕಂತಹ ಯೋಜನೆಗಳು ಏನಿವೆ, ಈ ಯೋಜನೆಗಳನ್ನು ಇಡೀ ರಾಷ್ಟ್ರದಲ್ಲಿ ಮಾಡುತ್ತಿದ್ದಾರೆ. ಸನ್ಮಾನ್ಯ ಬಸವರಾಜುರವರು ಅರ್ಥ ಮಾಡಿಕೊಳ್ಳಬೇಕು. ಅವರು ಹೇಳುತ್ತಿರತಕ್ಕಂತಹ ಉದ್ದೇಶವೇನೆಂದರೆ, ಕೋಟ್ಯಾಂತರ ರೂಪಾಯಿಗಳನ್ನು ಈಗಾಗಲೇ ಬೇರೆ ಬೇರೆ ರಾಜ್ಯಗಳವರು ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದ ಮಹಾನಗರ ಪಾಲಿಕೆಗಳು ಅದನ್ನು ಸದುಪಯೋಗಪಡಿಸಿಕೊಳ್ಳಲಿ ಎನ್ನುವ ದೃಷ್ಟಿಯಿಂದ ಈ ಯೋಜನೆಗಳನ್ನು

ಕಳುಹಿಸಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದಾರೆ. ಅದಕ್ಕೆ ಯಾವುದೇ ಬೇರೆ ಉದ್ದೇಶ ಇಲ್ಲ. ಕೇಂದ್ರ ಸರ್ಕಾರ ಕೊಡತಕ್ಕಂತಹ ಹಣವನ್ನು ಕೊಡಲಿ ಎನ್ನುವ ದೃಷ್ಟಿಯಿದ ಹೇಳುತ್ತಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ನೀವು project ತಯಾರು ಮಾಡಿ ನಾವು ಹಣ ಬೇಕಾದರೂ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇಲ್ಲಿ ಯಾವುದೇ ತಾರತಮ್ಯ ಇಲ್ಲ. ಗುಜರಾತ್ ನವರು 70 ಪ್ರಾಜೆಕ್ಟ್‌ಗಳನ್ನು ಕಳುಹಿಸಿದ್ದಾರೆ. ಅದೂ ನಿಮ್ಮ ಪಕ್ಷದವರೇ ಇರತಕ್ಕಂತಹ ಸರ್ಕಾರ. ಗುಜರಾತ್‌ನವರ ಟೋಟಲ್ ಪ್ರಾಜೆಕ್ಟ್‌ಕಾಸ್ಟ್ ಎಷ್ಟು ಗೊತ್ತಾ? 2,348 ಕೋಟಿ ರೂಪಾಯಿಗಳಷ್ಟು project sanction ಮಾಡಿ ಕೊಟ್ಟಿದ್ದಾರೆ. ನಮ್ಮ ರಾಜ್ಯಕ್ಕೆ ನಮ್ಮ ಈ ಸರ್ಕಾರ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದರೆ 2,000 ದಿಂದ 3,000 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಗಳನ್ನು ಕಳುಹಿಸಬಹುದಾಗಿತ್ತು. ನಾವು ಕಳುಹಿಸಿರುವುದು ಕೇವಲ 1,188 ಕೋಟಿ ರೂಪಾಯಿ. ಆಂಧ್ರಪ್ರದೇಶದವರು 20,000 ಕೋಟಿ ರೂಪಾಯಿ ಪ್ರಾಜೆಕ್ಟ್‌ಗಳನ್ನು ಕಳುಹಿಸಿದ್ದಾರೆ. ಅವರು ಎಲ್ಲರಿಗಿಂತ ಮುಂದಿದ್ದಾರೆ. ಬೆಂಗಳೂರು ನಗರವನ್ನು ಯಾವ ಪ್ರಮಾಣದಲ್ಲಿ ಬೆಳೆಸಬೇಕಾಗಿದೆ? ಇವತ್ತು ಒತ್ತಡ ಎಷ್ಟು ಇದೆ? Traffic ಸಮಸ್ಯೆ ಎಷ್ಟು ಆಗಿದೆ? ಬೆಳವಣಿಗೆಯಲ್ಲಿ ನಾವು ದಿನಾಲೂ ಬಹಳ ಸಮಸ್ಯೆಗಳನ್ನು ನೋಡುತ್ತಿದ್ದೇವೆ. ಇವತ್ತು ಈ ನಗರದ ಬೆಳವಣಿಗೆಯಲ್ಲಿ ಪ್ರತಿಯೊಬ್ಬರೂ ಕೂಡ ಇಡೀ ರಾಜ್ಯದ GDPಗೆ ಬೆಂಗಳೂರು ನಗರದ contribution ಎಷ್ಟು ಇದೆ? ಇವತ್ತು ನಿಮ್ಮ Stamps and registration ನಿಂದ ಬರತಕ್ಕಂತಹ ಹಣದಲ್ಲಿ ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಈ ಎರಡೂ ಜಿಲ್ಲೆಗಳಿಂದ ನಿಮಗೆ ಇಡೀ ರಾಜ್ಯದ 75% ನಷ್ಟು ಹಣ ಬರುತ್ತಿದೆ. Commercial Taxes ನಿಂದ ಬೇರೆ ಬೇರೆ duties ನಿಂದ ನಿಮಗೆ ಎಷ್ಟೊಂದು ಹಣ ಬರುತ್ತದೆ. ಅದರಿಂದ ಈ ನಗರದ ಬೆಳವಣಿಗೆಯಲ್ಲಿ ನಾವು ಸಮಗ್ರವಾದ ಚಿಂತನೆ ಕೂಡ ಮಾಡಬೇಕು. ಸರ್ಕಾರ ಕೂಡ ಆದ್ಯತೆ ಮೇಲೆ ಈ ಕೆಲಸಗಳನ್ನು ಮಾಡಬೇಕಾಗಿದೆ. ಇದರಲ್ಲಿ ಕೂಡ ಇವರು ವಿಫಲರಾಗಿದ್ದಾರೆ. ಮಹಾನಗರಪಾಲಿಕೆ ಇರಬಹುದು, Slum Board ಇರಬಹುದು, ಬೆಂಗಳೂರು ಮತ್ತು ಮೈಸೂರು ಎರಡೂ ಕಡೆಗಳಲ್ಲಿಯೂ ಅಷ್ಟೆ. Slum ಪ್ರದೇಶಗಳಿಗೆ ಶೇ.59 ರಷ್ಟು ಹಣವನ್ನು ಗ್ರ್ಯಾಂಟ್ ಆಗಿ

ಕೊಡುತ್ತಿದ್ದಾರೆ. ಇದಕ್ಕೆ 30% ಹಣ ಕೊಡುತ್ತಾರೆ. ನಾವೇಕೆ ಹಿಂದೆ ಉಳಿದಿದ್ದೇವೆ? ಏಕೆಂದರೆ ಆಡಳಿತದಲ್ಲಿ ಶಿಸ್ತು ಇಲ್ಲ, ಬದ್ಧತೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಆ ಆಡಳಿತವನ್ನು ಅದರ ಖಾತೆಯನ್ನು ಇಟ್ಟು ಕೊಂಡಿದ್ದಾರೆ. ಅವರಿಗೆ ಸಾಕಷ್ಟು ಕಾರ್ಯಕ್ರಮಗಳು ಇರುತ್ತವೆ. ಅವರಿಗೆ ಇದಕ್ಕೆ ಹೆಚ್ಚಿನ ಸಮಯ ಕೊಡುವುದಕ್ಕಾಗುತ್ತಿಲ್ಲ. ಅದರ ಜೊತೆಯಲ್ಲಿ ಇಲ್ಲಿ ಯಾರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಿಲ್ಲ. ಇಲ್ಲಿ ಹೆಚ್ಚಿನಂಶ ಕಾಂಗ್ರೆಸ್ ಶಾಸಕರು ಇರತಕ್ಕಂತಹ ನಗರ. ಉದ್ದೇಶಪೂರ್ವಕವಾಗಿ ಮಹಾನಗರಪಾಲಿಕೆ ಚುನಾವಣೆ ಕೂಡ ಮಾಡಲಿಲ್ಲ. ಇವತ್ತು ಇದರ ಪರಿಣಾಮ ಏನಾಗಿದೆ? ಪ್ರತಿಯೊಂದೂ ಕೂಡ ಅಧಿಕಾರಿಗಳೇ ಮಾಡುತ್ತಿದ್ದಾರೆ. ಬೆಂಗಳೂರಿನ ಅಭಿವೃದ್ಧಿ ಇರಬಹುದು, BDA ಇರಬಹುದು, ಮಹಾನಗರ ಪಾಲಿಕೆ ಇರಬಹುದು, BMRDA ಇರಬಹುದು, ಯಾವುದೇ ಸಂಸ್ಥೆ ತೆಗೆದುಕೊಳ್ಳಿ. ಅಲ್ಲಿ ಜನಪ್ರತಿನಿಧಿಗಳಿಗೆ ಒಂದು ಚೂರು ಕೂಡ ಸ್ಥಾನ ಮಾನ ಗೌರವ ಏನೂ ಇಲ್ಲ. ಎಲ್ಲಾ ಅವರದೇ ತಿರ್ಮಾನ, ಅವರದೇ ನಿರ್ಣಯಗಳು, ಸ್ವೇಚ್ಛಾಚಾರವಾಗಿ ಏನು ಬೇಕೋ ಅದನ್ನು ಮಾಡುತ್ತಿದ್ದಾರೆ. ಅವರನ್ನು ಹಿಡಿತ ಮಾಡುವವರು ಯಾರು? ನಾವು ಹತ್ತಿರ ಹೋಗಿ ಹೇಳಬೇಕು? ಮಂತ್ರಿಗಳಾದರೂ ಇದ್ದಿದ್ದರೆ ಅವರನ್ನು ಹಿಡಿಯಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಬಹಳ busy ಇರುತ್ತಾರೆ. ನಾವು ಹಿಂದೆ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೇವೆ. At least ಮೂರು ತಿಂಗಳಿಗೊಮ್ಮೆ ಒಂದು ರೆವ್ಯೂ ಮೀಟಿಂಗ್ ಕರೆಯಿರಿ. ಕರೆಸಿ ಮಾತನಾಡಿ ಎಂದು ಹೇಳಿದೆವು. ಅದನ್ನೂ ಕೂಡ ಮಾಡಲಿಲ್ಲ. ಬೆಂಗಳೂರು ನಗರದ ಅಭಿವೃದ್ಧಿ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಾಸಕರನ್ನು ಕರೆದು ಒಂದು ಮೀಟಿಂಗ್ ಕೂಡ ಮಾಡಲಿಲ್ಲ. ನಾವು ಯಾರಿಗೆ ಹೋಗಿ ಹೇಳಬೇಕು? ಈ ನರ್ಮ್ ಯೋಜನೆಯಲ್ಲಿ ಈ ಸರ್ಕಾರ ನಿಜವಾಗಿಯೂ ಕೂಡ ವಿಫಲವಾಗಿದೆ. ಈಗಲಾದರೂ ಅವರು ಪ್ರಾಜೆಕ್ಟ್ ತಯಾರು ಮಾಡಿಕೊಂಡು ಹೋಗಬೇಕು. ಇದು ಕೇವಲ ಐದು ವರ್ಷಗಳಿಗೆ ಮಾತ್ರ ಕಾರ್ಯಕ್ರಮ ಇರುವುದು. ನಂತರ ಈ ಕಾರ್ಯಕ್ರಮ ಇರುವುದು. ನಂತರ ಈ ಕಾರ್ಯಕ್ರಮ ನಿಂತು ಹೋಗುತ್ತದೆ. ಈ ಐದಾರು ವರ್ಷಗಳಲ್ಲಿ ಯಾರು ಹೆಚ್ಚಿನ ಹಣ ತೆಗೆದುಕೊಂಡು ಬರುತ್ತಾರೋ, ಅವರಿಗೆ ಮಂಜೂರಾತಿ ಸಿಗುತ್ತದೆ. ಯಾರು ಹಿಂದೆ ಬೀಳುತ್ತಾರೋ ಅವರಿಗೆ ಈ ಹಣ ಸಿಗುವುದಿಲ್ಲ.

ಆದ್ದರಿಂದ ಇದರ ಬಗ್ಗೆ ಈ ಸರ್ಕಾರ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಅದರ ಜೊತೆಯಲ್ಲಿ ಬೃಹತ್ ಬೆಂಗಳೂರು ಮಾಡತಕ್ಕಂತಹ ಕೆಲಸಗಳ ಬಗ್ಗೆ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥಾದ್ದು. CMC ಪ್ರದೇಶಗಳಲ್ಲಿ ಇರತಕ್ಕಂತಹ ಕೇಡರ್‌ಗಳೇ ಬೇರೆ. ಮಹಾನಗರ ಪಾಲಿಕೆಯಲ್ಲಿರತಕ್ಕಂತಹ ಕೇಡರ್‌ಗಳೇ ಬೇರೆ. ಆ ಎರಡೂ ಕೇಡರ್‌ಗಳನ್ನು ಮರ್ಜ್ ಮಾಡಬೇಕಾಗಿದೆ. ಅದರ ಬಗ್ಗೆ ತೀರ್ಮಾನವಾಗಿಲ್ಲ. ಆಡಳಿತದಲ್ಲಿ ಶಿಸ್ತು ಮಾಡತಕ್ಕಂತಹ ವಿಷಯದಲ್ಲಿ ಕೂಡ ಇವತ್ತು ಎಲ್ಲಿಯೂ ಕೂಡ ಕೆಲಸ ನಡೆಯುತ್ತಿಲ್ಲ. ಯಾರೂ ಕೂಡ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ. ಬೀದಿ ನಾಯಿ ಸಮಸ್ಯೆ ಬಂದಿತು, ಮಳೆ ಬಂದಾಗ storm water drain ವಿಚಾರ ಬಂದಿತ್ತು, ಅದರಲ್ಲಿ ಎಷ್ಟು ಭ್ರಷ್ಟಾಚಾರ ಆಗಿದೆ ಎಂಬ ಬಗ್ಗೆ ಅನೇಕ ಜನ ಪ್ರಸ್ತಾಪ ಮಾಡಿದ್ದಾರೆ. ಯಾರೂ ಯೋಚನೆ ಮಾಡುತ್ತಿಲ್ಲ, ಹಿಡಿತ ಇಲ್ಲ. ಆದ್ದರಿಂದ ಇವತ್ತು ಮಹಾನಗರ ಪಾಲಿಕೆಯಲ್ಲಿ ಬೆಂಗಳೂರು ಇರಬಹುದು, ಮೈಸೂರು ಇರಬಹುದು, ಏನು ಮಾಡಬಹು ದಾಗಿದೆ, ಅದನ್ನು ಮಾಡುವುದಕ್ಕಾಗುತ್ತಿಲ್ಲ. ಇವರು ಏನು ಮಾಡುವುದಕ್ಕೆ ಹೊರಟಿದ್ದಾರೆ ಬೆಂಗಳೂರಿನ ವಿಚಾರದಲ್ಲಿ ಇವತ್ತು ಹೊಸ CDP ಮಾಡಿದರು, ಆ CDP ಪ್ರಕಾರ ಬಹುಶಃ 400 square km, ಗೂ ಹೆಚ್ಚಿನ ಅಭಿವೃದ್ಧಿ ಆಗುವುದಕ್ಕೆ ಅವಕಾಶ ಸಿಗುತ್ತಿದೆ. 400 square km, ಗೂ ಹೆಚ್ಚು ಜಮೀನು ಇವತ್ತು ಅಭಿವೃದ್ಧಿಗೆ ಅವಕಾಶ ವಾಗುತ್ತಿದೆ. ಅದರಿಂದ ಇವತ್ತು green belt ಎಲ್ಲಾ ಕಡಿಮೆಯಾಗುತ್ತಿದೆ. ಹಸಿರುವಲಯ ಕೂಡ ಕಡಿಮೆ ಆಗುತ್ತಿದೆ. ಅದರ ಜೊತೆಯಲ್ಲಿ BMRDA ಕೂಡ ಇವತ್ತು ಹೊಸ ಹೊಸ ಪ್ರದೇಶಗಳನ್ನು development ಗೆ ಬಿಡುತ್ತಿದ್ದಾರೆ. ಅಲ್ಲಿ ಕೂಡ ಅಭಿವೃದ್ಧಿ ಮಾಡಬಹುದು. ಅಲ್ಲಿ

(1-30 PM)

ಕೂಡ 400 square km,ನಷ್ಟು ಭೂಮಿ ಸಿಗುತ್ತದೆ. ಅದೆಲ್ಲವನ್ನೂ ಹಿಡಿದುಕೊಂಡು ಬೆಂಗಳೂರಿನ ಅಭಿವೃದ್ಧಿ ವಿಚಾರದಲ್ಲಿ ಇವರ ಯೋಚನೆ ಏನೆಂದರೆ, ಬೆಂಗಳೂರಿನ ಸುತ್ತಮುತ್ತ ಇವರು ಮಾಡುತ್ತಿರುವಂಥಾದ್ದು ಒಂದು ಲಕ್ಷ ಎಕರೆ ಅಷ್ಟು acquisition, ಮಾಡುತ್ತಿದ್ದಾರೆ. ಈ ಸರ್ಕಾರ ರೈತರ ಸರ್ಕಾರ, ನಾವು ರೈತರ ಪರ ಇದ್ದೇವೆ, ಮಣ್ಣಿನ ಮಕ್ಕಳು ಎಂದು ಹೇಳಿಕೊಂಡು ಬಂದರು. ಈ ಸರ್ಕಾರ ಬಂದು ಏನು ಮಾಡಿದೆ ಎಂದರೆ, ಇದರ ಅವಶ್ಯಕತೆ ಇದೆಯೋ ಇಲ್ಲವೋ, ಯಾರಿಗಾದರೂ ಕೇಳಿದ್ದೀರೋ

ಬಿಟ್ಟಿದ್ದಿರೋ ಅದರ ಬಗ್ಗೆ ನೋಡುತ್ತಿಲ್ಲ. 1.20 ಲಕ್ಷ ಎಕರೆ acquire ಮಾಡುತ್ತಿರತಕ್ಕಂಥಾದ್ದು. KIADB ಇರಬಹುದು, BDA ಇರಬಹುದು, Revenue Department ಇರಬಹುದು..

ಬಿ.ಎಂ.ಆರ್.ಡಿ.ಎ. ಇರಬಹುದು, ಇವರುಗಳು ಇವೊತ್ತಿನ ದಿವಸ ಅಕ್ವಿಸಿಶನ್‌ಗೆ ಕೈ ಹಾಕಿದ್ದಾರೆ. ಇಷ್ಟೊಂದು ಅಕ್ವಿಸಿಶನ್ ಏತಕ್ಕೋಸ್ಕರ ಮಾಡುತ್ತಿದ್ದಾರೆ? ಇದರ ಹಿಂದಿನ ಉದ್ದೇಶ ಏನು? ಈಗಾಗಲೇ ಹೇಳಿದ ಹಾಗೆ ಬಿ.ಡಿ.ಎ.ಯ.ಸಿ.ಡಿ.ಪಿ. ಯಿಂದ ಮತ್ತು ಬಿ.ಎಂ.ಆರ್.ಡಿ.ಎ. ಯಿಂದ ಬಹುಶಃ 60 ರಿಂದ 70 ಸಾವಿರ ಎಕರೆಯಷ್ಟು ಭೂಮಿ ಹೊಸ ಅಭಿವೃದ್ಧಿಗೆ ಸಿಗುತ್ತಿದೆ.

ಡಾ: ಕೆ. ಅನ್ನದಾನಿ : ದಿನೇಶ್ ಗುಂಡೂರಾವ್‌ರವರೆ, ಒಂದ್ನಿಮಿಷ, ಕೆ.ಐ.ಎ.ಡಿ.ಬಿ. ಬಗ್ಗೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಕೆ.ಐ.ಎ.ಡಿ.ಬಿ. ಬಗ್ಗೆ ಎರಡೇ ಎರಡು ವಿಚಾರಗಳನ್ನು ಹೇಳಬಯಸುತ್ತೇನೆ. ಅದರಲ್ಲಿಯೂ ನನ್ನ ಕ್ಷೇತ್ರದ ವಿಚಾರ. ನನ್ನ ಕ್ಷೇತ್ರದ ಮಳವಳ್ಳಿಯಲ್ಲಿ ಹಲಗೂರು ಎಂಬ ಹೋಬಳಿ ಬರುತ್ತದೆ. ಅದರ ಪಕ್ಕದಲ್ಲಿ ರೈತರು ಉಳುಮೆಯನ್ನು ಮಾಡುತ್ತಿದ್ದಾರೆ. ಅದೆಷ್ಟರಲ್ಲಿ ಎಂದರೆ, ಕೇವಲ ಹತ್ತು ಗುಂಟೆ, ಇಪ್ಪತ್ತು ಗುಂಟೆ, ಮೂವತ್ತು ಗುಂಟೆಯಷ್ಟು ಜಮೀನು ಇಟ್ಟುಕೊಂಡಿರತಕ್ಕಂಥ ಸಣ್ಣ ಹಿಡುವಳಿದಾರರು ಉಳುಮೆಯನ್ನು ಮಾಡುತ್ತಿದ್ದಾರೆ. ಈ ಭೂಮಿಯನ್ನು ಬಿಟ್ಟರೆ ಅವರಿಗೆ ಜೀವನ ಮಾಡುವುದಕ್ಕೆ ಬೇರೆ ದಾರಿಯೇ ಇಲ್ಲ. ಹೀಗಿರುವಾಗ ಅವರು ಈ ಜಮೀನನ್ನು ಕಳೆದುಕೊಂಡರೆ, ಅವರು ಮುಂದಿನ ದಿನಗಳಲ್ಲಿ ಕೂಲಿ ಮಾಡುವುದೊಂದೇ ಉಳಿದಿರುವಂಥ ಮಾರ್ಗ. ಇವೊತ್ತು ಯಾವುದೋ ಒಂದು ಖಾಸಗಿ ಕಾರ್ಖಾನೆಗೆ ಭೂಮಿಯನ್ನು ಕೊಡುವ ಉದ್ದೇಶದಿಂದ ಈ ರೈತರು ಹೊಂದಿರುವ ಅರ್ಧ ಎಕರೆ, ಹತ್ತು ಗುಂಟೆ, ಇಪ್ಪತ್ತು ಗುಂಟೆ ಜಮೀನನ್ನು ಕೆ.ಐ.ಎ.ಡಿ.ಬಿ.ಯವರು ಅಕ್ವೈರ್ ಮಾಡಿಕೊಂಡು 6(1) ನೋಟಿಫಿಕೇಶನ್ ಹೊರಡಿಸಿಬಿಟ್ಟಿದ್ದಾರೆ. ಇವೊತ್ತು ಆ ರೈತರಿಗೆ ತಮ್ಮ ಭೂಮಿ ಇಲ್ಲದೇ ಬಾಯಿ ಬಾಯಿ ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೆ ಅಲ್ಲಿ ಅವರು ಏನು ಹೇಳುತ್ತಿದ್ದಾರೆಂದರೆ ಶಾಸಕರೇ ಈ ರೀತಿ ಮಾಡಿಸುತ್ತಿದ್ದಾರೆ ಎನ್ನುವ ಆಪಾದನೆಯನ್ನು ನನ್ನ ಮೇಲೆ ಹೊರಿಸುತ್ತಿದ್ದಾರೆ. ಇವೊತ್ತು ಪರಿಸ್ಥಿತಿ ಅಲ್ಲಿ ಈ ರೀತಿ ಇದೆ. ನಾಳೆ ದಿವಸ ಇದನ್ನೆಲ್ಲಾ ಅಕ್ವೈರ್ ಮಾಡಿಕೊಂಡರೆ ಹೇಗೆ? 50 ಎಕರೆ, 100 ಎಕರೆ ಜಮೀನನ್ನು ಹೊಂದಿರುವ ರೈತರಿಂದ ನೀವು

ಬೇಕಾದರೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಿ. ನಾವು ಬೇಡವೆಂದು ಹೇಳುವುದಿಲ್ಲ. ಹೆಚ್ಚು ಜಮೀನು ಹೊಂದಿರುವ ರೈತರಿಂದ ಬೇಕಾದರೆ ನೀವು ಹತ್ತು ಎಕರೆ, ಇಪ್ಪತ್ತು ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಿ. ಆದರೆ ಅರ್ಧ ಎಕರೆ, ಹತ್ತು ಗುಂಟೆ, ಇಪ್ಪತ್ತು ಗುಂಟೆ ಭೂಮಿಯನ್ನು ಹೊಂದಿರುವ ರೈತರಿಂದ ದಯವಿಟ್ಟು ಅಕ್ವೈರ್ ಮಾಡಿಕೊಳ್ಳಬೇಡಿ. ಈಗ ರೈತರುಗಳು ಅಲ್ಲಿ ಗಲಾಟೆ ಮಾಡುತ್ತಿದ್ದಾರೆ. ಸಣ್ಣ ಜಮೀನುದಾರರು, ಸಣ್ಣ ಹಿಡುವಳಿದಾರರ ಜಮೀನುಗಳನ್ನು ಏನು ಅಕ್ವೈರ್ ಮಾಡಿಕೊಂಡಿದ್ದಾರೆ ಅದನ್ನು ದಯವಿಟ್ಟು ವಾಪಸ್ ಕೊಡಿಸಬೇಕು. ಇದಕ್ಕಾಗಿ ಕೂಡಲೇ ಡಿ–ನೋಟಿಫಿಕೇಶನ್ ಮಾಡಿಸಬೇಕೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು : ದಿನೇಶ್‌ರವರೆ, ತಾವು ಬೇಗ ಮುಗಿಸಿ. ಈಗಾಗಲೇ ಹದಿನೈದು ನಿಮಿಷ ಮಾತನಾಡಿದ್ದೀರಿ. ಇನ್ನೂ ಬೇರೆಯವರು ಮಾತನಾಡು ವವರು ಇದ್ದಾರೆ.

ಶ್ರೀ ದಿನೇಶ್ ಗುಂಡೂರಾವ್ : ನಾನು ಬೇಗ ಮುಗಿಸಿಬಿಡುತ್ತೇನೆ ಅಧ್ಯಕ್ಷರೆ, ಬಿ.ಡಿ.ಎ. ಮಾಸ್ಟರ್‌ಪ್ಲಾನ್‌ನಲ್ಲಿ 400 ಸ್ಕ್ವೇರ್ ಕಿ.ಮೀ, ಬಿ.ಎಂ.ಆರ್.ಡಿ.ಎ.ನಲ್ಲಿ ಇನ್ನೂ 400 ಸ್ಕ್ವೇರ್ ಕಿ.ಮೀ. ಈಗ ಮತ್ತೆ ರೈತರ ಜಮೀನು acquisition ಆಗುತ್ತದೆ. ಟೌನ್‌ಶಿಪ್‌ಗೋಸ್ಕರ 60 ಸಾವಿರ ಎಕರೆ, ಇದಲ್ಲದೇ ಇಂಟರ್ ನ್ಯಾಶನಲ್ ಏರ್‌ಪೋರ್ಟ್ ಮಾಡುತ್ತಿರುವ ಹತ್ತಿರ ಕೆ.ಐ.ಎ.ಡಿ.ಬಿ. ಯವರು 4 ಸಾವಿರ ಚಿಲ್ಲರೆ ಎಕರೆ ಭೂಮಿಯನ್ನು ಅಕ್ವೈರ್ ಮಾಡುತ್ತಿದ್ದಾರೆ. ಇವರದು ಯಾವ ಉದ್ದೇಶ? ಇದನ್ನೆಲ್ಲಾ ಅಕ್ವೈರ್ ಮಾಡಿಕೊಳ್ಳಿ ಎಂದು ಯಾರು ಕೇಳಿದ್ದಾರೆ? ಇವತ್ತು ಬೆಂಗಳೂರಿಗೆ ವಾಟರ್ ಸಪ್ಲೈ ಎಷ್ಟಿದೆ? ಎಷ್ಟು ನೀರನ್ನು ಪೂರೈಕೆ ಮಾಡತಕ್ಕಂಥ ಶಕ್ತಿ ನಮ್ಮಲ್ಲಿ ಇದೆ? ಇಷ್ಟೊಂದು ಜನಸಂಖ್ಯೆಯನ್ನು ನಾವು ಬೆಳೆಸಿದರೆ ಎಲ್ಲಿಂದ ನಾವು ಎಲ್ಲರಿಗೂ ಮೂಲಭೂತ ಸೌಕರ್ಯವನ್ನು ಕೊಡುವುದಕ್ಕಾಗುತ್ತದೆ? ಇದರ ಬಗ್ಗೆ ಇವರು ಚಿಂತನೆಯನ್ನೇ ಮಾಡುತ್ತಿಲ್ಲ. ಈ ಬಿ.ಎಂ.ಆರ್.ಡಿ.ಎ.ನವರು ಹೊಸಕೋಟೆ ಪಕ್ಕ ನಂದಗುಡಿಯಲ್ಲಿ 18507 ಎಕರೆಗೆ ನೋಟಿಫಿಕೇಶನ್ ಮಾಡಿದ್ದಾರೆ. ಇವೆಲ್ಲವೂ ಫಲವತ್ತಾದ ಜಮೀನುಗಳು. ನಿಮ್ಮ ನೋಟಿಫಿಕೇಶನ್ ಪ್ರಕಾರ ಹೇಳಿರುವಂಥ ದ್ದೇನೆಂದರೆ, ಅಲ್ಲಿ ಅಗ್ರಿಕಲ್ಚರ್ ಲ್ಯಾಂಡ್ಸ್ ಇರಬಾರದು, ಅಲ್ಲಿ ಫಲವತ್ತಾದ ಜಮೀನುಗಳು ಇರಬಾರದು, ಹೆಚ್ಚು human habitations ಇರಬಾರದು ಮತ್ತು least disturbance of forest and water supply,

ಈ ರೀತಿಯಾಗಿ 18507 ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವಾಗ ನಿಯಮ ಇಟ್ಟುಕೊಂಡಿದ್ದಾರೆ. ಆದರೆ ಅಕ್ವೈರ್ ಮಾಡಿಕೊಳ್ಳುತ್ತಿರುವ ಜಾಗಕ್ಕೆ ಹೋಗಿ ಪರಿಶೀಲನೆ ಮಾಡಿದರೆ ಎಲ್ಲರದ್ದೂ ಕೂಡ ಅಲ್ಲಿ ಕೃಷಿ ಭೂಮಿ ಇದೆ. ಈ ಕೃಷಿಯ ಮೇಲೆಯೇ ಅವಲಂಬಿತವಾಗಿರತಕ್ಕಂಥ ರೈತರು ಅಲ್ಲಿದ್ದಾರೆ. ನಿಯಮ ಒಂದು ರೀತಿ ಮಾಡಿಕೊಂಡು ಹೇಗೆ ಇವರು ಈ ರೀತಿ ಅಕ್ವೈರ್ ಮಾಡಿಕೊಳ್ಳುತ್ತಾರೆ? ಇದರ ಬಗ್ಗೆ ಇವೆಲ್ಲವನ್ನೂ ಮಾಡುವುದಕ್ಕಿಂತ ಮುಂಚೆಯೇ ಯೋಚನೆ ಮಾಡಬೇಕಾಗಿತ್ತು. ಇವತ್ತು ಇಲ್ಲಿ 18507 ಎಕರೆಯಲ್ಲಿ ಟೌನ್‌ಶಿಪ್ ಮಾಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಅದೇ ಜಾಗದಲ್ಲಿ S.E.Z. ಎಂದು ಮಾಡುತ್ತೇವೆಂದು ತೋರಿಸುತ್ತಿದ್ದಾರೆ. ಇದರ ಪರಿಣಾಮ ಏನಾಗಬಹುದು? ಅದಕ್ಕೋಸ್ಕರವೇ ನಾನು ಹೇಳುತ್ತಿದ್ದೇನೆ, ಈ ಸರ್ಕಾರಕ್ಕೆ ಇವತ್ತು ಡೆವಲಪ್‌ಮೆಂಟ್ ಎಂದು ಹೇಳಿದರೆ ನಗರ ಡೆವಲಪ್‌ಮೆಂಟ್ ಅಲ್ಲ. ಈ ಸರ್ಕಾರದ ಉದ್ದೇಶ, ಲ್ಯಾಂಡ್‌ನಿಂದ ಬರತಕ್ಕಂಥ ಹಣವನ್ನು ಲೂಟಿ ಮಾಡುವುದಕ್ಕೆ ಕೈ ಹಾಕುತ್ತಿದ್ದಾರೆಯೇ ಹೊರತು, ಬೇರೆ ಯಾವ ಉದ್ದೇಶವೂ ಈ ಸರ್ಕಾರಕ್ಕೆ ಇಲ್ಲವಾಗಿದೆ. ಇವರು **acquisition** ಬಗ್ಗೆ ಕುಳಿತುಕೊಂಡು ಪೂರ್ವಾಪರ ಯೋಚನೆಯನ್ನೇ ಮಾಡುವುದಿಲ್ಲ. ಇವರು ಏನು ಮಾಡುತ್ತಿದ್ದಾರೆಂದರೆ, 4(1) ನೋಟಿಫಿಕೇಶನ್ ಹೊರಡಿಸುವುದು. ಅಲ್ಲಿಯ ರೈತರ ಹತ್ತಿರ ಹೋಗುವುದು. ಇವತ್ತು ಲ್ಯಾಂಡನ್ನು ಕ್ಲಿಯರ್ ಮಾಡಿಕೊಳ್ಳಿ, ಆ ನೋಟಿಫಿಕೇಶನ್‌ನ್ನು ವಿತ್‌ಡ್ರಾ ಮಾಡುತ್ತೇವೆಂದು ಹೇಳಿ ಈ ರೀತಿಯಾಗಿ ಮಾಡುತ್ತಿದ್ದಾರೆ. S.E.Z. ನಲ್ಲಿ ಇವತ್ತಿನ ದಿವಸ ಕೆಲವು ಕಂಪನಿಗಳನ್ನು ಅಪ್ರೂವ್ ಮಾಡುತ್ತಿದ್ದಾರೆ. ಅದು ಯಾವ ಯಾವ ಕಂನಿಗೆ ಕೊಡುತ್ತಿದ್ದಾರೆಂದರೆ, ಈ ಕೆ.ಐ.ಎ.ಡಿ.ಬಿ.ಯಿಂದ ಒಂದು ಕಂಪನಿಗೆ ಕೊಟ್ಟಿದ್ದಾರೆ ಕೆ.ಐ.ಎ.ಡಿ.ಬಿ.ಯವರು ಅಕ್ವೈರ್ ಮಾಡಿದ್ದಾರೆ. ಒಂದು ಸ್ಪೆಶಲ್ ಮೀಟಿಂಗ್‌ನಲ್ಲಿ ಅಂದರೆ High level clearance meeting ನಲ್ಲಿ ಇಟ್ಯಾಸ್ಕೊ ಕಂಪನಿಗೆ 238 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ.ಯವರು ಅಕ್ವೈರ್ ಮಾಡಿಕೊಡುತ್ತಿದ್ದಾರೆ. ಈ ಕಂಪನಿಗೆ ಕಛೇರಿ ಎಂಬುದೇ ಇಲ್ಲ. ಆ ಕಂಪನಿ ಹಿನ್ನೆಲೆ ಯಾರದೋ ಇದೆ. ಆ ಕಂಪನಿಯು Financial Statement ಅನ್ನು ನೋಡಿದರೆ, ಆ ಕಂಪನಿಯ ಅಸೆಟ್ಸ್ ಎಷ್ಟಿದೆಯೆಂದರೆ ಕೇವಲ 54,400–00 ರೂಪಾಯಿ. ಈ ಕಂಪನಿಯವರಿಗೆ ಕೆ.ಐ.ಎ.ಡಿ.ಬಿ. ಯವರು ಅಕ್ವೈರ್ ಮಾಡುತ್ತಿರತಕ್ಕಂಥದ್ದು ಸುಮಾರು 238 ಎಕರೆ

ಇರಬಹುದೇನೋ. ಇಂಥ ಕಂಪನಿಗೆ ಏತಕ್ಕೋಸ್ಕರ ಇಷ್ಟೊಂದು ರೈತರ ಜಮೀನನ್ನು ಅಕ್ವೈರ್ ಮಾಡಿಕೊಡಬೇಕು? ಏನೋ ದೊಡ್ಡ ಕಂಪನಿ ಬರುತ್ತದೆ ಅಥವಾ ಮಲ್ಟಿ ನ್ಯಾಶನಲ್ ಕಂಪನಿ ಬಂತು ಅಥವಾ ಯಾವುದಾದರೂ ಒಳ್ಳೆಯ ಹಿನ್ನೆಲೆ ಇರುವ ಕಂಪನಿ ಬರುತ್ತದೆ, ಅವರು ಕೈಗಾರಿಕೆ ಮಾಡುತ್ತಾರೆ, ಇವರಿಂದ ಅನೇಕ ಜನರಿಗೆ ಉದ್ಯೋಗ ಸಿಗುತ್ತದೆ ಎನ್ನುವುದೇನಾದರೂ ಇದ್ದರೆ ಅಂಥ ಕಂಪನಿಗೆ ಭೂಮಿಯನ್ನು ಅಕ್ವೈರ್ ಮಾಡಿಕೊಡಲಿ. ನನಗೂ ಸಂತೋಷವಾಗುತ್ತದೆ. ಏಕೆಂದರೆ ನಾವು ಕೈಗಾರಿಕೆಗಳನ್ನು ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸುವಂಥವರಲ್ಲ. ಆದರೆ ಇವರು ಮಾಡುತ್ತಿರುವುದು 350 ಎಕರೆ ಭೂಮಿಯ acquisition ಇವತ್ತಿನ ಮಾರ್ಕೆಟ್ ಬೆಲೆ ಪ್ರಕಾರ ಒಂದು ಎಕರೆಗೆ ಕನಿಷ್ಟ ಮೂರು ಕೋಟಿ ರೂಪಾಯಿಗಳಾಗುತ್ತದೆ. 350 ಎಕರೆ ಎಂದರೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು, ಎಲ್ಲವನ್ನೂ ಸೇರಿಸಿದರೆ ಕೇವಲ ಒಂದು ಲಕ್ಷ ರೂಪಾಯಿಗಳ ಅಸೆಟ್ ಹೊಂದಿರುವ ಕಂಪನಿಗೆ ಕೊಡುವುದಕ್ಕೆ ಹೊರಟಿದ್ದಾರೆಂದರೆ ಇದರ ಬಗ್ಗೆ ತನಿಖೆಯಾಗಬೇಕು. ಯಾವ ಯಾವ ಕಂಪನಿಗಳಿಗೆ ಕೆ.ಐ.ಎ.ಡಿ.ಬಿ. ಮುಖಾಂತರ ಭೂಮಿಯನ್ನು ಅಕ್ವೈರ್ ಮಾಡಿಕೊಟ್ಟಿದ್ದಾರೆ? ಆ ಕಂಪನಿಗಳ ಹಿನ್ನೆಲೆ ಏನು? ಇವರು ಬೆಂಗಳೂರು ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಾರಲ್ಲ, ಇವರ ಉದ್ದೇಶವೇನೆಂದರೆ ಭೂಮಿಯಲ್ಲಿ ಹಣವನ್ನು ಮಾಡುವುದು. ಅದು ಬಿ.ಡಿ.ಎ. ನೋಟಿಫಿಕೇಶನ್ ಮುಖಾಂತರವಿರಬಹುದು, ಬಿ.ಎಂ.ಆರ್.ಡಿ.ಎ. ಯದು ಇರಬಹುದು ಅಥವಾ ಬೇರೆಯದ್ದಿರಬಹುದು. ಇವತ್ತು ಇದೊಂದು ದಂಧೆಯಾ ಗಿಬಿಟ್ಟಿದೆ. ಈ ನಗರವನ್ನು ಹಾಳು ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಈ ನಗರದ ಬೆಳವಣಿಗೆ ಬಗ್ಗೆ ಸ್ವಲ್ಪ ನೀವೇ ಆಲೋಚನೆ ಮಾಡಿ ನೋಡಿ. ಬೆಂಗಳೂರಿನಲ್ಲಿ ಮೆಟ್ರೋಟ್ರೈನ್ ಮಾಡಬೇಕೆಂದು ಹೊರಟೆವು. ಈ ಮೆಟ್ರೋಟ್ರೈನ್ ವಿಚಾರದಲ್ಲಿ ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅವರೂ ಕೂಡ ಬಹಳ ಪ್ರಯತ್ನ ಮಾಡಿದರು. ಆಗ ಈ ಮೆಟ್ರೋಟ್ರೈನ್ ಬರಬಾರದು ಎಂದು ಹೇಳಿ ಎಷ್ಟೊಂದು ಅಡತಡೆಗಳು ಬಂತು. ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು ಕೂಡ ಅಬ್ಜೆಕ್ಟ್ ಮಾಡಿದರು. ಅದನ್ನು ಮಾಡುವುದಕ್ಕೇ ಬಿಡಲಿಲ್ಲ. ಕಡೆಯವರೆವಿಗೂ ತೊಂದರೆಯನ್ನೇ ಕೊಟ್ಟುಕೊಂಡು ಬಂದರು. ಈಗ ಕುಮಾರಸ್ವಾಮಿಗಳು ಮುಖ್ಯಮಂತ್ರಿಗಳಾದ ತಕ್ಷಣ ಮೆಟ್ರೋಟ್ರೈನ್ ಆಗಲಿ ಎಂದು ಅವರೇ ಒಪ್ಪಿಕೊಂಡುಬಿಟ್ಟರು. ಒಂದು

ಚಕಾರ ಎತ್ತಲಿಲ್ಲ. ಏಕೆ ಈ ರೀತಿಯಲ್ಲಿ ಮಾಡಿದ್ದು? ಇದರ ಉದ್ದೇಶವೇನು? ಇವತ್ತೂ ಕೂಡ ಮೆಟ್ರೋಟ್ರೈನ್ ಕೆಲಸ ಎಲ್ಲಿ ಸರಿಯಾದ ರೀತಿಯಲ್ಲಿ ಪ್ರಾರಂಭವಾಗಿದೆ? ಏಳು ಸಾವಿರ ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ಎಷ್ಟು ತ್ವರಿತಗತಿಯಲ್ಲಿ ಮಾಡಬೇಕಾಗಿತ್ತು? ಇವೊತ್ತಿಗೂ ಕೂಡ ಇನ್ನೂ ಪ್ರಾರಂಭ ಮಾಡಿಲ್ಲ. ಈ ಮೆಟ್ರೋಟ್ರೈನ್ ವಿಚಾರದಲ್ಲಿಯೂ ಕೂಡ ಅವರು ಆಸಕ್ತಿಯನ್ನು ತೋರಿಸುತ್ತಿಲ್ಲ. ಬೆಂಗಳೂರಿನಲ್ಲಿ ಟ್ರಾಫಿಕ್ ಮ್ಯಾನೇಜ್‌ಮೆಂಟ್ ವಿಚಾರದಲ್ಲಿ ಆಸಕ್ತಿ ವಹಿಸುತ್ತಿಲ್ಲ. ಹಿಂದಿನ ಬಜೆಟ್‌ನಲ್ಲಿ ಟ್ರಾಫಿಕ್ ಮ್ಯಾನೇಜ್‌ಮೆಂಟ್ ವಿಚಾರದಲ್ಲಿ ಒಂದು ಪ್ರೋಗ್ರಾಂ ಕೊಟ್ಟು ಬಿ-ಟ್ರ್ಯಾಕ್ ಯೋಜನೆ ಎಂದು ಹೇಳಿ ಅದಕ್ಕೆ 350 ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆ ಎಂದಿದ್ದಾರೆ. 44 ಕೋಟಿ ರೂಪಾಯಿಗಳನ್ನು ಎಲ್ಲಿ ಖರ್ಚು ಮಾಡಿದ್ದಾರೋ ಗೊತ್ತಿಲ್ಲ. ಎಲ್ಲೂ ಕಾಣುತ್ತಿಲ್ಲ. ರಸ್ತೆಗಳಲ್ಲಿ ಕೋನ್‌ಗಳೆಂದು ಹಾಕುತ್ತಿದ್ದಾರೆ. ಇಪ್ಪತ್ತು ಸಾವಿರ ಕೋನ್‌ಗಳನ್ನು ಪರ್ಚೇಸ್ ಮಾಡಿದ್ದಾರೆ. ಅದೆಲ್ಲಾ ಎಲ್ಲಾ ಕಡೆ ಒಡೆದುಹೋಗುತ್ತಿದೆ. ಗಡಿ ಹೋದರೆ ಅದು ಅಲ್ಲಿಯೇ ಮುರಿದುಹೋಗುತ್ತದೆ. ಇವರಿಗೆ ಫೈನಾನ್‌ಶಿಯಲ್ ಮ್ಯಾನೇಜ್‌ಮೆಂಟ್ ಬಗ್ಗೆಯಾಗಲಿ ಅಥವಾ ಯಾವುದರ ಮೇಲೆ ಖರ್ಚು ಮಾಡಬೇಕು, ಎಲ್ಲಿ ಅದರ ಇನ್ಸ್ಟಾಲ್‌ಮೆಂಟ್ ಆಗಬೇಕೋ ಅದೂ ಕೂಡ ಆಗುತ್ತಿಲ್ಲ. ಯಾರೂ ಹೇಳುವವರು ಕೇಳುವವರು ಇಲ್ಲ. ಅಧಿಕಾರಿಗಳದ್ದೇ ಸಂಪೂರ್ಣ ಜವಾಬ್ದಾರಿಯಾಗಿದೆ. ಮಂತ್ರಿಗಳೂ ಕೂಡ ಹೇಳುವುದಕ್ಕಾಗುತ್ತಿಲ್ಲ. ಉಸ್ತುವಾರಿ ಸಚಿವರಾದ ಮಾನ್ಯ ಅಶೋಕ್‌ರವರು ಯಾವಾಗಲಾದರೊಮ್ಮೆ ಒಂದು ಸಭೆ ಕರೆಯುತ್ತಾರೆ. ಮೀಟಿಂಗ್ ಮಾಡಿ ಮುಗಿಸುತ್ತಾರೆ ಅಷ್ಟೆ. ಆದುದರಿಂದ JNNURM ಯೋಜನೆಗಳ ಬಗ್ಗೆ ಇರಬಹುದು, ಬೆಂಗಳೂರಿನ ಅಭಿವೃದ್ಧಿ ವಿಚಾರದಲ್ಲಿ ಪೂರ್ವಯೋಜಿತ ಯೋಜನೆಗಳನ್ನು ಹಾಕಿಕೊಂಡು ಕೆಲಸವನ್ನು ಮಾಡುತ್ತಿಲ್ಲ. ಕೇವಲ ಲ್ಯಾಂಡ್ ಎಲ್ಲಿದೆ, ಲ್ಯಾಂಡ್ ವ್ಯಾಲ್ಯು ಎಷ್ಟಿದೆ, ಎಷ್ಟು ಹಣ ಮಾಡಬಹುದು ಎಂಬುದೇ ಇವರ ಉದ್ದೇಶವಾಗಿದೆ. ಆದುದರಿಂದ ಇವರ ಕಾಲದಲ್ಲಿ ಖಂಡಿತವಾಗಿಯೂ ಬೆಂಗಳೂರು ನಗರದ ಬೆಳವಣಿಗೆಯಾ-ಗುತ್ತದೆನ್ನುವ ನಂಬಿಕೆ ನನಗಿಲ್ಲ. ಇನ್ನು ಬೆಂಗಳೂರು ನಗರದ ಬಗ್ಗೆ ಹೊರತುಪಡಿಸಿ ಒಂದೆರಡು ಇಲಾಖೆಗಳ ಬಗ್ಗೆ ಮಾತನಾಡಿ ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ.

Education Department ಬಗ್ಗೆ ಹೇಳುವುದಾದರೆ, ಇವತ್ತು ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಸಾವಿರಾರು ಇವೆ. ಆದರೆ ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿ ಮಾಹಿತಿ ಏನಿದೆ ಎಂದರೆ ಒಟ್ಟು 11,063 ಪ್ರಾಥಮಿಕ ಶಾಲೆಗಳು 1,091 ಪ್ರೌಢಶಾಲೆಗಳಿಗೆ ಶೌಚಾಲಯ ಹಾಗೂ 10,611 ಪ್ರಾಥಮಿಕ ಮತ್ತು 1,105 ಪ್ರೌಢಶಾಲೆಗಳಿಗೆ ಕುಡಿಯುವ ನೀರಿನ ಕೊರತೆ ಇರುತ್ತದೆ. ನಾನು ಈ ಒಂದು ಬೇಡಿಕೆ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಏನು ಮಾಡುತ್ತೇನೆಂದರೆ ನೀವು ಈಗ ಹೊಸ ಕಾಲೇಜುಗಳನ್ನು ಕಟ್ಟುತ್ತಿದ್ದೀರಿ, ಹೊಸ High School ಗಳನ್ನು sanction ಮಾಡಿದ್ದೀರಿ. ಹಿಂದೆಂದೂ ಕೂಡ ಆಗದಿದ್ದಂತಹ ರೀತಿಯಲ್ಲಿ ತಾವು ಅವುಗಳನ್ನು ಪ್ರಾರಂಭ ಮಾಡುತ್ತಿದ್ದೀರಿ. ಆದರೆ ನನ್ನ ಬೇಡಿಕೆ ಏನೆಂದರೆ ಈಗ ಇರತಕ್ಕಂಥ ಪ್ರತಿಯೊಂದು ಶಾಲೆಗಳಿಗೆ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಂತಹ ಒಂದು ಯೋಜನೆಯನ್ನು ಈ ಸರ್ಕಾರ ಹಾಕಿಕೊಳ್ಳಬೇಕು. ಶಾಲೆಗಳಲ್ಲಿ ಹೆಣ್ಣುಮಕ್ಕಳು ಮತ್ತು ಚಿಕ್ಕ ಮಕ್ಕಳಿಗೆ ಶೌಚಾಲಯ ವ್ಯವಸ್ಥೆ ಇಲ್ಲದಿರುವುದು ಬಹಳ ಶೋಚನೀಯವಾದಂತಹ ಪರಿಸ್ಥಿತಿಯಾಗಿದೆ. ಅದನ್ನು ಸರಿ ಮಾಡುವಂತಹ ಕೆಲಸವನ್ನು ಮಾನ್ಯ ಶಿಕ್ಷಣ ಸಚಿವರು ಮಾಡಬೇಕು. ನಮ್ಮ ಆರ್ಥಿಕ ಮಂತ್ರಿಗಳು ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಯೋಜನೆಯನ್ನು ಹಾಕಿಕೊಂಡು, ಹೊಸದಾಗಿ ಕಟ್ಟಡವನ್ನು ಮಾಡುವುದಕ್ಕಿಂತ ಹೆಚ್ಚಾಗಿ ಈಗಾಗಲೇ ಇರುವುದನ್ನು ಸರಿ ಮಾಡಿಕೊಳ್ಳೋಣ. ಇವತ್ತು ಅನೇಕ ಶಾಲೆಗಳಲ್ಲಿ ಕುಡಿಯುವ ನೀರಿಲ್ಲ ಹಾಗೂ ಶೌಚಾಲಯವಿಲ್ಲ. ಆದುದರಿಂದ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಮಕ್ಕಳೆಲ್ಲಾ ಎಲ್ಲಿಗೆ ಹೋಗಬೇಕು? ಆದುದರಿಂದ ತಾವು ಇದನ್ನು ತಮ್ಮ ಕಾರ್ಯಕ್ರಮದಲ್ಲಿ ಹಾಕಿಕೊಂಡು ಈ ವರ್ಷದಲ್ಲಿ ಆದಷ್ಟುಮಟ್ಟಿಗೆ ಎಲ್ಲಾ ಕಡೆ ಕೂಡ ಮಾಡುವಂತಹ ಕೆಲಸವನ್ನು ಮಾಡಬೇಕು. ಅದರ ಮುಖಾಂತರ ನಾವು ಶಿಕ್ಷಣಕ್ಕೆ ಒತ್ತು ಕೊಟ್ಟ ಹಾಗೆ ಆಗುತ್ತದೆ. ಅದರ ಜೊತೆಗೆ ನಮ್ಮಲ್ಲಿರುವ ಕೆಲವೇ ಕೆಲವು ಖಾಸಗಿ ಸರ್ಕಾರಿ ಉದ್ದಿಮೆಗಳು ಜಾಸ್ತಿ ಇಲ್ಲ. ನಾನು ಇವರನ್ನು blame ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಅನೇಕ ಸರ್ಕಾರಗಳು ಬಂದು ಹೋಗಿವೆ. Public Sector Undertakings ಏನಿವೆ, ಅವುಗಳ ಬಗ್ಗೆ ಯಾರೂ ಕೂಡ ಅಷ್ಟಾಗಿ ಗಮನವನ್ನು ಕೊಡುತ್ತಿರಲಿಲ್ಲ. ಅಲ್ಲಿ ಏನೋ ಅವುಗಳು ನಡೆಯುತ್ತಿತ್ತು. ಅಲ್ಲಿಗೆ

ಯಾರೋ ಅಧಿಕಾರಿಗಳನ್ನು ಹಾಕುತ್ತಿದ್ದರು. ಅಲ್ಲಿ ಆ ಅಧಿಕಾರಿಗಳು ಯಾವ ರೀತಿ ಮಾಡುತ್ತಿದ್ದರೋ, ಆ ರೀತಿ ನಡೆದುಕೊಂಡು ಹೋಗುತ್ತಿತ್ತು. ಒಳ್ಳೆಯ ಅಧಿಕಾರಿ ಇದ್ದರೆ ಅಲ್ಲಿ ಚೆನ್ನಾಗಿ ಕೆಲಸವನ್ನು ಮಾಡುತ್ತಾನೆ. ನಂತರ ಇನ್ನೊಬ್ಬ ಅಧಿಕಾರಿ ಬಂದರೆ ಅವನು ಮಾಡಿದ ಒಳ್ಳೆಯ ಕೆಲಸವೆಲ್ಲಾ ನೀರು ಪಾಲಾಗುತ್ತಿತ್ತು. ಈಗ ನಮ್ಮಲ್ಲಿ ಕೆಲವೇ ಕೆಲವು ಸಂಸ್ಥೆಗಳಾದ KAVIKA, Mysore Electrical Industries, Mysore Paper Mills, NGEF, Krnataka Soaps and Detergents Limited ಇವೆ. ಇವೆಲ್ಲಾ companyಗಳ ಬಗ್ಗೆ ನಾವು ಹೇಳುವುದೇನೆಂದರೆ, ಇಲ್ಲಿ ನಮ್ಮ ಕೈಗಾರಿಕಾ ಸಚಿವರಾದ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಇಲ್ಲಿದ್ದಾರೆ. ಅವರು ಕೇವಲ land acquire ಮಾಡುವುದು ಬಿಟ್ಟುಬಿಟ್ಟು, ಈ ಕಾರ್ಖಾನೆಗಳಿಗೆ ಒಳ್ಳೆಯ ಅಧಿಕಾರಿಗಳನ್ನು ಹಾಕಿ, ಅವರಿಗೆ ಜವಾಬ್ದಾರಿ ಕೊಡಿ. ಇವುಗಳನ್ನು ಚೆನ್ನಾಗಿ ಮಾಡುವುದಕ್ಕೆ ಅವಕಾಶವನ್ನು ಕೊಡಿ. ಇವತ್ತು ಇವುಗಳು ಲಾಭ ಮಾಡುವಂತಹ ಪರಿಸ್ಥಿತಿಯಲ್ಲಿ ಎಲ್ಲಾ ಕಾರ್ಖಾನೆಗಳಲ್ಲಿ ಕೂಡ ಇದೆ, ಹಾಗೂ ಮಾಡುತ್ತಿದೆ. ಅದನ್ನು ನಾವು ಉಳಿಸಿಕೊಳ್ಳಬೇಕು.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅವರು ಇಷ್ಟು ಮಾತನಾಡುತ್ತಿದ್ದಾರೆ, ಒಬ್ಬರಾದರೂ note ಮಾಡಿಕೊಳ್ಳುತ್ತಿದ್ದಾರ? ನೀವೇ ಹೇಳಿ ಯಾರಾದರೂ note ಮಾಡಿಕೊಳ್ಳುತ್ತಿದ್ದಾರೆ ಹೇಳಿ. Concerned Ministers ಕೂಡ ಇಲ್ಲ. ಸುಮ್ಮನೆ ಏಕೆ ಮಾತನಾಡಬೇಕು?

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, Mysore Lamps ಅಂತಹ Companyಯನ್ನು ನಾವು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ ಅದಕ್ಕಿಂತ ದುರ್ದೈವ ಏನಿದೆ? ಇವತ್ತು Mysore Lamps ನಂತಹ Company ಮುಚ್ಚಿಹೋಗುತ್ತದೆ ಎಂದರೆ ನಮಗೆ ತಲೆ ತಗ್ಗಿಸುವಂತಹ ವಿಚಾರ. ಇವತ್ತು ಕೂಡ ಆ ಹೆಸರಿಗೆ brand value ಇದೆ. ಇವತ್ತು ಅನೇಕ ಜನ Mysore Lamps ಹೆಸರಿನಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ನಮ್ಮ ಸ್ವಂತ Companyಯನ್ನು ನಡೆಸುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಈಗ ಕೆಲವೇ ಕೆಲವು ಉದ್ದಿಮೆಗಳು ಇವೆ. ಸರ್ಕಾರ ದಯವಿಟ್ಟು ಅದರ ಬಗ್ಗೆ ಚಿಂತನೆ ಮಾಡಿ, ಅವುಗಳನ್ನು ಬೆಳೆಸತಕ್ಕಂಥ ಕೆಲಸವನ್ನು ಮಾಡಿ. ಇವತ್ತು ರಾಷ್ಟ್ರದಲ್ಲಿ Pubilc Sector Undertakings ಬೆಳೆಯುತ್ತಿವೆ. ONGC, BEML, BEL,

BHEL, HAL ಇರಬಹುದು, ಇವುಗಳು ನಮ್ಮ ರಾಷ್ಟ್ರದ ಆಸ್ತಿ ಸಂಪತ್ತಾಗಿದೆ. ಅದೇ ರೀತಿ ಇಲ್ಲಿ ಇರುವಂತಹ ಸಮಸ್ಥೆಗಳ ಬಗ್ಗೆ ನಾವು ಗಮನವನ್ನು ಕೊಡಬೇಕಾಗಿದೆ. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ಹಾಕಿ. ಆ ಅಧಿಕಾರಿಗಳಿಗೆ Freedom ಕೂಡ ಕೊಡಬೇಕು. ಅವರಿಗೆ ನೀವು ಒಳ್ಳೆಯ performance ಕೊಡಿ ಎಂದು ಹೇಳಿ. ಒಳ್ಳೆಯ result ಕೊಡಿ ಎಂದು ಹೇಳಿ ಆ result ಮೇಲೆ benefit ಸಿಗುವಂತೆ ಮಾಡಿಕೊಟ್ಟರೆ ಅವರೂ ಕೂಡ ಕೆಲಸವನ್ನು ಮಾಡುತ್ತಾರೆ. ಯಾರಾದರೂ ಒಬ್ಬರು ಅಧಿಕಾರಿಗಳನ್ನು ಹಾಕಿದರೆ, ಅಲ್ಲಿ ಅವರು ಐದು ವರ್ಷ ಅಲ್ಲಿಯೇ ಇರಬೇಕು. ಇಂತಹ ಕಾರ್ಖಾನೆಗಳಿಗೆ ಅಧಿಕಾರಿಗಳನ್ನು ಹಾಕಿದರೆ ಅದು ಒಂದು ರೀತಿ punishment posting ಆಗಿದೆ. ಇವತ್ತು MEI is a profit making organization. ಅದರ CMD ಯಾರಿದ್ದಾರೆ, ಅವರಿಗೆ ಆಸಕ್ತಿ ಇಲ್ಲ. ಅಲ್ಲಿ ಅವರನ್ನು ಏನೋ ಹಾಕಿಬಿಟ್ಟಿದ್ದೀರಿ, ಕೆಲಸ ಮಾಡುತ್ತಿದ್ದಾರೆಯೇ ಹೊರತು Companyಯನ್ನು ಉಳಿಸಬೇಕು, ಬೆಳೆಸಬೇಕು, ನಡೆಸಬೇಕು ಎನ್ನುವಂತಹ ಆಸಕ್ತಿ ಅವರಿಗೆ ಇಲ್ಲ. ಈ ರೀತಿಯಾಗಿ ಎಲ್ಲಾ ಕಡೆ ಇದೆ. ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಇದರ ಬಗ್ಗೆ ಗಮನ ಕೊಡಲಿ. ಬೆಂಗಳೂರು ಸುತ್ತಮುತ್ತ ಅಭಿವೃದ್ಧಿ ಮಾಡುವುದು ಅಷ್ಟು ಕಷ್ಟದ ಕೆಲಸ ಅಲ್ಲ. ನೀವು ಇಲ್ಲಿ ಜಮೀನು ಕೊಡುತ್ತೇವೆಂದು ಹೇಳಿದರೆ ಯಾರು ಬೇಕಾದರೂ ಬರುತ್ತಾರೆ. ಬೆಂಗಳೂರಿನಲ್ಲಿ ಅಭಿವೃದ್ಧಿ ಮಾಡಬೇಕೆಂದರೆ ಇದಕ್ಕೆ ಏನು ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಸರಿಯಾಗಿ ಯೋಜನೆಯನ್ನು ಹಾಕಿಕೊಂಡು ಅವಕಾಶವನ್ನು ಮಾಡಿಕೊಡಬೇಕು. ಇವತ್ತು ಕೈಗಾರಿಕಾ ಮಂತ್ರಿಗಳು ಬೇರೆ ಕಡೆ ಅಭಿವೃದ್ಧಿ ಮಾಡಿಸಿದರೆ appreciate ಮಾಡುತ್ತೇವೆ. ಅದು ರಾಯಚೂರು, ದಾವಣಗೆರೆ ಹಾಗೂ ಧಾರವಾಡ ಇರಬಹುದು, ಅಲ್ಲಿ ಬೇಕಾದರೆ ಅವರು ಅವರ efficiency ತೋರಿಸಲಿ. ಬೆಂಗಳೂರು ಸುತ್ತಮುತ್ತ ಅಭಿವೃದ್ಧಿ ತೋರಿಸುವಂತಹ ಅಗತ್ಯವೂ ಇಲ್ಲ. ಇದು ಬೇಕಾಗಿಯೂ ಇಲ್ಲ. ಆದುದರಿಂದ ಈ ಒಂದು ಒತ್ತಾಯವನ್ನು ಮಾಡುತ್ತಾ, ನಾನು ಈ ಬೇಡಿಕೆ ಏನಿದೆ ಇದು ರಾಜ್ಯವನ್ನು ದಿಕ್ಕು ತಪ್ಪಿಸುವಂತಹ ಒಂದು ಬಜೆಟ್ ಆಗಿದೆ. ನಮ್ಮ ರಾಜ್ಯಕ್ಕೆ ಹಾಗೂ ಬೆಂಗಳೂರು ನಗರಕ್ಕೂ ಕೂಡ ಈ ಸರ್ಕಾರ ಅನ್ಯಾಯ ಮಾಡುತ್ತಿದೆ. ಆದುದರಿಂದ ಈ ಬೇಡಿಕೆಯನ್ನು ಪಾಸ್ ಮಾಡುವುದಕ್ಕೆ ಅರ್ಹವಲ್ಲ ಎಂದು ಹೇಳಿ, ಮಾನ್ಯ ಅಧ್ಯಕ್ಷರೆ, ನನಗೆ

ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಆರಗ ಜ್ಞಾನೇಂದ್ರರವರೇ ತಾವು 15 ನಿಮಿಷ ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ಭಾಗದವರು ಯಾರೂ ಮಾತನಾಡಿಲ್ಲ.

ಅಧ್ಯಕ್ಷರು : ನಾನು ಹೇಳುವುದು ಏನೆಂದರೆ ನಿಮಗೆ ಸರ್ಕಾರದಿಂದ ಉತ್ತರ ಬೇಕಾಗಿಲ್ಲವೆಂದರೆ ನೀವು ಚರ್ಚೆ ಮಾಡಿ ಮನೆಗೆ ಹೋಗಿಬಿಡಿ, ಕೈ ಎತ್ತಿ, ಉತ್ತರ ಬೇಕು ಅಂದರೆ ಬೇಗ ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಹಕ್ಕನ್ನು ಎತ್ತಿ ಹಿಡಿಯಬೇಕಾದವರು. ನಾವು ವಿರೋಧ ಪಕ್ಷದಲ್ಲಿಯಾದರೂ ಕುಳಿತುಕೊಳ್ಳಲಿಲ್ಲ. ಇಲ್ಲಿ ಕುಳಿತುಕೊಂಡಿರುವಂತಹ ಶಾಸಕರಿಗೆ ಅವಕಾಶವೇ ಇಲ್ಲ.

ಅಧ್ಯಕ್ಷರು : ಆಯಿತು, ಈಗ 15 ನಿಮಿಷ ಸಮಯ ಕೊಟ್ಟಿದ್ದೇನೆ, ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ : ತಾವು ಒಳಗೆ ಬಂದ ಕೂಡಲೇ ನಾವು ಒಳಗೆ ಬರುತ್ತೇವೆ, ತಾವು ಹೊರಗೆ ಹೋದ ಕೂಡಲೇ ನಾವೂ ಹೋಗುತ್ತೇವೆ. ನಮ್ಮ ದುರ್ಗತಿ ಏನೆಂದರೆ ಬಹಳ ಕಷ್ಟ ಇದೆ.

ಅಧ್ಯಕ್ಷರು : ದುರ್ಗತಿ ಎಂದರೆ ಈ ಕಡೆಗೆ ಬಂದುಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಷ್ಟು ಕಷ್ಟದಲ್ಲಿ ಏಕೆ ಇರುತ್ತೀರಾ? ಈ ಕಡೆ ಬನ್ನಿ.

ಶ್ರೀ ಆರಗ ಜ್ಞಾನೇಂದ್ರ : ನಿಮ್ಮ ಜೊತೆಯಲ್ಲಿ ಆ ಕಡೆ ಒಂದು ಬಾರಿ ಕುಳಿತುಕೊಂಡಿದ್ದೆವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಜೊತೆಯಲ್ಲಿ ಕುಳಿತುಕೊಳ್ಳುವುದು ಬೇರೆ, merge ಆಗುವುದು ಬೇರೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ನೀವು ಸುಮಾರು ಜನರನ್ನು merge ಮಾಡಿಕೊಂಡು ದಾರಿ ಮೇಲೆ ಹಾಕಿಬಿಟ್ಟಿದೀರಿ. ನಾವು ನಿಮ್ಮ ಹತ್ತಿರ ಬರುವ ಹಾಗೇ ಇಲ್ಲ. ಈ ರಾಜ್ಯದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಒಂದು ರಾಜಕೀಯ ಸ್ಥಿತ್ಯಂತರದ ಸಂದರ್ಭದಲ್ಲಿ ಈ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ

ಬಂದಿತು. ಈ ಸರ್ಕಾರ ಬಂದನಂತರ ಎರಡನೇ ಬಜೆಟ್ ಅನ್ನು ಶಾಸನಸಭೆಯಲ್ಲಿ ಮಂಡನೆ ಮಾಡುತ್ತಿದೆ. ಮೊದಲನೇ ಬಜೆಟ್‌ನ್ನು ಮಂಡನೆ ಮಾಡಿದಾಗ ಈ ಸರ್ಕಾರಕ್ಕೆ ಯೋಚನೆ ಮಾಡುವುದಕ್ಕೆ ಹೆಚ್ಚು ದಿನ ಅವಕಾಶಗಳು ಇರಲಿಲ್ಲ. ಅದು ಮಂಡನೆಯಾಯಿತು. ಎರಡನೇ ಸಂದರ್ಭದಲ್ಲಿ ಮಂಡನೆ ಮಾಡಿರುವಂತಹ ಬಜೆಟ್ ಈ ಕರ್ನಾಟಕ ರಾಜ್ಯದ ಜನರ ದೃಷ್ಟಿಯಿಂದ ಏನಾಗಿದೆ, ಹೇಗಾಗಿದೆ ಎನ್ನುವ ವಿಮರ್ಶೆ ಅತ್ಯಂತ ಚೆನ್ನಾಗಿ ನಡೆಯಬೇಕಾಗಿತ್ತು. ನನಗೆ ಅನಿಸುತ್ತದೆ ನಮ್ಮ ಎದುರುಗಡೆ ಕುಳಿತಿರುವಂತಹ ಅನೇಕ ಘಟಾನುಘಟಿಗಳು ಆಡಳಿತದಲ್ಲಿ ಅತ್ಯಂತ ಪರಿಪಕ್ವವಾಗಿ ಸಾರ್ವಜನಿಕ ಜೀವನದಲ್ಲಿ ಬಂದಿರುವವರು. ಅವರು ಪಕ್ಷ ಮೀರಿ ಆಲೋಚನೆ ಮಾಡಿ ಈ ಒಂದು ಬಜೆಟ್ ಅನ್ನು ವಿಮರ್ಶೆ ಮಾಡಬೇಕಾಗಿತ್ತು ಎಂದು ನನ್ನ ಅಪೇಕ್ಷೆ. ಏಕೆಂದರೆ ಪಕ್ಷದ ಚೌಕಟ್ಟು ಬೇರೆ ಇದೆ. ಅದೊಂದು ಇತಿಮಿತಿಯೊಳಗೆ ಇರಬೇಕಾಗುತ್ತದೆ. ಅದನ್ನೂ ಮೀರಿ ಅನೇಕ ಸಲಹೆಗಳನ್ನು ಕೊಡಬೇಕು, ಅನೇಕ ಮೆಚ್ಚುಗೆ ಮಾತುಗಳನ್ನಾಡಬೇಕು ಹಾಗೂ ಅನೇಕ ಟೀಕೆಗಳನ್ನು ಕೂಡ ಮಾಡಬೇಕಾಗುತ್ತದೆ. ನಾವು ಅಲ್ಲಿ ಇದ್ದಾಗ ಮಾಡಿದ್ದೆವು.

ಮಾನ್ಯ ರಮೇಶ್‌ಕುಮಾರ್‌ರವರು ನಿನ್ನೆ ಬಹಳ ಚೆನ್ನಾಗಿ ಹೇಳಿದರು. ಆ ಭಾಗದಲ್ಲಿ ಕುಳಿತಾಗ ಟೀಕೆ ಮಾಡುವುದು, ಈ ಭಾಗದಲ್ಲಿ ಕುಳಿತಾಗ ಸಮರ್ಥನೆ ಮಾಡಿಕೊಳ್ಳುವಂಥಾದ್ದೆಂದು ಹೇಳಿದರು. ಇಲ್ಲಿ ಇದಕ್ಕಿಂತ ಮಿಕ್ಕಿದ ಆಲೋಚನೆಗಳು ನಡೆಯಬೇಕಾಗುತ್ತದೆ. ಈ ನಿಟ್ಟಿನಲ್ಲಿ ಈ ಸರ್ಕಾರದ ಬಜೆಟ್ ಅನ್ನು, ನಾನು ಈ ಸಂದರ್ಭದಲ್ಲಿ ಹಾರ್ದಿಕವಾಗಿ ಸ್ವಾಗತ ಮಾಡುತ್ತೇನೆ. ಇದರಲ್ಲಿ ನನ್ನ ಪಕ್ಷವು ಆಡಳಿತದ ಒಂದು ಅಂಗವೆನ್ನುವ ಕಾರಣಕ್ಕಾಗಿ ಅಲ್ಲ. ಆದರೆ ಆಮೂಲಾಗ್ರವಾಗಿ ಪರಿಶೀಲನೆ ಮಾಡಿದಾಗ, ಯಾವ ಒಂದು ಆಯವ್ಯಯವು ಇಷ್ಟು ವರ್ಷಗಳಲ್ಲಿ ಸಾರ್ವಜನಿಕ ಬದುಕಿಗೆ ಏನೂ ಕೂಡ ವ್ಯತ್ಯಾಸವನ್ನು ಮಾಡಿರಲಿಲ್ಲ. ಸಾರ್ವಜನಿಕ ಬದುಕಿಗೆ ಒಂದು ಸ್ಪರ್ಶವನ್ನು ಮಾಡಿರಲೇ ಇಲ್ಲ. ಪ್ರಥಮ ಬಾರಿಗೆ ಈ ಬಜೆಟ್ ಜನ ಸಾಮಾನ್ಯರ ಬದುಕಿಗೆ ಒಂದು ಸ್ಪರ್ಶ ಮಾಡಿದೆ. ನಮ್ಮದು ಒಂದು ಸರ್ಕಾರವಿದೆ. ನನ್ನ ಸರ್ಕಾರ ನನಗೆ ಏನನ್ನೋ ಕೊಟ್ಟಿದೆ, ಎನ್ನುವಂಥಹ ಭಾವನೆ ಪ್ರಥಮ ಬಾರಿಗೆ ನಿರ್ಮಾಣವಾಯಿತು. ಅದು ಕ್ಷೌರಿಕ ಇರಬಹುದು, ಅಥವಾ ದೋಬಿ ಇರಬಹುದು, ಅದು ಕೃಷಿ ಕಾರ್ಮಿಕನಿರಬಹುದು, ಹೀಗೆ ಅನ್ಯ ವರ್ಗಗಳನ್ನು ಸ್ಪರ್ಶ ಮಾಡುವಂಥಾ

ಕೆಲಸವನ್ನು ಈ ಬಜೆಟ್ ಮಾಡಿತು. ಇದು ಎಷ್ಟು ದೊಡ್ಡ ಬಜೆಟ್, ಎಷ್ಟು ಚಿಕ್ಕ ಬಜೆಟ್, ಎಷ್ಟು ಗಾತ್ರದಲ್ಲಿದೆ, ಎನ್ನುವುದಕ್ಕಿಂತ ಇದು ಪ್ರಥಮ ಬಾರಿಗೆ ಜನಪರವಾಗಿರುವಂಥಹ ಬಜೆಟ್ ಆಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆತ್ಮ ಸಾಕ್ಷಿಯಾಗಿ ಹೇಳಿ.

ಶ್ರೀ ಆರಗ ಜ್ಞಾನೇಂದ್ರ : ನಾನು ಹೇಳುತ್ತೇನೆ. ತಾವು ಕೂಡ ಮಾತನಾಡುವಂಥಾ ಸಂದರ್ಭದಲ್ಲಿ ನಾನು ನೋಡಿದೆ. ನೀವು ಆತ್ಮ ಸಾಕ್ಷಿಗೆ ವಿರುದ್ಧವಾಗಿ ಮಾತನಾಡಿದ್ದೀರೇ ಹೊರತು ಸರಿಯಾದ ರೀತಿಯಲ್ಲಿ ಮಾತನಾಡಿದ್ದು ನನಗೆ ಗೋಚರವಾಗಲಿಲ್ಲ. ನೀವು ತಿಣುಕಾಡುತ್ತಿದ್ದಿರಿ. ನಿಮ್ಮ ಹತ್ತಿರ ಟೀಕೆ ಮಾಡುವುದಕ್ಕೆ ಪಾಯಿಂಟ್ಸ್.............

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಟೀಕೆ ಮಾಡಬೇಕೆಂದು ಮಾಡಲಿಲ್ಲ. ನೀವು ಪ್ರಿಂಟ್ ಮಾಡಿ ಕೊಟ್ಟಂಥಾ figures, ನೀವು ಖರ್ಚು ಮಾಡಿದಂಥಹ ಹಣ, ನಿಮ್ಮ ಟ್ರೆಜರಿಯಿಂದ ಬಿಡುಗಡೆಯಾದಂಥ LOC, ಅದನ್ನು ಮಾತ್ರ ನಿಮ್ಮ ಮುಂದೆ ಇಟ್ಟಿದ್ದೆ, ಹೊರತಾಗಿ, ಅದನ್ನು ಬಿಟ್ಟು ಬೇರೆ ಏನೂ ಹೇಳಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ತಮ್ಮ ಭಾಷಣದಲ್ಲಿ ಹೆಚ್ಚು ಕೇಳಿ ಬಂದದ್ದು, ಯಾವ ಭಾಗಕ್ಕೆ ಎಷ್ಟು ಹಣ ಹೋಗಿದೆಯೆಂಬ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿದ್ದೀರಿ. ಆದರೆ ಸಮಗ್ರವಾಗಿ ವಿಮರ್ಶೆ ಮಾಡುತ್ತೀರೆಂದು ನಾನು ಭಾವನೆ ಮಾಡಿದ್ದೆ. ತಮ್ಮಂಥ ಹಿರಿಯರು ಇದನ್ನು ಮಾಡುವಂಥ ಅವಶ್ಯಕತೆ ಇದೆ. ತಾವು ಕೂಡ ಅನೇಕ ಸಾರಿ ಬಜೆಟ್ ಅನ್ನು ಮಂಡನೆ ಮಾಡಿದ್ದೀರಿ, ಆಡಳಿತವನ್ನು ಮಾಡುತ್ತಾ ಇದ್ದೀರಿ. ನಾನು ಹೇಳಬೇಕಾಗಿರುವಂಥಾದ್ದು ಏನೆಂದರೆ, ಎಲ್ಲಾ ಇಲಾಖೆಗಳಲ್ಲೂ ಸಿಬ್ಬಂದಿ ಕೊರತೆ ಇತ್ತು. ನಮ್ಮ ಸರ್ಕಾರ ನಡೆಯುತ್ತಿತ್ತು. ಶಾಲೆಗೆ ನಮ್ಮ ಮಕ್ಕಳನ್ನು ಕಳುಹಿಸಿದರೆ, ಮೇಸ್ಟ್ರು ಇಲ್ಲ, ಶಾಲೆಗಳು ದೇವರೇ ಇಲ್ಲದ ಗುಡಿಗಳಾಗಿದ್ದವು. ನಮ್ಮ ತಾಲ್ಲೂಕು ಕಚೇರಿಗೆ ಜನರು ಹೋದರೆ, ಅಲ್ಲಿ ಗುಮಾಸ್ತರಿಂದ ಹಿಡಿದು ತಹಶೀಲ್ದಾರರವರೆಗೆ ಯಾರೂ ಇಲ್ಲ. ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿಗಳಿಲ್ಲ, ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ. ಇಂಥಾ ಅನೇಕ ಇಲ್ಲಗಳ ನಡುವೆ ಇಷ್ಟು ವರ್ಷಗಳು ನಾವು ಆಡಳಿತವನ್ನು ನಡೆಸಿದೆವು. ನಾವು ಬಜೆಟ್‌ನಲ್ಲಿ ಇಷ್ಟು ಹಣವೆಂದು ಅಲೊಕೇಷನ್ ಅನ್ನು ಮಾಡುತ್ತೇವೆ. ಇದರಲ್ಲಿ ಉಳಿದಿರುವಂಥಾದ್ದನ್ನು ಬೇರೆಯದಕ್ಕೆ ಉಪಯೋಗಿಸುತ್ತಿದ್ದೇನೆ.

ಆದರೆ ಪ್ರಥಮ ಬಾರಿಗೆ ನನಗೆ ಆಶ್ಚರ್ಯವಾಯಿತು. ಇವತ್ತು 23,000 ಪ್ರಾಥಮಿಕ ಶಾಲೆಯ ಶಿಕ್ಷಕರ ನೇಮಕಾತಿ ಈ ಒಂದೇ ವರ್ಷದಲ್ಲಿ ನಡೆದು ಹೋಯಿತು. ಮೊನ್ನೆ ದಿವಸ ಒಬ್ಬ ಅಧಿಕಾರಿ ಈ ದೇಶದ ಇತಿಹಾಸದಲ್ಲಿ ಸ್ವಾತಂತ್ರ್ಯ ಬಂದ ನಂತರ, ಒಂದೇ ವರ್ಷದಲ್ಲಿ ಇಷ್ಟು ಜನ ಶಿಕ್ಷಕರನ್ನು ಅಪಾಯಿಂಟ್ ಮಾಡಿರುವುದು ಪ್ರಥಮ ಬಾರಿಗೆ ಎಂದು ಹೇಳುತ್ತಿದ್ದರು. ಅಂದರೆ ಅನೇಕ ವರ್ಷಗಳಿಂದ ಇಷ್ಟೊಂದು ಹುದ್ದೆಗಳು ಖಾಲಿ ಇತ್ತು. ಸಾಮಾನ್ಯ ಜನರು ಸರ್ಕಾರಿ ಆಸ್ಪತ್ರೆಗಳಿಗೆ ಹೋದರೆ, ಅಲ್ಲಿ ವೈದ್ಯರುಗಳೇ ಇಲ್ಲ. ಇಲ್ಲಿ ಕೊಟ್ಟಿರುವಂಥಾ ಔಷಧಿಗಳನ್ನು, ಗುಳಿಗೆಗಳನ್ನು ಕೊಡುವುದಕ್ಕೆ ಅಲ್ಲಿ ಜನರೇ ಇಲ್ಲ. ಪ್ರಥಮ ಬಾರಿಗೆ ಎಲ್ಲಾ ಆಸ್ಪತ್ರೆಗಳಿಗೂ ವೈದ್ಯರುಗಳನ್ನು ತುಂಬುವಂಥಾ ಕೆಲಸ ಈ ಸರ್ಕಾರದ ಕಡೆಯಿಂದ ನಡೆಯಿತು. ನಾನು ಅನಾವಶ್ಯಕವಾಗಿ ಹೊಗಳುತ್ತಾ ಇಲ್ಲ. ವಾಸ್ತವಿಕ ಸಂಗತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಎಷ್ಟು ಅಪಾಯಿಂಟ್‌ಮೆಂಟ್‌ಗಳು ಇವೆ? ವಿಶೇಷವಾಗಿ ನಮ್ಮ ಪಶುಸಂಗೋಪನಾ ಇಲಾಖೆಯಲ್ಲಿ 424 ಪಶು ವೈದ್ಯಾಧಿಕಾರಿಗಳ ನೇಮಕಾತಿಯ ಪ್ರಕ್ರಿಯೆಯನ್ನು ಈಗಾಗಲೇ ಪೂರ್ಣಗೊಳಿಸಿದೆ. 353 ವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆಯನ್ನು ನೀಡಲಾಗಿದೆ, 777 ಪಶು ವೈದ್ಯಾಧಿಕಾರಿಗಳ ಹುದ್ದೆಯನ್ನು ನಿರ್ಮಾಣ ಮಾಡಿದೆ. ಇದು ಸಾಮಾನ್ಯವಲ್ಲ, ಪಶು ಸಂಗೋಪನಾ ಇಲಾಖೆಯಲ್ಲಿ ಇಷ್ಟು ವರ್ಷ ಹುದ್ದೆಗಳು ಖಾಲಿ ಬಿದ್ದಿತ್ತು. ರೈತರಿಗೆ, ಸಾಮಾನ್ಯ ಜನರಿಗೆ, ದಲಿತರಿಗೆ, ಹಾಲು ಕರೆದು ಕೊಟ್ಟು, ಅನ್ನ ತಿನ್ನುವಂತಹ ಸಾಮಾನ್ಯ ಜನರಿಗೆ ಇದು ಮಾಡಿರುವಂಥಾ ಉಪಕಾರವೆಂದು ನಾನು ಭಾವಿಸುತ್ತೇನೆ.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಆರಗ ಜ್ಞಾನೇಂದ್ರರವರೆ, ನಿಮಗೆ ಪಶುಗಳ ಸಂಖ್ಯೆ ಎಷ್ಟು ಇದೆಯೆಂಬುದು ಗೊತ್ತಿದೆಯಾ? ಈಗ ವೈದ್ಯರುಗಳು ಜಾಸ್ತಿಯಾಗಿದ್ದಾರೆ, ಪಶುಗಳ ಸಂಖ್ಯೆ ಕಡಿಮೆಯಾಗಿದೆ. ನೀವು ಬೇಕಾದರೆ ಕೇಳಿ, ನಾನು ಸುಳ್ಳು ಹೇಳಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಈಗ ಪಶುಗಳು ಎಷ್ಟೆ ಇದ್ದರೂ ಸಹ, ಹಿಂದೆ ಹೆಚ್ಚು ಹಸುಗಳು ಇತ್ತು. ಅದರಲ್ಲಿ ಒಂದಷ್ಟು ಹಸುಗಳು ಸಾಯುತ್ತಿದ್ದವು, ಒಂದಷ್ಟು ಹಸುಗಳು ಬದುಕುತ್ತಿದ್ದವು, ಏನೋ ಆಗುತ್ತಿತ್ತು. ಆದರೆ ಈಗ ಆ ರೀತಿ ಇಲ್ಲ. ಈಗ ಹೈಬ್ರಿಡ್ ತಳಿಗಳನ್ನು ಹಳ್ಳಿಗಳಲ್ಲಿ ಇಟ್ಟುಕೊಂಡಿದ್ದೇವೆ.

ಶ್ರೀ ಶಿವಾನಂದ ಎಸ್.ಪಾಟೀಲ್ : ತಾವು ಸೆನ್ಸಸ್ ರಿಪೋರ್ಟ್ ಅನ್ನು ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ಹಸುಗಳ ಸಂಖ್ಯೆ ಕಡಿಮೆಯಾಗಿರುವುದಕ್ಕೆ ಈ ಸರ್ಕಾರ ಕಾರಣವಲ್ಲ. ಇದಕ್ಕೆ ಬೇರೆ ಬೇರೆ ಕಾರಣಗಳು ಇರುತ್ತದೆ. ಹಳ್ಳಿಗಳಲ್ಲಿ ಬದುಕಿರುವಂಥಹ ನಮಗೂ ಗೊತ್ತಿದೆ, ನಿಮಗೂ ಕೂಡ ಗೊತ್ತಿದೆ. ಮೊದಲೆಲ್ಲಾ ಒಬ್ಬನ ಸಂಪತ್ತನ್ನು ಲೆಕ್ಕ ಹಾಕುವಾಗ ಅವನ ಜಮೀನಿನ ಜೊತೆಗೆ ಅವನ ಉತ್ಪನ್ನದ ಜೊತೆಗೆ ಅವನ ಬಳಿ ಇರುವ ಪಶುಗಳನ್ನು ಸೇರಿಸಿ ಲೆಕ್ಕವನ್ನು ಹಾಕುತ್ತಿದ್ದರು. ಈಗ ಜಾಸ್ತಿ ಹಸುಗಳು ಇವೆ, ಜಾಸ್ತಿ ಮಕ್ಕಳು ಇವೆಯೆಂದರೆ ದರಿದ್ರವೆಂದು ಅರ್ಥ. ನಮ್ಮ ಹಳ್ಳಿಗಳಲ್ಲಿ ಜಾಸ್ತಿ ಹಸುಗಳಿವೆಯೆಂದರೆ, ಜಾಸ್ತಿ ಮಕ್ಕಳಿವೆಯೆಂದರೆ, ದರಿದ್ರವೆಂದು, ಅವನು ಅಭಿವೃದ್ಧಿಯಾಗುವುದಿಲ್ಲವೆಂದು ಲೆಕ್ಕ. ಹಸುಗಳ ಸಂಖ್ಯೆ ಕಡಿಮೆ ಇರಬೇಕು, quantity ಕಡಿಮೆ ಇರಬೇಕು, quality ಚೆನ್ನಾಗಿರಬೇಕೆಂದು ಹೇಳಿ. ಹಸುಗಳ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ. ಆದರೆ ಈಗಿರುವ ಹಸುಗಳಿಗೆ ವೈದ್ಯರುಗಳಿಲ್ಲದೇ ಇದ್ದರೆ ಆಗುವುದಿಲ್ಲವೆಂಬುದು ನಿಮಗೂ ಗೊತ್ತಿದೆ. ಆದುದರಿಂದ ವೈದ್ಯಕೀಯ ಸೌಲಭ್ಯಗಳು ಹೆಚ್ಚಿದ್ದಷ್ಟು ಒಳ್ಳೆಯದಾಗುತ್ತದೆ ಮತ್ತು ಅದನ್ನು ಒದಗಿಸಿ ಕೊಟ್ಟದ್ದಕ್ಕಾಗಿ, ನಾನು ಈ ಸರ್ಕಾರವನ್ನು ಅಭಿನಂದಿಸುತ್ತೇನೆ. ಇನ್ನು ನಮ್ಮ Horticulture Department. ಇವೆಲ್ಲಾ ಮೊದಲು ತೆಗೆದು ಹಾಕಿದ್ದ ಡಿಪಾರ್ಟ್‌ಮೆಂಟ್‌ಗಳು. ಪಶುಸಂಗೋಪನೆ, ಹಾರ್ಟಿಕಲ್ಚರ್, ಇದೆಲ್ಲಾ ಏನೋ ಕೊಡಬೇಕೆಂದು ಆ ಇಲಾಖೆಗಳಿಗೆ ಕೊಡುತ್ತಿದ್ದೆವು. ಅದರ ಬಗ್ಗೆ ಬಜೆಟ್‌ನಲ್ಲೂ ಕೂಡ ನಾವು ಹೆಚ್ಚಿಗೆ ಲೆಕ್ಕಚಾರವನ್ನು ಮಾಡುವುದಕ್ಕೆ ಹೋಗಿರಲಿಲ್ಲ. ಅದರ ಬಗ್ಗೆ ಯೋಚನೆಯನ್ನು ಮಾಡುತ್ತಿರಲಿಲ್ಲ. ಒಬ್ಬರಿಗೆ ಮಂತ್ರಿ ಪದವಿಯನ್ನು ಕೊಡಬೇಕಾಗಿತ್ತು. ಅದಕ್ಕೆ ಅಷ್ಟೆ, ಆ ಇಲಾಖೆಗಳೆಲ್ಲಾ ಇತ್ತು. ಆದರೆ ಪ್ರಥಮ ಬಾರಿಗೆ ಇಂಥಾ ಇಲಾಖೆಗಳಿಗೆ ಈ ಸರ್ಕಾರದಲ್ಲಿ ಒಂದು ಮಹತ್ವ ಬಂದಿದೆ. ನಮ್ಮ ರಾಜ್ಯಕ್ಕೆ ಹಾರ್ಟಿಕಲ್ಚರ್ ಇಲಾಖೆಯು ಮುಖ್ಯವಾದ ಆದಾಯವನ್ನು ತರುವಂಥಾದ್ದು ಆಗಿದೆ. ಇವತ್ತು ರೈತ ಭತ್ತವನ್ನು ಬೆಳೆದು ಸತ್ತು ಹೋಗಿದ್ದಾನೆ, ರಾಗಿ ಬೆಳೆದು ಸತ್ತು ಹೋಗಿದ್ದಾನೆ.

ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿ : ಮಾನ್ಯ ಆರಗ ಜ್ಞಾನೇಂದ್ರರವರೆ, ತಾವು ಹೇಳುವಂಥಾದ್ದು ನಿಜ. ಆದರೆ ನಮ್ಮ ಚಿತ್ರದುರ್ಗ ಜಿಲ್ಲೆಗೆ Central

Horticulture Mission ನಿಂದ ಬಂದಿರುವಂಥಾ ದುಡ್ಡು ವಾಪಸ್ಸು ಹೋಗಿದೆ. ಮೊನ್ನೆ ಜಿಲ್ಲಾ ಪರಿಷತ್ತಿನಲ್ಲಿ ಅಧಿಕಾರಿಗಳೆ, ಒಪ್ಪಿಕೊಂಡರು. ಬೇಕಾದರೆ ಮಂತ್ರಿಗಳನ್ನೇ ಕೇಳಿ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ : National Horticulture ಯೋಜನೆಯಲ್ಲಿ ಬರುವಂಥಹ ಹಣ, ಯಾವ ಸಂದರ್ಭದಲ್ಲೂ ವಾಪಸ್ಸು ಹೋಗುವ ಹಾಗೆ ಇಲ್ಲ.

ಶ್ರೀ ಶಿವಾನಂದ ಎಸ್.ಪಾಟೀಲ್ : ಹಣ ವಾಪಸ್ಸು ಹೋಗುವುದಲ್ಲ, ಯಾರಿಗೂ ಉಪಯೋಗವಾಗಿಲ್ಲ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ : ಹಣ ವಾಪಸ್ಸು ಹೋಗುವ ಪ್ರಶ್ನೆಯೇ ಇಲ್ಲ.

ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿ : ಆ ಹಣ ಎಲ್ಲಿಗೆ ಹೋಯಿತು? ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ನಿಮ್ಮ ಅಧಿಕಾರಿಗಳೇ ಹೇಳಿದರು. ಆ ಹಣವನ್ನು ಬಳಸಿಲ್ಲ. ಹಣವನ್ನು ಏಕೆ ಬಳಸಿಲ್ಲವೆಂದರೆ, ನಮ್ಮಲ್ಲಿ ಕೆಲಸಗಾರರು ಇಲ್ಲದೇ ಇರುವುದರಿಂದ ಬಳಸುವುದಕ್ಕೆ ಆಗಿಲ್ಲವೆಂದು ಹೇಳಿದರು. ಅದರಿಂದ ಆ ಹಣ ಬೇರೆ ಜಿಲ್ಲೆಗೆ ಟ್ರಾನ್ಸ್‌ಫರ್ ಆಗಿದೆಯೆಂದು ಹೇಳಿದರು. ನೀವು ಬೇಕಾದರೆ ಕೇಳಿ, ಒಟ್ಟಿನಲ್ಲಿ ನಮ್ಮ ಜಿಲ್ಲೆಯಲ್ಲಿ ಅದು ಯುಟಿಲೈಜ್ ಆಗಿಲ್ಲ.

ಶ್ರೀ ಶಿವಾನಂದ ನಾಯಕ್ : ಮಾನ್ಯ ಶಶಿಕಾಂತ ಅಕ್ಕಪ್ಪ ನಾಯ್ಕರವರೆ, ಬೇರೆ ರಾಜ್ಯಕ್ಕೆ ಹೋಲಿಸಿದರೆ ನೀವು ಎಷ್ಟು ಹಣವನ್ನು ತೆಗೆದುಕೊಂಡಿ ದ್ದೀರೆಂಬುದನ್ನು ಹೇಳಿ.

ಶ್ರೀ ಆರಗ ಜ್ಞಾನೇಂದ್ರ : ನಾವು ಬೇರೆ ರಾಜ್ಯಕ್ಕೆ ಹೋಲಿಸುವುದಲ್ಲ. ನಾವು ಹಿಂದಿನ ಸರ್ಕಾರಕ್ಕೆ ಹೋಲಿಸಿ ಬಿಡೋಣ. ಏನು ಆಗುತ್ತದೆ? ಎಷ್ಟು ಹುದ್ದೆಗಳು ಖಾಲಿ ಇತ್ತು? ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಬಹಳ neglect ಆಗಿತ್ತು. ನಿಮಗೆ ಗೊತ್ತಿದೆ, ತಾಲ್ಲೂಕಿನಲ್ಲಿ Assistant Horticulture Officer ಇರಲಿಲ್ಲ. Senior Assistant Director ಇರಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, Horticulture ನಲ್ಲಿ ನೀವು ಹೊಗಳುವಂಥಾದ್ದು, production ಏನು ಆಗಿದೆ? ರೈತರು ಯಾರು employment ಬಗ್ಗೆ ಕೇಳುವುದಿಲ್ಲ. ನಿಮ್ಮ production ಏನು? ಅವರಿಗೆ ಸಿಗುವಂತಹ ರೇಟ್ ಏನು? ಅಥವಾ harvest ಆದ ಮೇಲೆ ಅದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆನ್ನುವುದರ ಮೇಲೆ, Horticulture

crop ಮೇಲೆ ಬೆಲೆ ಸಿಗುತ್ತದೆಯೇ, ವಿನಃ ನೀವು employment ಕೊಟ್ಟಿದ್ದೇವೆ, ಅಲ್ಲಿ 10 ಜನ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆಂದು ಹೇಳುವಂಥಾದ್ದು achievement ಅಲ್ಲ. ಅದು infrastructure development ಮಾಡಿರು–ವುದಷ್ಟೆ. ಆದರೆ ಅದರ yield ಏನು? ಆ yield ಜಾಸ್ತಿ ಆಗಿದೆ ಎಂದರೆ, ಹೌದು ಇದು ಆಗಿದೆಯೆಂಬುದನ್ನು ಹೇಳಬಹುದು.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಶ್ರೀನಿವಾಸಗೌಡರೆ, ನೀವು ಮಾಜಿ ಮಂತ್ರಿಗಳಾಗಿರುವವರು. ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ, ರೈತ yield ತೆಗೆಯುವವನು. ರೈತರಿಗೆ supportive ಆಗಿ, ಈ department ಗಳು ಶಕ್ತಿಯುತವಾಗಿ ಕೆಲಸ ಮಾಡುವಂಥಾದ್ದನ್ನು ಮಾಡಬೇಕಾದ್ದು. ಅಲ್ಲಿ ಯಾರೂ ಇಲ್ಲದೇ, ಹೋದರೆ, ಯಾರು ಕೆಲಸ ಮಾಡುವುದು? National Horticulture Mission ನಿಂದ ಹಣ ಬರುತ್ತದೆ. ರಾಜ್ಯದ ಬೊಕ್ಕಸದಿಂದ ಹಣವನ್ನು ಕೊಡುತ್ತಿದ್ದೇವೆ. ಆ ಹಣವನ್ನು ಖರ್ಚು ಮಾಡುವುದಕ್ಕೆ ಯಾರು ಇಲ್ಲದೇ ಹೋದರೆ ಹೇಗೆ? ಮಾನ್ಯ ಸದಸ್ಯರೊಬ್ಬರು ಹೇಳಿದರು. ಇವತ್ತು ಲ್ಯಾಪ್ಸ್ ಆಗುವಂಥಾ ಪರಿಸ್ಥಿತಿಗಳು ಏಕೆ ಬರುತ್ತವೆ? ಅಲ್ಲಿ ಅಧಿಕಾರಿಗಳೇ ಇಲ್ಲ, ಅಲ್ಲಿ ಸಿಬ್ಬಂದಿಗಳೇ ಇಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ಇಷ್ಟು ವರ್ಷ ಅದನ್ನು ಖಾಲಿಯಾಗಿ ಇಟ್ಟುಕೊಂಡು ಬಂದಿದ್ದೆವು, ಅದನ್ನು neglect ಮಾಡಿದ್ದೆವು. ಆ ಕಡೆ ಗಮನವನ್ನು ಕೊಟ್ಟಿರಲಿಲ್ಲ. ಪ್ರಥಮ ಬಾರಿಗೆ ಈ ಸಾರಿ ಸುಮಾರು 648 ಅಧಿಕಾರಿಗಳನ್ನು, 883 ಜನ ಇನ್ನಿತರ Horticulture Departmentನ ಸಿಬ್ಬಂದಿಗಳನ್ನು ಒಂದೇ ಸಾರಿ ಅಪಾಯಿಂಟ್ ಮಾಡಿದ್ದಾರೆ.

(ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

(2-00 PM)

ಇನ್ನೂ ಕೂಡ ನೇಮಕಾತಿಗಳು ಮಾಡುತ್ತಿದ್ದು, ಪ್ರಕ್ರಿಯೆಗಳು ಮುಂದುವರೆದಿವೆ. ಇದು ಸಾಮಾನ್ಯದ ಸಂಗತಿಯಲ್ಲ. ಹಿಂದೆ ಸಂಬಳ ಕೊಡಲಿಕ್ಕೂ ಆಗದಿರುವಂಥ ಪರಿಸ್ಥಿತಿ ಇತ್ತು. ನಿಮಗೆ ಸಂಬಳ ಕೊಡಲಿಕ್ಕೆ ತಾಕತ್ತು ಇತ್ತು ಎನ್ನುವುದಾದರೆ ಅವರ Horticulture, Animal Husbandry, Agriculture Department, Fisheries Department, ಇಂತಹ ಕಡೆಗಳಲ್ಲಿ ನೇಮಕಾತಿಯನ್ನು ಮಾಡಬೇಕಾಗುತ್ತದೆ. Fisheries

Departmentನಲ್ಲಿ 50 ಜನ ಅಧಿಕಾರಿಗಳು ಮತ್ತು Assistant Directorಗಳ appointment ಒಂದೇ ವರ್ಷದಲ್ಲಿ ನಡೆದಿದೆ. ಹುದ್ದೆಗಳನ್ನು ನೇಮಕ ಮಾಡಿ, ಆ ಇಲಾಖೆಗಳಿಗೆ ಶಕ್ತಿ ಕೊಟ್ಟರೆ ರೈತರಿಗೆ ಚಾಲನೆ ಸಿಕ್ಕ ಹಾಗೆ ಆಗುತ್ತದೆ. ಹಿಂದೆ ಇದ್ದ ಹಾಗೆ ಓಬೀರಾಯನ ಕಾಲದ ಬೇಸಾಯವನ್ನು ಈಗ ಮಾಡಲಿಕ್ಕಾಗುವುದಿಲ್ಲ. ಲಾಭ ಹೇಗೆ ಮಾಡಿಕೊಳ್ಳಬೇಕು, ಅವನ ಬದುಕಿಗೆ ಶಕ್ತಿ ಹೇಗೆ ಕೊಡಬೇಕು ಎನ್ನುವ ಆಧುನಿಕ ವಿಚಾರಗಳನ್ನು, ಆವಿಷ್ಕಾರಗಳನ್ನು ರೈತರ ಮನೆಯ ಬಾಗಿಲಿಗೆ ತಲುಪಿಸಬೇಕಾದರೆ ಈ ಸಿಬ್ಬಂದಿ ವರ್ಗ, ಈ ಅಧಿಕಾರಿಗಳು ಬಹಳ ಪ್ರಮುಖವಾಗಿರತಕ್ಕಂಥ ಪಾತ್ರವನ್ನು ವಹಿಸುತ್ತಾರೆ. ನೀವು ಅದನ್ನು ಮಾಡಿರಲಿಲ್ಲ. ಬಾಗಲಕೋಟೆಯಲ್ಲಿ ಒಂದು ತೋಟಗಾರಿಕಾ ವಿಶ್ವವಿದ್ಯಾನಿಲಯ, ಬೀದರ್‌ನಲ್ಲಿ ತೋಟಗಾರಿಕಾ ಕಾಲೇಜುಗಳು, ಶೃಂಗೇರಿ ಮತ್ತು ತೀರ್ಥಹಳ್ಳಿಗಳಲ್ಲಿ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬಹಳ ಮಾರಕವಾಗಿರತಕ್ಕಂಥ ರೋಗ ಬಂದು ನಮ್ಮ ಅಡಿಕೆ ಬೆಳೆಯನ್ನು ತೆಗೆದೇ ಬಿಟ್ಟಿತು. ಇಂದು ನಮ್ಮ ಬದುಕು ಏನಾಗಿದೆ ಎಂದರೆ, ಒಂದು ಕಾಲದಲ್ಲಿ ಕಾಫಿ ಬೆಳೆಗಾರರು ಮತ್ತು ಅಡಿಕೆ ಬೆಳೆಗಾರರಾದ ನಾವು ಬದುಕನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದೆವು. ನೂರು ಕ್ವಿಂಟಾಲ್ ಬೆಳೆಯುತ್ತಿದ್ದಂಥ ರೈತ ಇವತ್ತು 5 ಕ್ವಿಂಟಾಲ್. 6 ಕ್ವಿಂಟಾಲ್ ಬೆಳೆಯುವ ಪರಿಸ್ಥಿತಿಗೆ ಬಂದಿದ್ದಾನೆ. ಆದರೆ, ಅವನು ಕುತ್ತಿಗೆಗೆ ಹಗ್ಗ ಹಾಕಿಕೊಳ್ಳಲಿಲ್ಲವಷ್ಟೇ. ಯಾವುದಾದರೂ ಜವಾನರ ಕೆಲಸವನ್ನಾದರೂ ಕೊಡಲಿ ಎಂದು ಬಹಳಷ್ಟು ಜನ ರೈತರು ಬೆಂಗಳೂರಿಗೆ ಬಂದು ಓಡಾಡುತ್ತಿದ್ದಾರೆ. ಹಿಂದೆ ಅಡಿಕೆ ಬೆಳೆಗಾರರು ಆತ್ಮಹತ್ಯೆಯನ್ನು ಮಾಡಿಕೊಂಡಿರಲಿಲ್ಲ. ಪ್ರಥಮ ಬಾರಿಗೆ, ಅಡಿಕೆ ಬೆಳೆಗಾರರ ಬದುಕಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂಥಾದ್ದೂ ನಡೆದು ಹೋಯಿತು. ಮಾರಕ ರೋಗಗಳ ಬಗ್ಗೆ ಸಂಶೋಧನೆ ನಡೆಸಲು ತೀರ್ಥಹಳ್ಳಿಯಲ್ಲಿ ಒಂದು ವಿಶೇಷವಾಗಿರತಕ್ಕಂಥ ಸಂಶೋಧನಾ ಕೇಂದ್ರವನ್ನು ಮಾಡಿರತಕ್ಕಂಥಾದ್ದು ರೈತರಿಗೆ ಅತ್ಯಂತ ದೊಡ್ಡ ಕೊಡುಗೆ ಎಂದು ನಾನು ಭಾವಿಸುತ್ತೇನೆ. ವಿಶೇಷವಾಗಿ ಈ ಸಾರಿ ಅತಿವೃಷ್ಟಿಯಲ್ಲಿ ಬಹಳಷ್ಟು ರಸ್ತೆಗಳು, ಸೇತುವೆಗಳು ಹೋಗಿವೆ. ಮಲೆನಾಡಿನಿಂದ ಬಂದಿರತಕ್ಕಂಥ ಶಾಸಕರು ಇಲ್ಲಿ ಬಹಳಷ್ಟು ಜನರಿದ್ದೇವೆ. ತಾರತಮ್ಯಗಳಾಗಬಾರದು ಎಂದು ನಾವು ಬಹಳಷ್ಟು ಹಿಂದಿನಿಂದಲೂ ಹೇಳುತ್ತಾ ಬಂದಿದೇವೆ. ಮೊನ್ನೆ ಖರ್ಗೆಯವರು ಆ ಬಗ್ಗೆ

ಬಹಳ ಹೊತ್ತು ಮಾತನಾಡಿದರು. ಆಗ ನಮಗೂ ಕೂಡ, ನಮ್ಮ ಭಾಗಕ್ಕೆ ಕಡಿಮೆಯಾಗಿದೆ ಎಂದು ಅನ್ನಿಸಿತು. ಈ ಭಾಗದಲ್ಲಿ ಒಂದು ರಸ್ತೆ ಮಾಡಿದರೆ ಅದರ ಬಾಳಿಕೆ ಬಹಳ ವರ್ಷಗಳು ಬರುತ್ತದೆ. ಆದರೆ, ನಮ್ಮ ಭಾಗದ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ಭಾಗದಲ್ಲಿ ಒಂದು ರಸ್ತೆಗೆ ಡಾಂಬರು ಮಾಡಿದರೆ ಒಂದು ಮಳೆಗಾಲಕ್ಕೆ ಅದರ ಕತೆ ಮುಗಿದುಹೋಗುತ್ತದೆ. ಅಷ್ಟು ಅಧಿಕವಾಗಿರತಕ್ಕಂಥ ಮಳೆ ಅಲ್ಲಿ ಬೀಳುತ್ತದೆ. ನಮ್ಮ ಭಾಗದಲ್ಲಿರುವ drainage ಗಳು ಪ್ರತಿ ಮಳೆಗಾಲದಲ್ಲೂ ತುಂಬಿಕೊಂಡು ಬಿಡುತ್ತವೆ. ಪ್ರತಿವರ್ಷ ಅವುಗಳ maintenance ಇಲ್ಲದೇ ಹೋದರೆ ಆಗುವುದಿಲ್ಲ. ಹಾಗಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ ನಮ್ಮ ಕಡೆಗೆ ರಸ್ತೆಗಳ maintenance ಜಾಸ್ತಿ ಗಮನ ಕೊಡಬೇಕು. ರಸ್ತೆಯ ಕಿ.ಮೀ. ಆಧಾರದ ಮೇಲೆ ಹಣ ಕೊಡಲು ಕಳೆದ ಸಾರಿಯಿಂದ ಪ್ರಥಮ ಬಾರಿಗೆ ಪ್ರಾರಂಭ ಮಾಡಿದ್ದಾರೆ. ಹಿಂದಿನ ಸರ್ಕಾರಗಳಿಗೆ ನಾವು ಎಷ್ಟೇ ಹೇಳಿದರೂ ಕೂಡ, ಕಿ.ಮೀ. ಆಧಾರದಲ್ಲಿ ದುಡ್ಡು ಕೊಟ್ಟಿರಲಿಲ್ಲ. ಪ್ರಥಮ ಬಾರಿಗೆ ಆ ರೀತಿ ಕೊಡುವಂಥ ಪ್ರಯತ್ನ ಆಗಿದೆ. ಮಾನ್ಯ ಕಂದಾಯ ಸಚಿವರಲ್ಲಿ ನಾನು ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ, ನಮ್ಮ ಭಾಗದಲ್ಲಿ ಅಡಿಕೆ ಬೆಳೆಗಾರರು ಸರ್ವನಾಶವಾಗಿದ್ದಾರೆ. ಒಂದೇ ದಿನ ಬೀಸಿರತಕ್ಕಂಥ ಬಿರುಗಾಳಿಯಿಂದಾಗಿ ಸಾವಿರಾರು ಅಡಿಕೆ ಮರಗಳು ನೆಲಕ್ಕೆ ಉರುಳಿವೆ. ಮೊನ್ನೆಯ ದಿನ ಹೊಸನಗರದಲ್ಲಿ ಸುಮಾರು ಎರಡು ಸಾವಿರ ಜನ ರೈತರು ಸೇರಿ, ನಮಗೊಂದು Special Package ಮಾಡಿ ಎಂದು ಒಂದು ನಿರ್ಣಯ ಮಾಡಿ ಈ ಸರ್ಕಾರಕ್ಕೆ ಕಳುಹಿಸಿದ್ದಾರೆ. ಏಕೆಂದರೆ, Central Government National Calamity ನಿಯಮಾವಳಿ ಪ್ರಕಾರ ನಮಗೆ ಪರಿಹಾರ ಕೊಡಲಿಕ್ಕೆ ಬರುವುದಿಲ್ಲ. ಆದ್ದರಿಂದಾಗಿ, ಬಿರುಗಾಳಿಯಿಂದ ನಾಶವಾಗಿರತಕ್ಕಂಥ ಬೆಳೆಗೆ compensation ಅನ್ನು ಕೊಡಬೇಕು. ಒಂದು Special Package ಅನ್ನು ಮಲೆನಾಡು ಭಾಗದ ಅಡಿಕೆ ಬೆಳೆಗಾರರಿಗೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಲೆನಾಡು ಪಶ್ಚಿಮ ಘಟ್ಟದ ಪ್ರದೇಶ ಅತ್ಯಂತ ಸೂಕ್ಷ್ಮವಾಗಿಬಿಟ್ಟಿದೆ. ಅದರ ಬಗ್ಗೆ ಮೊನ್ನೆಯ ದಿನ ಇಲ್ಲಿ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಅದು ಈಗ ಬಹಳ ಸೂಕ್ಷ್ಮಾತಿಸೂಕ್ಷ್ಮ ಪ್ರದೇಶವಾಗಿದೆ. ಈ ಒಂದು ಭಾಗ ಪರಿಸರದ ದೃಷ್ಟಿಯಿಂದಲೂ ಸೂಕ್ಷ್ಮವಾಗಿ ರತಕ್ಕಂಥ ಪ್ರದೇಶ. ಇಡೀ ಏಷ್ಯಾ ಕಂಡದಲ್ಲೇ ಅತ್ಯಂತ ಸೂಕ್ಷ್ಮವಾಗಿರತಕ್ಕಂಥ

ಪ್ರದೇಶಗಳು ಇಲ್ಲಿವೆ. ಹಾಗೆಯೇ, ಬೇರೆ ಬೇರೆ ಸಾಮಾಜಿಕ ವ್ಯವಸ್ಥೆಯಿಂದಲೂ ಕೂಡ ಸೂಕ್ಷ್ಮವಾಗಿರತಕ್ಕಂಥ ಪ್ರದೇಶ. ನಕ್ಸಲರ ಅಡಗುದಾಣ ಅದೇ ಆಗಿದೆ. ಇದರಿಂದಾಗಿ ಇಡೀ ಮಲೆನಾಡಿನ ಶಾಂತಿಗೆ, ನೆಮ್ಮದಿಗೆ ಬೆಂಕಿ ಬಿದ್ದುಹೋಗಿದೆ. ಅಲ್ಲಿಯ ಜನ ಸುಖವಾಗಿ ನಿದ್ರೆ ಮಾಡುತ್ತಿಲ್ಲ. ಶಾಲೆಗಳಿಗೆ ಅಧ್ಯಾಪಕರು ಹೋಗುತ್ತಿಲ್ಲ. ಹಳ್ಳಿಗಳಿಗೆ A.N.M. ಗಳು ಹೋಗುತ್ತಿಲ್ಲ, ಅಲ್ಲಿಗೆ ಪೋಲೀಸರನ್ನು ಹಾಕಿದರೆ ಅವರು transfer ಮಾಡಿಸಿಕೊಂಡು ಬೇರೆ ಕಡೆಗೆ ಹೋಗುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ಸಾಕಷ್ಟು ಹಣಕಾಸನ್ನು ಅಲ್ಲಿಗೆ ಕೊಟ್ಟು ಅತ್ಯಂತ ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕಾಗುತ್ತದೆ. ಅಲ್ಲಿರತಕ್ಕಂಥ ಸಮಸ್ಯೆಗಳಿಗೂ ನಕ್ಸಲರಿಗೂ ಸಂಬಂಧವಿಲ್ಲ. ಆ ಸಮಸ್ಯೆಗಳಿಗೋಸ್ಕರ ನಕ್ಸಲರಿದ್ದಾರೆ ಎನ್ನುವುದು ಖಂಡಿತಾ ಸರಿಯಲ್ಲ. ಸಮಸ್ಯೆಗಳನ್ನು ನಿವಾರಣೆ ಮಾಡತಕ್ಕಂಥಾದ್ದು ಬಹಳ ಅವಶ್ಯಕವಾಗಿದೆ. ಅಲ್ಲಿ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಅಲ್ಲಿ interior ಆಗಿರುವ ಒಂದು ಜಾಗಕ್ಕೂ ಕೂಡ ಮೂಲಭೂತ ಸೌಕರ್ಯಗಳನ್ನು ಒದಗಿಸುವಂಥ ಅಗತ್ಯವಿದೆ. ಮುಖ್ಯಮಂತ್ರಿಗಳು ಈಗ ಈ ಸದನದಲ್ಲಿ ಇಲ್ಲ. ಈ ಸದನದ ಮೂಲಕ ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ತೀರ್ಥಹಳ್ಳಿಯ ಆಗುಂಬೆ ಮತ್ತು ಶೃಂಗೇರಿಯ ಮೆಣಸಿನಹಾಡ್ಯದಲ್ಲಿ ತಾವು ಬಂದು ವಾಸ್ತವ್ಯ ಮಾಡಬೇಕು. ನಿಜವಾಗಿಯೂ ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯವನ್ನು ಮೆಚ್ಚಿಕೊಂಡಿರತಕ್ಕಂಥವನು ನಾನು. ಏಕೆಂದರೆ, ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಒಬ್ಬ ಮುಖ್ಯಮಂತ್ರಿ ಈ ರೀತಿಯಾಗಿ ಸಾಮಾನ್ಯ ಜನರ ನಡುವೆ ಬೆರೆಯುತ್ತಿದ್ದಾರೆ. ಮುಖ್ಯಮಂತ್ರಿಗಳು ಅಲ್ಲಿ ಹೋದ ಕೂಡಲೇ ಏನಾಗುತ್ತದೆ? ಅಲ್ಲಿ ಮಲಗುವ ಬದಲು ಇಲ್ಲಿ ಮಲಗಿ ಎಂದೆಲ್ಲಾ ನಾವು ಟೀಕೆಗೋಸ್ಕರ ಹೇಳಬಹುದು. ಆದರೆ, ಒಬ್ಬ ಮುಖ್ಯಮಂತ್ರಿ ಈ ರೀತಿ ಕೆಳಗಡೆ ಇಳಿದು ಹಳ್ಳಿಗರ ಜೊತೆಯಲ್ಲಿ ಸಂಭಾಷಣೆ ಮಾಡುತ್ತಾರೆ ಎಂದರೆ ಅವರಿಗೆ ಒಂದು ಧೈರ್ಯವನ್ನು ತುಂಬಿದ ಹಾಗಾಗುತ್ತದೆ. ನೈತಿಕತೆಯನ್ನು ಹೆಚ್ಚು ಮಾಡತಕ್ಕಂಥ, ನಾನು ಜನಪರವಾಗಿದ್ದೇನೆ ಎಂದು ಹೇಳಿ ಓಟು ಕೊಟ್ಟಿರತಕ್ಕಂಥ ಜನಗಳಿಗೆ, ನಮ್ಮ ಮುಖ್ಯಮಂತ್ರಿಗಳು, ನಮ್ಮ ಸರ್ಕಾರ ಎನ್ನುವಂಥ ಭಾವನೆ ಬರಬೇಕಾಗುತ್ತದೆ. ಒಬ್ಬ ಮುಖ್ಯಮಂತ್ರಿ ಈ ರೀತಿ ಕೆಳಗಡೆ ಇಳಿದು ಹೋಗುವುದು ಅಷ್ಟು ಸುಲಭವಲ್ಲ. ಅದನ್ನು ಕಲಾಂನಂಥ

ಒಬ್ಬ ಮನುಷ್ಯನು ಮಾಡಬಹುದು. ಮೊನ್ನೆಯ ದಿನ ಅವರು ರಾಷ್ಟ್ರಪತಿ ಹುದ್ದೆಯಿಂದ ಇಳಿದಿದ್ದಾರೆ. ನಿನ್ನೆಯ ದಿನ ಮದ್ರಾಸಿನ ಒಂದು ಹೋಟೆಲಿಗೆ ಬಂದು ಇಡ್ಲಿ ಸಾಂಬಾರ್ ತಿಂದಿದ್ದಾರೆ ಎನ್ನುವುದನ್ನು ನಾವು ಪತ್ರಿಕೆಯಲ್ಲಿ ನೋಡಿದೆವು. ಇದು ಸಾಮಾನ್ಯ ಸಂಗತಿಯಲ್ಲ. ಇದಕ್ಕೊಂದು ಮಾನಸಿಕ ಸಿದ್ಧತೆ ಬೇಕಾಗುತ್ತದೆ. ಇದನ್ನು ಟೀಕೆ ಮಾಡುವಂಥವರು ಬೇಕಾದಷ್ಟು ಟೀಕೆ ಮಾಡಬಹುದು. ಆದರೆ ನಾನು ಹೇಳುವಂಥಾದ್ದು ಏನೆಂದರೆ, ಮುಖ್ಯಮಂತ್ರಿಗಳು ದಯಮಾಡಿ ಶೃಂಗೇರಿಯ ಮೆಣಸಿನಹಾಡ್ಯದಲ್ಲಿ, ಆಗುಂಬೆಯ ಮಲ್ಲಂದೂರಿನಲ್ಲಿ ಬಂದು ಉಳಿಯಬೇಕು. ಆಗುಂಬೆಯಲ್ಲಿ ನಾನೂ ನಿಮ್ಮ ಜೊತೆ ಉಳಿಯುತ್ತೇನೆ, ಜೀವರಾಜ್‌ರವರು ಮೆಣಸಿನಹಾಡ್ಯಕ್ಕೆ ಬಂದು ನಿಮ್ಮ ಜೊತೆಯಲ್ಲಿ ವಾಸ್ತವ್ಯ ಮಾಡುತ್ತಾರೆ. ಆ ಭಾಗದಲ್ಲಿರತಕ್ಕಂಥ ಜನರ ಕೊರತೆ ಏನು ಎನ್ನುವುದನ್ನು ನೀವು ಅವರನ್ನೇ ಕೇಳಬೇಕು. "ನನ್ನ ಸರ್ಕಾರ ನಿಮ್ಮ ಜೊತೆಗಿದೆ" ಎಂದು ಧೈರ್ಯ ತುಂಬಬೇಕು. ಇವತ್ತು ನಾನು ಈ ವೇದಿಕೆ ಮೂಲಕ, ಅಭಿನಂದಿಸುತ್ತೇನೆ. ನಿನ್ನೆಯ ದಿನ ಉದಯ ಟಿ.ವಿ.ಯಲ್ಲಿ ಒಂದು ಸಂದರ್ಶನ ನಡೆಯಿತು.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮುಖ್ಯಮಂತ್ರಿಗಳು ಅಲ್ಲಿಗೆ ಹೋಗುವುದಕ್ಕಿಂತ ಮುಂಚೆ ನೀವುಗಳು ಅಲ್ಲಿಗೆ ಹೋಗಿ ಉಳಿದುಕೊಂಡರೆ ಆಗ ಅವರಿಗೂ ಕೂಡ confidence ಬರುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ನಾವು ಉಳಿಯುತ್ತಲೇ ಇದ್ದೇವಲ್ಲ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಅವರ ಜೊತೆಯಲ್ಲಿ ನಾವೂ ಉಳಿಯುತ್ತೇವೆ ಎಂದು ಈಗ ತಾನೇ ಹೇಳಿದಿರಿ. ಅದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ : ಅವರು ಬಂದಾಗಲೂ ನಾವು ಅವರ ಜೊತೆಯಲ್ಲಿರುತ್ತೇವೆ ಎಂದು ಹೇಳಿದೆ. ಅವರು ಬರದಿದ್ದಾಗ ನಾವು ಹೋಗಬಾರದು ಎಂದೇನಿಲ್ಲ. ಈ ವೇದಿಕೆಯ ಮೂಲಕ ನಾನು ನಮ್ಮ ಪೊಲೀಸ್ ಅಧಿಕಾರಿಯಾದ ಮಾನ್ಯ ಶಂಕರ ಬಿದರಿಯನ್ನು ಅಭಿನಂದಿಸುತ್ತೇನೆ. ತಾವೆಲ್ಲ ನೋಡಿರಬೇಕು, ನಿನ್ನೆಯ ದಿನ ಉದಯ ಟಿ.ವಿ.ಯಲ್ಲಿ ಒಂದು ಸಂದರ್ಶನ ಬಂತು. ಅವರು ಒಬ್ಬ ಪೊಲೀಸ್ ಅಧಿಕಾರಿಯಾಗಿ ಎಷ್ಟು ಚೆನ್ನಾಗಿ ಸಮರ್ಥನೆ ಮಾಡಿಕೊಂಡು, ಸರ್ಕಾರ ಏನು ಮಾಡಿದೆ, ಅದು ಹಿಂದಿನ ಸರ್ಕಾರ ಇರಬಹುದು, ಇಂದಿನ ಸರ್ಕಾರ ಇರಬಹುದು, ಸರ್ಕಾರ ಏನು ಮಾಡಿದೆ ಎನ್ನುವುದನ್ನು ಹೇಳಿದರು. ಏನು ಕೊರತೆ ಇದೆ, ಕೊರತೆಗೋಸ್ಕರ ಬಂದೂಕು ಹಿಡಿದುಕೊಂಡು

ಹೋಗಬಾರದು ಎನ್ನುವ ಬಗ್ಗೆ ಅತ್ಯಂತ ಚೆನ್ನಾಗಿ ನಿನ್ನೆ ಮಾತನಾಡಿದರು. ಮಾತನಾಡುವಂಥಾದ್ದನ್ನು ಬಹುಶಃ ಅವರಿಂದ ನಾವೂ ಕೂಡ ಕಲಿಯಬೇಕಾಗುತ್ತದೆ ಎಂದು ಹೇಳುತ್ತೇನೆ. ಇವತ್ತು ನಾನು ಅವರನ್ನು ಈ ವೇದಿಕೆ ಮೂಲಕ ಅಭಿನಂದಿಸುತ್ತೇನೆ. ಇಂಥ ಅನೇಕ ಅಧಿಕಾರಿಗಳು ನಮ್ಮ ನಡುವೆ ಪೊಲೀಸ್ ಇಲಾಖೆಯಲ್ಲಿ ಕೂಡ ಇದ್ದಾರೆ. ಅವರನ್ನು ಬೆನ್ನು ತಟ್ಟಿ ಬೆಳೆಸುವಂಥ ಪ್ರಯತ್ನವನ್ನು ಮಾಡಬೇಕು. ಪೊಲೀಸ್ ಇಲಾಖೆಯಲ್ಲಿ ಇರತಕ್ಕಂಥ ನ್ಯೂನತೆಗಳನ್ನು ನಾವು ಹೇಳಿದ್ದೇವೆ. ಅದೇ ರೀತಿ, ಪೊಲೀಸ್ ಇಲಾಖೆಯಲ್ಲಿ ಅನಿಷ್ಟಗಳೂ ಕೂಡ ಇದ್ದಾರೆ. ಅನೇಕ ಸಾರಿ ಅವರು ಮಾಡುವಂಥ ಕೆಲಸಗಳನ್ನು ನೋಡಿದರೆ, ಅವರ ಬೇಜವಾಬ್ದಾರಿಯ ವರ್ತನೆಗಳನ್ನು ನೋಡಿದರೆ ಹಾಗನ್ನಿಸುತ್ತದೆ. ಬೆಂಗಳೂರಿನಲ್ಲಿ ಅವರು ನಮ್ಮಂಥ ರಾಜಕಾರಣಿಗಳ ಹಿಂದೆ ಮುಂದೆ ಓಡಾಟ ಮಾಡಿಕೊಂಡು, ಅವರಿಗೆ ಸೆಲ್ಯೂಟ್ ಹೊಡೆದುಕೊಂಡು, ಇಲ್ಲಿ ಕ್ಲಬ್‌ಗಳನ್ನು ಪ್ರಾರಂಭ ಮಾಡಿಕೊಂಡು ಇದ್ದಾರೆ. ನಾನು ಇವತ್ತು ಅತ್ಯಂತ ಬೇಸರದಿಂದ ಹೇಳುತ್ತಿದ್ದೇನೆ. ಮೆಜೆಸ್ಟಿಕ್‌ನಲ್ಲಿ 10–12 ವೀಡಿಯೋ ಗೇಮ್ಸ್ ಆಡುವಂಥ ಕ್ಲಬ್‌ಗಳಿವೆ. ನನ್ನ ಒಬ್ಬ ಮಿತ್ರರು ಹೇಳುತ್ತಿದ್ದರು. ಒಂದು ದಿನಕ್ಕೆ 5 ಲಕ್ಷ ರೂಪಾಯಿಗಳ ಮಾಮೂಲಿ ಮೆಜೆಸ್ಟಿಕ್‌ನ ಸುತ್ತ ಇರತಕ್ಕಂಥ ಪೊಲೀಸ್ ಠಾಣೆಗಳಿಗೆ ಹೋಗುತ್ತಿದೆ. ಇಂತಹ ದರಿದ್ರ ಅಧಿಕಾರಿಗಳನ್ನು ಇಲ್ಲಿ ಇಡಬಾರದು. ಬೆಂಗಳೂರಿನಲ್ಲಿ ಇವರೇ ಗೂಂಡಾಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ದಿನಕ್ಕೆ ಅನೇಕ ಕೊಲೆಗಳು ಆಗುತ್ತಿವೆ. ಆ ಕೊಲೆಗಡುಕರನ್ನು ಆ ಕಡೆಗಳಿಗೆ ಹಾಕಿ. ಈ ಪೊಲೀಸರನ್ನು ಖಂಡಿತವಾಗಿ ನಂಬಿಕೊಳ್ಳುವುದು ಬೇಡ. ಆ ಇಲಾಖೆಯನ್ನು ಸಮಗ್ರವಾಗಿ ಪರಿವರ್ತನೆ ಮಾಡತಕ್ಕಂಥ ಅವಶ್ಯಕತೆ ಇದೆ. ಇವತ್ತು ಪೇಪರ್‌ನಲ್ಲಿ ಬಂದಿದೆ. ಕಛ್‌ನಲ್ಲಿ ಸಿಕ್ಕಿಹಾಕೊಂಡಿರತಕ್ಕಂಥ ಕೆಲವು ಪಾಕಿಸ್ತಾನಿ ಭಯೋತ್ಪಾದಕ ಸಂಘಟನೆಗಳ ಜನ ಕೊಟ್ಟಂಥ ಹೇಳಿಕೆಯನ್ನು ನಾವು ನೋಡಬೇಕು. ಇಡೀ ಕರಾವಳಿಯಲ್ಲಿ ಅಪಾಯಕರವಾಗಿರತಕ್ಕಂಥ ಸನ್ನಿವೇಶ ಇದೆ. ನಮ್ಮ ಪೊಲೀಸರಿಗೆ ಗೊತ್ತಿಲ್ಲ. ಇವತ್ತು intelligence ಅನ್ನು ನಾವು ಸಮಗ್ರವಾಗಿ ಬದಲಾವಣೆ ಮಾಡತಕ್ಕಂಥ, ಅವರಿಗೆ ಶಕ್ತಿ ತುಂಬುವಂಥ ಕೆಲಸವನ್ನು ಮಾಡದೇ ಹೋದರೆ, ನಾವು ಯಾರೂ ಶಾಂತಿಯಿಂದ, ನೆಮ್ಮದಿಯಿಂದ ಬದುಕಲಿಕ್ಕೆ ಸಾಧ್ಯವಿಲ್ಲ.

ಒಂದು ಕಡೆ ನಕ್ಸಲೈಟ್ಸ್. xx xx xx ವಿದೇಶದಿಂದ ಪ್ರಚೋದಿತರಾಗಿ ಬಂದಂಥ ಜನ ಇವತ್ತು ನಮ್ಮ ನಡುವೆ ಇದ್ದಾರೆ. ಎಲ್ಲೋ Sports ನೋಡಲಿಕ್ಕೆ ಬಂದವರು ವಾಪಸ್ಸು ಹೋಗುವುದಿಲ್ಲ. ಎಲ್ಲೋ ಓದಲಿಕ್ಕೆ ಬಂದ ವಿದ್ಯಾರ್ಥಿಗಳು ಇದ್ದಕ್ಕಿದ್ದ ಹಾಗೆ ಭೂಗತರಾಗುತ್ತಿದ್ದಾರೆ. ಅವರು ಎಲ್ಲಿಗೆ ಹೋಗಿದ್ದಾರೆ? ನಮ್ಮ ಪೊಲೀಸ್‌ನವರಿಗೇಕೆ ಗೊತ್ತಿಲ್ಲ? ಇದು ನಮ್ಮ ಪೊಲೀಸರ ಬೇಜವಾಬ್ದಾರಿಯ ವರ್ತನೆಯಿಂದಾಗಿ ಆಗುತ್ತಿದೆಯೇ ಹೊರತು ಬೇರೇನಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನೀವು ಮಾತನಾಡುವಾಗ xx xx xx ಎಂದಿದ್ದೀರಿ. ಅದನ್ನು ಕಡತದಿಂದ ತೆಗೆದು ಹಾಕಬೇಕು. ಯಾವುದೋ ಒಂದು ಜಾತಿ, ಅಥವಾ ಒಂದೇ ವರ್ಗದವರು ಭಯೋತ್ಪಾದನೆಯನ್ನು ಮಾಡುತ್ತಿದ್ದಾರೆನ್ನುವುದು ತಪ್ಪು.

(ಗೊಂದಲ)

ಅದನ್ನು ಕಡತದಿಂದ ತೆಗೆದು ಹಾಕಬೇಕು. ಏಕೆಂದರೆ, ಯಾವುದೋ ಒಂದು ಕೋಮಿಗೆ ಪಟ್ಟ ಕಟ್ಟುವುದಕ್ಕಾಗುವುದಿಲ್ಲ. ಮಾಡಿದ್ದು ಬೇರೆಯವರು ಯಾರೋ ಇರಬಹುದು. ಆದರೆ, ಒಂದು ಕೋಮಿಗೆ ಪಟ್ಟ ಕಟ್ಟುವುದಕ್ಕಾಗುವುದಿಲ್ಲ. ಅದನ್ನು ಕಡತದಿಂದ ತೆಗೆಯಬೇಕು.

ಶ್ರೀ ಆರಗ ಜ್ಞಾನೇಂದ್ರ : ಅಲ್ ಖೈದಾ ಸಂಘಟನೆಯಾಗಲಿ ಇವೆಲ್ಲ ಯಾವುವು ಎಂದು ಹೇಳಬೇಕು?

(ಗೊಂದಲ)

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : xx xx xx ನೀವು ಹೆಸರು ಮೆನ್‌ಷನ್ ಮಾಡಿ.

(ಗೊಂದಲ)

ಅಲ್ ಖೈದಾ ಇರಲಿ, ಯಾವುದೇ ಇರಲಿ. ಆದರೆ, ಒಂದು ಕೋಮನ್ನು

(ಗೊಂದಲ)

ಎಂದು ಮಾಡುವುದಕ್ಕಾಗುವುದಿಲ್ಲ. ಅದನ್ನು ನೀವು ಕಡತದಿಂದ ತೆಗೆದು ಹಾಕಬೇಕು.

---

xxx ಮಾನ್ಯ ಸಭಾಧ್ಯಕ್ಷರ ಆದೇಶದ ಪ್ರಕಾರ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ಹೀಗಾಗಿ, ಭಯಾನಕವಾಗಿರುವ ವಾತಾವರಣ ಇಲ್ಲಿರುವಾಗ ನಮ್ಮ ಪೊಲೀಸರನ್ನು ಆಮೂಲಾಗ್ರವಾಗಿ ಎಚ್ಚರಿಸುವಂಥ, ಶಕ್ತಿ ತುಂಬುವಂಥ ಕೆಲಸ ಮಾಡಬೇಕು. ಏಕೆಂದರೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಅವರ ಕೈಗೆ ಕೊಡಬೇಕು. ವಿರೋಧಿಗಳು, ಬೇರೆ ಬೇರೆ ಭಯೋತ್ಪಾದಕರು ಇವತ್ತು ಜಗತ್ತಿನ ಅತ್ಯಂತ ಆಧುನಿಕ ಶಸ್ತ್ರಾಸ್ತ್ರಗಳನ್ನು ಇಲ್ಲಿ ತಂದು ಯುದ್ಧ ಮಾಡುವಂಥ ಸಂದರ್ಭದಲ್ಲಿ ನಮ್ಮ ಪೊಲೀಸರನ್ನು ಬರಿಗೈಯಲ್ಲಿ ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. Uniform ಹಾಕಿಕೊಂಡು ಯಾರಿಗೋ salute ಹೊಡೆಯುತ್ತಾ, ಇಲ್ಲಿ ನಮ್ಮ ಪೊಲೀಸರು ಪ್ರದರ್ಶನದ ಗೊಂಬೆಗಳಾಗಬಾರದು. ಇಂತಹ ಸಂದರ್ಭಗಳು ಬಂದಾಗ ಕೆಚ್ಚಿನಿಂದ ಹೋರಾಟ ಮಾಡುವ, ಈ Challenge ಅನ್ನು ಸ್ವೀಕಾರ ಮಾಡುವ ಇಲಾಖೆಯಾಗಿ ಅದನ್ನು ಪರಿವರ್ತನೆ ಮಾಡುವ ಅವಶ್ಯಕತೆ ಇದೆ. ಅದಕ್ಕೆ ಹೆಚ್ಚು ಹಣವನ್ನು ಇವತ್ತು ನಿಗದಿಪಡಿಸಬೇಕು. ಅವರಿಗೆ ಸೌಲಭ್ಯಗಳನ್ನು ಕೊಡಬೇಕು. ಅವರಿಗೆ ಎಲ್ಲ ರೀತಿಯ ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸುವ ಕೆಲಸಗಳನ್ನು ಮಾಡಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅನೇಕ ಸರ್ಕಾರಗಳು ಮಾಡಿಕೊಳ್ಳುತ್ತಾ ಬಂದಿದ್ದರೂ ಕೂಡ ವಿಶೇಷವಾಗಿ ನಮ್ಮ ರೈತರಿಗೆ ಶಕ್ತಿ ತುಂಬುವಂಥ ಕೆಲಸ ಮಾಡಲು ಈ ಸರ್ಕಾರದ ಕಡೆಯಿಂದ ದೊಡ್ಡ ಹೆಜ್ಜೆ ಇಟ್ಟಿದೆ. 39 irrigation projectಗಳು ಬಹುಶಃ ಅವು 20–25 ವರ್ಷಗಳ ಹಿಂದೆ ಮುಗಿಯಬೇಕಾಗಿದ್ದವು. ನಾನೂ ಕೂಡ PAC Chairman ಇದ್ದಾಗ review ಮಾಡಿದ್ದೇನೆ. 10 ಲಕ್ಷ, 20 ಲಕ್ಷ, 50 ಲಕ್ಷ ರೂ.ಗಳಲ್ಲಿ ಮುಗಿಯಬೇಕಾಗಿದ್ದ Projects ಇವತ್ತು 500 ಕೋಟಿ ರೂ, 1,000 ಕೋಟಿ ರೂ.ಗೂ ಜಾಸ್ತಿಯಾಗಿವೆ. ಇದಕ್ಕೆ ಕಾರಣ ಯಾರೆಂದು ವಿಮರ್ಶೆ ಮಾಡಿದರೆ, ಅದು ರಾಜಕೀಯವಾಗುತ್ತದೆ. ನಾವು ಯಾರೋ ರೈತರ ದುರ್ಗತಿಯ ಸಮಾಧಿಯ ಮೇಲೆ ರಾಜಕಾರಣ, ಅಧಿಕಾರ ನಡೆಸಬಾರದು. ಅದರಿಂದ ನಮಗೆ ಒಳ್ಳೆಯದಾಗುವುದಿಲ್ಲ. ಆದರೆ, ಈ ಹಿನ್ನೆಲೆಯಲ್ಲಿ ಎರಡು ಸರ್ಕಾರವನ್ನು ಕೂಡ ವಿಮರ್ಶೆ ಮಾಡುತ್ತಿದ್ದೇನೆ. ಈಗಾಗಲೇ ಹಿಂದೆ ಧರ್ಮಸಿಂಗ್‌ರವರ ಸರ್ಕಾರವಿದ್ದಾಗ Major Irrigation ನಲ್ಲಿ 2004–05ರಲ್ಲಿ 3,144 ಕೋಟಿ ರೂ. ಅಲೋಕೇಷನ್ ಇತ್ತು. ಅದರಲ್ಲಿ 2,469 ಕೋಟಿ ರೂ.ಗಳನ್ನು ಖರ್ಚು ಮಾಡಿದರು. ಹಾಗೆ ಖರ್ಚು ಮಾಡದೇ ಉಳಿದಿರುವುದು 674.90 ಕೋಟಿ

ರೂ. ಹಾಗೆಯೇ, 2005–06 ರಲ್ಲಿ 2,983 ಕೋಟಿ ರೂ. ಅಲೋಕೇಷನ್ ಇತ್ತು. ಅದರಲ್ಲಿ 2,837 ಕೋಟಿ ರೂ. ಖರ್ಚು ಮಾಡಿರುವುದು. ಗ್ರಾಂಟ್ ಅನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲು ನಮಗೆ ಆ ವರ್ಷಗಳಲ್ಲಿ ಸಾಧ್ಯವಾಗಲಿಲ್ಲ. ಆದರೆ, ನನಗೆ ಅತ್ಯಂತ ಸಂತೋಷವಾಗುತ್ತದೆ. ಹೆಚ್.ಡಿ.ಕುಮಾರಸ್ವಾಮಿ, ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2006ನೇ ಇಸವಿಯಲ್ಲಿ 4,234 ಕೋಟಿ ರೂ.ಗಳ ಅಲೋಕೇಷನ್ ಇಟ್ಟಿದೆ. ಆದರೆ, ಖರ್ಚು ಮಾಡಿರುವುದು 6,319 ಕೋಟಿ ರೂ. Additional grant. . . .

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ತಾವು ಸರಿಯಾಗಿ ನೋಡಬೇಕು. ತಾವು ತಪ್ಪು ಮಾಹಿತಿ ಕೊಡಬೇಡಿ. ಈ ವರ್ಷ ಬಜೆಟ್‌ನಲ್ಲಿ ಅಷ್ಟು ಹಣವಿಲ್ಲ. Figures ತಪ್ಪಾಗಿದೆ ನೋಡಿಕೊಳ್ಳಿ. ನೀವು ಬಹಶಃ Minor, Major Irrigation ಎರಡೂ ಸೇರಿ ಹೇಳುತ್ತಿದ್ದೀರಿ. ಅದು ತಪ್ಪಿದೆ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲ, ನನ್ನ ಹತ್ತಿರ ಫಿಗರ್ಸ್ ಇದೆ. ನಾನು ನಿಮಗೆ ಕಳುಹಿಸಿಕೊಡುತ್ತೇನೆ. Major Irrigation Minister ಉತ್ತರ ಹೇಳುವಾಗ ಹೇಳುತ್ತಾರೆ. ನಾನು ಅದನ್ನು ಕಳುಹಿಸಿಕೊಡುತ್ತೇನೆ. ತಾವು ಇನ್ನೊಂದು ಸಾರಿ ನೋಡಿ. ಇವು ಸರ್ಕಾರ ಕೊಟ್ಟಿರುವ ಫಿಗರ್ಸ್. ನಾನೇನೂ create ಮಾಡಿರುವುದಿಲ್ಲ. ಈ ಸಾಲಿನಲ್ಲಿಯೂ ಕೂಡ additional amount ಉಪಯೋಗಿಸಿದೆ. ಹೀಗೆ 39 ರಲ್ಲಿ 35 Projects ಅನ್ನು ನಿಗದಿತ ಅವಧಿಯಲ್ಲಿ Complete ಮಾಡಿದೆ. ಅವುಗಳನ್ನು ಸಂಪೂರ್ಣಗೊಳಿಸುವಂಥ ಕೆಲಸವನ್ನು ಇವತ್ತು ಸರ್ಕಾರ ಮಾಡಿದೆ. ಕೆರೆ, ಇವತ್ತು ಕಳಸ ಬಂಡೂರಿ ಬಗ್ಗೆ ನಿಮಗೆಲ್ಲರಿಗೂ ಕೂಡ ಗೊತ್ತಿದೆ. ಬಿಜಾಪುರ–ಬಾಗಲಕೋಟೆ ಕೆರೆ ತುಂಬಿಸುವಂಥ ಹೋರಾಟವನ್ನು ಕಾಂಗ್ರೆಸ್ ಮಿತ್ರರೂ ಸೇರಿ ಮಾಡಿರುವ ಹೋರಾಟವದು. ಆ ಕೆಲಸವನ್ನೂ Complete ಮಾಡುವುದಕ್ಕೆ 386 ಕೋಟಿ ರೂ.ಗಳನ್ನು ಇಟ್ಟು, ಇವತ್ತು ಪೂರ್ಣ ಮಾಡಿಸುವ ಕೆಲಸವನ್ನು ಮಾಡಿಸುತ್ತಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ 22 ಕೆರೆಗಳಿಗೆ 140 ಕೋಟಿ ರೂ.ಗಳನ್ನು ಇಟ್ಟು ಪೂರ್ಣಗೊಳಿಸುವ ಕೆಲಸ ಆಗುತ್ತಿದೆ. ಭದ್ರಾ ನಾಲೆ ಆಧುನೀಕರಣ 1965ರಲ್ಲಿ ಪ್ರಾರಂಭವಾಯಿತು. ನಾನೂ ಆ ಭಾಗದವನು. ಅದು 1965ರಲ್ಲಿ ಆಗಿರುವ ಡ್ಯಾಂ. ಆಮೇಲೆ, ಅದಕ್ಕೆ maintenance grant ಕೊಟ್ಟಿರಲಿಲ್ಲ. ಸೋರಿಕೆಯಾಗಿ ನೀರು ಎಲ್ಲೆಲ್ಲೋ ಹೋಗುತ್ತಿತ್ತು. ಇವತ್ತು

ರಿಪೇರಿ ಮಾಡಲಿಕ್ಕೋಸ್ಕರ ಸಾಕಷ್ಟು ಹಣವನ್ನೊದಗಿಸಿ ಕೇವಲ 7 ತಿಂಗಳಲ್ಲಿ 900 ಕೋಟಿ ರೂ.ಗಳನ್ನು ಒದಗಿಸಿ, 12 package ಗಳನ್ನು ಮಾಡಿ, 7 ತಿಂಗಳಲ್ಲಿ ಪೂರ್ಣಗೊಳಿಸಬೇಕೆಂದು contractorಗೆ ಷರತ್ತನ್ನು ಹಾಕಿದ್ದಾರೆ. ಪೂರ್ಣಗೊಳಿಸದೇ ಇದ್ದರೆ ಅವರಿಗೆ ಪೆನಾಲ್ಟಿ ಹಾಕುತ್ತಾರೆ ಮತ್ತು ಅವರನ್ನು blacklist ಗೆ ಸೇರಿಸುತ್ತಾರೆ ಮತ್ತು ಅದರ ಉಸ್ತುವಾರಿಯನ್ನು ನೋಡಿಕೊಳ್ಳುವ Engineerಗಳ ಮೇಲೆ suspension ಆದೇಶ ಕೂಡ ಬರುತ್ತದೆಂದು ಹೇಳಿದ್ದಾರೆ. ಹೀಗೆ ಒಂದು time-bound programme ಹಾಕಿ irrigation projects ಅನ್ನು. .

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಯಾವ projects ಗೂ Conditions ಇರುವುದಿಲ್ಲ. ಯಾವ projects ಗೂ time-bound ಇರುವುದಿಲ್ಲ. ಯಾವ Engineer ಕೆಲಸ ಮಾಡಿಲ್ಲ ಎನ್ನುವುದಕ್ಕೆ guidelines ಇದ್ದರೆ ಹೇಳಿ. ನೀವು ಇಲ್ಲಿ ಕುಳಿತಿದ್ದಾಗ ಎಷ್ಟು ಪ್ರಿಪೇರ್ ಆಗಿರುತ್ತಿದ್ದಿರಿ. ಈಗ ಅಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ನೀವು ಪ್ರಿಪೇರ್ ಆಗದೇ ಒದ್ದಾಡುತ್ತಿದ್ದೀರಿ. Really, I am telling you. ಏಕೆಂದರೆ, ನಿಮ್ಮ ಫಿಗರ್ಸ್, ನೀವು ಏನೇನು ಮೆನ್‌ಷನ್ ಮಾಡುತ್ತಿದ್ದೀರಿ, it is all misguiding and it is false. ನೀವು ಈ ಕಡೆಯವರು ಮಾತನಾಡಬೇಕೆಂದು ಹೇಳಿ ನಾವೂ ಒಬ್ಬರು ಮಾತನಾಡಬೇಕೆನ್ನುವಂಥ ಪರಿಸ್ಥಿತಿಗೆ ತೆಗೆದುಕೊಂಡು ಹೋಗಿ ನೀವು ಮಾತನಾಡುವುದಕ್ಕೆ ಹೋಗಿ ಈಗ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದೀರಿ. ಡಿಫೆಂಡ್ ಮಾಡಿಕೊಳ್ಳವುದೇನಿದೆ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಈ ಸರ್ಕಾರ ನಿಮ್ಮಂಥ ಒಳ್ಳೆಯ ಶಾಸಕರಿಗೆ ಮಂತ್ರಿ ಮಾಡಿಲ್ಲ. ನೀವು ಮುಂಚೆ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : You speak on percentage. ಎಷ್ಟು ಅಲೋಕೇಷನ್ಸ್ ಅನ್ನು Percentage-wise ಮಾಡಿದ್ದೀರಿ? Slab system ಅನ್ನು total revenue ನೋಡಿ ಅಲೋಕೇಷನ್ ಮಾಡಬೇಕೇ ಹೊರತು ಕಳೆದ ವರ್ಷದ್ದು, ಈ ವರ್ಷದ್ದು ನೋಡಿ 200. ಕೋಟಿ ರೂ. 250 ಕೋಟಿ ರೂ. ಖರ್ಚು ಮಾಡಿದ್ದೇವೆಂದರೆ, 3,000 ಕೋಟಿ, ರೂ

ದಿಂದ 6,000 ಕೋಟಿ, ರೂ. revenue ನಿಮಗೆ ಜಾಸ್ತಿ ಇದೆ. ನೀವು Percentage ಮೇಲೆ ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ : Percentage ಬಗ್ಗೆ ಕೂಡ ನಾನು ಹೇಳಬಹುದು.

(ಗೊಂದಲ)

ನೀವೇ Minor Irrigation Minister ಆಗಿದ್ದೀರಿ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಕೆರೆ ಎಂದು ಹೇಳಿ ಅವರು ಕಳಸಾ ಬಂಡಾರಿ ವಿಷಯಕ್ಕೆ ಹೋದರು.

ಶ್ರೀ ಆರಗ ಜ್ಞಾನೇಂದ್ರ : Minor Irrigation ವಿಷಯ ಮಾತನಾಡುವಾಗ ಎಲ್ಲ ಒಂದೇ ಕಡೆ ಬರುತ್ತದೆ. ಅವೆಲ್ಲ Minor Irrigation ಗೆ ಸಂಬಂಧಪಟ್ಟಂಥ ಕೆರೆಗಳು. ಅದಕ್ಕೆ ನಾನು ಹೇಳುತ್ತಿದ್ದೇನೆ. ಇದರ ಜೊತೆಗೆ, ನೀವೇ ಸ್ವತಃ ಸಣ್ಣ ನೀರಾವರಿ ಮಂತ್ರಿಯಾಗಿದ್ದಿರಿ. ನಿಮಗೆಷ್ಟು ಬೇಜಾರಾಗಿತ್ತು? ಆವತ್ತು ಅಲೋಕೇಷನ್ ಏನಿತ್ತು? ಅವರಿಗೆ ಕೆಲಸ ಮಾಡುವ ಉತ್ಸಾಹ ತುಂಬಾ ಇತ್ತು. ನಾವೇ ಅಲ್ಲಿ ಕುಳಿತುಕೊಂಡು ಹೇಳಿದ್ದೆವು. ನೀವು ಒಳ್ಳೆಯ ಯುವಕರನ್ನು ಮಂತ್ರಿ ಮಾಡಿದ್ದೀರಿ, ಅವರ ಕೈಗೆ ಹಣ ಕೊಡಿ ಎಂದು ನಾವೇ ಹೇಳಿದ್ದೆವು. ಪಾಪ, ಅವರಿಗೆ ಹಣವೇ ಕೊಡಲಿಲ್ಲ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಜಲಸಂವರ್ಧನ ಯೋಜನೆ ಯಾವಾಗ ಬಂತು? ಆಗ ಅಲೋಕೇಷನ್ಸ್ ಎಲ್ಲಿಂದ start ಆಯಿತು? ಎಷ್ಟೆಷ್ಟು increase ಮಾಡುತ್ತಾ ಬಂದರು? ಅಲೋಕೇಷನ್ಸ್ ಅನ್ನು ಒಂದು ಸಾರಿ ಶುರು ಮಾಡಿದ ಮೇಲೆ steps ಸಿಕ್ಕಿತು ಹತ್ತುತ್ತಾ ಹೋದಿರಿ. steps ಇಲ್ಲವೆಂದರೆ ಹೇಗೆ ಹತ್ತುತ್ತಿದ್ದಿರಿ?

ಶ್ರೀ ಆರಗ ಜ್ಞಾನೇಂದ್ರ : ಯಾವ ಸ್ಟೆಪ್ ಸ್ವಾಮಿ?

ಶ್ರೀ ಎಂ.ಆರ್.ಸೀತಾರಾಂ : ಈಗ ನಿಮ್ಮನ್ನು ಮಂತ್ರಿ ಮಾಡಲಿ.

ಶ್ರೀ ಸಿದ್ದು ಕಲ್ಲಪ್ಪ ಸವದಿ : ನಮಗೆ ಸಣ್ಣ ನೀರಾವರಿಯಲ್ಲಿ ಒಂದು ಪೈಸೆ ಸಿಕ್ಕಿಲ್ಲ. ಈಗ ನಮ್ಮ ಸರ್ಕಾರ ಬಂದ ನಂತರ 3–4 ಕೋಟಿ ರೂ. ಪ್ರತಿ ವರ್ಷ.......

(ಗೊಂದಲ)

ಚೇರ್ಮನ್ : ಜ್ಞಾನೇಂದ್ರರವರೇ ನೀವು ಯಾರಿಗೂ ಯೀಲ್ಡ್ ಆಗಬೇಡಿ. ನೋಡಿ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಡುತ್ತೇನೆ, ನೀವು ಮಾತನಾಡುವಾಗ ಈಗೇನು ಹೇಳುತ್ತೀರೋ ಆಗ ಅದನ್ನು ಹೇಳಿ.. . ನೀವು ಬೇಗ ಮುಗಿಸಿ.. . ಅವರು ಯೀಲ್ಡ್ ಆಗುತ್ತಿಲ್ಲ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದು ಕಲ್ಲಪ್ಪ ಸಾವದಿ : ನಿಮ್ಮ ಕಾಲದಲ್ಲಿ ದುಡ್ಡು ಕೊಟ್ಟಿರಲಿಲ್ಲ ಇವರು ಬಂದ ಮೇಲೆ ಕೋಟಿ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಅವರು ಎರಡೂ ಸೇರಿಸಿ ಹೇಳುತ್ತಿದ್ದಾರೆ. ಒಂದು ನಿಮಿಷ ನನಗೆ ಅವಕಾಶ ಕೊಡಿ.

ಶ್ರೀ ಜಿ.ತಿಪ್ಪಾರೆಡ್ಡಿ : ಅವರಿಗೆ ಮಂತ್ರಿಗಳನ್ನಾಗಿ ಮಾಡಿಬಿಡಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅವರು ಎರಡೂ ಸೇರಿಸಿ ಹೇಳುತ್ತಿದ್ದಾರೆ. ಸದನಕ್ಕೆ ತಪ್ಪು ಮಾಹಿತಿ ಕೊಡಬೇಡಿ.

(ಗೊಂದಲ)

ಚೇರ್ಮನ್ : ನೋ, ನೋ ಇದು ಸರಿಯಲ್ಲ. ಪದೇ ಪದೇ ನೀವು ಏಕೆ ಹೇಳುತ್ತೀರಿ? ಡಾಕ್ಟರೇ, ನೀವು ಪದೇ ಪದೇ ಮಧ್ಯದಲ್ಲಿ ಎದ್ದೇಳುತ್ತಿದ್ದೀರಿ, ಏಕೆ ಹೀಗೆ ಮಾತನಾಡುತ್ತೀರಿ? ನೀವು ಮಾತನಾಡಿ ಎಲ್ಲಾ ಹೇಳಿದಿರಿ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಡಿ.ಎನ್.ಜೀವರಾಜ್ (ಮುಖ್ಯ ಸಚೇತಕರು) : ಒಂದು ಕೆಲಸ ಮಾಡಿ, ಡಾಕ್ಟರ್ ಹತ್ತಿರ ಭಾಷಣ ಬರೆಸಿಕೊಂಡು ಬಿಡಿ, ಡಾಕ್ಟರೆ, ನಿಮ್ಮ ಭಾಷಣ ಬರೆದು ಕೊಡಿ, ನಿಮ್ಮ ಭಾಷಣ ಅವರು ಓದುತ್ತಾರೆ. ಕುಮಾರ ಬಂಗಾರಪ್ಪನವರೆ, ನೀವು ಹೇಳಿದ ಹಾಗೆ ಅವರು ಹೇಳುತ್ತಾರೆ. ಹೀಗಾಗಿ ನೀವು ಅವರಿಗೆ ಭಾಷಣ ಬರೆದುಕೊಟ್ಟು ಬಿಡಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ನನ್ನ ಹತ್ತಿರ ಇರುವ ಮಾಹಿತಿಯಾಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ. ನನಗ ಈ ಸದನದಲ್ಲಿ ಆ ಸ್ವಾತಂತ್ರವಿದೆ ಎಂದು ಭಾವಿಸಿ ನಾನು ಮಾತನಾಡುತ್ತಿದ್ದೇನೆ. ನಿಮಗೂ ಕೂಡ ನನ್ನ

ಭಾಷಣವನ್ನು ಖಂಡನೆ ಮಾಡುವುದಕ್ಕೆ ಅವಕಾಶವಿದೆ. ಅವರು ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಈಗ ಅಲೋಕೇಷನ್ ಇಲ್ಲ, ಎಷ್ಟು ಇದೆ, ಇದನ್ನೆಲ್ಲಾ ಕೇಳುತ್ತಾರೆ. ಅವರು ಪ್ರಾಮಾಣಿಕವಾಗಿ ಒಪ್ಪುವುದಾದರೆ, ಖಂಡಿತವಾಗಿ ಕಣ್ಣು ತೆರೆದು ನೋಡಲಿ. ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ, ಇವರು ಏನು ಮಾಡಿದ್ದರು? ಸ್ವತಂತ್ರ ಬಂದು ಇದುವರೆಗೆ ನಮ್ಮ ರಾಜ್ಯದಲ್ಲಿ ಇದ್ದಂಥ First Grade College 168. ಈಗ ಕಳೆದ ವರ್ಷ 15 ಮತ್ತು ಈ ವರ್ಷ 167 First Grade College 168.

ಶ್ರೀ ಜಿ.ತಿಪ್ಪಾರೆಡ್ಡಿ : ನಂಜುಂಡಪ್ಪನವರ ವರದಿ ಪ್ರಕಾರ ಕೊಟ್ಟಿದ್ದೀರಾ?

ಶ್ರೀ ಆರಗ ಜ್ಞಾನೇಂದ್ರ : ನಾನೇಕೆ ಇದನ್ನು ಉಲ್ಲೇಖ ಮಾಡುತ್ತೇನೆಂದರೆ, ಇವತ್ತು ಶಿಕ್ಷಣ ಎಂದರೆ ವ್ಯಾಪಾರದ ವಸ್ತುವಾಗಿದೆ. ಖಾಸಗಿ ಶಿಕ್ಷಣ ಸಮಸ್ಥೆಗಳು ನಮ್ಮನ್ನು ತಿಂದು ತೇಗುತ್ತಿದ್ದಾರೆ. ದಲಿತರಿಗೆ ಬಡವರಿಗೆ ಶಿಕ್ಷಣ ಎನ್ನುವುದು ಮರೀಚಿಕೆಯಾಗಿದೆ. ಹಣವಂತರಿಗೆ ಮಾತ್ರ ಶಿಕ್ಷಣ ಎನ್ನುವ ಸ್ಥಿತಿಗೆ ಬಂದು ಮುಟ್ಟಿದ್ದೇವೆ. ಇಂಥ ಒಂದು ಕಾಲಘಟ್ಟದಲ್ಲಿ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಬಲಗೊಳಿಸಬೇಕಾಗಿದ್ದರಿಂದ ತಕ್ಷಣ ಸರ್ಕಾರ ಇವುಗಳನ್ನು ಜಾಸ್ತಿ ಮಾಡಿದರು. ನಾನು ಇವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಬಡವರಿಗೆ, ಸಾಮಾನ್ಯ ಜನರಿಗೆ, ಅನುಕೂಲವಾಗುತ್ತದೆ. ಈ ವರ್ಷ ನನ್ನ ತಾಲ್ಲೂಕಿಗೆ ಒಂದು first grade college ಕೊಟ್ಟರು..

ಶ್ರೀ ಎಂ.ಟಿ.ಬಿ.ನಾಗರಾಜು : ನೀವು ಅಭಿನಂದನೆ ಮಾಡುತ್ತೀರಿ, ಕೊಡದಿರುವವರು ಏನು ಹೇಳಬೇಕು?

ಚೇರ್ಮನ್ : ನೋಡಿ ನಾಗರಾಜುರವರೆ, ನಂತರ ನೀವೇ ಮಾತನಾಡುವಾಗ ಎಲ್ಲಾ ಹೇಳಿ, ಈಗ ಮಧ್ಯೆ ಏಕೆ ಮಾತನಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜ್ಞಾನೇಂದ್ರರವರು ತಪ್ಪು ತಿಳಿದುಕೊಳ್ಳಬೇಡಿ. ನೋಡಿ ಯಾವಾಗಲೂ ಕೂಡ ಶಿಕ್ಷಣವಾಗಲಿ, ಆರೋಗ್ಯವಾಗಲಿ, ಕೆಲವು ಕಾರ್ಯಕ್ರಮಗಳೇನು ಇರುತ್ತವೆ, ಇವು ಡಿಸ್ ಪ್ಯಾಷನೇಟ್ ಆಗಿ ನೀಟ್ ಬೇಸ್ಡ್ ಆಗಬೇಕು. ನೀವೇ ಆತ್ಮಸಾಕ್ಷಿಯಾಗಿ ಹೇಳಿ. ಡಿಗ್ರಿ ಕಾಲೇಜ್‌ಗಳು ಮುಖ್ಯನಾ? ಏನು ಪಿ.ಯು.ಸಿ. ಮುಖ್ಯನಾ? ನಾವು ಕಡ್ಡಾಯ ಶಿಕ್ಷಣದಲ್ಲಿ ಒಂದರಿಂದ ಏಳನೆಯ ತರಗತಿವರೆಗೆ ಕಡ್ಡಾಯವಾಗಿ ಶಿಕ್ಷಣ ಕೊಡಬೇಕು. ಇದು constitutional. ನೀವು ಕೇಳಿ, ಕೇಳದೇ ಇರಲಿ

ಎಲ್ಲಿ 20 ಮಕ್ಕಳು ಇರುತ್ತಾರೋ ಅಲ್ಲಿ ಶಾಲೆ ತೆರೆಯಲೇ ಬೇಕು, this is the direction of the Constitution. ಅದು ಆದ ಮೇಲೆ next ಬಡವರ ಮಕ್ಕಳಿಗೆ ಸಹಾಯವಾಗುವುದು ಯಾವುದು? ಹೈಸ್ಕೂಲ್. ಇದಾದ ಮೇಲೆ ಪಿ.ಯು.ಸಿ. ತದನಂತರ ಪ್ರೊಫೆಷನಲ್ ಕಾಲೇಜ್, ನೀವು ಇಂಜಿನಿಯರಿಂಗ್ ಹೋಗಬಹುದು, ಡಿಗ್ರಿ ಕಾಲೇಜ್‌ಗೆ ಹೋಗಬಹುದು, ಮೆಡಿಕಲ್‌ಗೆ ಹೋಗಬಹುದು, ಇತ್ತೀಚಿನ ಮಕ್ಕಳ ಟ್ರೆಂಡ್ ಏನಾಗಿದೆ ಎಂದರೆ, ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಪ್ರೊಫೆಷನಲ್ ಕಾಲೇಜ್ ಕಡೆ ಟ್ರೆಂಡ್ ಇದೆ. ನೀವು ಅಲ್ಲಿ ನೂರೆಂಟು ಆರ್ಟ್ಸ್ ಕಾಲೇಜ್‌ಗೆ ತೆಗೆದರೆ, ಅವರಿಗೆ ನೌಕರಿಯೂ ಇಲ್ಲ, ಅವರು ಪಾಪ ನಿರೋದ್ಯೋಗಿಯಾಗಿ ಸುಮ್ಮನೆ ಅಡ್ಡಾಡಬೇಕು. ಜೊತೆಗೆ ನೀಡ್ ಬೇಸ್ಡ್ ಇಲ್ಲ. ಯಾವಾಗಲೂ ಕೂಡ ಹಿಂದಕ್ಕೆ ಏನು ಮಾಡುತ್ತಿದ್ದರು ಎಂದರೆ, ಬೇಕಾದರೆ ನೀವು ಸರ್ವೇ ಮಾಡಿಕೊಂಡು ನಿಮ್ಮ ರಿಪೋರ್ಟ್ ತರಿಸಿಕೊಂಡು ನೋಡಿ. ಮೊದಲು ಹತ್ತು ಪ್ರೈಮರಿ ಸ್ಕೂಲ್ ಇದ್ದರೆ, ಒಂದು ಹೈಸ್ಕೂಲ್, ನಾಲ್ಕು ಹೈಸ್ಕೂಲ್ ಆದ ಮೇಲೆ ಒಂದು ಜೂನಿಯರ್ ಕಾಲೇಜ್. ನಾಲ್ಕೈದು ಜೂನಿಯರ್ ಕಾಲೇಜ್‌ಗಳು ಆದ ಮೇಲೆ ಒಂದು ಡಿಗ್ರಿ ಕಾಲೇಜ್. ಅಂದರೆ ಫೀಡಿಂಗ್ ಸೆಂಟರ್, ಡಿಗ್ರಿ ಕಾಲೇಜ್‌ಗೆ ಎಷ್ಟು ಮಕ್ಕಳು ಬರುತ್ತಿದ್ದಾರೆ ಎನ್ನುವುದರ ಮೇಲೆ ಕೊಡುತ್ತಿದ್ದರು. ಹಿಂದಕ್ಕೆ ಎಷ್ಟು ತೆಗಿದಿದ್ದಾರೆ, ಮುಂದೆ ಎಷ್ಟು ತೆಗಿದಿದ್ದಾರೆ, ಆ ಪ್ರಶ್ನೆಯಲ್ಲ. ನೀವು ನೀಡ್ ಬೇಸ್ಡ್ ಆಗಿ ತೆಗಿದಿದ್ದೀರಾ? ಇಲ್ಲ. Indiscriminately allot ಮಾಡಿಕೊಂಡಿದ್ದೀರಿ. ಏಕೆಂದರೆ, judiciously ಮಾಡಿದ್ದರೆ ವರದಿ ಪ್ರಕಾರ ಮಾಡಬೇಕಾಗಿತ್ತು. ಇದು ಸುಮ್ಮನೆ ಸಮಾಧಾನಕ್ಕೆ ಚಪ್ಪಾಳೆ ಬಾರಿಸಿ ಕೊಳ್ಳುವುದಕ್ಕೆ, ಬೆನ್ನು ತಟ್ಟಿಸಿಕೊಳ್ಳುವುದಕ್ಕೆ ಹೇಳಬೇಕಾದರೆ ಹೇಳಿ. ಆದರೆ, ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ವರದಿ ಇದೆ. ಆ ವರದಿಯಾಧಾರದಮೇಲೆ ಮಾಡಿದ್ದೇವೆಂದರೆ ಒಪ್ಪುತ್ತೇವೆ. ಬೇಕಾದರೆ ಹಂಚುವಾಗ, ಜ್ಞಾನೇಂದ್ರ ರವರು ನಮ್ಮ ಪಾರ್ಟಿಯವರು ಹೀಗಾಗಿ ನಮಗೆಲ್ಲಾ ಒಂದು ಕೊಟ್ಟರೆ ಅವರಿಗೆ ಅವಶ್ಯಕತೆಯಿದೆ ಎಂದು ಎರಡು ಕೊಟ್ಟರೆ ಅದನ್ನು ಒಪ್ಪಬಹುದು. ಅದನ್ನು ಬಿಟ್ಟು ನೀವು ಡಿಗ್ರಿ ಕಾಲೇಜ್ ಬಹಳ ಮಾಡಿದ್ದಾರೆಂದರೆ ಏನು? ಈಗ ನೋಡಿ ಆ ಕಾಲೇಜ್‌ನಲ್ಲಿ ಟೀಚರ್ ಇರುವುದಿಲ್ಲ. ಬಿಲ್ಡಿಂಗ್ ಇರುವುದಿಲ್ಲ. ಪಾಪ, ಹಳ್ಳಿಯ ಮಕ್ಕಳು ಹತ್ತಿರ ಕಾಲೇಜ್ ಇದೆಯೆಂದು ಅಲ್ಲಿಗೆ ಹೋಗುತ್ತಾರೆ. ಕೊನೆಗೆ ಫೇಲ್ ಆಗಿ ಬರುತ್ತಾರೆ. ಈಗ ಅನೇಕ ಕಡೆ ನಮ್ಮ

ಬಡ ಹುಡುಗರು, ಮ್ಯಾಥೆಮ್ಯಾಟಿಕ್ಸ್, ಇಂಗ್ಲೀಷ್, ಸೈನ್ಸ್, ಇದರಲ್ಲಿ ಏಕೆ ಫೇಲ್ ಆಗುತ್ತಾರೆಂದರೆ, ಟೀಚರ್‌ಗಳು ಇರುವುದಿಲ್ಲ. ನನಗೆ ಗೊತ್ತು. ನಾನು 1976ರಲ್ಲಿ ಈ ಪೋರ್ಟ್‌ಫೋಲಿಯೋ ಹ್ಯಾಂಡ್ಲ್ ಮಾಡಿದ್ದೇನೆ. ನಿಮಗೆ ಗೊತ್ತಿರಬಹುದು. ಆಗ ಸರಿಯಾಗಿ ವಿದ್ಯಾಭ್ಯಾಸ ಮಾಡುವುದಿಲ್ಲ ಎಂದು ತಿಳಿದುಕೊಂಡು ಆಲ್ ತಾಲ್ಲೂಕಾ ಬೋರ್ಡ್ ಸ್ಕೂಲ್‌ಗಳನ್ನು ನಾನು ಹ್ಯಾಂಡ್ ಓವರ್ ಮಾಡಿಕೊಂಡೆವು. ಮುನಿಸಿಪಾಲಿಟಿ ಹ್ಯಾಂಡ್ ಓವರ್ ಮಾಡಿಕೊಂಡೆವು. ಸರಿಯಾಗಿ ಓದಿಸುವುದಿಲ್ಲವೆಂದು ಚೆಕ್ ಸಿಸ್ಟಂ ಇಂಟ್ರೊಡ್ಯೂಸ್ ಮಾಡಿದೆವು. ಆ ವಿಚಾರ ಬಿಡಿ. ನಾನು ಏಕೆ ಹೇಳಿದೆ ಎಂದರೆ, ನೀವು ನೀಡ್ ಬೇಸ್ಡ್ ಮಾಡಿದ್ದರೆ ಅದಕ್ಕೆ ಶಹಾಬಾಷಗಿರಿ ಕೊಡೋಣ. ನಿಮಗೆ ಬೇಕಾಗಿರುವ ಕಡೆಯಲ್ಲಿ ಕೊಟ್ಟಿದ್ದೀರಿ. ಅದಕ್ಕೆ ನೀವು ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತೀರಿ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳಿದ್ದಾರೆ, ಇದರಲ್ಲಿ ಖಂಡಿತವಾಗಿಯೂ ನೀಡ್ ಬೇಸ್ಡ್ ಇದೆ. ಇಲ್ಲಿ ಪಿಸಿಎಂಸಿ ಕೋರ್ಸ್‌ಸ್ ಎಲ್ಲಿದೆ, ಪ್ರೊಫೆಷನಲ್, ಇದರಲ್ಲಿ ಇಂಜಿನಿಯರ್ಸ್ ಮಾತ್ರ ಹೊಗುತ್ತಿಲ್ಲ. ಈವನ್ ಕಂಪ್ಯೂಟರ್ ಗ್ರಾಜ್ಯೂಯೇಟ್ಸ್‌ಗೆ ಕೂಡ ಅವಕಾಶವಿದೆ. ಇದರಲ್ಲಿ ನ್ಯಾಚುರಲ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್‌ಗೆ ಸಂಬಂಧಪಟ್ಟ ಕೋರ್ಸ್‌ಗಳು, ಬಿಬಿಎಂ ಕೋರ್ಸ್‌ಗಳು, ಪಿಸಿಎಂಸಿ ಕೋರ್ಸ್‌ಗಳು, ಇವೆಲ್ಲಾ ಈ ಹೊಸ ಕಾಲೇಜ್‌ಗಳಲ್ಲಿ ಸಿಕ್ಕುತ್ತಿರುವುದರಿಂದ, ಎಲ್ಲಿ ಅವಕಾಶವೇ ಸಿಕ್ಕಿಲ್ಲ ಅಂಥವರಿಗೆಲ್ಲಾ ಅವಕಾಶ ಸಿಗುತ್ತಿದೆ. ಹೀಗಾಗಿ ನಾವು ಇದನ್ನು ಖಂಡಿತವಾಗಿ ಸ್ವಾಗತಿಸಬೇಕಾಗುತ್ತದೆ.

ಶ್ರೀ ಶಿವಾನಂದ ಎಸ್.ಪಾಟೀಲ್ : ನಿಮ್ಮವರು ಬಂದಮೇಲೆ 171 ಜೂನಿಯರ್ ಕಾಲೇಜ್‌ಗಳನ್ನು ತೆರೆದಿದ್ದಾರೆ. ಅದರಲ್ಲಿ ಒಂದೇ ಒಂದು ಸೈನ್ಸ್ ಕಾಲೇಜ್ ಕಲಘಟಗಿಗೆ ಇಲ್ಲ. ಏಕೆಂದರೆ, ಆ ತಾಲ್ಲೂಕು ಮಂತ್ರಿಗಳಾದ ಮಾನ್ಯ ಹೊರಟ್ಟಿಯವರ ವ್ಯಾಪ್ತಿಗೆ ಬರುತ್ತದೆ. ಇದು ಯಾವ ನ್ಯಾಯ ನೀವೇ ಹೇಳಿ. ಕಾಮರ್ಸ್ ಇಲ್ಲ, ಸೈನ್ಸ್ ಇಲ್ಲ, ನಮಗೂ ಅನ್ನಿಸುತ್ತದೆ. ನೀವು ತೆಗಿದಿದ್ದೀರಿ ಅದಕ್ಕೆ ಶಹಬಾಷಗಿರಿ ಕೊಡೋಣ. ಆದರೆ, ಕ್ವಾಲಿಟಿ ಎಜ್ಯುಕೇಷನ್ ಬೇಕಲ್ಲವೇ? ಇವತ್ತಿನ ದಿವಸ ಆರ್ಟ್ಸ್‌ಗೆ ಯಾರು ಹೋಗುತ್ತಾರೆ? ಇವತ್ತು ಎಷ್ಟು ಆರ್ಟ್ಸ್ ಗ್ರಾಜ್ಯುಯೇಟ್ಸ್ ಅನ್ ಎಂಪ್ಲಾಯಿಮೆಂಟ್ ಆಗಿ ನಿಮ್ಮ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಎನ್‌ರೋಲ್ ಮಾಡಿದ್ದಾರೆ ನೀವೇ ಹೇಳಿ.

ಶ್ರೀ ಡಿ.ಎನ್.ಜೀವರಾಜ್ : ಶೃಂಗೇರಿನಲ್ಲಿ ಒಂದು First Grade College ತೆಗೆದರು. ಈ ವರ್ಷ ತೆಗೆದರೆ, 188 ಮಕ್ಕಳು ಅಡ್ಮಿಷನ್ ಆಗಿದೆ. ಅಂದರೆ ನಾನೇನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ತುಂಬ ಜನರಿಗೆ ಕಾಲೇಜಿಗೆ ಹೋಗಲಿಕ್ಕೆ ಆಗದಿದ್ದಂಥ ಬಡವರ ಮಕ್ಕಳು, ಕಾಲೇಜ್‌ಗೆ ಹೋಗದೆ ಡಿಸ್‌ಕಂಟಿನ್ಯೂ ಮಾಡುತ್ತಿದ್ದರು. ಅವರಿಗೆ ಅಲ್ಲಿ ಕಾಲೇಜ್ ಆಗಿದ್ದರಿಂದ ತುಂಬಾ ಜನಕ್ಕೆ ಇದರಿಂದಾಗಿ ಡಿಗ್ರಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಷ್ಟೇ ವಿಷಯ.

ಶ್ರೀ ದಿನೇಶ್ ಗುಂಡೂರಾವ್ : ನನಗೆ ಅರ್ಧಗಂಟೆ ಕೊಟ್ಟಿರಿ, ಈಗ ಅವರಿಗೆ ಮುಕ್ಕಾಲು ಗಂಟೆ ಕೊಟ್ಟಿದ್ದೀರಿ. ನೋಡಿ ಯಾವ ರೀತಿ ತಾರತಮ್ಯವಾಗುತ್ತಿದೆ. ನನಗೆ ಮಾತ್ರ ಯಾವಾಗ ಮುಗಿಸುತ್ತೀರಿ, ಯಾವಾಗ ಮುಗಿಸುತ್ತೀರಿ ಎಂದು ಅಧ್ಯಕ್ಷರು ಕೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೈಸ್ಕೂಲ್, ಕಾಲೇಜ್ ಕೊಡುವುದರಲ್ಲಿ ತಾರತಮ್ಯವಾದ ರೀತಿ ಇಲ್ಲಿಯೂ ಆಗುತ್ತದೆಯೆ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಒಬ್ಬೊಬ್ಬರು ನಾಲ್ಕು ನಾಲ್ಕು ಗಂಟೆಗಳ ಕಾಲ ಮಾತನಾಡಿದ್ದಾರೆ.

ಶ್ರೀ ಡಿ.ಎನ್.ನಾಗರಾಜ್ : ಅಪೋಜಿಷನ್‌ರವರು ಮತ್ತು ರೂಲಿಂಗ್ ನವರು ಎಷ್ಟೆಷ್ಟು ಗಂಟೆಗಳ ಕಾಲ ಮಾತನಾಡಿದ್ದಾರೆಂಬುದನ್ನು ರೆಕಾರ್ಡ್ ತೆಗಿಸಿ ನೋಡಿ. ಜ್ಞಾನೇಂದ್ರರವರು ಮಾತನಾಡಿದ್ದೇ ಅರ್ಧಗಂಟೆ. ರೂಲಿಂಗ್ ಕಡೆಯವರು ಯಾರೂ ಮಾತನಾಡಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ರೂಲಿಂಗ್ ಕಡೆ ನಾವು ಯಾರು ಮಾತನಾಡಿಲ್ಲ. ನಾವು ಹಾಗೆಯೇ ಇದ್ದೇವೆ. ಹಿರಿಯರಾದ ಮಾನ್ಯ ಖರ್ಗೆಯವರು ಸುಮಾರು ಒಂದು ಗಂಟೆ ಕಾಲ ಮಾತನಾಡಿದಾಗ ನಾವು ಕೇಳಿದ್ದೇವೆ. ಏಕೆಂದರೆ, ಕಿರಿಯರಿಂದ ಹಿಡಿದು ದಿನೇಶ್ ಗುಂಡೂರಾವ್ ರವರಿಂದ ಹಿಡಿದು ಎಲ್ಲರೂ ಕೂಡ ಮಾತನಾಡಿದ್ದಾರೆ. ನಮಗೆ ಇಲ್ಲಿ ಅವಕಾಶ ಕೊಡದೇ ಇದ್ದರೆ ಹೇಗೆ? ನಾನು ಅಸೆಂಬ್ಲಿಯಲ್ಲಿ ಮಾತನಾಡಿದ್ದು ಬೋರ್ ಎಂದು ತಾವು ಹೇಳಿದರೆ ನಾನು ಕುಳಿತುಬಿಡುತ್ತೇನೆ. ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲಿಕ್ಕೆ ಎಲ್ಲಿಯಾದರೂ ಒಂದು ಸ್ಥಳ ಬೇಕಾಗುತ್ತದೆ. ನಾನು ಹೇಳುವುದು ಇಷ್ಟೆ. ಈಗಾಗಲೇ ಜೀವರಾಜ್‌ರವರು ನಾನು ಏನು ಹೇಳಬೇಕಾಗಿತ್ತು ಆ ಅಂಶವನ್ನು ಹೇಳಿದರು. ಇದು ನೀಡ್ ಬೇಸ್ಡ್. ನೀಡ್

ಇತ್ತು. ಅದಕ್ಕಾಗಿ ಇವತ್ತು ಎಲ್ಲಾ ಕಾಲೇಜುಗಳಿಗೆ ಅಡ್ಮಿಷನ್ ಆಗಿದೆ. ಮೊನ್ನೆದಿನ 220 ವಿದ್ಯಾರ್ಥಿಗಳು ನನ್ನ ತೀರ್ಥಹಳ್ಳಿಯಲ್ಲಿ ಅಡ್ಮಿಷನ್ ಆಗಿದೆ. 250 ವಿದ್ಯಾರ್ಥಿಗಳು ಮಂಗಳೂರಿನಲ್ಲಿ ಅಡ್ಮಿಷನ್ ಆಗಿದೆ. ಅಂದರೆ, ಎಲ್ಲಿ ಖಾಸಗಿ ಕಾಲೇಜುಗಳಿಗೆ ಹೋಗಲಿಕ್ಕೆ ಶಕ್ತಿಯಿಲ್ಲದೇ ಡಿಸ್‌ಕಂಟಿನ್ಯೂ ಮಾಡುತ್ತಿದ್ದರು ಅಂಥವರೆಲ್ಲರೂ ಕೂಡ ಇವತ್ತು ಈ ಕಾಲೇಜ್‌ಗಳಲ್ಲಿ ಸೇರುತ್ತಿದ್ದಾರೆ.

(2-30 PM)

ನಾನು ಒಂದನ್ನು ಅರ್ಥಮಾಡಿಕೊಳ್ಳಬೇಕು. ಅದೇನೆಂದರೆ, ಒಂದು ಅಭಿವೃದ್ಧಿ ಶೀಲ ರಾಷ್ಟ್ರವೆಂದು ಕರೆಸಿಕೊಳ್ಳಬೇಕಾದರೆ, ಕನಿಷ್ಟ ಶೇಕಡ 30 ಜನರಾದರೂ ಉನ್ನತ ಶಿಕ್ಷಣಕ್ಕೆ ಹೋಗಬೇಕು. ಆದರೆ, ನಮ್ಮ ದೇಶದಲ್ಲಿ ಉನ್ನತ ಶಿಕ್ಷಣ ಶೇಕಡ ಕೇವಲ ಏಳು ಜನರಿಗೆ ಸಿಗುತ್ತಿದೆ. ಈ ಆಧಾರದ ಮೇಲೆ ನಮ್ಮ ರಾಜ್ಯ ತೆಗದುಕೊಂಡಿರತಕ್ಕಂಥ ನಿಲುವಿನಿಂದ ಇವತ್ತಿನದಿವಸ ಎಷ್ಟು ಕಾಲೇಜು ಆರಂಭ ಮಾಡಿರತಕ್ಕಂಥ ಎತ್ತರಕ್ಕೆ ಏರುವಂಥ ಒಂದು ಸಾಧನೆ ಮತ್ತು ಒಂದು ದೃಢವಾಗಿರತಕ್ಕಂಥ ದಿಟ್ಟ ಹೆಜ್ಜೆಯಾಗಿದೆ. ಅಭಿವೃದ್ಧಿ ಎಂದ ಕೂಡಲೇ ಒಂದು ರಸ್ತೆ ಅಥವಾ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಕಟ್ಟಡಗಳನ್ನು ಮಾಡುವುದಲ್ಲ. ಶಿಕ್ಷಣ ಸಂಸ್ಥೆಗಳನ್ನು ಜಾಸ್ತಿ ಮಾಡತಕ್ಕಂಥದ್ದು, ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರು ಇಲ್ಲಿಯೇ ಇದ್ದಾರೆ. ಕಳೆದ ವರ್ಷ ಮತ್ತು ಈ ವರ್ಷ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಪ್ರಾರಂಭವಾಗಿವೆ. ಇದರಿಂದ ಬಡವರ ಮತ್ತು ದಲಿತರ ಮಕ್ಕಳಿಗೆ ಉಪಯೋಗವಾಗುತ್ತದೆ. ಇದರ ಜೊತೆಗೆ ಹಾಸ್ಟೆಲ್‌ಗಳು ಎಷ್ಟಾಗಿವೆ? ಕಳೆದ ವರ್ಷ ಎಸ್‌ಸಿ ಹಾಸ್ಟೆಲ್ 50, ಬಿಸಿಎಂ ಹಾಸ್ಟೆಲ್ 50. ಈ ಸಾಲಿನಲ್ಲಿ ಎಸ್‌ಸಿ 75 ಹಾಸ್ಟೆಲ್, 75 ಬಿಸಿಎಂ ಹಾಸ್ಟೆಲ್ ಮತ್ತು 10 ಎಸ್‌ಟಿ ಹಾಸ್ಟೆಲ್ ಪ್ರಾರಂಭ ಮಾಡಲಾಗಿದೆ. ಆದರೆ ಕಳೆದ ಮೂರ್‍ನಾಲ್ಕು ವರ್ಷಗಳಿಂದ ನೀವು ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿರಲಿಲ್ಲ. ಪ್ರಥಮ ಬಾರಿಗೆ ಬಡವರ ಮತ್ತು ದಲಿತರ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಮತ್ತು ಒಂದು ತುತ್ತು ಅನ್ನ ಹಾಕಿ ವಸತಿ ಕೊಟ್ಟು ಶಿಕ್ಷಣ ಕೊಡುವಂಥ ವ್ಯವಸ್ಥೆಯನ್ನು ಇವತ್ತು ನಮ್ಮ ಸರ್ಕಾರ ಮಾಡಿದೆ. ಆದ್ದರಿಂದ, ನಾವು ಅಭಿನಂದನೆ ಸಲ್ಲಿಸತಕ್ಕಂಥ ಅವಶ್ಯಕತೆ ಇದೆ. 6 ಮೆಡಿಕಲ್ ಕಾಲೇಜು, 8 ಇಂಜಿನಿಯರಿಂಗ್ ಕಾಲೇಜು ಪ್ರಾರಂಭ ಮಾಡಲಾಗಿದೆ. ಮತ್ತೆ ನಾನು ಈಗಾಗಲೇ ಹೇಳಿದಂತೆ ಫಸ್ಟ್‌ಗ್ರೇಡ್ ಕಾಲೇಜು 168 ಇತ್ತು. ಒಂದೇ ವರ್ಷದಲ್ಲಿ ಮತ್ತೆ 167 ಕಾಲೇಜುಗಳನ್ನು ಪ್ರಾರಂಭ

ಮಾಡಲಾಗಿದೆ. ಮತ್ತೆ 450 ಪಿಯುಸಿ ಕಾಲೇಜುಗಳನ್ನು ಮಾಡಲಾಗಿದೆ. ಈಗ ಮತ್ತೊಂದು ಲಿಸ್ಟ್ ಬರುತ್ತಿದೆ. ಹೈಸ್ಕೂಲ್ ಗಳನ್ನು ಒಂದು ಸಾವಿರ ಪ್ರಾರಂಭ ಮಾಡಲಾಗಿದೆ. ಮಾನ್ಯ ದೇಶಪಾಂಡೆಯವರೆ, ತಾವೆಲ್ಲರೂ ಹಿರಿಯರು. ಇದರ ಬಗ್ಗೆ ತಾವುಗಳು ಪ್ರಾಮಾಣಿಕವಾಗಿ ಆಲೋಚನೆ ಮಾಡಬೇಕೆಂದು ನನ್ನ ವಿನಂತಿ. 22 ಹೊಸ ಪಾಲಿಟೆಕ್ನಿಕ್‌ಗಳು ಆರಂಭವಾಗಿವೆ. ಇವುಗಳೆಲ್ಲಾ ಜಾಬ್ ಓರಿಯೆಂಟೆಡ್ ಕೋರ್ಸ್‌ಗಳಲ್ಲವೇ? ಗ್ರಾಂಟ್‌ಇನ್ ಏಡ್‌ಗೆ ಸೇರಿಸಿರುವ 20 ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ. ಇದೆಲ್ಲಾ ಶಿಕ್ಷಣ ಕ್ಷೇತ್ರದಲ್ಲಿ ಸಮ್ಮಿಶ್ರ ಸರ್ಕಾರ ಮಾಡಿರತಕ್ಕಂಥ ಒಂದು ದೊಡ್ಡ ಕ್ರಾಂತಿ. ನಾನು ಇದನ್ನು ಹೊಗಳಿಕೆಗೆ ಹೇಳುತ್ತಿಲ್ಲ. ಇವತ್ತಿನ ದಿವಸ ಸಾಮಾನ್ಯ ಜನರು ಇದನ್ನು ಹೇಳುತ್ತಿದ್ದಾರೆ. ಇದಕ್ಕೆಲ್ಲಾ ಎಲ್ಲಿಂದ ಹಣ ಬಂತು? ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಕುಮಾರಸ್ವಾಮಿಯವರು ಭಾರಿ ದೈವಭಕ್ತರೆಂದು ದೇವರೇನೂ ಮೇಲಿಂದ ಹಣವನ್ನು ಸುರಿಸಿಲ್ಲ. ನಮ್ಮ ತೆರಿಗೆಯ ಹಣವನ್ನು ಸರಿಯಾದ ರೀತಿಯಲ್ಲಿ ವಸೂಲ್ಮಾಡಿ ಸರಿಯಾದಂಥ ರೀತಿಯಲ್ಲಿ ಇವತ್ತು ವಿನಿಯೋಗವಾಗುವಂತಹ ಒಂದು ದ್ಯೋತಕವಾಗಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಂತಹ ಸಂದರ್ಭದಲ್ಲಿ ಯೂನಿಟ್ ಕಾಸ್ಟ್ ಬಗ್ಗೆ ಮಾತನಾಡಿದರು. ಯೂನಿಟ್ ಕಾಸ್ಟ್‌ನ್ನು ಇವತ್ತಿನ ದಿವಸ ಜಾಸ್ತಿ ಮಾಡತಕ್ಕಂಥ ಅವಶ್ಯಕತೆ ಇದೆ. ಹಾಸ್ಟೆಲ್‌ನಲ್ಲಿರುವ ಮಕ್ಕಳಿಗೆ ಊಟಕ್ಕೆ ಕೊಡುತ್ತಿರುವ ಹಣ ಸಾಕಾಗುತ್ತಿಲ್ಲ. ಅದನ್ನು ಜಾಸ್ತಿ ಮಾಡತಕ್ಕಂಥ ಅವಶ್ಯಕತೆ ಇದೆ. ಮತ್ತೆ ಗಂಗಾಕಲ್ಯಾಣ ಯೋಜನೆಯ ಯೂನಿಟ್ ಕಾಸ್ಟ್‌ನ್ನೂ ಕೂಡ ಜಾಸ್ತಿ ಮಾಡಲಾಗಿದೆ. 75,000 ರೂಪಾಯಿಗಳಿದ್ದದ್ದನ್ನು ಒಂದು ಲಕ್ಷ ರೂಪಾಯಿಗೆ ಹೆಚ್ಚಿಸಲಾಗಿದೆ. ಮತ್ತೆ ಈ ರಾಜ್ಯದಲ್ಲಿ ಹತ್ತು ಸಾವಿರ ಬೋರ್‌ವೆಲ್‌ಗಳನ್ನು ಕೊಟ್ಟು ದಲಿತರಿಗೆ ಬಹಳ ದೊಡ್ಡ ಉಪಕಾರವನ್ನು ಈ ಸರ್ಕಾರ ಮಾಡಿದೆ. ನಮ್ಮ ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ವಿಶೇಷವಾಗಿ ಅಕ್ಷರ ದಾಸೋಹದಲ್ಲಿ ಅಡುಗೆ ಮಾಡತಕ್ಕಂಥವರು ಇದ್ದಾರೆ. ಮುಖ್ಯ ಅಡುಗೆ ಕೆಲಸದವರಿಗೆ 650 ರೂಪಾಯಿ ಮತ್ತು ಸಹಾಯಕ ಅಡುಗೆಯವರಿಗೆ 400 ರೂಪಾಯಿ ನೀಡಲಾಗುತ್ತದೆ. ಇದು ಕಡಿಮೆಯಾದ್ದರಿಂದ, ಹಳ್ಳಿಗಳಲ್ಲಿ ಅಡುಗೆ ಸಹಾಯಕರಾಗಿ ಕೆಲಸ ಮಾಡುವುದಕ್ಕೆ ಯಾರೂ ಹೋಗುತ್ತಿಲ್ಲ. ನಾವು ಯಾರನ್ನಾದರೂ ಕರೆದುಕೊಂಡು ಬಂದು ಈ ಕೆಲಸವನ್ನು ಮಾಡಿಸುತ್ತಿದ್ದೇವೆ. ಕನಿಷ್ಠ ಅವರಿಗೆ 1,000 ಅಥವಾ 800 ರೂಪಾಯಿ ಕೊಡುವಂತಹ ಕೆಲಸ

ಆಗಬೇಕು. ಇವತ್ತಿನ ದಿವಸ ಅಂಗವಿಕರ ಪಿಂಚಣಿ ಮತ್ತು ವಿಧವೆಯರ ವೇತನವನ್ನು ಜಾಸ್ತಿ ಮಾಡಿದ್ದೇವೆ. ಅದಕ್ಕಾಗಿ ಸರ್ಕಾರವನ್ನು ನಿಜವಾಗಿ ಅಭಿನಂದನೆ ಸಲ್ಲಿಸುತ್ತೇವೆ. ಮೊದಲು 200 ರೂಪಾಯಿ ಇದ್ದಂಥದ್ದನ್ನು 400 ರೂಪಾಯಿಗೆ ಮಾಡಿದ್ದರಿಂದ ಅವರೂ ಸಹ ಬದುಕುವುದಕ್ಕೆ ಸಹಾಯವಾಗಿದೆ. ಹಾಗೆಯೇ 65 ವರ್ಷಕ್ಕಿಂತ ಮೇಲ್ಪಟ್ಟಂತಹವರಿಗೆ 400 ರೂಪಾಯಿ ಪೆನ್‌ಷನ್ ಕೊಡತಕ್ಕಂಥ ಕೆಲಸ ಮಾಡಿದೆ. ಇವೆಲ್ಲಾ ಸರ್ಕಾರ ಮಾಡಿರುವ ಕ್ರಾಂತಿಕಾರಕವಾದಂಥ ಕೆಲಸವೆಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಶಾಲೆ ಮಕ್ಕಳಿಗೆ ಅಡುಗೆಯನ್ನು ಮಾಡಿ ಹಾಕುತ್ತಿರುವವರಿಗೆ ಕನಿಷ್ಠ ಒಂದು ಸಾವಿರ ರೂಪಾಯಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ಮಾತನಾಡಲು ಬಹಳ ವಿಷಯಗಳಿದ್ದರೂ ಸಹ ನನಗೆ ಸಮಯವನ್ನು ನಿಗದಿ ಮಾಡಿದ್ದರಿಂದ, ನಾನು ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ್ ಎಸ್.ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಛೇರ್ಮನ್‌ರವರೇ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ. ಮಾನ್ಯ ಜ್ಞಾನೇಂದ್ರರವರು ನಮ್ಮ ಜೊತೆಯಲ್ಲಿ ಇತ್ತ ಕಡೆ ಕುಳಿತಾಗ ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಆ ಕಡೆ ಹೋಗಿ ಸ್ವಲ್ಪ ಬದಲಾವಣೆಯಾಗಿದ್ದಾರೆ. ಹೊಗಳುವುದು ಅವರದು ಬಹಳ ಆಯಿತು. ಮಾನ್ಯ ಮುಖ್ಯಮಂತ್ರಿಗಳು ನಿಮ್ಮಷ್ಟೆ ನನಗೂ ಸಹ ಆತ್ಮೀಯ ಗೆಳೆಯ. ಆದರೆ, ತಾವು ಅವರನ್ನು ಬಹಳ ಹೊಗಳಿಬಿಟ್ಟಿರಿ. ಹೊಗಳಿ ಹೊಗಳಿ ಹೊನ್ನ ಶೂಲಕ್ಕೆ ಏರಿಸಿದಂತಾಗಬಾರದು. ಅವರು ನಮ್ಮಲ್ಲಿ ಕೂಡ ಬಂದು ಮಲಗಲಿ. ನಾವೂ ಹಾಸಿಗೆ ಕೊಡುತ್ತೇವೆ. ಆದರೆ, ಅವರು ಮಲಗುವುದರಿಂದ ಕೆಲಸ ಆಗಬೇಕಲ್ಲವೇ?

ಶ್ರೀ ಆರಗ ಜ್ಞಾನೇಂದ್ರ : ನಮ್ಮಲ್ಲಿರತಕ್ಕಂಥ ಏರಿಯಾಗಳು ಬಹಳ ಸೂಕ್ಷ್ಮವಾದಂಥ ಪ್ರದೇಶವಾಗಿವೆ. ಅಲ್ಲಿ ಹೋಗಿ ಅಲ್ಲಿನ ಜನರಿಗೆ ಆತ್ಮವಿಶ್ವಾಸ ತುಂಬುವಂಥ ಅವಶ್ಯಕತೆ ಇದೆ. ಮೊನ್ನೆ ದಿವಸ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ವಿಧಾನ ಸೌಧದಲ್ಲಿ ಸಭೆ ಮಾಡಬೇಡಿ, ಅಲ್ಲಿಗೆ ಹೋಗಿ ಮಾಡಿ ಎಂದು ಹೇಳಿದರು.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಆರಗ ಜ್ಞಾನೇಂದ್ರರವರು ಹೇಳತಕ್ಕಂಥದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ನಾವು ಇವತ್ತಿನ ದಿವಸ ಆತ್ಮವಿಶ್ವಾಸವನ್ನು ಕಳೆದುಕೊಳ್ಳುವಂಥ ಸ್ಥಿತಿಗೆ

ಬಂದಿದ್ದೇವೆ. ಮಾನ್ಯ ಜ್ಞಾನೇಂದ್ರರವರು is a good lawyer, but pleaded bad cases ಇವತ್ತು, ಮಾನ್ಯ ರೇವಣ್ಣನವರು ಎದ್ದು ಹೊರಕ್ಕೆ ಹೋಗಿದ್ದಾರೆ. ಅವರು ಎಲ್ಲರಿಗಿಂತ ಹೆಚ್ಚು ನೇಮಕಾತಿಯನ್ನು ಮಾಡಿದ್ದಾರೆ. ಅವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಆದರೆ, ಕೆಇಬಿಯಲ್ಲಿ ಹೆಣ್ಣು ಮಕ್ಕಳನ್ನು ಲೈನ್‌ಮೆನ್ ಹುದ್ದೆಗೆ ಈ ಸಾರಿ ನೇಮಕ ಮಾಡಿಕೊಂಡಿದ್ದಾರೆ. ನನಗೆ ಆಶ್ಚರ್ಯವಾಗಿ women linemen ಕಂಬವನ್ನು ಹೇಗೆ ಹತ್ತುತ್ತಾರೆಂದು ನಾನು ಹೋಗಿ ಅವರನ್ನು ಕೇಳಿದೆ. ದಯಮಾಡಿ ಇವರನ್ನು ನೇಮಕ ಮಾಡಿಕೊಳ್ಳಬೇಡಿ ಎಂದು ನಾವು ವಿನಂತಿ ಮಾಡಿಕೊಂಡ ಮೇಲೆ ಆನಂತರ ಬದಲಾವಣೆ ಮಾಡಿದರು. ನೇಮಕವಾಗುವ ಸಂದರ್ಭದಲ್ಲಿ ಇಂಥವೂ ಕೂಡ ಆಗುತ್ತವೆ. ಮಾನ್ಯ ಜ್ಞಾನೇಂದ್ರರವರು ಬಹಳ ಪ್ರಾಮಾಣಿಕವಾಗಿ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಈ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಆದರೆ, ಈಗ ಮೊದಲನೇ ಬಾರಿಗೆ ಅಡಿಕೆ ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು ಹೇಳಿದರು. ಇವತ್ತು ಕೇವಲ ಅಡಿಕೆ ಬೆಳೆಗಾರರಲ್ಲದೆ ಕಬ್ಬು ಬೆಳೆಗಾರರೂ ಸಹ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವತ್ತಿನ ದಿವಸ ಎಂಥಾ ಸ್ಥಿತಿ ಬಂದಿದೆ ಎಂದರೆ, ನಾವಂತೂ ಹೇಳಬಾರದು. ಯಾವಾಗ ರೈತ ಆತ್ಮಹತ್ಯೆ ಮಾಡಿಕೊಳ್ಳುತಾನೆಯೋ ಆ ಕ್ಷಣದಲ್ಲಿ ನಾನು ಇರುವುದಿಲ್ಲವೆಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗಲಾದರೂ ನಾನು ನಿಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ರೈತರಿಗೆ ಆತ್ಮ ಸ್ಥೈರ್ಯ ತುಂಬತಕ್ಕಂಥ ಕೆಲಸ ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ನೇರವಾಗಿ ನೀರಾವರಿ ಇಲಾಖೆ ಬೇಡಿಕೆ ಬಗ್ಗೆ ಮಾತನಾಡುವುದಕ್ಕೆ ಬಯಸುತ್ತೇನೆ. ಬೇಡಿಕೆಗೆ ತಕ್ಕಂತೆ ನೀರಾವರಿ ಇಲಾಖೆ ಆಗಿಲ್ಲವೆಂಬ ದೃಷ್ಟಿಕೋನದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಅಭಿಯಾಚನೆ ಸಂಖ್ಯೆ:21 ಬಗ್ಗೆ ಮಾತನಾಡುತ್ತೇನೆ. ಮಾನ್ಯ ಜ್ಞಾನೇಂದ್ರರವರಿಗೆ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ಯಾರು ಮಾಹಿತಿ ಕೊಟ್ಟರೋ ನನಗೆ ಗೊತ್ತಿಲ್ಲ. 1994ರಿಂದ ಇಲ್ಲಿಯವರೆಗೆ ಯಾವುದೇ ವರ್ಷದ ಇತಿಹಾಸದಲ್ಲಿ ಆರು ಸಾವಿರ ಕೋಟಿ ರೂಪಾಯಿಗಳಷ್ಟು ನೀರಾವರಿ ಇಲಾಖೆಗೆ ಒಂದು ವರ್ಷದಲ್ಲಿ ಖರ್ಚು ಮಾಡಿರತಕ್ಕಂತಹ ಸಂಖ್ಯೆ ಇಲ್ಲ. ನೀವು ಏನಾದರೂ ಅದನ್ನು ಪ್ರೂವ್ ಮಾಡಿದರೆ ನಾನು ನಿಮಗೆ

ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಿನ್ನೆದಿವಸ ನೀರಾವರಿ ಇಲಾಖೆ ಬಗ್ಗೆ ಆಕಸ್ಮಿಕವಾಗಿ ಒಂದು ಮಾತನ್ನು ಹೇಳಿದೆ. ಮಾನ್ಯ ಈಶ್ವರಪ್ಪನವರು ಸಹ ಆ ಸಂದರ್ಭದಲ್ಲಿದ್ದರು. ನಮ್ಮ ಪಾಲಿನ ನೀರಿನ ಹಕ್ಕನ್ನು ಆದಷ್ಟು ತೀವ್ರವಾಗಿ ಉಪಯೋಗ ಮಾಡಿಕೊಳ್ಳತಕ್ಕಂಥ ದೃಷ್ಟಿಕೋನದಲ್ಲಿ ತಾವು ಗಮನಹರಿಸಿ ಎಂದು ನಾನು ಮಾತನಾಡಿದೆ. ಆದರೆ, ಅವರಿಗೆ ಏಕೆ ಆವೇಶ ಬಂತೋ ಗೊತ್ತಿಲ್ಲ. ಒಮ್ಮಿಂದ ಒಮ್ಮೆಲೆ ನಮ್ಮ ಮೇಲೆ ತಿರುಗಿಬಿದ್ದರು. ನಾನು ಹೇಳಿದ ಮಾತಿನ ಅರ್ಥ ಏನೆಂದರೆ, ಒಂದು ಕಡೆ ಕಾವೇರಿ, ಒಂದು ಕಡೆ ಕೃಷ್ಣಾ, ಒಂದು ಕಡೆ ಮಹದಾಯಿ, ಈ ನಾಲ್ಕಾರು ಇಷ್ಯೂಗಳಲ್ಲಿ ನಮಗೆ ಟ್ರಿಬ್ಯುನಲ್ ಕೊಟ್ಟಿರುವ ಸಮಯ ಲ್ಯಾಪ್ಸ್ ಆಗುತ್ತಿದೆ. ಆದ್ದರಿಂದ, ನೀರನ್ನು ನಾವು ಸುಸಜ್ಜಿತವಾಗಿ ಉಪಯೋಗ ಮಾಡಿಕೊಂಡರೆ ನಮ್ಮ ರಾಜ್ಯದ ಹಕ್ಕನ್ನು ಉಳಿಸಿಕೊಳ್ಳುತ್ತೇವೆಂಬ ಮಾತಿನ ಬೆಳಕನ್ನು ಚೆಲ್ಲಬೇಕೆಂಬ ಇಚ್ಛೆಯನ್ನು ನಾನು ವ್ಯಕ್ತಪಡಿಸಿದೆಯಷ್ಟೆ. ಆದರೆ, ದುರ್ದೈವವಶಾತ್ ಅವರು ಬಹಳ ಆವೇಶಕ್ಕೆ ಒಳಗಾಗಿ ನಮ್ಮ ಇಚ್ಛಾಶಕ್ತಿಗಳನ್ನು ನೋಡಿಲ್ಲವೆಂದು ಪ್ರಯತ್ನ ಮಾಡಿದರು. ಮಾತು ಪ್ರಾರಂಭ ಮಾಡಿದರೆ ಮಹದಾಯಿ ಮತ್ತು ಕೆರೆಗೆ ನೀರು ತುಂಬತಕ್ಕಂಥ ಮಾತನ್ನೇ ಹೇಳುತ್ತಾರೆ. ಮಾನ್ಯ ದಿನೇಶ್ ಗುಂಡೂರಾವ್‌ರವರು ಒಂದು ಮಾತನ್ನು ಹೇಳಿದರು. ಅವರ ಮಾತನ್ನು ತಾವು ಕೇಳಿದಿರೋ ಅಥವಾ ಬಿಟ್ಟರೋ ಗೊತ್ತಿಲ್ಲ. ಪಕ್ಕದ ಆಂಧ್ರಪ್ರದೇಶ ರಾಜ್ಯದಲ್ಲಿ ಮಹಾಜಲಯಗ್ನಿ ಎನ್ನತಕ್ಕಂಥ ಒಂದು ಸ್ಕೀಂ ಅನ್ನು ತಂದು ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂತಹ ಯೋಜನೆಗಳನ್ನು ಕೈಗೆತ್ತಿ ಕೊಂಡಿದ್ದಾರೆ. ಒಟ್ಟು ಐವತ್ತು ಸಾವಿರ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಆಗಿದ್ದು, ಈ ವರ್ಷ ಸದರಿ ಪ್ರಾಜೆಕ್ಟ್‌ನ್ನು 20 ಸಾವಿರ ಕೋಟಿ ರೂಪಾಯಿಗಳಿಗಿಂಥ ಹೆಚ್ಚು ಖರ್ಚು ಮಾಡುತ್ತಿದ್ದಾರೆ. On par with them, ನಾವು ಎಲ್ಲಿದ್ದೇವೆಂಬುದರ ಬಗ್ಗೆ ಆತ್ಮಾವಲೋಕನೆ ಮಾಡಿಕೊಳ್ಳತಕ್ಕಂಥ ಸ್ಥಿತಿ ನಮಗೆ ಬಂದಿದೆ ಎಂದು ಮಾನ್ಯ ಉದಾಸಿಯವರಿಗೆ ಹೇಳುವುದಕ್ಕೆ ಬಯಸುತ್ತೇನೆ. ನನಗನ್ನಿಸುತ್ತದೆ, ಆ ಒಂದು ಸಂದರ್ಭದಲ್ಲಿ ಮಂತ್ರಿಗಳು ಆದ ಮೇಲೆ ಒಂದೆರಡು Statement ಗಳನ್ನು ಕೊಟ್ಟರು. Press Statement cuttings ನಾನು ಇಲ್ಲೇ ಇಟ್ಟುಕೊಂಡಿದ್ದೇನೆ. ನನಗೆ ಅವರ ಒಂದು ಮಾತು ಬಹಳ ಆಶ್ಚರ್ಯವೆನಿಸಿದೆ. ಏನೆಂದರೆ, ಹಿಂದಿನ ಯಾವುದೇ ಸಚಿವರು ನೀರಾವರಿ ಯೋಜನೆಗಳನ್ನು

ಕಾರ್ಯಗತಗೊಳಿಸಿಲ್ಲ. ಈಗ ನಾನು ಬಂದ ಮೇಲೆ ಮೂರು ವರ್ಷದಲ್ಲಿ ಇಡೀ ರಾಜ್ಯದಲ್ಲಿರತಕ್ಕಂತಹ ಎಲ್ಲಾ ನೀರಾವರಿ ಯೋಜನೆಗಳನ್ನು ಸಂಪೂರ್ಣವಾಗಿ ಮುಗಿಸಿಬಿಡುತ್ತೇನೆ ಎನ್ನುವ ಮಾತನ್ನು ಆಡಿದ್ದಾರೆ. ನನಗೆ ಆಶ್ಚರ್ಯವೆನಿಸಿತು. ಯಾವ ಆಧಾರದ ಮೇಲೆ ಇವರು ಈ ಮಾತನ್ನು ಆಡಿದರು. ಅಥವಾ ಆಡತಕ್ಕಂಥ ಆತ್ಮಸ್ಥೈರ್ಯ ಅವರಿಗೆ ಹೇಗೆ ಬಂತು ಎನ್ನುವುದನ್ನು ಅವರು ಇವತ್ತು ಈ ಸಭೆಗೆ ತಿಳಿಸಬೇಕಾಗುತ್ತದೆ. ಏಕೆಂದರೆ ಮಾನ್ಯ ಖರ್ಗೆಯವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಬಹಳ ಮಾರ್ಮಿಕವಾಗಿ ಹೇಳಿದರು. ಎಲ್ಲಾ ನೀರಾವರಿ ಯೋಜನೆಗಳನ್ನು ಮುಗಿಸಲಿಕ್ಕೆ ಅಲ್ಲಾ ಉದ್ದೀನ್ ಚಿರಾಗ್‌ನಿಂದ ಇಲ್ಲಿ ದುಡ್ಡುಗಿಡ್ಡು ಏನು ಬಂತೆ ಎಂದು? ಏಕೆಂದರೆ ಕಾವೇರಿ ನೀರಾವರಿ ನಿಗಮ ಎಷ್ಟು ದುಡ್ಡು ಬೇಕು, ಕೃಷ್ಣ ನೀರಾವರಿ ನಿಗಮಕ್ಕೆ ಎಷ್ಟು ದುಡ್ಡುಬೇಕು, ಒಟ್ಟು ನೀರಾವರಿ ನಿಗಮಕ್ಕೆ ಎಷ್ಟು ದುಡ್ಡು ಬೇಕು ಎನ್ನುವುದರ ಬಗ್ಗೆ ವಾಸ್ತವಿಕ ಅಂಕಿ–ಅಂಶಗಳನ್ನು ಅವರು ಈ ಸಭೆಯ ಮುಂದೆ ಇಡಬೇಕು. ಏಕೆಂದರೆ, ಇಡದೇ ಹೋದರೆ, ಇಂತಹ ಮಾತುಗಳನ್ನು ಆಡಿದರೆ, ಇಲ್ಲಿಯೆ ಇದೆ paper cuttings. ನಾನು ನಿಮಗೆ ಹೇಳಬಾರದು. ಮೂರು ವರ್ಷದಲ್ಲಿ ನೀರಾವರಿ ರಾಜ್ಯದ ಎಲ್ಲಾ ಯೋಜನೆಗಳನ್ನು ಮುಗಿಸುತ್ತೇನೆ ಎನ್ನುವ ಮಾತನ್ನು ಆಡಿದರು. ಏನು ಆದೇಶದಿಂದ ಆಡಿದರೋ ಹೇಗೋ ಎನ್ನುವುದು ನಮಗೆ ಗೊತ್ತಿಲ್ಲ. ಆಡತಕ್ಕಂತಹ ಸಂದರ್ಭದಲ್ಲಿ ಅವರಿಗೂ ಸ್ವಲ್ಪ ಎಚ್ಚರಿಕೆ ಇರಬೇಕಾಗಿತ್ತು. ಆದರೆ ಅವರು ಈ ಸಭೆಯಲ್ಲಿ ಈಗ ಇಲ್ಲ. ನಾನು ತಮ್ಮ ಮೂಲಕ ಒಂದು ವಿಷಯವನ್ನು ಅವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. 1992 ರಲ್ಲಿ ಯು.ಕೆ.ಪಿ.ಯಿಂದ ನಮ್ಮಲ್ಲಿ ಮುಳವಾಡ ಲಿಫ್ಟ್ ಇರಿಗೇಷನ್ ಎನ್ನುವ ಒಂದು ಯೋಜನೆ ಪ್ರಾರಂಭವಾಗಿದೆ. ಹೇಗೆ ನೀರಾವರಿ ಇಲಾಖೆಯಲ್ಲಿ ಹಣ ಪೋಲಾಗುತ್ತದೆ ಎನ್ನುವುದಕ್ಕೆ ಇದು ಒಂದು ತಾಜಾ ಉದಾಹರಣೆ. ನನ್ನ ಇಚ್ಛಾಶಕ್ತಿಯಿಂದ ನಾನು ಏನೆಲ್ಲಾ ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಅವರು ಆಡುತ್ತಿದ್ದಾರೆ. ಆದರೆ ಅವರಿಗೆ ಇಚ್ಛಾಶಕ್ತಿಯಿದ್ದರೆ ಇಂತಹ ಯೋಜನೆಗಳಲ್ಲಿ ಆಗಿರತಕ್ಕಂಥ ಅವ್ಯವಹಾರದ ಬಗ್ಗೆ ಈ ಸಭೆಯ ಬೆಳಕಿಗೆ ಅವರು ಸ್ವಲ್ಪ ತಂದರೆ, ಅನಿಸುತ್ತದೆ, ಅವರು ನೀರಾವರಿ ಸಚಿವರಾಗಿದ್ದಕ್ಕೂ ಒಂದು ಭೂಷಣ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಬಳುತಿ intake jack well ಕೆಲಸ ಆರು ಕೋಟಿ ರೂ.ಗಳ estimate ನಿಂದ

ಪ್ರಾರಂಭವಾಗಿತ್ತು. ಆದರೆ ಆ ಕೆಲಸ ಮುಗಿಸುವವರೆಗೆ 49 ಕೋಟಿ ರೂ.ಗಳು ಪಾವತಿಯನ್ನು ಆ ಕಂಟ್ರಾಕ್ಟರ್‌ಗೆ ಮಾಡಿದ್ದಾರೆ. ಅಷ್ಟಕ್ಕೂ ಅವನು ಬಿಡಲಿಲ್ಲ, ಆ ಕೆಲಸ ಮುಗಿಸಿ ಅವನು High Court, Supreme Courtಗೆ ಹೋಗಿ ಮತ್ತೆ 33 ಕೋಟಿ ರೂ.ಗಳನ್ನು claim ಮಾಡುತ್ತಾನೆ. ಅಂದರೆ, 6 ಕೋಟಿ ರೂ.ಗಳ ಒಂದು ಕೆಲಸಕ್ಕೆ 82 ಕೋಟಿ ರೂ.ಗಳ ನಾವು ಪಾವತಿ ಮಾಡಿದ್ದೇವೆ. ಅಂದರೆ, ನೀರಾವರಿ ಇಲಾಖೆ ಹೇಗೆ ಕೆಲಸ ಮಾಡುತ್ತದೆ ಎನ್ನತಕ್ಕಂಥದ್ದು ಮಾನ್ಯ ಸಚಿವರಿಗೆ ಇದರ ಬಗ್ಗೆ ನಾನು ದಾಖಲೆ ಸಮೇತ ಒದಗಿಸುತ್ತೇನೆ. ಅಂದರೆ, ಇದರಲ್ಲಿ ಏನಾಗಿದೆ ಎನ್ನುವುದು ಆತ್ಮಾವಲೋಕನ ಇವತ್ತು ಅವರು ಮಾಡಿಕೊಳ್ಳಬೇಕು. ಈ ತರಹ ಪ್ರತಿಯೊಂದು ಯೋಜನೆ, escalation ಆಗಿಲ್ಲ ಎನ್ನತಕ್ಕಂಥ ಮಾತಲ್ಲ, ಆದರೆ ಒಂದೊಂದು ಯೋಜನೆಗಳಲ್ಲಿ ಈ ತರಹ ಆಗುತ್ತಾ ಹೋದರೆ, ಇವತ್ತು ನೀರಾವರಿ ಇಲಾಖೆಯಲ್ಲಿ ಕಂಟ್ರಾಕ್ಟರ್‌ಗಳು ಯಾವ ಮಟ್ಟಕ್ಕೆ ಇವತ್ತು ಬಂದು ಬಿಟ್ಟಿದ್ದಾರೆಂದರೆ, ಇವತ್ತು ಅವರೇ ಸರ್ಕಾರದ ಮಾಲೀಕರು. ಇವತ್ತು ಅವರೇ terms dictate ಮಾಡುತ್ತಾರೆ. ನಾನು ನಿಮಗೆ ಹೇಳಬೇಕೆಂದರೆ, ಅವರು TAC ಗೆ ಕೂಡ influence ಮಾಡುವ ಸ್ಥಿತಿಗೆ ಬಂದು ಬಿಟ್ಟಿದ್ದಾರೆ. Technical Advisory Committeeಯಲ್ಲಿ ಅವರು ಕಾಂಟ್ರಾಕ್ಟ್ ಕೆಲಸ ತೆಗೆದುಕೊಳ್ಳುವಾಗ ಒಂದು estimate ಇರುತ್ತದೆ. ಕೆಲಸ ಮುಗಿಸಿ ಅವರು ಹೊರಗೆ ಹೋಗುವುದರೊಳಗಾಗಿ ಆ ಯೋಜನೆ ನೂರು ಪಟ್ಟು ಜಾಸ್ತಿಯಾಗಿರುತ್ತದೆ. ಅವನು ಟೆಂಡರ್ ಹಾಕುವಾಗ below 40% ಇರುತ್ತಾನೆ. ಇದರಲ್ಲಿ ಯಾವ ರೀತಿಯಾಗಿ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತದೆ ಎನ್ನುವುದು ಈ ಸಭೆಗೆ ಅಥವಾ ಈ ಸರ್ಕಾರ ರಾಜ್ಯಕ್ಕೆ ತಿಳಿಸಿದರೆ, at least, ಅವರಿಂದ ನಮಗೆ ತಿಳಿದರೆ ನಮಗೆ ಸಂತೋಷ-ವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷ ನಾಯಕರು) : ಮಾನ್ಯ ಛೇರ್ಮನ್‌ರೆ, ಇವತ್ತು ಕೆಲವು ಮಂತ್ರಿಗಳು ಮೇಲ್ಮನೆಗೆ ಹೋಗಿರಬಹುದೆಂದು ಲೆಕ್ಕವನ್ನು ಹಾಕಬಹುದು. ಆದರೆ ಮೇಲ್ಮನೆ ಇವತ್ತು ಇಲ್ಲ. ಇವತ್ತು ಮಾನ್ಯ ಶಿವಾನಂದ

ಪಾಟೀಲ್‌ವರು, he is from Bijapur. ಮಾನ್ಯ ಉದಾಸಿಯವರು ಇದ್ದಾರೆ, ಅವರು ಬರೆದುಕೊಂಡು ಅವರಿಗೆ ಹೇಳಬೇಕೆ?

ಛೇರ್ಮನ್ : ನಾನು ನೀವು ಎದ್ದ ಕೂಡಲೇ ಎಷ್ಟು ಜನ ಮಂತ್ರಿಗಳು ಕುಳಿತಿದ್ದಾರೆಂದು ಲೆಕ್ಕ ಹಾಕುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಕಳಸಾ ಬಂಡೂರಿ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಈ ವಿಷಯವಾಗಿ ನಾವು ಕೇಂದ್ರದ ಮಂತ್ರಿಗಳಿಗೆ ಭೇಟಿಯಾಗಿದ್ದೇವೆ. UPA Chairman ಆದ ಶ್ರೀಮತಿ ಸೋನಿಯಾಗಾಂಧಿ ಯವರನ್ನೂ ನಾವು ಭೇಟಿಯಾಗಿದ್ದೇವೆ. ಅವರು ಹೇಳಿದ್ದಾರೆ, 7.5 ಏನು drinking water ಗೆ ಎಂದು ಇದೆ, ಇದನ್ನು immediate ಆಗಿ ಕೊಡಬೇಕೆಂದು ಹೇಳಿದ್ದಾರೆ. ಗೋವಾ ಮುಖ್ಯಮಂತ್ರಿಗಳೂ ಸಹ ಪ್ರೊ.ಸೈಫೂದ್ದೀನ್ ಸೋಜ್‌ರವರು ಮಾತನಾಡಿದ್ದಾರೆ. ನಾವು ಕೂಡ delegation ಹೋಗುತ್ತೇವೆಂದು ಹೇಳುತ್ತಾರೆ, ಆದರೆ ಯಾವಾಗ ಹೋಗುವುದು. 8 ತಿಂಗಳು ಈಗ ಮುಗಿಯಿತು. ನಿಮ್ಮದು ಮುಂದೆ ಅಕ್ಟೋಬರ್ ತಿಂಗಳ 3 ಕ್ಕೆ ಏನಾಗುತ್ತದೆಂದು ಕೂಡ ಗೊತ್ತಿಲ್ಲ. ಕಳಸಾ ಬಂಡೂರಿ ಬಗ್ಗೆ ನೀವು ಕಾಳಜಿಯನ್ನು ವಹಿಸಿದ್ದರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಸರ್ವಪಕ್ಷದ ನಿಯೋಗ ಮೂರು ಸಲ ಹೋಗಿ ಭೇಟಿಯಾಗಿದ್ದೇವೆ. ಆದರೆ ಮೊನ್ನೆ ನಾನು ಮತ್ತು ದೇಶಪಾಂಡೆಯವರು ಕೂಡ ಮೇಡಂ ಅವರನ್ನು ಮತ್ತು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದೇವೆ. ಸಾಕಷ್ಟು ಅಲ್ಲಿ ನೀರು ಇದೆ ಎನ್ನತಕ್ಕಂಥದ್ದು ಒಂದು. ಅದರ ಬಗ್ಗೆ ಹೋಗಿ ಗುದ್ದಲಿ ಪೂಜೆ ಮಾಡುವುದು. ಪ್ರಚಾರಕ್ಕೋಸ್ಕರ ಅಲ್ಲಿ, ಬಿಜೆಪಿ ಅಧ್ಯಕ್ಷರಾದ ಸದಾನಂದಗೌಡರು ಹೋಗುತ್ತಾರೆ. ಹುಬ್ಬಳ್ಳಿಯಲ್ಲಿ ಮೀಟಿಂಗ್ ಮಾಡಿ ನಾವು ಮಾಡಿಯೇ ಮಾಡುತ್ತೇವೆಂದು ಹೇಳುತ್ತಾರೆ. ನೀವು ಎಲ್ಲಿ ಹೋಗುತ್ತೀರಿ, ಏಕೆ ಆವೇಶವಾಗಿ ಹೇಳುತ್ತೀರಿ? ಇವತ್ತು ಅವರು ಮತ್ತೊಂದು ಹೇಳಿದರು. ನಾನು ಮುಖ್ಯಮಂತ್ರಿಯಾಗಿದ್ದೆ, ಅನಂತಕುಮಾರ್‌ರವರು ಒಂದು ಹೇಳಿಕೆಯನ್ನು ಕೊಟ್ಟರು. ಇವತ್ತು ಆಂಧ್ರಪ್ರದೇಶದಲ್ಲಿರುವ ಸರ್ಕಾರ ಇಷ್ಟೊಂದು ಕೆಲಸವನ್ನು ಮಾಡುತ್ತಿದೆ, ಪ್ರಾಜೆಕ್ಟ್ ಮಾಡಿ ಖರ್ಚು ಮಾಡುತ್ತಿದ್ದಾರೆಂದು ಹೇಳಿ, ಮಾನ್ಯ ಯಡಿಯೂರಪ್ಪನವರೆ ಏನು ಮಾಡುತ್ತಿದ್ದೀರಿ ಎಂದು ಕೇಳಿದರು, ಅದಕ್ಕೆ ನಾವು ಹೇಳಿದೆವು. They are spending Rs. 46,000 crore on Projects

ಎಂದು ಹೇಳಿದೆವು. ಅವರು ಹೇಳಿದ್ದು ಕರೆಕ್ಟ್ ಇದೆ. ನೀವು ಏನು ಮಾಡುತ್ತಿದ್ದೀರಿ? ಅಧಿಕಾರ ಹಸ್ತಾಂತರ ಮಾಡತಕ್ಕಂಥ ಕಾಲದಲ್ಲಿ ಏನೋ ಒಂದು ಹೇಳಿಕೆಯನ್ನು ಹೇಳತಕ್ಕಂಥದ್ದು, ನೀರಾವರಿ ಇಲಾಖೆಗೆ ಬಹಳಷ್ಟು ಇವತ್ತು ನಿಗಾವಹಿಸಬೇಕು. ಸರಿಯಾದ ರೀತಿಯಲ್ಲಿ ಅದಕ್ಕೆ ಅಧ್ಯಯನ ಮಾಡಬೇಕು. ಮತ್ತು ಕರ್ನಾಟಕ ರಾಜ್ಯಕ್ಕೆ ಬಚಾವತ್‌ನಲ್ಲಿ ಕೃಷ್ಣಾ, ಕಾವೇರಿಯಿಂದ ನೀರು ತರತಕ್ಕಂಥ ಕೆಲಸವನ್ನು ಮಾಡಲೇಬೇಕಾಗುತ್ತದೆ. ಇಂತಹ ಸೂಕ್ಷ್ಮವಾದ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಯಾರೂ ಮಂತ್ರಿಗಳು ಇಲ್ಲ. ಅದಕ್ಕಾಗಿ ನಾವು ಹೇಳುತ್ತಿದ್ದೇವೆ. ನಾವು ವಿನಾಕಾರಣವಾಗಿ first time ವಿರೋಧ ಪಕ್ಷದಲ್ಲಿ ಕುಳಿತು, ಇವತ್ತು ನಾವು ಸರ್ಕಾರಕ್ಕೆ ಸಹಕಾರವನ್ನು ಮಾಡುತ್ತಿದ್ದೇವೆ. Demand ನಲ್ಲಿ ಚರ್ಚೆ ಮಾಡಲು ನಾವು ಭಾಗವಹಿಸಿದ್ದೇವೆ. ಇವತ್ತು ಉತ್ತರ ಕೊಡಬೇಕು. ಅಂತಹ ಪರಿಸ್ಥಿತಿಯಲ್ಲಿ ಯಾರು ಕೂಡ ಇಲ್ಲ. ಅದಕ್ಕಾಗಿ ನಾವು ಈಗಾಗಲೇ Speaker ಅವರಿಗೆ ಭೇಟಿಯಾಗಿ ಹೇಳಿದ್ದೇವೆ. ನಾವು ಏಕೆ ಕೊಡಬೇಕು? ಯಾರಿಗೆ ಹೇಳಬೇಕು? ಇವತ್ತು ಒಬ್ಬ ಹಿರಿಯ ಶಾಸಕರು ಹೇಳತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಜ್ಞಾನೇಂದ್ರರವರು ಹೇಳಿದರು, 39 ಪ್ರಾಜೆಕ್ಟ್‌ಗಳು ನಮ್ಮ ಮಂತ್ರಿಗಳು ಬಂದ ಮೇಲೆ 35 ವರ್ಷದಿಂದ..

ಶ್ರೀ ಧರ್ಮಸಿಂಗ್ : ಮುಂದಿನ ಸಾಲಿನಲ್ಲಿ ಒಬ್ಬರು ಮಂತ್ರಿಗಳೂ ಇಲ್ಲ. ಏನೋ ತಿಳಿದುಕೊಂಡು ಬಿಟ್ಟಿದ್ದಾರೆ. ಇವತ್ತು 28 ಇಲಾಖೆಯ ಮೇಲೆ ಚರ್ಚೆಯಾಗತಕ್ಕಂಥ ಕಾಲದಲ್ಲಿ ಒಂದು ದಿವಸ ಕೂಡ Chief Secretary ಯವರು ಅಲ್ಲಿ ಕುಳಿತಿದ್ದು ನಾವು ನೋಡಿಲ್ಲ. ಏನು ಇದರ ಅರ್ಥ?

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಛೇರ್ಮನ್‌ರೆ, ಮೇಲ್ಮನೆ ಇವತ್ತು ಇಲ್ಲ. ಇವತ್ತು ಸದನ ಇಟ್ಟಿರುವುದರಿಂದ ನಾವೆಲ್ಲಾ ಬಂದಿದ್ದೇವೆ. At least, ಮುಂದಿನ ಲೈನ್‌ನಲ್ಲಿ ಒಬ್ಬಿಬ್ಬರು ಮಂತ್ರಿಗಳು ಇರಬೇಕಾಗಿತ್ತು. ಅವರೂ ಇಲ್ಲ. ಅಧಿಕಾರಿಗಳೂ ಇಲ್ಲ, ಯಾರಿಗೆ ಹೇಳುವುದು? ಏನು ಚರ್ಚೆ ಮಾಡುವುದು? ಅನಾವಶ್ಯಕವಾಗಿ ಪತ್ರಿಕೆಗಳವರಿಗೂ ತೊಂದರೆ ಮಾಡಿದ್ದೇವೆ, ಇವತ್ತು ಶನಿವಾರ ಇದ್ದರೂ ಅವರು ಬಂದಿದ್ದಾರೆ. ಹಾಗಾಗಿ ಇದನ್ನು ಈಗ ಇಲ್ಲಿಗೆ ಮುಗಿಸಿ ಸೋಮವಾರ ಮಾಡಿದರೆ ಒಳ್ಳೆಯದು ಎಂದು ನನಗೆ ಕಾಣಿಸುತ್ತದೆ.

ಅನಾವಶ್ಯಕವಾಗಿ ಇಲ್ಲಿ ಏಕೆ ನಮ್ಮನ್ನು ಕೂಡಿಸುತ್ತೀರಿ? ಸಂಜೆ ಮಾನ್ಯ Governor ರವರು ಕರೆದಿದ್ದಾರೆ. ಅಲ್ಲಿಗೆ ಹೋಗಬೇಕು.

ಶ್ರೀ ಆರ್.ದಿನೇಶ್ ಗುಂಡೂರಾವ್ : ಹೋದ ಸಲ ವಿರೋಧ ಪಕ್ಷದವರು ಚರ್ಚೆ ಮಾಡುವುದಕ್ಕೆ ತಯಾರಿರಲಿಲ್ಲ, ಗಲಾಟೆ ಮಾಡಿದರು ಎಂದು ಹೇಳಿದರು. ಈ ಸಲ ನಾವು ವಿಷಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಸವಿಸ್ತಾರವಾಗಿ ಮಾತನಾಡುತ್ತಿದ್ದೇವೆ. ಮಂತ್ರಿಗಳಿಗೆ ಆಸಕ್ತಿ ಇಲ್ಲ. ಎಲ್ಲರೂ ಗೈರು ಹಾಜರಿದ್ದಾರೆ. ಕರೆಸುತ್ತೀರಾ ಹೇಗೆ? ಹೇಳಿ. ತಾವು ಸ್ವಲ್ಪ ಆದೇಶ ಮಾಡಿ, ಸರ್.

ಛೇರ್ಮನ್ : ನಿಮ್ಮ ನಾಯಕರು ಹೇಳಿದ್ದಾರೆ, ಶಿವಾನಂದ್ ಪಾಟೀಲ್‌ರೆ ತಾವು ಮಾತನಾಡಿ.

ಶ್ರೀ ಶಿವಾನಂದ ಎಸ್.ಪಾಟೀಲ್ : ಜ್ಞಾನೇಂದ್ರರವರು ಮಾತನಾಡುತ್ತಾ 39 ಯೋಜನೆಗಳು ಮಾನ್ಯ ಈಶ್ವರಪ್ಪನವರು ಬಂದ ಮೇಲೆ ಮುಗಿದವು ಎನ್ನುವ ಅರ್ಥದಲ್ಲಿ ಮಾತನಾಡಿದರು. ಆ 39 ಯೋಜನೆಗಳು ಮುಗಿದಿದ್ದರೆ ನಾಳೇ ಈ table ಮೇಲೆ ಅವರು lay ಮಾಡಲಿ. ನಾನು ಅವರು ಹೇಳಿದ್ದನ್ನು ಕೇಳಿ ಬಿಡುತ್ತೇನೆ. ಜಾಹೀರಾತು ಕೊಟ್ಟಿದ್ದಾರೆ, ಜಾಹೀರಾತಿಗೂ ವಾಸ್ತವಾಂಶಕ್ಕೂ ವ್ಯತ್ಯಾಸ ಇದೆ. ಈಗ ಇಂಡಿ ಲಿಫ್ಟ್ ಇರಿಗೇಶನ್ ಅದರಲ್ಲಿ ಇದೆ. ಮರೋಳ ಇದೆ. ಮಾಂಜ್ರಾ ಇದೆ. ತೋರಿಸಿ, ಅವು ಮುಗಿದಿವೆ ಎಂದು. ನಾಳೆ table ಮೇಲೆ ಇಡಿ. ಹೇಳುವುದಕ್ಕೂ ಮತ್ತು ವಾಸ್ತವಿಕತೆಗೂ ಸಮೀಪ ಇರಬೇಕು. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ತಮ್ಮ ಪಕ್ಕಕ್ಕೆ ಕುಳಿತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ 1.8 ಲಕ್ಷ ಹೆಕ್ಟೇರ್ ಇರಿಗೇಶನ್ ಆಗಬೇಕು. ಬಂದಿದೆಯಾ ಎಂದು ಕೇಳಿ. ಆದರೆ ಸುಮ್ಮನೆ ಹೇಳುವುದಕ್ಕೆ ಮತ್ತು ಪ್ರಚಾರ ಪಡೆದುಕೊಳ್ಳುವುದಕ್ಕೆ ಹೇಳಿಕೆ ಮಾಡಬಾರದು. ಅವರು most senior ಮಂತ್ರಿ, ಆವೇಶಕ್ಕೆ ಒಳಗಾಗಬಾರದು. ಸ್ವಲ್ಪ ನೋಡಿ ಈ ತರಹ ಆಗಬಾರದು. ನಮ್ಮ ನೀರಿನ ಹಕ್ಕನ್ನು ನಾವು ಉಳಿಸಿಕೊಳ್ಳುವ ಹಾಗೆ ಕೆಲಸವನ್ನು ಮಾಡಬೇಕೆಂದು ನಾನು ಹೇಳಿದರೆ, ಅವರು ಮಾತು ಎತ್ತಿದರೆ, ಮಹದಾಯಿ ಮಾಡಿದ್ದೇವೆ, ಕೆರೆಗೆ ನೀರು ತುಂಬಿದ್ದೇವೆ ಎಂದು ಹೇಳುತ್ತಾರೆ. ಕೆರೆಗೆ ನೀರು ತುಂಬುವುದು ಎಂದರೆ, ನಮ್ಮ ಜಿಲ್ಲಾ ಮಂತ್ರಿಗಳು ಇದ್ದಾರೆ, ಸ್ಕೀಮ್–ಬಿನಲ್ಲಿ ಸಂಪೂರ್ಣವಾಗಿ ಆ ಕೆರೆಗಳಿಗೆ ನೀರು ತುಂಬುತ್ತದೆ. ಕೃಷ್ಣ ಬಚಾವತ್‌ನಲ್ಲಿ ಸ್ಕೀಮ್–ಬಿ ನ ಆದೇಶದಲ್ಲಿ ನಮಗೆ ಇನ್ನು 300 ಟಿ.ಎಂ.ಸಿ.ಎಫ್.ಟಿ. ನೀರು

ಬರಬೇಕು. ಅದರಲ್ಲಿ ನಮ್ಮ ಜಿಲ್ಲೆಗೆ 80 ಟಿ.ಎಂ.ಸಿ.ಎಫ್.ಟಿ. ನೀರು ಬರುತ್ತದೆ. ಆ ನೀರನ್ನು ನಾವು ಹೇಳಿದಂತೆ ಸ್ಕೀಮ್-ಬಿ ನಲ್ಲಿ naturally, gravity flow ದಿಂದ ಕೆನಾಲ್‌ದಿಂದ ನೀರು ತುಂಬುತ್ತವೆ. ನೀವು ಅದಕ್ಕೋಂದು Special lift irrigation ಮಾಡಿ 400 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದಾರೆ. ಆ ಖರ್ಚು ಮಾಡಿದ್ದು ನಾಳೆ ಹಣ ಆದರೂ ಉಪಯೋಗವಾಗ ಬೇಕಲ್ಲವೆ? ನಾವು ನಾಳೆ K.E.B. bill ಕೂಡ ಪಾವತಿ ಮಾಡುವುದಕ್ಕಾಗುವುದಿಲ್ಲ. ಯಾವ ರೈತರೂ ಆವತ್ತು ಬಂದು ಪಾವತಿ ಮಾಡಿ ಹಣ ಸಂದಾಯ ಮಾಡುವುದಿಲ್ಲ. ಆ ಒಂದು ಅವೈಜ್ಞಾನಿಕವಾಗಿ ಈ ಕಾಮಗಾರಿಗಳನ್ನು ಪ್ರಚಾರಕ್ಕೋಸ್ಕರವಾಗಿ ಕೈಗೆತ್ತಿಕೊಳ್ಳುವುದರಲ್ಲಿ ಅರ್ಥವಿಲ್ಲ ವೆನ್ನುವ ಮಾತನ್ನು ಮಾತ್ರ ನಾವು ಆಡಿದ್ದೆವು. Of course, ಎಲ್ಲಿ ಕೆನಾಲ್‌ದಿಂದ ನೀರು ಬರುವುದೇ ಇಲ್ಲ, ಅಲ್ಲಿ ನೀವು lift ಮಾಡಿ ಕೆರೆಗೆ ನೀರು ತುಂಬಿಸಿದರೆ ಅದಕ್ಕೊಂದು ಅರ್ಥವಿದೆ. ಅದಕ್ಕಾಗಿ ನಾವು ಅವರಲ್ಲಿ ವಿನಂತಿಮಾಡಿಕೊಳ್ಳುವುದು ಇಷ್ಟೇ ಇವತ್ತು ಈ ಪ್ರಚಾರಕ್ಕೋಸ್ಕರ ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮಾಡತಕ್ಕಂತಹ ದಿಶೆಯಲ್ಲಿ ನಮ್ಮ ರಾಜ್ಯ ನಾಳೆ ಆತಂಕಕ್ಕೆ ಈಡಾಗಬಾರದು ಎನ್ನತಕ್ಕಂಥ ಒಂದೇ ಒಂದು ಆತಂಕ ಇದೆ. ಇವತ್ತು ಕೇವಲ ಅವರಿಗೆ ನಾನು ದೂಷಿಸುತ್ತೇನೆಂದು ಹೇಳುವುದಿಲ್ಲ. 2000ನೇ ಇಸವಿಯಲ್ಲಿ U.K.P. irrigationನ್ನು complete ಮಾಡುತ್ತೇವೆಂದು ಎಲ್ಲಾ ಸರ್ಕಾರಗಳು ಹೇಳಿಕೊಂಡು ಬಂದಿರುತ್ತವೆ. ದುರ್ದೈವವಶಾತ್ ನಾವು 2007 ಮುಗಿದು 2008ನೇ ಇಸವಿಗೆ ಪಾದಾರ್ಪಣೆ ಮಾಡಿದರೂ ಕೂಡ, ಇವತ್ತು 8,000 ಕೋಟಿ ರೂ.ಗಳನ್ನು U.K.P. ಮೇಲೆ ಖರ್ಚು ಮಾಡಿದರೂ ಕೂಡ ನಮ್ಮ ಪಾಲಿನ ನೀರಿನ ಹಕ್ಕನ್ನು ನಾವು ಉಳಿಸಿಕೊಳ್ಳುವ ದಿಶೆಯಲ್ಲಿ ಇಲ್ಲ. ಅದರ ಬಗ್ಗೆ ಮಂತ್ರಿಗಳು ಆಗಾಗ್ಗೆ ಆವೇಶ ಭರಿತವಾಗಿ ಮಾತನಾಡುವುದರ ಬದಲು ವಾಸ್ತವಿಕ ವಿಷಯದಲ್ಲಿ ಸಾಗಿದರೆ, ಈ ರಾಜ್ಯದ ಅಭಿವೃದ್ಧಿ ಕಡೆ ಅವರು ಹೋಗಬಹುದು ಎಂಬ ಮಾತನ್ನು ಹೇಳುತ್ತೇನೆ. ಅವರಿಗೆ ನೀರಾವರಿ ವಿಷಯದಲ್ಲಿ ಸ್ವಲ್ಪ ಬಹಳ ತೀಕ್ಷ್ಣವಾಗಿ ಹೋಗಬೇಕು, ಅದು ಯು.ಕೆ.ಪಿ. ಬೇಸಿನ್ ಇರಬಹುದು, ಕಾವೇರಿ ಬೇಸಿನ್ ಇರಬಹುದು, ಮಹದಾಯಿ ಇರಬಹುದು, ಹಿರಿಯ ಅನುಭವಿಕ ಅನೇಕ ಸದಸ್ಯರುಗಳು ಇದ್ದಾರೆ ಅವರನ್ನು ಒಳಗೊಂಡು ಬಹಳ ವಾಸ್ತವಿಕ ದಿಸೆಯಲ್ಲಿ ಅವರುಗಳು ಸಾಗಬೇಕೆಂಬುವ ಮನವಿಯನ್ನು ನಾನು ಅವರಲ್ಲಿ

ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ Agriculture Department ನ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಏಕೆಂದರೆ ನನಗೆ ಮಾತನಾಡುವುದಕ್ಕೆ ಸಮಯವನ್ನು ಬಹಳ ಕಡಿಮೆ ಕೊಟ್ಟಿದ್ದೀರಿ. Agriculture Minister ರವರು ಇಷ್ಟರವರೆಗೆ ಇಲ್ಲಿ ಕುಳಿತಿದ್ದರು. ಆದರೆ ನಿನ್ನೆ ಬಹಳ ವಾಸ್ತವಿಕವಾಗಿ ಒಂದು ಸ್ವಾರಸ್ಯಕರವಾದ ಚರ್ಚೆ ಕೂಡ ಬಂತು. Agriculture ದಿಸೆಯಲ್ಲಿ ಎರಡು Agriculture Policy ಗಳನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಭೈರೇಗೌಡರ Agriculture Policy ಏನಾಯಿತು ಎಂಬುದನ್ನು ಇನ್ನೂ ಕೂಡ ಅವರು ವಿಮರ್ಶೆಯನ್ನು ಮಾಡಿ ಹೇಳಿಲ್ಲ. ಆ ಪಾಲಿಸಿಯು existence ನಲ್ಲಿದ್ದರೆ ಅದು ಎಷ್ಟರ ಮಟ್ಟಿಗೆ implement ಆಯಿತು? ಆ ಮಾತನ್ನು ಹೇಳಿ ಇವನು ಹೊಸ Agriculture Policy ಯನ್ನು ತಂದಿದ್ದರೆ, ನಾನು ಸನ್ಮಾನ್ಯ ಸಚಿವರಿಗೆ ಶಹಭಾಷ್ ಎಂದು ಹೇಳುತ್ತಿದ್ದೆ. ಆ Agriculture Policy ಬಗ್ಗೆ ನಾವು ಎಲ್ಲಿ ಎಡವಿದ್ದೇವೆ? ಈ ರಾಜ್ಯದ ಉತ್ಪತ್ತಿಯಲ್ಲಿ ಏನು ಆಗಿದೆ ಎಂಬುದರ ಬಗ್ಗೆ ಅವಲೋಕನವನ್ನು ಅವರು ಮಾಡಬೇಕಾಗಿತ್ತು. ಏಕೆಂದರೆ, ಒಂದು ಕಡೆ ನಾವು 30 ಸಾವಿರ ಕೋಟಿ ರೂಪಾಯಿ ಗಳನ್ನು ನಾವು ನೀರಾವರಿಯಲ್ಲಿ ಖರ್ಚು ಮಾಡಿ ಇವತ್ತು 102 ಲಕ್ಷ ಮಿಲಿಯನ್ ಟನ್ ಆಹಾರವನ್ನು ಉತ್ಪಾದನೆಯನ್ನು ಮಾಡುವಂತಹ ಗುರಿಯನ್ನು ನಾವು ಸಾಧಿಸಲಿಲ್ಲ. ಒಂದು ಸಾರಿ 87ಕ್ಕೆ ಬಂದೆವು, ಒಂದು ಸಾರಿ 90ಕ್ಕೆ ಬಂದೆವು, ಹೋದವರ್ಷ 100ಕ್ಕೆ ಬಂದೆವು. ಇವತ್ತು 30 ಸಾವಿರ ಕೋಟಿ ರೂಪಾಯಿಗಳನ್ನು ನಾವು ನೀರಾವರಿ ಖರ್ಚು ಮಾಡಿದರೂ ಕೂಡ ನಾವು ಇವತ್ತು Agriculture ಉತ್ಪಾದನೆಯಲ್ಲಿ ಹಿಂದುಳಿದಿದ್ದೇವೆಂದು ನಿನ್ನೆ ದಿನ ಅನೇಕ ಹಿರಿಯ ಸದಸ್ಯರುಗಳು ಗಮನಕ್ಕೆ ತಂದಿದ್ದಾರೆ. ನಾನು ಆ ಮಾತನ್ನು ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮಾನ್ಯ Agriculture Minister ರವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಿನ್ನೆ ದಿನ cereals ಬಗ್ಗೆ ಮಾತನಾಡಿದ್ದಾರೆ. Cereals ಉತ್ಪಾದನೆಯಲ್ಲಿ ಮುಂದೆ ಇದ್ದೇವೆಂಬ ಮಾತನ್ನು ಹೇಳಿದರು. ಆದರೆ ಪಲ್ಸ್‌ನಲ್ಲಿ ನಮ್ಮ ರಾಜ್ಯ ಹಣೆಬರಹ ಎಲ್ಲಿಗೆ ಬಂದಿದೆ ಎಂದರೆ ಅವರು ಈ ಸಭೆಗೆ ತಿಳಿಸಬೇಕು. ಏಕೆಂದರೆ ಪಲ್ಸ್‌ನಲ್ಲಿ ಇಡೀ ರಾಷ್ಟ್ರದಲ್ಲಿ ಅತಿ ಕಡಿಮೆ ಉತ್ಪತ್ತಿಯಾಗುವಂತಹ ರಾಜ್ಯ

ಯಾವುದಾದರೂ ಇದ್ದರೆ ಅದು ಕರ್ನಾಟಕ. ನಾವು ಒಂದು ಕಾಲದಲ್ಲಿ ಇದರಲ್ಲಿ ಮುಂಚೂಣಿಯಲ್ಲಿದ್ದೆವು. ಆದರೆ ದುರ್ದೈವವಶಾತ್ ಇವತ್ತು ಆ ದಿಸೆಯಲ್ಲಿ ನಾವು ಹಿಂದೆ ಬಿದ್ದಿದ್ದೇವೆ. Horticulture University ಯನ್ನು ಮಾಡುತ್ತೇವೆನ್ನುವಂತಹ ಮಾತನ್ನು ಆಡಿದರು. ಅದನ್ನು ನಾವು ಸ್ವಾಗತ ಮಾಡುತ್ತೇವೆ. ನಾನು ಆ ಬಗ್ಗೆ ವಿರೋಧವನ್ನು ಮಾಡುವುದಿಲ್ಲ. ಆದರೆ ಅದರ ಉಪಯೋಗ ಈ ರಾಜ್ಯಕ್ಕೆ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದನ್ನು ವಿಮರ್ಶೆಯನ್ನು ಅವರು ಮಾಡಬೇಕು. ಏಕೆಂದರೆ ಎರಡು Agriculture College ಗಳನ್ನು ಮಾಡಿ ಇವತ್ತು graduate ಗಳನ್ನು ಹೊರಗೆ ತಂದಿದ್ದೇವೆ. ಆದರೆ ದುರ್ದೈವವಶಾತ್ ಯಾವುದೇ ಒಂದು ಇಲಾಖೆಗೆ ಈ ಒಂದು ನೌಕರಿಗೆ ಅರ್ಜಿಯನ್ನು ಆಹ್ವಾನ ಮಾಡಿ 100ಕ್ಕೆ 60ರಷ್ಟು B.Sc., (Agriculture) Graduatesಗಳು ಬರುತ್ತಾರೆ. ಅಂದರೆ ಇವತ್ತು ಕ್ಲಾರ್ಕ್‌ಗಳನ್ನು ಹಿಡಿದುಕೊಂಡು ಯಾವುದಾದರೂ ಬೇರೆ ನೌಕರಿಗೆ ಕರೆದರೂ ಕೂಡ B.Sc., (Agriculture), M.Sc., (Agriculture), M.Sc., (Horticulture), Msc., (Animal Husbandry) ಮಾಡಿದವರು ಕೂಡ ಅ ನೌಕರಿಗೆ ಅರ್ಜಿಯನ್ನು ಹಾಕುತ್ತಿದ್ದಾರೆ. ಅವರ ಸ್ಥಿತಿಯನ್ನು ತಾವು ಎಲ್ಲಿಗೆ ತಂದಿಟ್ಟಿದ್ದೀರಿ ಎಂಬ ಬಗ್ಗೆ ತಾವು ಸ್ವಲ್ಪ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕು. ಹಿಂದೆ ಮಾನ್ಯ ಭೈರೇಗೌಡರು ಅವರ Agriculture Policy ಯಲ್ಲಿ ಒಂದು ಮಾತನ್ನು ಸೇರಿಸಿದ್ದರು. ಈ ರಾಜ್ಯದಲ್ಲಿರುವಂತಹ B.Sc., (Agriculture) Graduates ಗಳನ್ನು ಇನ್ನು ಮೇಲೆ ನಾನು Agriculture Assistant ಅಂದರೆ ಗ್ರಾಮಸೇವಕರಾಗಿ ನೇಮಕಾತಿ ಮಾಡುತ್ತೇನೆಂದು, ಆ ಬಗ್ಗೆ ಆದೇಶವನ್ನು ಹೊರಡಿಸುತ್ತೇನೆಂಬ ಮಾತನ್ನು ಹೇಳಿದ್ದರು. ಆದರೆ ದುರ್ದೈವವಶಾತ್ ಇವತ್ತಿನವರೆಗೂ ಕೂಡ ಅದು ಜಾರಿಗೆ ಬಂದಿಲ್ಲ. ಆದರೆ ನಿಮ್ಮ ಕಾಲದಲ್ಲಿ ಆ Agriculture Graduates ಗಳಿಗೆ ಏನಾದರೂ ಒಂದು ಆತ್ಮಸ್ಥೈರ್ಯವನ್ನು ಕೊಡುವಂತಹ ಇಚ್ಛಾಶಕ್ತಿ ನಿಮ್ಮಲ್ಲಿ ಇದ್ದರೆ ಈಗಲಾದರೂ ಆ ಪಾಲಿಸಿಯನ್ನು ಜಾರಿಗೆ ತನ್ನಿ. ಯಾವುದು ಮಾನ್ಯ ಭೈರೇಗೌಡರು ಜಾರಿಗೆ ತಂದು ಹೋಗಿದ್ದಾರೆ ಅದನ್ನೇ ಸಮರ್ಥನೆ ಮಾಡಿ, ಇನ್ನೊಂದು Agriculture Policy ಯನ್ನು ತಂದು, ಈ ರಾಜ್ಯವನ್ನು ಉದ್ಧಾರ ಮಾಡುತ್ತೇವೆನ್ನುವಂತಹ ಮಾತನ್ನು ತಾವು ಏನು ಹೇಳುತ್ತಿದ್ದೀರಿ,

ಇದು ಸಂಪೂರ್ಣ ಸತ್ಯಕ್ಕೆ ಸಮೀಪವಾಗದೇ ಇರುವಂತಹ ಮಾತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ದಿಸೆಯಲ್ಲಿ ತಾವು ಸಭೆಗೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ತಾವಾದರೂ ಕೊಡಿ ಅಥವಾ Agriculture Minister ರವರಾದರೂ ಕೊಡಲಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು Horticulture Mission ನಲ್ಲಿ ನಿಮಗೆ ಗೊತ್ತಿದೆ. ಆ ಹಣವು ಹಿಂತಿರುಗಿ ಹೋಗುವುದಿಲ್ಲವೆನ್ನುವಂತಹ ಮಾತನ್ನು ನಾನು ಆಡುವುದಿಲ್ಲ. ಏಕೆಂದರೆ ಅದು ಹೋಗುವುದಿಲ್ಲವೆಂದು ನನಗೆ ಗೊತ್ತಿದೆ. ಆದರೆ ಬೇರೆ ರಾಜ್ಯದಲ್ಲಿ Horticulture Mission ನಲ್ಲಿ ಉಪಯೋಗ ಮಾಡಿಕೊಂಡಿದ್ದಾರೆ, ನೀವೆಷ್ಟು ಉಪಯೋಗವನ್ನು ಮಾಡಿಕೊಂಡಿದ್ದೀರಿ? ಆ ಬಗ್ಗೆ ತಾವು ನಾಳೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಮಾಹಿತಿಯನ್ನು ತಾವು ಸಭೆಗೆ ಒದಗಿಸಬೇಕು. ಏಕೆಂದರೆ ಪಕ್ಕದ ರಾಜ್ಯವಾಗಿರುವಂತಹ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಇರಬಹುದು. ಇವತ್ತು ಅವರು ಕೂಡ Horticulture Mission ನಲ್ಲಿ ಹಣವನ್ನು ಉಪಯೋಗ ಮಾಡಿಕೊಂಡಿದ್ದಾರೆ? ಅವರಲ್ಲಿ ಎಷ್ಟು Horticulture ಇದೆ? ನಮ್ಮಲ್ಲಿ ಎಷ್ಟು Horticulture ಇದೆ? ಸ್ವಲ್ಪ ಅಂಕಿ ಸಂಖ್ಯೆಗಳಿಗೆ ಅನುಗುಣವಾಗಿ ತಾವು ತಂದುಕೊಟ್ಟರೆ ನಮಗೂ ಅವರಿಗಿಂತಲೂ ಜಾಸ್ತಿ Horticulture area ಗಳು? ಇದ್ದರೂ ಕೂಡ ದುರ್ದೈವವಶಾತ್ ನಾವು ಹಣವನ್ನು ಉಪಯೋಗ ಮಾಡುವುದರಲ್ಲಿ ಹಿಂದೆ ಬಿದ್ದಿದ್ದೇವೆ ಎಂದು ಮಾನ್ಯ ಶಶಿಕಾಂತ್ ನಾಯಕ್‌ರವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಎರಡು ವಿಚಾರಗಳನ್ನು ಮಾತನಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಒಂದು Co-operative Department ಬಗ್ಗೆ, ತಾವು ಸಹಕಾರಿಗಳಾಗಿದ್ದೀರಿ, ನಮ್ಮ ಸಹಕಾರಿ ಸಚಿವರು ಬಹಳ ಉತ್ಸಾಹಿಗಳಿದ್ದಾರೆ. ನಾನು ಅವರ ಬಗ್ಗೆ ಎರಡು ಮಾತು ಆಡುವುದಿಲ್ಲ. ಆದರೆ Co-operative Department ಬಹುತೇಕ BOT Department ಎಂದರೆ ತಪ್ಪಾಗುವುದಿಲ್ಲ. Build Operate and Transper ಅಂದರೆ, ಯಾರೋ ಕಟ್ಟಿ ಯಾರಿಗೋ ವಹಿಸಿಕೊಡತಕ್ಕಂತಹ Department ಆಗಿ ಹೋಗಿಬಿಟ್ಟಿದೆ. ಏಕೆಂದರೆ ಸಹಕಾರಿ ತತ್ವದ ಮೇಲೆ ನಾವು ಸಂಸ್ಥೆಗಳನ್ನು ಸೃಷ್ಟಿ ಮಾಡಿದ್ದೇವೆ, ಇವತ್ತು ಅವುಗಳನ್ನು ಸಮಾಪ್ತಿ ಮಾಡಿಕೊಳ್ಳುವ ಬಗ್ಗೆ ನಾವೇ

ಕಾರಣೀಭೂತರಾಗುತ್ತಿದ್ದೇವೆಂಬ ಮಾತಿನ ಒಂದು ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಹೇಳಬೇಕಾಗುತ್ತದೆ. ಒಂದು ಕಾಲದಲ್ಲಿ ನಿಮಗೆ ಗೊತ್ತಿದೆ, ಯಾರೂ ಕೂಡ ಈ ದೇಶದಲ್ಲಿ ಇಂತಹ ಸಂಸ್ಥೆಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಹಿನ್ನೆಲೆ ಇರುವಾಗ ಜವಹರಲಾಲ್ ನೆಹರುರವರು ಬಹುತೇಕ ಎಲ್ಲಾ Public Industries ಗಳನ್ನು, ಇವತ್ತು Co-operative basis ಮೇಲೆ ಸ್ಥಾಪನೆ ಮಾಡುವಂತಹದ್ದಾಗಲಿ, Public Undertakings ಮೇಲೆ ಸ್ಥಾಪನೆ ಮಾಡುವಂತಹ ದಿಸೆಯಲ್ಲಿ ಮಾಡಿದರು. ಆದರೆ ದುರ್ದೈವವಶಾತ್ ನಮ್ಮ ರಾಜ್ಯದಲ್ಲಿ ಎಷ್ಟೊಂದು Processing Industries ಗಳನ್ನು ನಾವು ಸಹಕಾರಿ ರಂಗದಲ್ಲಿ ನಾವು ಸ್ಥಾಪನೆ ಮಾಡಿದ್ದೆವು, ಅವುಗಳನ್ನು ಒಂದೊಂದಾಗಿ ಮೂಲೆಗುಂಪಾಗಿ ಸಮಾಪ್ತಿ ಮಾಡುವಂತಹ ದಿಸೆಯಲ್ಲಿ ಇಡೀ ರಾಷ್ಟ್ರದಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ. ಇವತ್ತು ನಾವು ಎಷ್ಟು textile ಗಳನ್ನು ಸ್ಥಾಪನೆ ಮಾಡಿದ್ದೇವೆ, ಅವುಗಳಲ್ಲಿ ಒಂದಾದರೂ textile ಗಳು ಇದೆಯಾ ಎಂಬುದರ ಬಗ್ಗೆ ಅಂಕಿಸಂಖ್ಯೆಗಳನ್ನು ಸಭೆಗೆ ಸಚಿವರು ಒದಗಿಸಿಕೊಡಬೇಕು. ಎರಡನೆಯದಾಗಿ Sugar Industriesಗಳ ಬಗ್ಗೆ ಹೇಳುವುದಾದರೆ, ನಾವು Co-operative basis ಮೇಲೆ ಎಷ್ಟು ಸ್ಥಾಪನೆ ಮಾಡಿದ್ದೆವು ಇವತ್ತು ಅವುಗಳನ್ನು ಏನಾದರೂ ಉಳಿಸುವಂತಹ ದಿಸೆಯಲ್ಲಿ ಕ್ರಮವನ್ನು ಕೈಗೊಂಡಿದ್ದೇವೆಯಾ? ಅವುಗಳನ್ನು ಪರರಿಗೆ ಪರಭಾರೆ ಮಾಡುವುದರಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿ ನಿಂತಿದೆ. ನಾನು ಏತಕ್ಕಾಗಿ ಈ ಮಾತನ್ನು ಆಡುತ್ತಿದ್ದೇನೆಂದರೆ, Sugar Industries ನಲ್ಲಿ ಇವತ್ತು ನಿಮಗೆ ಗೊತ್ತಿದೆ, ಅಲ್ಲಿ ಏನಾಗುತ್ತಿದೆ ಎಂದರೆ, ಆಗಲೇ ಮಾನ್ಯ ಸದಸ್ಯರಾದ ಶ್ರೀ ಆರಗ ಜ್ಞಾನೇಂದ್ರರವರು ಹೇಳಿದರು. ಅಡಿಕೆ ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುವುದಲ್ಲ, ಇವತ್ತು ಕಬ್ಬು ಬೆಳೆಗಾರರೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎಷ್ಟೋ ನಿದರ್ಶನ ಇವತ್ತು Agriculture Minister ರವರ ಜಿಲ್ಲೆಯಲ್ಲಿ ಆಗಿದೆ. ಇವತ್ತು ಬೀದರ್‌ನಲ್ಲಿಯೇ 3–4 ಜನ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಏತಕ್ಕಾಗಿ ಆತ್ಮಹತ್ಯೆ ಮಾಡಿಕೊಂಡರು ಎಂದು ಸತ್ಯ ಶೋಧನೆ ಈ ಸರ್ಕಾರದಿಂದ ಆಗಬೇಕಾಗಿತ್ತು. ಹಿಂದೆ ಭೈರೇಗೌಡರು Agriculture Minister ಆಗಿದ್ದಾಗ ರೈತರು ಆತ್ಮಹತ್ಯೆ ಮಾಡಿಕೊಂಡರೆ ನಿಮಗೆ ಗೊತ್ತಿರುವ ಹಾಗೆ ಕೋಲಾರ

ಶಾಸಕರಾದ ಶ್ರೀ ಕೆ. ಶ್ರೀನಿವಾಸಗೌಡರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕಾತಿ ಮಾಡಿ, ಆ ರೈತರು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳಬಾರದು ಎಂಬ ಹಿನ್ನೆಲೆಯನ್ನು ಇಟ್ಟುಕೊಂಡು, ಆ ರೈತರಿಗೆ ಸ್ಥೈರ್ಯವನ್ನು ತುಂಬುವಂತಹ ಪ್ರಯತ್ನವನ್ನು ಮಾಡಿದರು. ಇವತ್ತು ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಡಿಕೆ ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ಸರ್ಕಾರ ಬಂದ ಮೇಲೆ 300 ಜನ ರೈತರು ಆತ್ಮಹತ್ಯೆ ಮಾಡಿಕೊಂಡರೂ ಕೂಡ ಈ ದಿಸೆಯಲ್ಲಿ ಬರೀ ಮಾತಿನ ಹೇಳಿಕೆಯನ್ನು ಕೊಡುವುದು ಆಯಿತು. ಆದರೆ ಆ ದಿಸೆಯಲ್ಲಿ ನಿಜವಾದ ಚಿಂತನೆ ಕೂಡ ಆಗಲಿಲ್ಲವೆನ್ನುವಂತಹ ವ್ಯಥೆ ನನಗಿದೆ. ಅಧ್ಯಕ್ಷರೆ ಇವತ್ತು ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ನೇರವಾಗಿ ನಾನು ಹೇಳಬೇಕಾದರೆ ಸರ್ಕಾರದ ನೀತಿ ಧೋರಣೆಯೇ ಕಾರಣ, ಮತ್ಯಾರೂ ಕಾರಣರಲ್ಲವೆನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕಂತಹ ಕಬ್ಬು ಎಷ್ಟು ಎನ್ನುವುದರ ಬಗ್ಗೆ ಅಂಕಿಸಂಖ್ಯೆ Agriculture Department ನಲ್ಲಿತ್ತು ಅಧ್ಯಕ್ಷರೆ. ಅದನ್ನು ಏನಾದರೂ ತೀಕ್ಷ್ಣವಾಗಿ ಗಮನಿಸಿದರೆ ನಮ್ಮಲ್ಲಿ ಇಷ್ಟು surplus ಕಬ್ಬು ಇದ್ದರೆ ಪರ ರಾಜ್ಯದವರ ಜೊತೆ ಹೊಂದಾಣಿಕೆ ಮಾಡಿಕೊಂಡು ಕಬ್ಬನ್ನು ಅರಿಯುವಂತಹ ಒಂದು ಪ್ರಯತ್ನ ಈ ಸರ್ಕಾರದಿಂದ ಆಗಲಿಲ್ಲ. ಅದೂ ಅಲ್ಲದೇ ಅತಿ ದುಃಖದ ಸಂಗತಿ ಎಂದರೆ ಯಾವ ಜಿಲ್ಲೆಯಲ್ಲಿ Agriculture Minister ಇದ್ದಾರೆ ಅಲ್ಲೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ. ಈ ರಾಜ್ಯದಲ್ಲಿ ಇನ್ನೂ 25 ಲಕ್ಷ ಟನ್ ಕಬ್ಬು ಅರೆಯದೇ ಹಾಗೆಯೇ ಉಳಿದಿದೆ. ಆಗ ಸರ್ಕಾರ ಒಂದು ಹೇಳಿಕೆಯನ್ನು ಕೊಟ್ಟಿತ್ತು. ಕಬ್ಬು ಬೆಳೆಗಾರರಿಗೆ ಯಾರು ಒಂದು ಹೆಕ್ಟೇರ್ ಕಬ್ಬನ್ನು ಉಳಿಸಿಕೊಂಡಿದ್ದಾರೆ, 25,000 ರೂಪಾಯಿಗಳು ನಾವು compensation ಕೊಡುತ್ತೇವೆಂಬ ಮಾತನ್ನು ಆಡಿದರು. ಆದರೆ ಇದುವರೆವಿಗೆ ಯಾವ ಜಿಲ್ಲಾಧಿಕಾರಿ ಕೂಡ ಹತ್ತು ಪೈಸೆ compensation ಕೊಟ್ಟಿಲ್ಲ. ಏಕೆಂದು ತಾವು ಈ ಸಂದರ್ಭದಲ್ಲಿ ಹೇಳಬೇಕು. ತಾವು ಹೇಳಿರುವಂಹ ಮಾತಿನಲ್ಲಿ ಏನಾದರೂ ಒಂದು ಅರ್ಥವಿದ್ದರೆ, ಶಕ್ತಿ ತುಂಬತಕ್ಕಂತಹ ಆತ್ಮಸ್ಥೈರ್ಯ ಇದ್ದರೆ ಇವತ್ತು ಆ ರೈತನಿಗೆ ಆ ಸಹಾಯ ಸಿಗಬೇಕಾಗಿತ್ತು. ಇವತ್ತು ಇಡೀ ರಾಜ್ಯದಲ್ಲಿ ನಿಮಗೆ ಹೇಳಬೇಕಾದರೆ ಯಾವ ಜಿಲ್ಲಾಧಿಕಾರಿಯವರೂ ಕೂಡ ಕಬ್ಬು ಬೆಳೆಗಾರರಿಗೆ

ಹತ್ತು ಪೈಸೆ compensation ಅನ್ನು ಕೊಟ್ಟಿರುವುದಿಲ್ಲ. ಈಗಲಾದರೂ ತಾವು

(3-00 PM)

ಮುಂದೇನಾದರೂ ಈ ಸಭೆ ಮುಗಿಯುವುದರೊಳಗಾಗಿ, ಈ ವಿಧಾನಸಭೆ ಮುಗಿಯುವುದರೊಳಗಾಗಿ ಮಾನ್ಯ ಮುಖ್ಯಮಂತ್ರಿಗಳ ಮುಖಾಂತರವಾಗಲಿ, ಅಥವಾ ಉಪ ಮುಖ್ಯಮಂತ್ರಿಗಳ ಮುಖಾಂತರವಾಗಲಿ ಈ ಹೇಳಿಕೆಯನ್ನು ಈ ರಾಜ್ಯದ ಕಬ್ಬು ಬೆಳೆಗಾರರಿಗೆ ಕೊಡಿಸುತ್ತೀರೆಂಬ ಅಪೇಕ್ಷೆಯನ್ನು ನಾನು ಮಾಡುತ್ತೇನೆ. ಕೊಡದೇ ಇದ್ದರೆ ನಾಳೆ ನೀವೇ ಈ ಅನಾಹುತಕ್ಕೆ ಕಾರಣೀಭೂತರಾಗುತ್ತೀರೆನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಅಧ್ಯಕ್ಷರೆ, ಕಬ್ಬು ಬೆಳೆಗಾರರಿಗೆ ಈ ರಾಷ್ಟ್ರದಲ್ಲಿ ಒಂದು SMP (Statutory Minimum Price) ಎಂದು ಹೇಳಿ, ಇವತ್ತು ಅದು ಘೋಷಣೆಗಾಗಿ ಒಂದು ಟನ್‌ಗೆ 1220 ರೂ.ಗಳನ್ನು ಕೊಡಬೇಕೆಂದು ಆಗಿದೆ. ಮಾನ್ಯ ಶಶಿಕಾಂತ ನಾಯಕ್‌ಗೆ ಗೊತ್ತಿದೆ. ಇಡೀ ರಾಜ್ಯದಲ್ಲಿ ಇವತ್ತು ಒಂದೋ, ಎರಡೋ, ಬೆರಳೆಣಿಕೆಯಲ್ಲಿ ಸರ್ಕಾರ ಕಾರ್ಖಾನೆಗಳಿರಬಹುದು. ಆದರೆ ಯಾವ ಕಬ್ಬಿನ ಕಾರ್ಖಾನೆಯವರೂ ಕೂಡ ರೈತನಿಗೆ ಒಂದು ಟನ್‌ಗೆ 1,000–00 ರೂ.ಗಳನ್ನು ಕೊಟ್ಟಿಲ್ಲವೆಂಬ ಮಾತನ್ನು ಇವತ್ತೂ ಸಹ ನಾನು ದಾಖಲೆ ಸಮೇತ ಆಡಬಲ್ಲೆ. ಅದಕ್ಕೆ ಕಾನೂನು ಕ್ರಮ ತೆಗೆದುಕೊಳ್ಳಲಿಕ್ಕೆ ನಿಮ್ಮ Director of Sugarಗೆ ಅಧಿಕಾರ ಇದೆ. ಹತ್ತು ಪತ್ರವನ್ನು ನಾವು ಬರೆದಿದ್ದೇವೆ. ದುರ್ದೈವವಶಾತ್ ಇದುವರೆಗೆ ಯಾವುದೇ ರೀತಿಯ ಕ್ರಮ ಜರುಗಿಸಿಲ್ಲ. ಹಾಗಾದರೆ ಡೈರೆಕ್ಟರ್ ಆಫ್ ಶುಗರ್ ಆಫೀಸ್ ಇರಬೇಕೋ ಅಥವಾ ಅದನ್ನು ಸಮಾಪ್ತಿ ಮಾಡಬೇಕೋ ಎಂಬುದನ್ನು ನೀವು ಈ ಸಂದರ್ಭದಲ್ಲಿ ಹೇಳಬೇಕು. ಏಕೆಂದರೆ ಎಷ್ಟು ರೈತರು ಇವತ್ತು ಸಂಕಟದಲ್ಲಿದ್ದಾರೆಂದು ನಿಮಗೆ ಗೊತ್ತಿದೆ. ಹೋದ ವರ್ಷ ಇದೇ ಕಬ್ಬು ಬೆಳೆದಿರುವಂಥ ರೈತರು ಒಂದು ಟನ್‌ಗೆ 1,300–00 ತೆಗೆದುಕೊಂಡಿರುವಂತಹ ನಿದರ್ಶನ ಈ ರಾಜ್ಯದಲ್ಲಿದೆ, ದುರ್ದೈವವಶಾತ್ ಅವರಿಗೆ ಈ ವರ್ಷ ಒಂದು 800–00 ರೂ.ಗಳೂ ಸಹ ಸಿಗುತ್ತಿಲ್ಲ. ಕೇಂದ್ರ ಸರ್ಕಾರ 1,000–00 ರೂ.ಗಳ ಘೋಷಣೆ ಮಾಡಿದ್ದರೂ ಕೂಡ ನೀವು 800–00 ರೂ.ಗಳನ್ನು ಕೊಡಿಸುವಂತಹ ಯೋಗ್ಯತೆ ಈ ಸರ್ಕಾರಕ್ಕಿಲ್ಲವೆಂದು ನಾವು ಈ ಸರ್ಕಾರಕ್ಕೆ ಏನು ಅನ್ನಬೇಕು ಎನ್ನುವುದನ್ನು ನೀವೇ ಹೇಳಬೇಕು. ಇವತ್ತು ಆ ಹಿನ್ನೆಲೆಯಲ್ಲಿ ನಿಮ್ಮ ಡೈರೆಕ್ಟರ್ ಆಫ್ ಶುಗರ್, ಸಕ್ಕರೆ ಮಂತ್ರಿಗಳು ಏನು

ಮಾಡುತ್ತಾರೆ ಎನ್ನುವುದನ್ನು ಈ ಸಭೆಗೆ ತಾವು ಬಹಿರಂಗ ಪಡಿಸಬೇಕು ಎಂದು ಹೇಳಿ, ಈ ಸಂದರ್ಭದಲ್ಲಿ ಈ ಸಭೆಯ ಮೂಲಕ ನಾನು ಅವರಿಗೆ ಕೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಕೊನೆಯದಾಗಿ Health Department ನಲ್ಲಿ ನಾನು ಒಂದು ವಿನಂತಿಯನ್ನು ಮಾಡುತ್ತೇನೆ, ಏನೆಂದರೆ ಆಗಲೇ ಜ್ಞಾನೇಂದ್ರರವರು ಇಷ್ಟು, ಅಷ್ಟು ವೈದ್ಯರನ್ನು ನೇಮಕಾತಿ ಮಾಡಲಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಯಾವುದೇ ಜಿಲ್ಲಾ ಕೇಂದ್ರ ಆಸ್ಪತ್ರೆಗಳಿಗೆ ಹೋದರೆ ಒಬ್ಬರೂ Doctor ಸಿಗುವುದಿಲ್ಲ. Radialogist ಸಿಗುವುದಿಲ್ಲ. Pathologist ಸಿಗುವುದಿಲ್ಲ, Gynaecologist, ಸಿಗುವುದಿಲ್ಲ, Cardialogist ಸಿಗುವುದಿಲ್ಲ. ಇವತ್ತು ರಾಜ್ಯದಲ್ಲಿ ಇಷ್ಟು ವೈದ್ಯರನ್ನು ನೇಮಕಾತಿ ಮಾಡಿದ್ದೇವೆಂದು ಹೇಳಿಕೊಳ್ಳುತ್ತೀರಿ. ಅಷ್ಟೇ ಅಲ್ಲ ಆಚಾರ್ಯರವರು ಇದ್ದರೆ ನಾನು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ, ಏನೆಂದರೆ, ನಿನ್ನೆ ಅವರೂ ಕೂಡ ಬಹಳ ಹಾಸ್ಯಾಸ್ಪದವಾಗಿ ಮಾತನಾಡಿದರು, ಅವರಿಗೆ ಗೊತ್ತಿದೆ. ಅವರು Medical Education Minister ಆಗಿದ್ದಾರೆ. ನಮ್ಮ ರಾಜ್ಯದಲ್ಲಿ ಹೊಸ ಆರು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಲಿಕ್ಕೆ ನಾವು ಹೊರಟಿದ್ದೇವೆ. ಆದರೆ ಇರುವಂಥ ಮೆಡಿಕಲ್ ಕಾಲೇಜುಗಳಲ್ಲಿ ಬೇಕಾದಂತಹ Infrastructure ಇಲ್ಲ. ಅಲ್ಲಿ Super Specialist Doctors ಇಲ್ಲವೆಂದು ಹೇಳಿ. M.C.I.ನವರು de-recognize ಮಾಡಲಿಕ್ಕೆ ಕುಳಿತಿದ್ದಾರೆ. 50–60 ಸೀಟುಗಳನ್ನು ನಮ್ಮ ಕಾಲೇಜಿನವರು ಕಳೆದುಕೊಳ್ಳುತ್ತಿದ್ದಾರೆ. ಆ ನಿಟ್ಟಿನಲ್ಲಿ ಒಂದು ಮಾತನ್ನೂ ಕೂಡ ಇವತ್ತು Medical Education Minister ಅಂಥಾ ಹೆಲ್ತ್ ಮಿನಿಸ್ಟರ್ ಆಗಲಿಕ್ಕೆ ತಯಾರಿಲ್ಲ. ಇವತ್ತು ಆರು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದೇವೆಂದು ಜ್ಞಾನೇಂದ್ರರವರು ಹೇಳಿದರು. ಆದರೆ ಅದು ಮಾಡಿರುವಂಥ ಶ್ರೇಯಸ್ಸು ಧರ್ಮಸಿಂಗ್ ಸರ್ಕಾರಕ್ಕೆ ಹೋಗುತ್ತದೆ. ನಿಮಗೆ ಗೊತ್ತಿದೆ. ಮೊದಲನೇ ಬಾರಿ ಈ Capitalists ಜೊತೆ ಜಗಳವಾಡುವ ಸಂದರ್ಭದಲ್ಲಿ ಮೆಡಿಕಲ್ ಕಾಲೇಜುಗಳ ವಿಚಾರ ಬಂದಾಗ ಬಡಮಕ್ಕಳಿಗೆ ಸೀಟು ಸಿಗುವುದಿಲ್ಲವೆನ್ನುವಂತಹ ಒಂದು ದೃಷ್ಟಿಕೋನ ಇಟ್ಟುಕೊಂಡು ಈ ರಾಜ್ಯದಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡುವಂಥ ಧೈರ್ಯ ತೋರಿಸಿದವರು ಯಾರೆಂದರೆ ಧರ್ಮಸಿಂಗ್ ಸಾಹೇಬರು ಎನ್ನುವುದನ್ನು ತಾವು ಮರೆಯಬಾರದು. ನಾವು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸುವುದೇನೆಂದರೆ ಅವರು

ಹಾಕಿಕೊಟ್ಟಿರತಕ್ಕಂಥ ಮಾರ್ಗದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡಿ ತೋರಿಸಿದರೆ ತಾವು ನಿಜವಾಗಿಯೂ ಹೊಗಳಿಕೆಗೆ ಪಾತ್ರರಾಗುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಅವರ ಗಮನಕ್ಕೆ ತರಬಯಸುತ್ತೇನೆ, ನಾಳೆ ನಿಜವಾಗಲೂ ಈ ದಿಶೆಯಲ್ಲಿ ಸರ್ಕಾರಕ್ಕೆ ಏನಾದರೂ ಕಳಕಳಿ ಇದ್ದರೆ, ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟು, ನನಗೆ ಅನ್ನಿಸುತ್ತದೆ, ಈ ಬಜೆಟ್‌ಗೆ ಅನುಮೋದನೆಯನ್ನು ಪಡೆದುಕೊಂಡರೆ ಒಳ್ಳೆಯದು. ಆದರೆ ಅಕಸ್ಮಾತ್ ಈ ಪ್ರಶ್ನೆಗಳಿಗೆ ಉತ್ತರ ಕೊಡದೇ ಇರತಕ್ಕಂಥ ದಿಶೆಯಲ್ಲಿ ಈ ಬಜೆಟ್‌ಗೆ ಅನುಮೋದನೆಗೆ ಪಡೆದುಕೊಂಡರೆ, ಈ ಬಜೆಟ್‌ಗೆ ವಿರೋಧ ಮಾಡಬೇಕಾಗುವಂಥ ಅನಿವಾರ್ಯತೆ ಉದ್ಭವವಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಛೇರ್ಮನ್ : ಅವರದಾಗಲಿ, ಆ ಕಡೆ ಒಬ್ಬರು, ಈ ಕಡೆ ಒಬ್ಬರು ಮಾತನಾಡಬೇಕು. ಈಗ ಯೋಗೀಶ್‌ಭಟ್ ರವರನ್ನು ಕರೆದಿದ್ದೇನೆ. ಅವರದಾದ ಮೇಲೆ ನೀವು ಮಾತನಾಡಿ.

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಸುವರ್ಣ ಕರ್ನಾಟಕದ ಈ ಒಂದು ವರ್ಷದಲ್ಲಿ ಬಹುಶಃ ಅತ್ಯಂತ ಜನಹಿತವನ್ನು ಕಾಪಾಡುವಂಥ ಒಂದು ಬಜೆಟ್ ಅನ್ನು ಪ್ರೆಸೆಂಟ್ ಮಾಡಿರುವುದು ಮಾತ್ರವಲ್ಲ, ಇವತ್ತು ಹಳ್ಳಿಯಲ್ಲಿರುವಂಥ ಸಾಮಾನ್ಯ ಜನ, ಗ್ರಾಮೀಣ ಪ್ರದೇಶದ ಜನರಿಂದ ಹಿಡಿದು ನಗರ ಪ್ರದೇಶದ ಜನ, ಅವರೂ ಸಹ ಇದು ಜನತೆಯ ಬಜೆಟ್ ಎಂದು ಹೇಳಿಕೊಳ್ಳುತ್ತಿದ್ದಾರೆ. ಇಲ್ಲಿಯವರೆಗೆ ಸರ್ಕಾರದ ಬಜೆಟ್ ಎಂದು ಅದನ್ನು ಗುರುತಿಸಲಾಗುತ್ತಿತ್ತು. ಈಗ ಜನತೆಯ ಬಜೆಟ್ ಎಂದು ಒಂದು ರೀತಿಯಲ್ಲಿ ಅಭಿಮಾನದಿಂದ ಹೇಳುವಂತಹ ನಿಟ್ಟಿನಲ್ಲಿ ಬಜೆಟ್ ಪ್ರೆಸೆಂಟೇಷನ್ ಆಗಿದೆ. ಅನೇಕ ಸಂದರ್ಭಗಳಲ್ಲಿ ಹೇಳಬೇಕು ಎನ್ನಿಸುತ್ತದೆ. ಆದರೆ ಪ್ರಮುಖವಾಗಿ ನಾನು ಗಮನಿಸಿದಂತೆ ಹೇಳಬಯಸುವುದು, ಸನ್ಮಾನ್ಯ ಮುಖ್ಯಮಂತ್ರಿಗಳಾದ ಕುಮಾರ ಸ್ವಾಮಿಯವರು ಹಾಗೂ ಉಪ ಮುಖ್ಯಮಂತ್ರಿಗಳಾದಂಥ ಯಡಿಯೂರಪ್ಪನವರ ಸರ್ಕಾರ ಆಡಳಿತಕ್ಕೆ ಬಂದ ನಂತರ ಮಾಡಿರುವಂಥ ಸಾಧನೆಗಳ ಬಗ್ಗೆ ಅಭಿನಂದನೆಗಳನ್ನು ಸಲ್ಲಿಸುವಾಗ ನಾನು ಎಚ್ಚರಿಕೆಯಿಂದ ಅವರನ್ನು ಅಭಿನಂದಿಸುತ್ತೇನೆ. ಅನೇಕ ಯೋಜನೆಗಳನ್ನು ಘೋಷಿಸಿದ್ದಾರೆ. ಈ ಯೋಜನೆಗಳನ್ನು

ತಳಮಟ್ಟದಲ್ಲಿರುವಂಥ ಫಲಾನುಭವಿಗಳಿಗೆ ತಲುಪಿದಾಗ ನಿಜವಾದ ಸಂತೃಪ್ತಿ ಅವರ ಮುಖದಲ್ಲಿ ಮೂಡಿದಾಗ ಖಂಡಿತವಾಗಿ ನಾವು ಅವರ ಅಭಿನಂದನೆಗೆ ಪಾತ್ರವಾಗುತ್ತೇವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದರೂ ಕೂಡ ಅದನ್ನು G.O. ಮಾಡುವ ಮೂಲಕ ಅದನ್ನು ಕೊನೆಗೆ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಎಲ್ಲಾ ತರಹದ ಎಚ್ಚರಿಕೆಗಳನ್ನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ. ಬಹುಶಃ ಯಾವುದೇ ಒಂದು ಸರ್ಕಾರ ತನ್ನ ಅವಧಿಯಲ್ಲಿ ಎಂತಹದೇ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಐದನೇ ವೇತನ ಆಯೋಗಕ್ಕೆ ಸಂಬಂಧಪಟ್ಟಂತೆ ಆರು ಲಕ್ಷ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ, ಇಷ್ಟು ವರ್ಷಗಳಲ್ಲಿ, ಕಳೆದ 20 ವರ್ಷಗಳಲ್ಲಿ piecemeal ಕೊಡುವಂಥ ಯೋಜನೆಗಳೇನಾದರೂ ಕೊಟ್ಟಿದ್ದಲ್ಲಿ ಅದನ್ನು ಯಥಾಪ್ರಕಾರವಾಗಿ ಈ Fifth Pay Commission ಅನ್ನು ಅನುಷ್ಠಾನಕ್ಕೆ ತರುವ ಮೂಲಕ ಸುಮಾರು ಆರು ಲಕ್ಷ ಸರ್ಕಾರಿ ನೌಕರರಿಗೆ ಕೊಟ್ಟಿರುವ benefits, ರೈತರಿಗೆ, ನೇಕಾರರಿಗೆ, ಮೀನುಗಾರರಿಗೆ ಕೊಟ್ಟಿರುವಂಥ ಸಾಲ ಮನ್ನಾದ ಒಂದು ಕೊಡುಗೆ, ಸಾರಾಯಿ ನಿಷೇಧ, ಲಾಟರಿ ನಿಷೇಧ, ರಾಜ್ಯದಲ್ಲಿ 6 ಸರ್ಕಾರಿ ವೈದ್ಯಕೀಯ ಕಾಲೇಜುಗಳು, 8 ಇಂಜಿನಿಯರಿಂಗ್ ಕಾಲೇಜು, 167 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, 21 ಪಾಲಿಟೆಕ್ನಿಕ್ಸ್ ಬಹುಶಃ ಈ ರೀತಿ ಪಟ್ಟಿಯನ್ನು ಮಾಡುತ್ತಾ ಹೋಗಬಹುದು. ಎಲ್ಲವನ್ನೂ ಲೆಕ್ಕ ಹಾಕಿದರೆ ಸುಮಾರು 87 ಲಕ್ಷ ಕುಟುಂಬಗಳಿಗೆ ನೇರವಾಗಿ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಇದು ಸ್ಪರ್ಶವಾಗುವುದಷ್ಟೇ ಅಲ್ಲ, ಅಷ್ಟು ಜನರಿಗೂ ಅನುಕೂಲವಾಗುವಂಥ ಸರ್ಕಾರದ ಬಜೆಟ್ ಆಗಿದೆ. ಇವತ್ತು ಅಭಿನಂದನೆಯನ್ನು ಏತಕ್ಕೆ ಸಲ್ಲಿಸುತ್ತಿದ್ದೇನೆಂದರೆ, ಈ ರೀತಿಯ ಒಂದು ಕೊಡುಗೆಯನ್ನು ಕೊಟ್ಟಿರುವುದು ಮಾತ್ರವಲ್ಲ, ಒಂದು ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ 1,000 ಗ್ರಾಮದ ಅಭಿವೃದ್ಧಿಯ ಯೋಜನೆಗಳ ಕಲ್ಪನೆ, ಅದೇ ರೀತಿ 1,579–00 ಕೋಟಿ ರೂ.ಗಳ ಗ್ರಾಮ ಪಂಚಾಯಿತಿ ಯೋಜನೆಯಲ್ಲಿ ಹಿಂದಿನ ಸಾಲಿನಲ್ಲಿಟ್ಟಿದ್ದರೆ, ಈ ವರ್ಷ 2,131 ಕೋಟಿ ರೂ.ಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಯೋಜನಾ ಅನುದಾನ 3,561–00 ಕೋಟಿ ರೂ.ಗಳು ಹಿಂದಿನ ವರ್ಷದಲ್ಲಿದ್ದರೆ, ಈ ವರ್ಷ 4,351–00 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ನೇಕಾರರ ಮತ್ತು ಮೀನುಗಾರರ ವಿಶೇಷ ಪ್ಯಾಕೇಜ್, ಇಷ್ಟೇ ಅಲ್ಲ, ಸ್ತ್ರೀಶಕ್ತಿ

ಸ್ವಸಹಾಯ ಗುಂಪುಗಳಿಗೆ, ಅಂಗನವಾಡಿ ಶಿಕ್ಷಕರಿಗೂ ಒಳಪಟ್ಟು 200-00 ರೂ.ಗಳನ್ನು ಗೌರವ ಧನ ಹೆಚ್ಚಳ, 100-00 ರೂ. ಆಯಾಗಳಿಗೆ ಹೆಚ್ಚಳ. ಬಹುಶಃ ಇದನ್ನು ಹೇಳುವಂಥ ಸಂದರ್ಭದಲ್ಲಿ ನಾನು ಒಂದು ವಿನಂತಿಯನ್ನು ಸರ್ಕಾರಕ್ಕೆ ಮಾಡಬಯಸುತ್ತೇನೆ. ಹಾಗಿದ್ದರೂ ಕೂಡ ಕನಿಷ್ಠವಾಗಿರುವಂಥ minimum wages ಏನಿದೆ, ಆ ಮಟ್ಟಕ್ಕೆ ಬರುವ ನಿಟ್ಟಿನಲ್ಲಿ ಬೇರೆ ಬೇರೆ ಯೋಜನೆಗಳನ್ನು ಅಳವಡಿಸುವ ಹಾಗೆ ಈ ಅಂಗನವಾಡಿ ಶಿಕ್ಷಕರಿಗೆ ಮತ್ತು ಸಹಾಯಕರಿಗೆ ಆ minimum ವೇತನ 2,600-00 ರೂ.ಗಳಷ್ಟಾದರೂ ಬರುವಂತಹ ನಿಟ್ಟಿನಲ್ಲಿ ಅವರಿಗೆ incentive ಕೊಡುವಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು. ಅಸಂಘಟಿತ ಕಾರ್ಮಿಕರಿಗಾಗಿ ಬಹುಶಃ ಇಷ್ಟು ವರ್ಷಗಳಲ್ಲಿ Tailors Association ಇರಬಹುದು, ಬೇರೆ ಬೇರೆ ಅಸಂಘಟಿತ ಕಾರ್ಮಿಕರು ಮಾಡುತ್ತಿರುವ ಹೋರಾಟಕ್ಕೆ ಇವತ್ತು ಫಲಶೃತಿಗಾಗಿ ಮೂರು ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ಮುಂದಿನ ದಿವಸಗಳಲ್ಲಿ ಬೇಕಾದಂಥ Rules ಅನ್ನು ತಕ್ಷಣ frame ಮಾಡಿ, ಈಗ ಕೊಡುಗೆ ಮೂರನೇ ಎರಡು ಭಾಗದಷ್ಟು ರಾಜ್ಯದಲ್ಲಿ ಆವರಿಸಿರುವ ಕಾರ್ಮಿಕರಿಗೆ ಆದಷ್ಟು ಲಾಭ ಸಿಗಬೇಕು ಎಂದು ಹೇಳುವ ನಿಟ್ಟಿನಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ಬೇರೆ ಬೇರೆ ಕ್ಷೇತ್ರಗಳ ಬಗ್ಗೆ ಇಲಾಖಾ ಮಟ್ಟದಲ್ಲಿ ಯೋಜನೆಗಳ ಬಗ್ಗೆ ಉಲ್ಲೇಖ ಮಾಡದಿದ್ದರೂ ಕೂಡ ಸಮಯಾವಕಾಶ ಹೆಚ್ಚಿಗೆ ಇಲ್ಲದೇ ಇರುವುದರಿಂದ ಸಲಹೆ ರೂಪದಲ್ಲಿ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ನೀಡಿ ತನ್ನ ಮಾತುಗಳನ್ನು ಮುಕ್ತಾಯ ಗೊಳಿಸುತ್ತೇನೆ.

ಮೊನ್ನೆ ದಿವಸ ಸನ್ಮಾನ್ಯ ರಾಷ್ಟಪತಿಗಳು ಅಬ್ದುಲ್ ಕಲಾಂಜಿಯವರು ಅವರ ವಿದಾಯ ಹೊಂದುವ ಕಾರ್ಯಕ್ರಮದಲ್ಲಿ ಹೇಳಿದಂತಹ ಮಾತುಗಳು. ರಾಜ್ಯ ಸರ್ಕಾರ ಸ್ಪಂದನಶೀಲ ಆಗಿರಬೇಕು, accountable ಇರಬೇಕು. ಆಡಳಿತದಲ್ಲಿ ಪಾರದರ್ಶಕತೆ ಇರಬೇಕು. ಭ್ರಷ್ಟಾಚಾರರಹಿತವಾದ ಆಡಳಿತ ಬರಬೇಕೆಂದು ಕೊಟ್ಟಿರುವ ಸಲಹೆ ಮಾತ್ರವಲ್ಲ, 2020ನೇ ಇಸವಿಯಲ್ಲಿ ನಮ್ಮ ದೇಶದ ಬಗ್ಗೆ ಏನು ಕಲ್ಪನೆ ಇಟ್ಟುಕೊಂಡಿದ್ದಾರೋ ಅದನ್ನು ಸಾಧಿಸಿಯೇ ತೀರಬೇಕೆಂಬ ಅವರ ಒಂದು ಯೋಜನಾ ಲಹರಿಯನ್ನು ಬಹುಶಃ ನಮ್ಮ ರಾಜ್ಯ ಅಕ್ಷರಶಃ ಅನುಷ್ಠಾನಕ್ಕೆ ತರಬೇಕೆಂಬ ಸದಿಚ್ಛೆಯನ್ನು ಈ ಸದನದಲ್ಲಿ ವ್ಯಕ್ತಪಡಿಸಿ, ಈ ಕಾರಣಕ್ಕೋಸ್ಕರ E-Governance ಆಡಳಿತವನ್ನು

ರಾಜ್ಯದಲ್ಲಿರುವ 28 ಇಲಾಖೆಗಳಲ್ಲಿ ಕೂಡ ಇ–ಗವರ್ನೆನ್ಸ್ ಅನ್ನು 2008ನೇ ಆಗಸ್ಟ್ 15 ರೊಳಗೆ ಈ ಒಂದು ವರ್ಷದಲ್ಲಿ ನಾವು ಅಕ್ಷರಶಃ ಅನುಷ್ಠಾನಕ್ಕೆ ತರುತ್ತೇವೆಂದು ಹೇಳುವಂಥ ಸಂಕಲ್ಪವನ್ನು ಸರ್ಕಾರ ತಾಳಬೇಕು, ಬಹುಶಃ ಪ್ರಪ್ರಥಮ ರಾಜ್ಯ ನಮ್ಮ ರಾಜ್ಯ ಈ ದೇಶದಲ್ಲಿ ಆಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. 2000 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಇವತ್ತು ಸಮುದ್ರವನ್ನು ಸೇರುತ್ತದೆ ಎರಡೂವರೆ ಪರ್ಸೆಂಟ್ ನೀರನ್ನು ಸದುಪಯೋಗ ಪಡಿಸುತ್ತಿಲ್ಲ. ಬಹುಶಃ ಈ ಹಿನ್ನಲೆಯಲ್ಲಿ ಪಶ್ಚಿಮ ವಾಹಿನಿ ಯೋಜನೆಗಳ ಬಗ್ಗೆ 10 ವರ್ಷಗಳಿಂದ ಈ ಸದನದಲ್ಲಿ ಮಾತನಾಡುತ್ತಿದ್ದೇವೆ. ಕನಿಷ್ಠ ನಮ್ಮ ಸರ್ಕಾರ budgetary allocation ಇಲ್ಲದಿದ್ದರೂ ಕೂಡ, ಬೇರೆ ರೀತಿಯಲ್ಲಿ, ಯಾವುದೇ ಒಂದು ಎ.ಡಿ.ಬಿ.ಯ ನೆರವಿರಬಹುದು, ವಿಶ್ವಬ್ಯಾಂಕ್ ನೆರವಿರಬಹುದು, ಯಾವುದೇ ರೀತಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಂಥ ನಿಟ್ಟಿನಲ್ಲಿ ನಮ್ಮ ಸರ್ಕಾರ ಮುಂದೆ ಬರಬೇಕು ಮತ್ತು ಇದನ್ನು ಅನುಷ್ಠಾನಕ್ಕೆ ತರುವಂಥ ನಿಟ್ಟಿನಲ್ಲಿ ದಿಟ್ಟ ನಿಲುವನ್ನು ತಾಳಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇವೆ. ನಮ್ಮ ರಾಜ್ಯಕ್ಕೆ ಹೆಗ್ಗಳಿಕೆಯನ್ನು ತರುವಂಥ ಬೃಹತ್ತಾದ ಒಂದು ಯೋಜನೆ, ನಾನು ವಿಶೇಷವಾದ ವಿನಂತಿ ಮಾಡುತ್ತಿರುವುದು, ಇಡೀ ದೇಶದಲ್ಲಿ 5 ರಾಜ್ಯಗಳಲ್ಲಿ 2 ರಾಜ್ಯಗಳಿಗೆ ಮಾತ್ರ ಈ ಯೋಜನೆ ಲಭ್ಯವಾಗಲು ಸಾಧ್ಯವಿದೆ. ಅದು P.C.P.R.I. ಯೋಜನೆ. Petro Chemicals and Petro Chemicals Investment Division ಎನ್ನುವುದನ್ನು ಗುರುತಿಸುವಂತಹ ಯೋಜನೆ. ಅದರಲ್ಲಿ ಎಷ್ಟು ಬರುತ್ತದೆಂದರೆ, ಫೇಸ್ 1 ರಿಂದ 5 ರವರೆಗೆ ಮುಂದಿನ ದಶಕಗಳಲ್ಲಿ, 15–20 ವರ್ಷಗಳಲ್ಲಿ 1 ಲಕ್ಷದ 50 ಸಾವಿರ ಕೋಟಿ ಬಂಡವಾಳ ಹೂಡಿಕೆ ಈ ಯೋಜನೆಯಲ್ಲಿ ಬರಲು ಸಾಧ್ಯತೆ ಇದೆ. ಈ ಯೋಜನೆಯಲ್ಲಿ ಈಗಾಗಲೇ 29.56 sq. k.m. area Processing unit ಇದೆ. ಬಹುಶಃ ಮುಂದಿನ ದಿವಸಗಳಲ್ಲಿ ಬೈ ಫೇಸ್ 90.96 sq.k.m. ತರುವಂಥ ಯೋಜನೆ ಇದೆ. ಸುಮಾರು 120.5 sq.k.m.ನಲ್ಲಿ Processing unit 179.5 sq.k.m.ನಲ್ಲಿ non-Processing unit ಎಂದು ಒಟ್ಟು 300 sq.k.m. ವ್ಯಾಪ್ತಿಯಲ್ಲಿ ಬರುವ ಈ ಯೋಜನೆಯಲ್ಲಿ ನಾನು ವಿನಂತಿ ಮಾಡುತ್ತಿರುವುದು, ಕ್ಯಾಬಿನೆಟ್ ಇದರ ಬಗ್ಗೆ ತಕ್ಷಣ clearance

ಮಾಡಿಕೊಂಡು ಮುಂದಿನ August 3ಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಬರುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದಿಂದ ಅಧಿಕೃತವಾಗಿ ಇದಕ್ಕೆ ಸಂಬಂಧಪಟ್ಟ ಬೇಡಿಕೆಯನ್ನು ನಾವು ಸಲ್ಲಿಸಬೇಕು. ಖಂಡಿತ ನಾನು ಹೇಳುತ್ತೇನೆ, ನನಗೆ ಸಿಕ್ಕಿರುವ ಮಾಹಿತಿಯ ಆಧಾರದ ಮೇಲೆ ಇದುವರೆಗೆ ನೆದರ್‌ಲ್ಯಾಂಡ್‌ನಲ್ಲಿರುವ P.C.P.R.I. ಬಹಳ ದೊಡ್ಡದಾದ ಪ್ರಾಜೆಕ್ಟ್.. ಅದನ್ನು ಗ್ಲೋಬಲಿ ಮೀರಿಸುವಂಥ ಪ್ರಥಮ ಪ್ರಾಜೆಕ್ಟ್ ನಮ್ಮದಾಗುತ್ತದೆ. ಈ ಹಿನ್ನಲೆಯಲ್ಲಿ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ನಾಡಿದ್ದು ಆಗಸ್ಟ್ 3ನೇ ತಾರೀಖು ಪ್ರಧಾನ ಮಂತ್ರಿಗಳು ಬರುವಂಥ ಸಂದರ್ಭದಲ್ಲಿ ಇದು ಅನುಷ್ಠಾನಕ್ಕೆ ಬರುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಪತ್ರಿಕೆಯಲ್ಲಿ ಒಂದು ಲೇಖನ ಬಂತು. Component fluorescent light ಮೂಲಕ ವಿದ್ಯುತ್‌ನ್ನು ಉಳಿತಾಯ ಮಾಡಲು ಸಾಧ್ಯವಿದೆ. ಹತ್ತು ಸಾವಿರ ಗಂಟೆಗಳಷ್ಟು bulbಗಳು ಉರಿಯಲು ಸಾಧ್ಯವಿದೆ. ಬಹುಶಃ ಆ ಯೋಜನೆಯನ್ನು ತರುವ ಮೂಲಕ ಮುಂದಿನ ದಿವಸದಲ್ಲಿ ದೇಶದಲ್ಲಿ ಹತ್ತು ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಉಳಿಸಲು ಸಾಧ್ಯವಿದೆ ಎಂದು ಹೇಳುವಂಥ ವಿಶೇಷ ಯೋಜನೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಯೋಚನೆಯಾಗುತ್ತಿದೆ. ಅದನ್ನು ಮೀರಿಸುವ ನಿಟ್ಟಿನಲ್ಲಿ Light emitting diobe bulbs ಗಳು ಬಹುಶಃ ಚೈನಾ ದೇಶದಲ್ಲಿ ಮಾತ್ರ ಇದೆ. ನಮ್ಮ ದೇಶದಲ್ಲಿ Mysore lamps ಸಂಸ್ಥೆಯ ಮೂಲಕ ಇವುಗಳನ್ನು ಉತ್ಪತ್ತಿ ಮಾಡಿ ಬಹುಶಃ 80% ವಿದ್ಯುತ್ ಉಳಿತಾಯ ಮಾಡಲು ನಮಗೆ ಅವಕಾಶ ಇದೆ. ಈ ಯೋಜನೆಗೂ ಕಾಯಕಲ್ಪ ಕೊಟ್ಟಂತೆ ಆಗುತ್ತದೆ. ಅದೇ ರೀತಿ ವಿದ್ಯುತ್ ಉಳಿತಾಯ ಮಾಡಲು ಆಗುತ್ತದೆ. ಕೇವಲ sub-Station ಗಳನ್ನು transformer ಗಳನ್ನು lineಗಳನ್ನು ಮಾತ್ರ ಹಾಕುವಂಥದ್ದಲ್ಲ, ವಿದ್ಯುತ್ ಉಳಿತಾಯ ಆಗುವಂಥ ನಿಟ್ಟಿನಲ್ಲಿ distribution line ಇರಬಹುದು, transmission line ಇರಬಹುದು, ವಿಶೇಷವಾಗಿ Production ಕೇಂದ್ರದಲ್ಲಿ ಕೂಡ Power leakageನ್ನು avoid ಮಾಡಿ ಸಾಕಷ್ಟು ರೀತಿಯಲ್ಲಿ ನಾವು ವಿದ್ಯುತ್‌ನ್ನು ಉಳಿತಾಯ ಮಾಡಬಹುದು. Solar radiationನ್ನು electricity ಆಗಿ convert ಮಾಡುವಂಥ

highbreed aero generatorನ್ನು ಬೆಂಗಳೂರಿನಲ್ಲಿ ಈಗಾಗಲೇ ಸಂಶೋಧನೆ ಮಾಡಲಾಗಿದೆ. ಅವುಗಳ ಬಳಕೆಗೂ ಪ್ರೋತ್ಸಾಹ ಕೊಡುವ ಅವಶ್ಯಕತೆ ಇದೆ. ವಿಶೇಷವಾಗಿ ನಮ್ಮ ದೇಶದಲ್ಲಿ ಸುಮಾರು 1 ಲಕ್ಷದ 20 ಸಾವಿರ ಕೋಟಿ ರೂಪಾಯಿಗಳನ್ನು diesel and petrol ಗೋಸ್ಕರ foreign exchange ನ್ನು ಖರ್ಚು ಮಾಡುತ್ತಿದ್ದೇವೆ. ಬಹುಶಃ 10%ನ್ನು bio-fuel ಮೂಲಕ ಬಳಕೆ ಮಾಡಲು ಸಾಧ್ಯವಾದರೆ ಖಂಡಿತವಾಗಿ ದೊಡ್ಡ ಕೊಡುಗೆ, savings ನಮ್ಮ ರಾಜ್ಯಕ್ಕೆ ಮಾಡಿದ ಹಾಗೆ ಆಗುತ್ತದೆ. ಲಕ್ಷಾಂತರ ರೈತರುಗಳಿಗೆ ಇದರ ಉಪಯೋಗ ಆಗುವುದರಿಂದ ಈ bio-fuel policy ನ್ನು ಸರ್ಕಾರ ಬೇಗನೇ declare ಮಾಡಬೇಕು. ಈ ಮೂಲಕ ರಾಜ್ಯದಲ್ಲಿರುವ ರೈತರಿಗೆ ಸಂಪಾದನೆ ಮಾಡುವ ನಿಟ್ಟಿನಲ್ಲಿ ಯೋಜನೆಯನ್ನು ಮಾಡಬಹುದು. ಒಂದು ಪ್ರಾಜೆಕ್ಟ್ ರಿಪೋರ್ಟ್‌ನ್ನು ಗಮನಿಸಿದೆ, 250 ಕೆ.ಜಿ. oil seed ಗಳನ್ನು ಯಾವ ರೀತಿಯಾಗಿ crush ಮಾಡಿ ಅದರ ಮೂಲಕ ಎಷ್ಟು ಲಾಭ ಪಡೆಯಬಹುದು, ಒಂದು ತಿಂಗಳಿನಲ್ಲಿ ಹತ್ತಿರ ಹತ್ತಿರ 14,500 ರೂಪಾಯಿ ಲಾಭವನ್ನು ಪಡೆದುಕೊಳ್ಳಲು ಸಾಧ್ಯವಿದೆ. 4,500 ರೂಪಾಯಿಗಳನ್ನು instalment ನ್ನು ಕಟ್ಟಿದರೂ ಕೂಡ 10,000 ರೂಪಾಯಿಗಳನ್ನು net profit ನ್ನು ಒಬ್ಬ ರೈತರ ಮಾಡಲು ಸಾಧ್ಯವಿದೆ. ಇಂಥ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಗ್ರಾಮೀಣ ಉದ್ಯೋಗ ಅವಕಾಶವನ್ನು ಹೆಚ್ಚಳ ಮಾಡಬಹುದು. ಅದೇ ರೀತಿ ಒಂದು ಪ್ಯಾಕೇಜ್ ಮಾಡುವ ಬಗ್ಗೆ ಯೋಚನೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಮೊನ್ನೆ ಅಮೇರಿಕನ್ ವೈಸ್‌ಪ್ರೆಸಿಡೆಂಟ್ telecast ಮಾಡಿರುವಂತಹ pollution control ಬಗ್ಗೆ ಒಂದು ಪ್ರಾಜೆಕ್ಟ್ ಇದೆ. ಬಹುಶಃ ಮುಂದಿನ ದಿವಸಗಳಲ್ಲಿ ಕರಾವಳಿ ಜಿಲ್ಲೆಗಳು, ಕೊಲ್ಕೊತ್ತ ಇರಬಹುದು, ಕ್ಯಾಲಿಫೋರ್ನಿಯ ಇರಬಹುದು ಜಗತ್ತಿನ ಅನೇಕ ಭಾಗಗಳು ಮುಳುಗಿ ಹೋಗುವಂಥ ಸಾಧ್ಯತೆ ಇದೆ. ಯಾವ ರೀತಿ global warming ಆಗುತ್ತಿದೆ, ಬೇರೆ ಬೇರೆ ರೀತಿಯಲ್ಲಿರುವ ಚಿಂತನೆಗಳೇನು ವ್ಯರ್ಥವಾಗಿತ್ತು. ಬಹುಶಃ, ನಾವು ಅದರ ಬಗ್ಗೆ ಸರಿಯಾಗಿ ಅಭ್ಯಾಸ ಮಾಡಿದರೆ ಈಗಲೇ ಅದಕ್ಕೆ ಸಂಬಂಧಪಟ್ಟ ಪರ್ಯಾಯ ವ್ಯವಸ್ಥೆಯನ್ನು ಮಾಡಲು ಸಾಧ್ಯವಾಗುತ್ತದೆ. Hydrogen economy ಎಂದು ಹೇಳುವ ನಿಟ್ಟಿನಲ್ಲಿ ಒಂದು ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರು ಮಾಡಿ ತಮ್ಮ ಮೂಲಕ ಸರ್ಕಾರಕ್ಕೆ

ಕೊಡಲು ಇಚ್ಛಿಸುತ್ತಿದ್ದೇನೆ. ಹತ್ತಿರ ಹತ್ತಿರ 8,600 ಕೋಟಿ ರೂಪಾಯಿಯಷ್ಟು Capital investment ಇದೆ. ಆ Processing Unit ಗೆ ಸಂಬಂಧಪಟ್ಟಂತೆ ಪ್ರತಿ ವರ್ಷ 3,307 ಕೋಟಿ ರೂ. Operationg cost ಬರುತ್ತದೆ. ಲಾಭ Hydrogen sale ಮಾಡುವುದರ ಮೂಲಕ 5,294 ಕೋಟಿ ರೂ. 2,615 ಕೋಟಿ ರೂ. ವಾರ್ಷಿಕವಾಗಿ Savings ಮಾಡಿ ಮೂರು ಅಥವಾ ನಾಲ್ಕು ವರ್ಷಗಳಲ್ಲಿ Capital investment ನಲ್ಲಿ ಏನು ಖರ್ಚು ಮಾಡಿರುತ್ತೇವೆ ಅದನ್ನು ಉಳಿತಾಯ ಮಾಡಬಹುದು. ಸರ್ಕಾರ ಒಂದು ನಯಾಪೈಸೆ ಖರ್ಚು ಮಾಡದೆ P.P.P. ಆಧಾರದ ಮೇಲೆ ಈ ಪ್ರಾಜೆಕ್ಟ್‌ನ್ನು ತರಲು ಸಾಧ್ಯವಿದೆ. ಅದರ ಪೂರ್ತಿ ವಿವರಣೆಯನ್ನು ನಾನು ಸರ್ಕಾರದ ಮುಂದೆ ಇಡಲು ಇಚ್ಛಿಸುತ್ತಿದ್ದೇನೆ. ಕೇವಲ ಟ್ರೇಡರ್ಸ್, ಉದ್ದಿಮೆಗಳು ಮತ್ತು ಕೈಗಾರಿಕಾ ಉದ್ದಿಮೆಗಳಿಂದ ಮಾತ್ರ ತೆರಿಗೆಯನ್ನು ಸಂಗ್ರಹ ಮಾಡುವುದಿಲ್ಲ. ಹೈ-ಟೆಕ್ ಕ್ಷೇತ್ರದಲ್ಲಿ ಕೂಡ ನಾವು ನೋಡಬೇಕಾಗಿದೆ. Optic fiber cable ಮೂಲಕ artificially created light energy ಯಾವುದು ಇದೆ ಅದು pass ಆಗುವಾಗ ಯಾವ ರೀತಿಯಾಗಿ commodity ಆಗುತ್ತದೆ goods ಆಗುತ್ತದೆ ಎಂದು ಹೇಳುವ ಆಧಾರದಲ್ಲಿ ಈಗಾಗಲೇ ನಮ್ಮ ವಾಣಿಜ್ಯ ಇಲಾಖೆ ಅದಕ್ಕೆ ತೆರಿಗೆಯನ್ನು ಹಾಕುವಂಥ process ನ್ನು ಆರಂಭ ಮಾಡಿದೆ. ಇದರ ಬಗ್ಗೆ ಇನ್ನೂ ಹೆಚ್ಚಿನ investigation ನಡೆಸಿದಾಗ ನಮಗೆ ಸಿಕ್ಕಿರುವ ಮಾಹಿತಿ frequency based and frequency leaseನ ಆಧಾರದಲ್ಲಿ ಯಾವ ರೀತಿ ಟಿ.ವಿ.ಚಾನಲ್ ಕೂಡ ಈ ವ್ಯಾಪ್ತಿಯಲ್ಲಿ ಬರುತ್ತದೆ ಎಂಬ ಬಗ್ಗೆ ಸಮಗ್ರವಾದ ಅಧ್ಯಯನ ವರದಿ ನಮ್ಮ ಸಮಿತಿಯ ಕಡೆಯಿಂದ ಕೆಲವು ದಿವಸಗಳಲ್ಲಿ ಸದನದಲ್ಲಿ ಮಂಡಿಸಲಿದ್ದೇವೆ. ಈ ನಿಟ್ಟಿನಲ್ಲಿ ಕೂಡ ತಾವು ಯೋಚನೆ ಮಾಡಬೇಕು. ವ್ಯಾಟ್‌ಗೆ ಸಂಬಂಧಪಟ್ಟಂತೆ 2 ಲಕ್ಷ ರೂ. Turn over ಮೇಲೆ ಇರುವಂತದ್ದನ್ನು 5 ಲಕ್ಷ ರೂ.ಗಳಿಗೆ ವಿಸ್ತರಿಸಬೇಕು ಎಂದು ವಿನಂತಿ ಮಾಡುತ್ತಿದ್ದೇನೆ. ವಿಶೇಷವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕರಾವಳಿ ಜಿಲ್ಲೆಗಳಲ್ಲಿ ಸೂಕ್ಷ್ಮ ಪ್ರದೇಶವಾಗಿರುವ ಹಿನ್ನೆಲೆಯಲ್ಲಿ ನಾನು ಹೆಚ್ಚು ಚರ್ಚೆ ಮಾಡಲು ಹೋಗುತ್ತಿಲ್ಲ. ಪೊಲೀಸ್ ಕಮೀಷನರೇಟ್ ಮಂಗಳೂರಿನಲ್ಲಿ ತೀರ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಮೀನುಗಾರಿಕಾ ಇಲಾಖೆಯಿಂದ ಅತ್ಯುತ್ತಮವಾದ ಕೆಲಸ

ಆಗುತ್ತಿದ್ದರೂ ಸರ್ವಋತು ಮೀನುಗಾರಿಕಾ ಬಂದರುರನ್ನು ಮಾಡುವ ನಿಟ್ಟಿನಲ್ಲಿ ವಿಶೇಷವಾಗಿ ಬಂದರು ಸಚಿವರು ಇದರ ಬಗ್ಗೆ ಹೆಚ್ಚು ಸ್ಪಂದನ ಕೊಡಬೇಕು. ಡ್ರೆಡ್ಜಿಂಗ್ ವ್ಯವಸ್ಥೆಯನ್ನು ಮಾಡುವ ಜೊತೆಯಲ್ಲಿ ಜೆಟ್ಟಿ ನಿರ್ಮಾಣವನ್ನು ಮಾಡಬೇಕು. ನಮ್ಮ ಮಂಗಳೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಾನು ಹೇಳುತ್ತಿಲ್ಲ. ಭಟ್ಕಳ ಇರಬಹುದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಇರಬಹುದು, ಉಡುಪಿ ಜಿಲ್ಲೆಯಲ್ಲಿ ಇರಬಹುದು, ಈ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕು. ಕಡಲ ಕೊರೆತದ ಬಗ್ಗೆ ಶಾಶ್ವತವಾದ ಪರಿಹಾರ ಕೊಡುವ ನಿಟ್ಟಿನಲ್ಲಿ ಯೋಜನೆಯನ್ನು ಹಾಕಿಕೊಳ್ಳಬೇಕಾಗಿದೆ. ಬಹುಶಃ ಈ ಸಂದರ್ಭದಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಕರಾವಳಿ ಜಿಲ್ಲೆಗಳಲ್ಲಿ ಮೂಲ ಗೇಣಿ ಪದ್ಧತಿಯನ್ನು ಸಂಪೂರ್ಣವಾಗಿ ಅಬಾಲಿಶ್ ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಮಳೆ ಹಾನಿಗೆ ಸಂಬಂಧಪಟ್ಟಂತೆ ನನ್ನ ಕ್ಷೇತ್ರದಲ್ಲಿ 12 ಕೋಟಿ ಬೇಡಿಕೆ ಇದೆ. ಆ ಹಣವನ್ನು ಬಿಡುಗಡೆ ಮಾಡಬೇಕು ಎಂದು ವಿನಂತಿ ಮಾಡುತ್ತೇನೆ. ಮಂಗಳೂರು ತಾಲ್ಲೂಕು ಯಾವುದು ಇದೆ ಅದನ್ನು ಮೂಡಬಿದರೆ ಮತ್ತು ಮಂಗಳೂರು ತಾಲ್ಲೂಕಾಗಿ ವಿಭಜಿಸಬೇಕು. ಅದೇ ರೀತಿ Bangalore one ಎಂಬ ಕಾರ್ಯಕ್ರಮವನ್ನು ಮಂಗಳೂರು ಮತ್ತು ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಪ್ರಸರಿಸಬೇಕು. ಆಶ್ರಯ ಮನೆಗಳಿಗೆ ಸಂಬಂಧಪಟ್ಟಂತೆ ಕೈಗೊಂಡ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಬೇಕು. ಅನೇಕ ಒಳ್ಳೆಯ ಯೋಜನೆಯ ಮೂಲಕ ಸರ್ಕಾರ ಪ್ರೋತ್ಸಾಹ ಮಾಡಿದೆ. ಆದರೆ ಈ ಆಶ್ರಯ ಮನೆಗಳಿಗೆ ಅತ್ಯಂತ ಕಡುಬಡವರು ತೆಗೆದುಕೊಂಡಂತಹ ಸಾಲದ ಬಡ್ಡಿಯನ್ನು ಮನ್ನಾ ಮಾಡಬೇಕು. ಹಾಸನದ ಮೂಲಕ ಹೋಗುವ ಮಂಗಳೂರು–ಬೆಂಗಳೂರು–ರೈಲು ಯಾವುದೋ ಕಾರಣಕ್ಕಾಗಿ ನಿಂತಿದೆ. ಅದನ್ನು ಚಾಲನೆ ತರುವ ನಿಟ್ಟಿನಲ್ಲಿ ಸರ್ಕಾರ ಎಲ್ಲ ರೀತಿಯ ಒತ್ತಡವನ್ನು ಹಾಕಬೇಕು. ಶಿರಾಡಿ ಘಾಟ್, ಆಗುಂಬೆ ಘಾಟ್, ಬೇರೆ ಬೇರೆ ನಮ್ಮ ಘಾಟ್‌ಗಳು ಯಾವುದು ಇದೆ ಅದನ್ನು ಖಂಡಾಲ ಘಾಟ್‌ನಲ್ಲಿ ಯಾವ ರೀತಿಯಾಗಿ ಪಿ.ಪಿ.ಪಿ. ಆಧಾರದಲ್ಲಿ ಮಾಡೆಲ್ ಆಗಿ ಮಾಡಿದ್ದಾರೆ. ಆ ರೀತಿ ಮಾಡಿ ಟೋಲ್‌ನ್ನು Collect ಮಾಡುವುದರ ಮೂಲಕವಾದರೂ ಅದಕ್ಕೆ ಚಾಲನೆ ಕೊಡಿ. ಬಹಳಷ್ಟು ವರ್ಷಗಳಲ್ಲಿ ನಮ್ಮ ರಾಜ್ಯದ ಘಾಟ್‌ಗಳ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಕೊಡಬಾರದು ಎಂದು ವಿನಂತಿ

ಮಾಡುತ್ತೇನೆ. ಅತ್ಯುತ್ತಮವಾಗಿ ಸರ್ಕಾರ ಕೆಲಸ ಮಾಡಬೇಕು. ಇಷ್ಟು ದಶಕಗಳಲ್ಲಿ ಬಂದಿರುವಂಥ ಒಂದು ಸ್ಮರಣೀಯವಾದ ಸಾಧನೆ ಮಾಡಿರುವಂಥ ಈ ಸರ್ಕಾರವನ್ನು ಗುರುತಿಸುವ ನಿಟ್ಟಿನಲ್ಲಿ ಕಾರ್ಯ ಯೋಜನೆಗಳು ಅನುಷ್ಠಾನಕ್ಕೆ ಬರಲಿ ಎಂದು ಹಾರೈಸುತ್ತ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಟಿ.ಬಿ.ನಾಗರಾಜು (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಮಾತನಾಡಲಿಕ್ಕೆ ಬಹಳಷ್ಟು ಕಿರಿಯ ಸದಸ್ಯರುಗಳಿಗೆ ತಾವು ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ JD(S) ಮತ್ತು BJP ಪಕ್ಷಗಳ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದು 16 ತಿಂಗಳುಗಳಾಗಿ, 17ನೇ ತಿಂಗಳಿಗೆ ಪಾದಾರ್ಪಣೆ ಆಗಿದೆ. ಬೆಂಗಳೂರು ಮಹಾನಗರ, ಬೆಂಗಳೂರು ನಗರ, ಬೆಂಗಳೂರು (ಗ್ರಾಮಾಂತರ) ಪ್ರದೇಶಗಳಲ್ಲಿ, ಇವತ್ತು ದೊಡ್ಡ ಪ್ರಮಾಣದ ರೈತರ ಭೂಮಿಯನ್ನು acquisition ಮಾಡತಕ್ಕಂಥ ಒಂದು ನಿರ್ಧಾರವನ್ನು ರಾಜ್ಯ ಸಂಪುಟ ಸಭೆಯು ತರಾತುರಿಯಲ್ಲಿ ತೆಗೆದುಕೊಂಡಿದೆ. ಇದರಿಂದಾಗಿ ಇವತ್ತು ಅಲ್ಲಿರುವ ರೈತರ ಕುಟುಂಬಗಳಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ಇವತ್ತು ಒಟ್ಟಾರೆ 1 ಲಕ್ಷ 20 ಸಾವಿರ ಎಕರೆ ರೈತರ ಭೂಮಿಯನ್ನು ಬೆಂಗಳೂರು (ಗ್ರಾಮಾಂತರ) ನಗರ ಮತ್ತು ಮಹಾನಗರ ವ್ಯಾಪ್ತಿಯಲ್ಲಿ ವಶಪಡಿಸಿಕೊಳ್ಳಲಿಕ್ಕೆ ಈ ಒಂದು ಸಮ್ಮಿಶ್ರ ಸರ್ಕಾರ ಹೊರಟಿದೆ. ಅದರಲ್ಲೂ ವಿಶೇಷವಾಗಿ, ಹೊಸಕೋಟೆ ತಾಲ್ಲೂಕಿನ ನಂದಗುಡಿ ಹೋಬಳಿಯಲ್ಲಿ SEZ, ವಿಶೇಷ ಆರ್ಥಿಕ ವಲಯವನ್ನು ಸ್ಥಾಪನೆ ಮಾಡಲಿಕ್ಕೆ ಇವತ್ತು ಸರ್ಕಾರ ಮಾಹಿತಿಯನ್ನು ಕೊಟ್ಟಿದೆ. ಖಾಸಗಿಯವರ ಭೂಮಿ 13,762 ಎಕರೆ, ಸರ್ಕಾರದ ಜಮೀನು 4,745 ಎಕರೆ, ಹೀಗೆ ಒಟ್ಟಾರೆ 18,507 ಎಕರೆ ಭೂಮಿಯನ್ನು ಇವತ್ತು ವಿಶೇಷ ಆರ್ಥಿಕ ವಲಯ ಸ್ಥಾಪನೆ ಮಾಡಲಿಕ್ಕೆ ವಶಪಡಿಸಿಕೊಳ್ಳಲು ಸಂಪುಟ ಸಭೆಯು ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ಇವತ್ತು 36 ಗ್ರಾಮಗಳ ವ್ಯಾಪ್ತಿಯಲ್ಲಿ ಇಂತಹ ಒಂದು ದೊಡ್ಡ ಪ್ರಮಾಣದ ಭೂಮಿಯನ್ನು ವಶಪಡಿಸಿಕೊಳ್ಳಲು ಸರ್ಕಾರ ಹೊರಟಿದೆ. 80 ಸಾವಿರ ಜನಸಂಖ್ಯೆ ಮತ್ತು 20 ಸಾವಿರ

ಕುಟುಂಬಗಳು ಇರತಕ್ಕಂಥ 36 ಗ್ರಾಮಗಳಲ್ಲಿ ಸುಮಾರು 18 ಸಾವಿರ ಎಕರೆ ಭೂಮಿಗಳಷ್ಟು ದೊಡ್ಡ ಪ್ರಮಾಣದ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುತ್ತಿದೆ. ಕಳೆದ ನಾಲ್ಕು ತಲೆಮಾರುಗಳಿಂದ ರೈತರು ಈ ಭೂಮಿಯಿಂದ ದುಡಿಮೆ ಮಾಡಿ, ಅದರಿಂದ ಬರತಕ್ಕಂತಹ ಎಲ್ಲಾ ಫಲ ಫಲಾದಿಗಳಿಂದ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಕೊಂಡು ಜೀವನೋಪಾಯ ಮಾಡುತ್ತಿದ್ದಾರೆ. ಇದಕ್ಕೆ ನೂರಾರು ವರ್ಷಗಳ ಚರಿತ್ರೆ ಇದೆ. ಅಂತಹ ರೈತರ ಭೂಮಿಯನ್ನು ಇವತ್ತು ಈ ಸಮ್ಮಿಶ್ರ ಸರ್ಕಾರ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ವಶಪಡಿಸಿಕೊಳ್ಳುತ್ತಿದೆ. ಇವರ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಪ್ಪು ಮಾಹಿತಿಗಳನ್ನು ಕೊಟ್ಟು, ಅಲ್ಲಿಂದ ತಾತ್ಕಾಲಿಕ ಒಪ್ಪಿಗೆಯನ್ನು ಪಡೆಯುವಲ್ಲಿ ಈ ಸರ್ಕಾರದವರು ಯಶಸ್ವಿಯಾಗಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಆರ್ಥಿಕ ವಲಯ ಸ್ಥಾಪನೆ ಮಾಡಿ ಎಂದು ಕೇಂದ್ರ ಸರ್ಕಾರ ಮಾರ್ಗಸೂಚಿ ಇದೆ. ಆ ಮಾರ್ಗಸೂಚಿಯನ್ನು ಇವತ್ತು ಇಲ್ಲಿ ಉಲ್ಲಂಘಿಸಲಾಗಿದೆ. ಆ ಭಾಗದಲ್ಲಿ ಬರತಕ್ಕಂಥ 18,500 ಎಕರೆ ಭೂಮಿಯಲ್ಲಿ ರೈತರು ರೇಷ್ಮೆ, ತರಕಾರಿ, ಹೂವು, ಮಾವು, ತೆಂಗು, ಸೇಬು ಬೆಳೆಯುವುದಲ್ಲದೆ, ಹೈನುಗಾರಿಕೆ ಸಹ ನಡೆಸುತ್ತಿದ್ದಾರೆ. ಅಲ್ಲಿ ಫಲವತ್ತಾದ ಭೂಮಿಯಲ್ಲಿ ರೈತರು ಬೆಳೆಯನ್ನು ಬೆಳೆದು, ಅದರಿಂದ ಜೀವನ ಮಾಡುತ್ತಿದ್ದಾರೆ. ಆ ರೈತರ ಭೂಮಿಯನ್ನು ಇವತ್ತು ಆರ್ಥಿಕ ವಲಯ ಸ್ಥಾಪನೆ ಮಾಡಲು ವಶಪಡಿಸಿಕೊಳ್ಳಲು ಇವತ್ತು ಈ ರಾಜ್ಯ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಇದರಿಂದಾಗಿ ಎಷ್ಟರ ಮಟ್ಟಿಗೆ ಈ ಸಮ್ಮಿಶ್ರ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದೆ, ಆಸಕ್ತಿ ಇದೆ ಎಂಬುದು ಗೊತ್ತಾಗುತ್ತದೆ. ಭಾಷಣಗಳಲ್ಲಿ, ಸದನದಲ್ಲಿ, ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ರೈತರು ಈ ದೇಶದ ಬೆನ್ನೆಲುಬು, ರೈತರು ದೇಶಕ್ಕೆ ಅನ್ನ ಕೊಡತಕ್ಕಂಥ ಅನ್ನದಾತರು ಎಂದು ಈ ಸರ್ಕಾರ ಹೇಳುತ್ತಿದೆ. ಆದರೆ ಇವತ್ತು ಆ ಅನ್ನದಾತರು ಎಲ್ಲಿದ್ದಾರೆ? ಅನ್ನದಾತರಾದ ಆ ರೈತರ ಬೆನ್ನೆಲುಬನ್ನು ಮುರಿಯಲಿಕ್ಕೆ ಇವತ್ತು ಈ ಸರ್ಕಾರ ಹೊರಟಿದೆ. ಅನ್ನ ಕೊಡತಕ್ಕಂತಹ ರೈತನ ಬಾಯಿಗೆ ಮಣ್ಣನ್ನು ಹಾಕಲಿಕ್ಕೆ ಈ ಸರ್ಕಾರ ಹೊರಟಿದೆ. ಈ ಮಾತನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನನಗೆ ಮನಸ್ಸಿನಲ್ಲಿ ಬಹಳ ಸಂಕಟವಾಗುತ್ತಿದೆ. ಇವತ್ತು ಆ ರೈತರು ತಮ್ಮ ಪ್ರಾಣವನ್ನು ಆದರೂ ಬಿಡಲಿಕ್ಕೆ ಸಿದ್ಧರಾಗಿದ್ದಾರೆ. ಆದರೆ ಒಂದೇ ಒಂದು ಗುಂಟೆ ಭೂಮಿಯನ್ನು

ಕೊಡಲಿಕ್ಕೆ ಸಿದ್ಧರಿಲ್ಲ. ಈ ಬಗ್ಗೆ ಈಗಾಗಲೇ ಕಳೆದ ಮಾರು ತಿಂಗಳಿಂದ ಹಲವಾರು ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ, ಟಿ.ವಿ.ಗಳಲ್ಲಿ ಕೂಡ ವರದಿಯಾಗುತ್ತಾ ಬಂದಿದೆ. ಇವತ್ತು ಒಂದು ಕಡೆ ವಿಶೇಷ ಆರ್ಥಿಕ ವಲಯ, ಇನ್ನೊಂದು ಕಡೆ ಉಪ ನಗರ ನಿರ್ಮಾಣ, ಮತ್ತೊಂದು ಕಡೆ Silicon City, ಮಗದೊಂದು ಕಡೆ KIADB ಹೀಗೆ ಹಲವಾರು ನಗರಗಳನ್ನು ಸ್ಥಾಪನೆ ಮಾಡಲು ಭೂಮಿ ವಶಪಡಿಸಿಕೊಳ್ಳಲಿಕ್ಕೆ ಸರ್ಕಾರ ಹೊರಟಿದೆ. ಇವತ್ತು ಈ ರೈತರು ಬದುಕಿರುವಾಗಲೇ ಅವರ ಮಾರಣ ಹೋಮ ಮಾಡಲಿಕ್ಕೆ ಈ ಸರ್ಕಾರ ಹೊರಟಿದೆ. ಇವತ್ತು ರೈತರು ಈ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರೆ, ಒಂದು ಕಡೆ ಬರಗಾಲ, ಮತ್ತೊಂದು ಬೆಳೆದ ಬೆಳೆಗೆ ಬೆಂಬಲವಿಲ್ಲ, ಮತ್ತೊಂದು ಕಡೆ ಸಾಲದ ಬಾಧೆ. ಈ ಬಾಧೆಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇವತ್ತು ಬದುಕಿರುವಂತಹ ರೈತರನ್ನು ಕೊಂದು, ಅವರ ಮಾರಣ ಹೋಮ ಮಾಡಲಿಕ್ಕೆ ಸರ್ಕಾರ ಹೊರಟಿದೆ. ಸ್ವಾತಂತ್ರ್ಯ ಬಂದ 60 ವರ್ಷಗಳಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಾರಂಭವಾದ ಮೇಲೆ, ಜನಪ್ರತಿನಿಧಿಗಳಾಗಿ ಇವತ್ತು 21 ಜನ ಮುಖ್ಯಮಂತ್ರಿಗಳು ಈ ಸದನದಲ್ಲಿ ಬಂದು ಆಡಳಿತ ಮಾಡಿದ್ದಾರೆ. ಮಾನ್ಯ ಕುಮಾರಸ್ವಾಮಿಯವರು ರಾಜ್ಯದ 21ನೇ ಮುಖ್ಯಮಂತ್ರಿಗಳು. ಯಾರೂ ಇಂತಹ 1 ಲಕ್ಷ 20 ಸಾವಿರ ಎಕರೆಗಳಷ್ಟು ದೊಡ್ಡ ಪ್ರಮಾಣದ ಭೂಮಿಯನ್ನು acquisition ಮಾಡಿದಂತಹ ಇತಿಹಾಸ ಇಡೀ ರಾಜ್ಯದಲ್ಲೇ ಇಲ್ಲ. 18 ತಿಂಗಳ ಇವರ ಸರ್ವಾಧಿಕಾರ, ಇವರ ಏಕ ಚಕ್ರಾಧಿಪತ್ಯ, ಇವರ ತಾರತಮ್ಯದ ಆಡಳಿತದಿಂದ ಇವತ್ತು 1 ಲಕ್ಷ 20 ಸಾವಿರ ಎಕರೆ ಭೂಮಿ ರೈತರ ಕೈ ಬಿಡುತ್ತಿದೆ. KIADB ಮೂಲಕ Silicon City ಉಪ ನಗರ ಸ್ಥಾಪನೆ ಮಾಡಲಿಕ್ಕೆ ಇವತ್ತು ಈ ಸರ್ಕಾರ ಹೊರಟಿದೆ. ಸತ್ಯಾ ಸತ್ಯತೆಯಿಂದ ಈ ಸದನದಲ್ಲಿ ನಾನು ಹೇಳುತ್ತೇನೆ. ಇದನ್ನು ಭ್ರಷ್ಟಾಚಾರದ ಒಂದು ದೊಡ್ಡ ಹಗರಣ ಮಾಡಲಿಕ್ಕೆ ಈ ಸರ್ಕಾರ ಹೊರಟಿದೆ. ಒಂದು ಕಡೆ ಗಣಿ ಹಗರಣ, ಇನ್ನೊಂದು ಕಡೆ ಭೂ ಹಗರಣ, ಇನ್ನೊಂದು ಕಡೆ ಈ ಒಂದು ವರ್ಗಾವಣೆಗಳ ಹಗರಣ. ಬರೇ ಹಗರಣಗಳ ಸರಮಾಲೆಯೇ ಇವರ ಕೊರಳಿನಲ್ಲಿದೆ. ಇವರು ಅಭಿವೃದ್ಧಿಯಲ್ಲಿ ತಾರತಮ್ಯ ಮಾಡುತ್ತಿದ್ದಾರೆ. ನಮ್ಮ ನಾಯಕರಾದ, ಪಕ್ಷದ ಅಧ್ಯಕ್ಷರಾದ ಮಾನ್ಯ ಖರ್ಗೆಜೀ ಸಾಹೇಬರು ಆ ಬಗ್ಗೆ ಆಗಲೇ ಹೇಳಿದರು. ಕಳೆದ ಎರಡು ವರ್ಷಗಳಿಂದ ಇವರು ಈ ರಾಜ್ಯದಲ್ಲಿ

ಕಾಂಗ್ರೆಸ್ ಶಾಸಕರು ಇದ್ದಂತಹ ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ನೀಡತಕ್ಕಂಥ ಅನುದಾನಗಳಲ್ಲಿ ತಾರತಮ್ಯ ಮತ್ತು ಪಕ್ಷಪಾತ ಮಾಡುತ್ತಾ ಸರ್ವಾಧಿಕಾರ ನಡೆಸುತ್ತಿದ್ದಾರೆ. ನಾನು ಈ ಬಾರಿ ಶಾಸಕನಾಗಿ ಈ ಸದನದೊಳಗಡೆ ಬಂದಿದ್ದೇನೆ. ನಾನೂ ಕೂಡ ಜನ ಪ್ರತಿನಿಧಿಯಾಗಿ ಪ್ರಾಮಾಣಿಕವಾಗಿ ಜನರ ಸೇವೆ ಮಾಡಬೇಕೆನ್ನುವ ಕಳಕಳಿಯಿಂದ ಈ ಸದನದಲ್ಲಿ ಬಂದಿದ್ದೇನೆ. ನಾನು ಕಳೆದ ಮೂರು ವರ್ಷಗಳಿಂದ ಒಂದು ಪಿ.ಯು. ಕಾಲೇಜ್ ಕೇಳುತ್ತಿದ್ದೇನೆ, ಆದರೂ ಸರ್ಕಾರ ಕೊಟ್ಟಿಲ್ಲ. ನಮ್ಮ ಜಿಲ್ಲೆಯಲ್ಲಿ 8 ತಾಲ್ಲೂಕು ಗಳಿವೆ, ನಮ್ಮ ತಾಲ್ಲೂಕಿನಲ್ಲಿ 2,600 ಮಕ್ಕಳು ಪಿ.ಯು.ಕಾಲೇಜ್‌ಗಳಲ್ಲಿ ಓದುತ್ತಿದ್ದಾರೆ. ಇಡೀ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ ಇಷ್ಟೊಂದು ಮಕ್ಕಳು ಇಲ್ಲ. ಇವರಲ್ಲಿ ಮಹಿಳೆಯರೂ ಕೂಡ ಇದ್ದಾರೆ. ಅಂತಹ ತಾಲ್ಲೂಕಿಗೆ ಪಿ.ಯು.ಕಾಲೇಜ್ ಕೊಡಲಿಕ್ಕೆ ಎರಡು ವರ್ಷಗಳಿಂದ ನಾನು ಮಂತ್ರಿಗಳಲ್ಲಿ ದುಂಬಾಲು ಬಿದ್ದಿದ್ದೇನೆ, ಬೇಡಿಕೊಂಡಿದ್ದೇನೆ, ಕಾಡಿಕೊಂಡಿದ್ದೇನೆ. ಆದರೂ ನನಗೆ ಬಂದು ಕಾಲೇಜ್ ಕೂಡ ಕೊಡಲಿಲ್ಲ. ಇವರು ಸಮರ್ಥನೆ ಮಾಡಿಕೊಳ್ಳುತ್ತಾರೆ.....

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ಈಗ ಎರಡು ವರ್ಷಗಳಾಯಿತು. ಇದಕ್ಕೆ ಮೊದಲು ಏಕೆ ಅವರು ಕೇಳಿರಲಿಲ್ಲ? ಆಗ ಇವರ ಪ್ರಾಮಾಣಿಕತೆ ಇರಲಿಲ್ಲವೇ? ಅವರು ಮಾತನಾಡಲಿ, ನಾವು ಬೇಡ ಎನ್ನುವುದಿಲ್ಲ. ಅವರು ಆರೋಪಗಳನ್ನು ಮಾಡಲಿ. ಅವರು ಆರೋಪ ಮಾಡುವುದು ಸಹಜ. ಏಕೆಂದರೆ, ವಿರೋಧ ಪಕ್ಷದವರು ಇರುವುದೇ ಅದಕ್ಕೋಸ್ಕರ. ಆದರೆ ಆರೋಪದಲ್ಲಿ ಹುರುಳಿದೆಯೇ?

ಶ್ರೀ ಎಂ.ಟಿ.ನಾಗರಾಜು : ಇದೆ.

ಶ್ರೀ ಹೆಚ್.ಡಿ.ಬಸವರಾಜು : ಎರಡು ವರ್ಷಗಳ ಮುಂಚೆ ನಿಮಗೇನಾಗಿತ್ತು? ಹಿಂದೆ ಸರ್ಕಾರ ಇತ್ತಲ್ಲಾ? ಅದಕ್ಕೆ ಛೀಮಾರಿ ಹಾಕಿ. ಹಿಂದಿದ್ದ ನಿಮ್ಮ ಸರ್ಕಾರಕ್ಕೆ ಛೀಮಾರಿ ಹಾಕಿ. ಅವರು ಕೊಡಲಿಲ್ಲವೆಂದರೆ ನಾವೇಕೆ ಕೊಡಬೇಕು?.....

(ಗೊಂದಲ)

ಛೇರ್ಮನ್ : ಆಯಿತು, ಮಾನ್ಯ ಬಸವರಾಜ್‌ರವರೆ, ಕುಳಿತುಕೊಳ್ಳಿ.

(ಗೊಂದಲ)

ಈ ತರಹ ಮಾತನಾಡಬೇಡಿ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ... ಮಾನ್ಯ ಅಧ್ಯಕ್ಷರೆ, ಇವರು ಹೇಳಲಿ, ಅದನ್ನು ನಾವು ಬೇಡ ಎನ್ನುವುದಿಲ್ಲ. 'ಹಗರಣಗಳ ಸರಮಾಲೆ' ಎಂದರೆ ಹೇಗೆ?

(ಗೊಂದಲ)

ಇಂತಿಂಥ ಹಗರಣದಲ್ಲಿ ಇಂತಿಂಥ ಭ್ರಷ್ಟಾಚಾರವಾಗಿದೆ, ಅದರಲ್ಲಿ ಇಂತಿಂಥವರು ಭಾಗಿಯಾಗಿದ್ದಾರೆ, ಇಂತಹ ಮಂತ್ರಿಗಳಿದ್ದಾರೆ ಎಂದು ಅವರು ಸಾಕ್ಷಿ ನೀಡಿ ಆರೋಪ ಮಾಡಲಿ.

(3-30 PM)

(ಗೊಂದಲ)

ಛೇರ್ಮನ್ : ಆಯಿತು ಮಾನ್ಯ ಬಸವರಾಜ್‌ರವರೆ, ಕುಳಿತುಕೊಳ್ಳಿ. ಅವರು ಮಾತನಾಡಲಿ.

(ಗೊಂದಲ)

ಮಾನ್ಯ ನಾಗರಾಜುರವರೆ, ತಾವು ಮಾತನಾಡುವುದನ್ನು ಮುಂದುವರೆಸಿ.

(ಗೊಂದಲ)

ಡಾ: ಕೆ. ಅನ್ನದಾನಿ : ಯಾವಾಗಲೂ 'ಗಣಿ ಹಗರಣ', 'ಗಣಿ ಹಗರಣ' ಎಂದರೆ, ಏನರ್ಥ? ...

(ಗೊಂದಲ)

ಡಾ: ಕೆ.ಅನ್ನದಾನಿ : ಇವರೇನು ಬಜೆಟ್ ಮೇಲೆ ಮಾತನಾಡುತ್ತಿದ್ದರೋ, ಹೇಗೆ? ಇವರು ಯಾವುದರ ಮೇಲೆ ಮಾತನಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಅಧ್ಯಕ್ಷರೆ, ನೀವೇ ಕೇಳಿ.

(ಗೊಂದಲ)

ಚೇರ್ಮನ್ : ನಾಗರಾಜ್‌ರವರೆ, ಇತ್ತ ಕಡೆ ಮಾತನಾಡಿ.

ಶ್ರೀ ಎಂ.ಟಿ.ಬಿ.ನಾಗರಾಜು : ಅಧ್ಯಕ್ಷರೆ, ಇವರ ಕೋಪ ಹೇಗಿದೆಯೆಂದರೆ, ಒಂದು ಗಾದೆ ಇದೆ. ಇದ್ದುದ್ದನ್ನು ಇದ್ದಂಗೆ ಹೇಳಿದ್ರೆ. ಎದ್ದು ಬಂದು ಎದೆಗೆ ಒದ್ದಂಗಾಯ್ತಂತೆ. ನೋಡಿ, ಸಹಿಸಿಕೊಳ್ಳುವುದಕ್ಕೆ ಅವರಿಗೆ ಆಗುತ್ತಿಲ್ಲ. ನಾವು ಏನು ಮಾಡೋಣ? ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿ ನೋಡಿಕೊಂಡರಂತೆ. ಹಾಗಾಗಿದೆ. ಅಧ್ಯಕ್ಷರೆ, ನಾವು ಯಾವುದನ್ನೂ ಪಕ್ಷಪಾತವಾಗಿಯಾಗಲಿ ಅಥವಾ ವಿರೋಧ

ಪಕ್ಷದಲ್ಲಿದ್ದೇವೆಂದು ಅದರ ಬಗ್ಗೆ ಟೀಕೆ ಮಾಡಬೇಕೆಂದು ಮಾತನಾಡುತ್ತಿಲ್ಲ. ಈ ಅಭಿವೃದ್ಧಿಯಲ್ಲಿ ತಾರತಮ್ಯ, ಹಂಚಿಕೆಯಲ್ಲಿ ತಾರತಮ್ಯ ಮಾಡಿದ್ದಾರೆಂಬ ಮಾತನ್ನು ನಾನು ನೋವಿನಿಂದ ಹೇಳುತ್ತಿದ್ದೇನೆ. ಕಾಲೇಜುಗಳ ಬಗ್ಗೆ ನೀವು ಏನು ಹೇಳಿದ್ದೀರಿ, ಇದು ಆಡಳಿತ ಪಕ್ಷದವರು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಮಾತ್ರ, ಪ್ರಚಾರಗಿಟ್ಟಿಸಿಕೊಳ್ಳುವುದಕ್ಕೆ ಮಾತ್ರವೇ ಇರುವುದು. 126 ಪಿ.ಯು.ಕಾಲೇಜುಗಳನ್ನು ಕೊಟ್ಟಿದ್ದೇವೆಂದು ಈಗಾಗಲೇ ಸದಸ್ಯರಾದ ಆರಗ ಜ್ಞಾನೇಂದ್ರರವರು ಹೇಳಿದರು. 64 ಪದವಿ ಪೂರ್ವ ಕಾಲೇಜುಗಳನ್ನು ಕೊಟ್ಟಿದ್ದೇವೆಂದು ಹೇಳಿರುವುದಕ್ಕೆ ಬಹಳ ಸಂತೋಷ. ಆದರೆ, ನಿಮ್ಮ ಆಡಳಿತದಲ್ಲಿ ಮಾನ್ಯ ಮುಖ್ಯಂತ್ರಿಗಳಾಗಲಿ, ಉಪ ಮುಖ್ಯಮಂತ್ರಿಗಳಾಗಲಿ, ..ನೀವು ಬರೀ ಒಂದು ಖಾತೆಯ ಮಂತ್ರಿಗಳಲ್ಲ, ನೀವು ಒಂದು ತಾಲ್ಲೂಕಿಗೆ ಮಂತ್ರಿಗಳಲ್ಲ. ಈ ರಾಜ್ಯದ ಆರು ಕೋಟಿ ಜನರ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮ್ಯಂತ್ರಿಗಳು ನೀವಾಗಿದ್ದೀರಿ. ಅದರಲ್ಲೇಕೆ ಪಕ್ಷಪಾತ, ತಾರತಮ್ಯ ತೋರಿಸುತ್ತಿದ್ದೀರಿ? ಇವತ್ತು CRF ನಲ್ಲಾಗಲಿ, NABARD ನಲ್ಲಾಗಲಿ, 12ನೇ ಹಣಕಾಸು ಯೋಜನೆಯಲ್ಲಾಗಲಿ, CMGSY ನಲ್ಲಾಗಲಿ, 3054 grant ನಲ್ಲಾಗಲಿ, ಕೇಂದ್ರ ಸರ್ಕಾರ ಕೊಟ್ಟ ಹಣದಲ್ಲಿ ಇವರು ಇಷ್ಟೊಂದು ತಾರತಮ್ಯ ಮಾಡಿದ್ದೀರಲ್ಲ? ಹಾಸನ ಜಿಲ್ಲೆಯೊಂದಕ್ಕೆ 30 ಕೋಟಿ ರೂಪಾಯಿಗಳು ಕೊಟ್ಟಿದ್ದೀರಿ. ಈಗ ನಮ್ಮ ಅಧ್ಯಕ್ಷರು ಹೇಳಿದರು. ಇವರು ಬರೀ ಹಾಸನ ಜಿಲ್ಲೆಗೆ ಮುಖ್ಯಮಂತ್ರಿಗಳೇ? ಇವರು ಬರೀ ಆ ಜಿಲ್ಲೆಗೆ ಮಂತ್ರಿಗಳೇ? ತಾಲ್ಲೂಕಿಗೆ ಮಂತ್ರಿಗಳೇ? ಅಥವಾ ರಾಜ್ಯದ ಮಂತ್ರಿಗಳೇ? ಏಕೆ ಇದರಲ್ಲಿ ತಾರತಮ್ಯ? ನಮಗೇನು ಜನರು vote ಹಾಕಲಿಲ್ಲವೇ? vote ಹಾಕಿ ನಾವು ಗೆದ್ದು ಬಂದಿಲ್ಲವೇ? ನಮ್ಮ ಬೂತ್‌ಗಳಲ್ಲಿ, ಕಲ್ಲು, ಮಣ್ಣು ಹಾಕಿ ಗೆಲ್ಲುವ ಮೂಲಕ ನಾವೇನಾದರೂ ಈ ಸದನಕ್ಕೆ ಬಂದಿದ್ದೇವೆಯೋ? ನಿಮ್ಮ ಹಾಗೇ ಜನರ ಆಶೀರ್ವಾದದಿಂದ ನಾವು ಕೂಡ ಈ ಸದನದಕ್ಕೆ ಬಂದಿದ್ದೇವೆ. ನಿಮ್ಮ ಆಡಳಿತ, ದುರಾಡಳಿತ, ನಿಮ್ಮ ಸರ್ವಾಧಿಕಾರವನ್ನು ಬಿಟ್ಟು ಸಾರ್ವಜನಿಕ ಆಡಳಿತ ಮಾಡಿ. ಅದಕ್ಕೆ ನಿಮಗೆ ಶಹಭಾಷ್‌ಗಿರಿ ಕೊಡುತ್ತೇವೆ. ಜನರು ಮೆಚ್ಚುತ್ತಾರೆ. ಇವತ್ತು ಈ ರಾಜ್ಯದ ಜನರು ಏನಾದರೂ ಮೆಚ್ಚಬೇಕಿದ್ದರೆ, ಎಲ್ಲರಿಗೂ ಸಮಪಾಲು, ಸಮಬಾಳನ್ನು ಮೊದಲು ಕೊಡಿ.

ಶ್ರೀ ಹೆಚ್.ಡಿ.ಬಸವರಾಜು : ಮೊದಲೆಲ್ಲಾ ನಾವು ಅದನ್ನು ಕೇಳಿದ್ದೇವೆ. ಇವರು ಅಧಿಕಾರ ಮಾಡಿದಾಗ....

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ಇವರ ಕಾಲದಲ್ಲಿ ಎಷ್ಟು ಜನರಿಗೆ ಸಮಪಾಲು, ಸಮಬಾಳು ಕೊಟ್ಟಿದ್ದಾರೆಂಬುದರ ಬಗ್ಗೆ ಕಡತ ನೋಡಿದರೆ ಗೊತ್ತಾಗುತ್ತದೆ. ಸಮಪಾಲು ಎಂಬುದು ಆ ಕಡೆ ಹೋದ ಮೇಲೆ ನಿಮಗೆ ಗೊತ್ತಾಯಿತ್ತೇ? ಈಗ ಜ್ಞಾನೋದಯವಾಯಿತೇ?

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ಆಗ ನಾವು ಬೊಬ್ಬೆ ಹೊಡೆಯುವಾಗ ಸಮಪಾಲು ಎಲ್ಲಿ ಹೋಗಿತ್ತು?

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ಪ್ರಾಮಾಣಿಕವಾಗಿ ಆತ್ಮವನ್ನು ಮುಟ್ಟಿಕೊಂಡು ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ಸರ್ವರಿಗೂ ಒಳ್ಳೆಯದನ್ನೂ ಮಾಡಿದ್ದೇವೆಂದು ಹೇಳಿ. ಸುಮ್ಮನೆ ಬೂಟಾಟಿಕೆ.....

(ಗೊಂದಲ)

ಚೇರ್ಮನ್ : ಬಸವರಾಜ್‌ರವರೆ, ಪದೇ ಪದೇ ಏಕೆ ಮಧ್ಯೆ ಎದ್ದು ನಿಂತುಕೊಂಡು ತೊಂದರೆ ಕೊಡುತ್ತೀರಿ? ಕುಳಿತುಕೊಳ್ಳಿ.

ಶ್ರೀ ಎಂ.ಟಿ.ಬಿ.ನಾಗರಾಜು : ಅಧ್ಯಕ್ಷರೆ, ಈಗ ಅವರು ಯಾರಾದರೂ ಮಾತನಾಡುವಾಗ ನಾವ್ಯಾರೂ ಕೂಡ ಅಡಚಣೆ ಮಾಡಲಿಲ್ಲ. ಏಕೆ ಇವರಿಗೆ ಸಂಕಟವೇ?

(ಗೊಂದಲ)

ಚೇರ್ಮನ್ : ಬಸವರಾಜ್‌ರವರೆ, ಏಕೆ ನೀವು ಈ ರೀತಿ ಪದೇಪದೇ ಮಾಡುತ್ತೀರಿ? ನಾಗರಾಜ್‌ರವರೆ, ತಮ್ಮ ಮಾತುಗಳನ್ನು conclude ಮಾಡಿ.

ಶ್ರೀ ಎಂ.ಟಿ.ಬಿ.ನಾಗರಾಜು : ಅಧ್ಯಕ್ಷರೆ, ಇವರ ಭಾಷಣದಲ್ಲೇ ನನ್ನ ಸಮಯ ಕಳೆದು ಹೋಯಿತು. ನಾನು ಮಾತನಾಡಿ 5 ನಿಮಿಷವಾಯಿತು. ಇನ್ನು ಹೇಗೆ ಮಾತನಾಡಲಿ? ನನ್ನ ಸಮಯವನ್ನೆಲ್ಲ ಅವರೇ ತೆಗೆದುಕೊಂಡು ಬಿಟ್ಟರು. ಆದರೆ, ಐದು ನಿಮಿಷಗಳಲ್ಲಿ ಮುಗಿಸಿ ಎಂದು ಹೇಳುತ್ತಿದ್ದೀರಿ. ಇಂತಹ development works ಹಂಚಿಕೆಯಾಗುವುದರಲ್ಲಿ ಒಂದು ಗೋರವಾದ ಅನ್ಯಾಯ ಕಾಂಗ್ರೆಸ್ ಶಾಸಕರುಗಳು ಇರತಕ್ಕಂಥ

ತಾಲ್ಲೂಕುಗಳಿಗೆ ಮಾಡಿದ್ದಾರೆ. ಈಗ ರೇವಣ್ಣನವರು ಇಲ್ಲಿಯೇ ಕುಳಿತಿದ್ದಾರೆ. ಅವರಿಗೆ ಹೇಳುತ್ತೇನೆ. ಅವರೊಬ್ಬ ಮಂತ್ರಿಗಳಾಗಿದ್ದಾರೆ. ಬಹಳ ಸಂತೋಷ. ಮುಂದಿನ ದಿನಗಳಲ್ಲಿ ಅವರು ಮುಖ್ಯಮಂತ್ರಿಯಾಗಲಿ, ಬಹಳ ಸಂತೋಷ. ಆದರೆ, ಇಂತಹ ತಾರತಮ್ಯ, ಪಕ್ಷಪಾತತನದ ಕೆಲಸಗಳನ್ನು ಮಂತ್ರಿಯಾಗಿ ನೀವು ದಯಮಾಡಿ ಮಾಡಬೇಡಿ.

ಚೇರ್ಮನ್ : ನಾಗರಾಜ್‌ರವರೆ, ಬೇಗ ತಮ್ಮ ಮಾತುಗಳನ್ನು ಮುಗಿಸಿ.

ಶ್ರೀ ಎಂ.ಟಿ.ಬಿ.ನಾಗರಾಜು : ಒಂದು ಕಡೆ ರಾಮಸ್ವಾಮಿಯವರ ಸಮಿತಿಯು ಈಗಾಗಲೇ ಸರ್ಕಾರಕ್ಕೆ ಮಧ್ಯಂತರ ವರದಿಯೊಂದನ್ನು ಕೊಟ್ಟಿದ್ದಾರೆ. ಏನು ಸತ್ಯಾಸತ್ಯತೆ ಇದೆಯೋ, ಅದನ್ನು ಕೊಟ್ಟಿದ್ದಾರೆ. 18,000 ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು ಏನು ಕಬಳಿಸಿದ್ದಾರೆ, ಕೆಲವು ಹಿತಾಸಕ್ತಿಗಳು, ಕೆಲವು ರಾಜಕಾರಣಿಗಳೆಂದು ಹೇಳಿ ವರದಿ ಕೊಟ್ಟಿದ್ದಾರೆ. ಪರವಾಗಿಲ್ಲ. ನನ್ನದೂ ಇದ್ದರೆ ಕೊಡಲಿ. ನನ್ನದೂ ಜಮೀನು ಇದ್ದರೆ, ತೆಗೆದುಕೊಳ್ಳಲಿ. ನಾನು ಸಂತೋಷವಾಗಿ ಬಿಟ್ಟು ಕೊಡುತ್ತೇನೆ. ನಾನು ತಯಾರಾಗಿದ್ದೇನೆ. ಇವತ್ತು 18,000 ಎಕರೆಗಳಷ್ಟು ಭೂಮಿಯ ಮಾಹಿತಿಯನ್ನು ಏನು ಕೊಟ್ಟಿದ್ದಾರೆ, ಅದರಲ್ಲಿ 20 ವರ್ಷಗಳಿಂದಲೂ ಹೀಗೆ ಅಕ್ರಮ--ಸಕ್ರಮದಲ್ಲಿ ಸಾಗುವಳಿ ಚೀಟಿಯನ್ನು ವಿತರಿಸಿದ್ದಾರೆ. ಅವರ ಹೆಸರಿಗೆ ಖಾತೆಯಾಗಿದೆ, ಪಹಣಿಯಾಗಿದೆ, Possession ನಲ್ಲಿದ್ದಾರೆ, ಉಳುಮೆ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲೇ ಬಿದರಹಳ್ಳಿ ಹೋಬಳಿಯಲ್ಲಿ ಸುಮಾರು 1,000 ಎಕರೆಗಳಷ್ಟು ಭೂಮಿಯನ್ನು ಇವತ್ತು ಅಕ್ರಮ–ಸಕ್ರಮದ ಬಗ್ಗೆ ಅಧಿಕಾರಿಗಳು ಈ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ. ಇವತ್ತು ಅಧಿಕಾರಿಗಳನ್ನು ಕೇಳಿದರೆ ಏನು ಹೇಳುತ್ತಾರೆ? ಸಂಬಂಧಪಟ್ಟ ಮಂತ್ರಿಗಳು, ಸಮಿತಿಯವರು, 'ನೀವು ಮೂರು ದಿವಸಗಳಲ್ಲಿ ವರದಿ ಕೊಡಬೇಕು. ನಾಲ್ಕೇ ದಿವಸಗಳಲ್ಲಿ ವರದಿ ಕೊಡಬೇಕು. ಇಲ್ಲದೇ ಹೋದರೆ, ನಿಮ್ಮನ್ನು suspend ಮಾಡುತ್ತೇವೆ. ಇಲ್ಲದಿದ್ದರೆ, ನಿಮ್ಮನ್ನು ವರ್ಗಾವಣೆ ಮಾಡುತ್ತೇವೆ' ಎಂಬ ರೀತಿಯಲ್ಲಿ ಒಂದು ಭಯ--ಭೀತಿಯ ವಾತಾವರಣ ಸೃಷ್ಟಿಸಿದರು. ಆ ಭಯ–ಭೀತಿಗೊಳಗಾಗಿ ಅವರು ಏನು ಮಾಡಿದರು ಎಂದರೆ, ಅಕ್ರಮ ಸಕ್ರಮದಲ್ಲಿರುವಂಥಾದ್ದು, ಉಳುಮೆ ಮಾಡುವಂಥಾದ್ದು, ಹರಿಜನ–ಗಿರಿಜನರಿಗೆ ಭೂಮಿಯನ್ನು ಸಾಗುವಳಿ ಮಾಡಲು ಚೀಟಿಗಳನ್ನು ಕೊಟ್ಟಿದ್ದು,

ಎಲ್ಲವನ್ನೂ ಸೇರಿಸಿ ಕೊಟ್ಟರು. ಅದರ ಮೇಲೆ ಇವತ್ತು ಪೋಲೀಸ್ ಠಾಣೆಯಲ್ಲಿ criminal case ಹಾಕಿದರು. ಇವತ್ತು ಪ್ರತಿ ದಿವಸ ರೈತರು Police Station, Court ಗಳಿಗೆ ಹೋಗಬೇಕಾಗಿದೆ. ಈ ಸಮ್ಮಿಶ್ರ ಸರ್ಕಾರ ರೈತರಿಗೆ, ಬಡವರಿಗೆ ಮಾಡಿದಂತಹ ಒಳ್ಳೆಯ ಕೆಲಸ ಇದಾಗಿದೆ. ಇವತ್ತು ಈ ಭೂಮಿಯನ್ನು ಮಾರಾಟ ಮಾಡುವುದಕ್ಕೆ ತರಾತುರಿಯಲ್ಲಿ ಎದ್ದು ಬಿಟ್ಟರು. ಕೋಟಿ ಕೋಟಿ ರೂಪಾಯಿಗಳು ಬಂದು ಬಿಡುತ್ತದೆ, 4,000 ಕೋಟಿ ರೂಪಾಯಿಗಳು ಬರುತ್ತದೆ. ನಾವು development works ಮಾಡೋಣ, ಅಭಿವೃದ್ಧಿ ಮಾಡೋಣವೆಂದು ಬಜೆಟ್‌ನಲ್ಲಿ ಕೊಟ್ಟಿರುವಂತಹ ಆಶ್ವಾಸನೆ ಗಳೆಲ್ಲವನ್ನೂ ಈಡೇರಿಸಬೇಕೆಂದು ಆ ಸರ್ಕಾರದ ಭೂಮಿಯನ್ನು ಈಗಾಗಲೇ 200 ಎಕರೆ, 600 ಎಕರೆಗಳೆಷ್ಟು ಭೂಮಿಯನ್ನು ಹರಾಜು ಹಾಕಿದ್ದಾರೆ. ಅದರ ಬಗ್ಗೆ ಎ.ಟಿ.ರಾಮಸ್ವಾಮಿಯವರೂ ಹೇಳಿದ್ದಾರೆ. ನಾವು ಮಧ್ಯಂತರ ವರದಿ ಕೊಟ್ಟಿದ್ದೇವೆ. ಪೂರ್ತಿ ಪ್ರಮಾಣದ ವರದಿ ಕೊಟ್ಟಿಲ್ಲ. ಅದನ್ನು ಮಾರಾಟ ಮಾಡಬಾರದು, auction ಮಾಡಬಾರದೆಂದು ಅವರು ಪತ್ರಿಕೆಗಳ ಮೂಲಕ ಹೇಳಿದರು. ಬಹಳ ಸಂತೋಷ. ಇವತ್ತು ಸಮ್ಮಿಶ್ರ ಸರ್ಕಾರ ಇಡೀ ಇತಿಹಾಸದಲ್ಲಿ ಸರ್ಕಾರಿ ಭೂಮಿ, ಸರ್ಕಾರಿ ಜಾಗಗಳನ್ನು ಮಾರಿ ಆಡಳಿತ ಮಾಡಿದಂತಹ ಯಾವ ಮುಖ್ಯಮಂತ್ರಿಯನ್ನೂ, ಯಾವುದೇ ಸರ್ಕಾರವನ್ನೂ ನೋಡಿಲ್ಲ. ಇವರು ಇವತ್ತು ಸರ್ಕಾರಿ ಜಾಗಗಳನ್ನು ಮಾರಾಟ ಮಾಡಿ, ಅಭಿವೃದ್ಧಿ ಮಾಡುತ್ತೇವೆಂದು.....

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ, ಇವರೆಲ್ಲ ಕಳ್ಳರಿಗೆ ಸಪೋರ್ಟ್ ಮಾಡಿದ್ದಾರೆ. ದಯಮಾಡಿ ನೀವು ನಿಮ್ಮ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಿ. ಹಿಂದೆ ಇದ್ದವರೆಲ್ಲರೂ ಕಳ್ಳರಿಗೆ ಸಪೋರ್ಟ್ ಮಾಡುತ್ತಿದ್ದರು.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಿಮಗೇಕೆ ಆ ಮಾತುಗಳನ್ನು ಸಹಿಸಿಕೊಳ್ಳುವುದಕ್ಕಾಗುತ್ತಿಲ್ಲ?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ. ಅವರು ಹೇಳುವುದನ್ನು correct ಆಗಿ ಹೇಳಬೇಕು.

ಶ್ರೀ ಧರ್ಮಸಿಂಗ್ : ಬೇಡಿಕೆ ಮೇಲೆ ಚರ್ಚೆಯಾಗುತ್ತಿದೆ. ಪ್ರತಿಯೊಬ್ಬ ಸದಸ್ಯರಿಗೂ ಹಕ್ಕು ಇದೆ. ಆರೋಪ ಮಾಡಲಿ. ಆರೋಪ ಮಾಡಿದರೆ, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಅವರು ಮಾತನಾಡುವಾಗ ಮಧ್ಯದಲ್ಲಿ ನಿಂತು ಎಲ್ಲರೂ ಈ ರೀತಿ ಮಾತನಾಡಿದರೆ, ಹೇಗೆ ಮಾತನಾಡಲು ಸಾಧ್ಯವಾಗುತ್ತದೆ? ಬಹಳಷ್ಟು intervene ಮಾಡುವುದು ಇದೆ. ಮಾತನಾಡುವುದಿದ್ದರೆ, ನೀವೂ ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇಚ್ಛೆ ಬಂದಂತೆ, ಬಾಯಿಗೆ ಬಂದಂತೆ ಮಾತನಾಡುವುದಲ್ಲ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ದೇಶಕ್ಕೆಲ್ಲಾ ಗೊತ್ತು. ಅದರ ಅವಶ್ಯಕತೆಯಿಲ್ಲ.

(ಗೊಂದಲ)

ಚೇರ್ಮನ್ : ನಾಗರಾಜ್‌ರವರೆ, ತಾವು ತಮ್ಮ ಮಾತುಗಳನ್ನು ಮುಗಿಸಿ.

(ಗೊಂದಲ)

ಚೇರ್ಮನ್ : ಸಾಕು, ಕುಳಿತುಕೊಳ್ಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅವರು ಹೇಳಿದ್ದನ್ನು ಪ್ರೂವ್ ಮಾಡಿ ತೋರಿಸಲಿ, ಸುಮ್ಮನೆ ಬಾಯಿಗೆ ಬಂದಂತೆ ಮಾತನಾಡುವುದಲ್ಲ, ತಪ್ಪಿದ್ದರೆ ಜೈಲಿಗೆ ಹಾಕಿ, ಈ ರೀತಿ ಮಾತನಾಡಿದರೆ ಹೆದರಿಕೊಳ್ಳುತ್ತೇವೆಂದು ತಿಳಿದುಕೊಂಡಿದ್ದಿರೇನು? ಅವರಿಗೆ ಮಾತನಾಡುವುದಕ್ಕೆ ರೈಟ್ ಇದೆ ಮಾತನಾಡುತ್ತಾರೆ, ನಿಮ್ಮ ಹತ್ತಿರ ಏನಾದರೂ ಇದ್ದರೆ ಹೇಳಿ. ಹೇಳುವುದಕ್ಕೆ ಏನು ಇಲ್ಲ ಸುಮ್ಮನೆ ಮಾತನಾಡುತ್ತಾರೆ.

ಡಾ: ಕೆ.ಅನ್ನದಾನಿ : ಯಾವ್ಯಾವ ಕಾಲದಲ್ಲಿ ಏನೇನಾಗಿದೆ ಎಂಬುದರ ಬಗ್ಗೆ ಶ್ವೇತಪತ್ರ ಹೊರಡಿಸುವುದಕ್ಕೆ ಹೇಳಿ.

(ಗೊಂದಲ)

ಛೇರ್ಮನ್ : ನಾಗರಾಜ್ ಅವರೆ, ಆ ಕಡೆ ನೋಡಬೇಡಿ ಈ ಕಡೆ ಮಾತನಾಡಿ.

ಶ್ರೀ ಹೆಚ್.ಡಿ.ಬಸವರಾಜು : ಅಕ್ರಮ ಭೂ ಕಬಳಿಕೆ ಯಾರ ಕಾಲದಲ್ಲಾಯಿತು ಎಂಬುದನ್ನು ಹೇಳಿ, ಗೊತ್ತಾಗಲಿ, ಹೊರಕ್ಕೆ ಬರಲಿ.

ಶ್ರೀ ಧರ್ಮಸಿಂಗ್ : ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನದಂತೆ ಸಾಮಾನ್ಯವಾಗಿ ಶನಿವಾರ ಮತ್ತು ಭಾನುವಾರ ಸದನವಿರುವುದಿಲ್ಲ. ವಿಧಾನ ಪರಿಷತ್‌ನಲ್ಲಿ ಚರ್ಚೆಯಾಗಿ, ವಿಧಾನ ಪರಿಷತ್ತಿನ ಸದಸ್ಯರು, ಶನಿವಾರ ಬಿಸಿನೆಸ್ ನಡೆಯಲು ಬಿಡುವುದಿಲ್ಲವೆಂದು ಹೇಳಿದರು. ನಮ್ಮ ಎಂ.ಪಿ.ಪ್ರಕಾಶ್ ಮತ್ತು ಯಡಿಯೂರಪ್ಪನವರಿಗೆ ಗೊತ್ತಿರಬಹುದು, ವಿರೋಧ ಪಕ್ಷದ ನಾಯಕರಾಗಿದ್ದವರು, ಆದರೂ ಕೂಡ ಮೊದಲನೆ ಸಾರಿ, ಬೇಡಿಕೆಗಳ ಮೇಲೆ ಚರ್ಚೆಯಾಗಬೇಕೆನ್ನುವ ದೃಷ್ಟಿಯಿಂದ ಇವತ್ತು ಸದನ ನಡೆಯುತ್ತಿದೆ. ಎಷ್ಟೋ ಸಾರಿ ಮೂರು ಸಾರಿ, ಯಾವಾಗಲೂ ಗಿಲೊಟಿನ್‌ಗೆ ಹಾಕಿದ್ದಾರೆ. ಇಷ್ಟು ವಿವರವಾದ, ಸಮಗ್ರವಾದ ಚರ್ಚೆ ಯಾವಾಗಲೂ ಆಗಿರಲಿಲ್ಲ, ನಾವೆಲ್ಲರೂ ಕೂಡ ಸಹಕಾರ ಮಾಡಲು ಇದ್ದೇವೆ. ಅವರು ಅವರದ್ದನ್ನು ಹೇಳುತ್ತಾರೆ. ನೀವೆಲ್ಲಾ ಹೀಗೆ ನಿಂತರೆ ಅವರು ಹೇಗೆ ಹೇಳಬೇಕು? ಎರಡನೆಯದಾಗಿ ಈಗ ಸಾಕಷ್ಟು ಚರ್ಚೆಯಾಗಿದೆ. ಇವತ್ತು ಉತ್ತರ ಆರಂಭವಾಗಬೇಕಾಗಿದೆ. ನಾವು ಮುಂಜಾನೆ 10 ಗಂಟೆಗೆ ಬಂದಿದ್ದೇವೆ. ಅದಕ್ಕೆ ಚರ್ಚೆಯನ್ನು ಮುಕ್ತಾಯ ಗೊಳಿಸಿ. ಅವರು ತಮ್ಮ ರಿಪ್ಲೈ ಅನ್ನು ಸೋಮವಾರ ದಿವಸ ಕೊಡಲಿ. ಈಗ ನಮಗೆ ಸಹಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದ್ದಾರೆ. ಕಳೆದ ವರ್ಷದಲ್ಲಿ ಸರಿಯಾಗಿ ನಡೆಯಲಿಲ್ಲವೆಂಬ ಕಾರಣಕ್ಕೆ ಈ ಸಂದರ್ಭದಲ್ಲಿ ವಿತ್ತೀಯ ಕಲಾಪಗಳು ನಡೆಯುವುದಕ್ಕೆ ಸಹಕಾರ ನೀಡಿದ್ದಾರೆ. ಅವರಿಗೆ ನಮ್ಮ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ತಮ್ಮಲ್ಲಿಯು ವಿನಂತಿ ಮಾಡಿಕೊಳ್ಳುವುದು, ಅವರ ಕಡೆಯಿಂದ ಎಷ್ಟೇ ಅಪ್ರಿಯವಾದ ಮಾತುಗಳು ಬಂದರೂ ಕೂಡ, ಅವನ್ನು ನಾವು ಸಹಿಸಿಕೊಳ್ಳಬೇಕು. ಅದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು. ಆದುದರಿಂದ ಅವರೇನು ಮಾತನಾಡುತ್ತಾರೋ ಮಾತನಾಡಲಿ, ಮಾತನಾಡಿದ್ದಕ್ಕೆ ಸಮರ್ಥವಾಗಿ ಉತ್ತರ ಕೊಡುವುದಕ್ಕೆ ಬರುತ್ತದೆ. ತೀರಾ ಅನ್‌–ಪಾರ್ಲಿಮೆಂಟರಿಯಾಗಿದ್ದಾಗ ಮಾತ್ರ ನಾವು ಪ್ರತಿಭಟನೆ ಮಾಡಬೇಕಾಗುತ್ತದೆಯೆ ವಿನಹ, ಬೇರೆ ಸಂದರ್ಭದಲ್ಲಿ ಅಲ್ಲ. ಅವರು ತಮ್ಮ ಮಾತನ್ನು ಐದು ನಿಮಿಷದಲ್ಲಿ ಮುಗಿಸುತ್ತಾರೆ. ನಾವು ಅದಕ್ಕೆ ಉತ್ತರವನ್ನು ಕೊಡುತ್ತೇವೆ. ವಿರೋಧ ಪಕ್ಷದ ನಾಯಕರು ಹೇಳಿದಂತೆ ಮುಖ್ಯಮಂತ್ರಿಗಳು ಹಾಗೂ ಉಪ

ಮುಖ್ಯಮಂತ್ರಿಗಳು ಸೋಮವಾರ ಉತ್ತರವನ್ನು ಕೊಡುತ್ತಾರೆ. ಈಗ ರೇವಣ್ಣ ಮತ್ತು ಚೆಲುವರಾಯಸ್ವಾಮಿಯವರು ಉತ್ತರವನ್ನು ಕೊಡುತ್ತಾರೆ. ರೇವಣ್ಣನವರು ಈಗ ಉತ್ತರವನ್ನು ಕೊಡುತ್ತಾರೆ. ಎಲ್ಲರ ಭಾಷಣಗಳಲ್ಲಿ ಕೂಡ ನೀವು ಪಕ್ಷಪಾತ ಮಾಡಿದ್ದೀರಿ, ನೀವು ಅದನ್ನು ಮಾಡಿದ್ದೀರೆಂದು, ಈಗ ಅದೇ ಸುತ್ತನ್ನು ಹಾಕಿದರು. ಆದುದರಿಂದ ರೇವಣ್ಣನವರು ಉತ್ತರವನ್ನು ಕೊಡುತ್ತಾರೆ. ನಂತರ ಚೆಲುವರಾಯಸ್ವಾಮಿಯವರು ಅವರ ಇಲಾಖೆಗೆ ಸಂಬಂಧಿಸಿದಂತೆ ಉತ್ತರವನ್ನು ಕೊಡುತ್ತಾರೆ. ಸದನ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಡೆಯುವುದೆಂದು ಬಿಸಿನೆಸ್ ಅಡ್ವೈಸರಿ ಕಮಿಟಿನಲ್ಲಿ ನಿರ್ಣಯ ಮಾಡಿದ್ದೇವೆ. 6 ಗಂಟೆಯ ನಂತರ ತಾವು ಒಂದು ನಿಮಿಷವೂ ಕುಳಿತುಕೊಳ್ಳುವುದು ಬೇಡ ಸಾರ್.

ಶ್ರೀ ಎನ್.ಧರ್ಮಸಿಂಗ್ : ರೇವಣ್ಣನವರ ಉತ್ತರಕ್ಕೆ ಎರಡು ತಾಸು ಬೇಕು, ಏಕೆಂದರೆ ರೇವಣ್ಣನವರು ಪ್ರೀತಿಗೆ ಪಾತ್ರರಾದವರು ಅವರನ್ನು ಬಿಡುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಆಗಲಿ ಸರ್, ಆಗಬಹುದು, ತಾವು ಸ್ಪಷ್ಟೀಕರಣ ಕೇಳಿ ಸರ್, ಅಲ್ಲಿಗೆ 6 ಗಂಟೆಯಾದರೆ ನಾವ್ಯಾರು ಮಾತನಾಡುವುದಿಲ್ಲ, ಅಲ್ಲಿಗೆ ಅಧಿವೇಶನ ಮುಗಿದುಹೋಗಲಿ.

(ಅಧ್ಯಕ್ಷರ ಪೀಠವನ್ನು ಸಭಾಧ್ಯಕ್ಷರು ಅಲಂಕರಿಸಿದರು)

ಶ್ರೀ ಎಂ.ಟಿ.ಬಿ.ನಾಗರಾಜು : ಮಾನ್ಯ ಅಧ್ಯಕ್ಷರೆ, ಈಗ ಬಹಳಷ್ಟು ಆಡಳಿತ ಪಕ್ಷದ ಸದಸ್ಯರು ಬಹಳ ಗಂಭೀರವಾದ ವಿಚಾರಗಳನ್ನು ಈಗಾಗಲೇ ನಮ್ಮ ಮೇಲೆ ಹೇಳಿದ್ದಾರೆ. ಎ.ಟಿ.ರಾಮಸ್ವಾಮಿಯವರ ಸದನ ಸಮಿತಿಯಲ್ಲಿ, ನನ್ನದೂ ಕೂಡ ಸರ್ಕಾರಿ ಜಾಗವಿರಬಹುದೆಂದು, ಅದಕ್ಕೆ ಅವರು ಅಷ್ಟು ಮಾತನಾಡುತ್ತಿದ್ದಾರೆ. ನಾನು ಯಾವುದೇ ಸರ್ಕಾರಿ ಜಾಗವನ್ನಾಗಲಿ ಅಥವಾ ಸಾರ್ವಜನಿಕರ ಆಸ್ತಿಯನ್ನಾಗಲಿ ಕಬಳಿಸಿದ್ದರೆ, ಈ ಸದನ ದೇವಸ್ಥಾನ, ನ್ಯಾಯಸ್ಥಾನವಿದ್ದ ಹಾಗೆ, ನಾನೇನಾದರೂ ಒಂದು ಎಕರೆ ಸರ್ಕಾರಿ ಜಮೀನನ್ನು ಕಬಳಿಸಿದ್ದರೆ, ಅವರು ಆ ಸಮಿತಿಗೆ ಮಾಹಿತಿ ಕೊಡಲಿ, ಮಾರನೆ ದಿವಸ ನಾನು ರಾಜೀನಾಮೆ ಕೊಟ್ಟು ಸದನದಿಂದ ಹೊರಗೆ ಹೋಗುತ್ತೇನೆ. ಇಲ್ಲವೆಂದರೆ ನೀವು ಹೋಗುತ್ತೀರಾ? ನಾನೂ ಕೂಡ ಹೊಸದಾಗಿ ಶಾಸಕರಾಗಿ ಇಲ್ಲಿ ಬಂದಿರಬಹುದು. 224 ಶಾಸಕರಿರುವ ಈ ಸದನ

ದೇವಸ್ಥಾನವಿದ್ದ ಹಾಗೆ. ದೇವಸ್ಥಾನ ನ್ಯಾಯಸ್ಥಾನ ಒಂದೇ, ಎಂದು ನಿಮ್ಮಂಥ ಹಿರಿಯರು ಹೇಳಿದ್ದಾರೆ. ಈ ದೇವಸ್ಥಾನದಲ್ಲಿ ನಾವು ಸತ್ಯವಾಗಿ ಮಾತನಾಡುತ್ತೇವೆ, ಯಾವುದೇ ಟೀಕೆ ಟಿಪ್ಪಣಿಗಳನ್ನು ಮಾಡಬೇಕು, ವಿರೋಧ ಮಾಡಬೇಕೆಂದು ನಮ್ಮ ಉದ್ದೇಶವಲ್ಲ. ನಾನು 20 ವರ್ಷ ರಾಜಕೀಯದಲ್ಲಿ ಕಾರ್ಯಗತವಾಗಿ ಕೆಲಸ ಮಾಡಿ ಈ ಸದನದ ಒಳಗಡೆ ನೋಡಿಲ್ಲ, ಹೊರಗಡೆ ನೋಡಿದ್ದೇವೆ. ಹೊರಗಡೆ ರಾಜಕಾರಣಿಗಳು, ಮಂತ್ರಿಗಳು ಯಾವ ರೀತಿಯಾಗಿ ಆಶ್ವಾಸನೆಯನ್ನು ಕೊಡುತ್ತಾರೆಂಬುದನ್ನು ನಾವು ನೋಡಿದ್ದೇವೆ. ನಮಗೂ ಗೊತ್ತಿದೆ. ಇವತ್ತು ಇಂಥ ದೊಡ್ಡ ಪ್ರಮಾಣದ ಭೂಮಿಗೆ ರೈತರಿಗೆ ಸಾಗುವಳಿ ಚೀಟಿಯನ್ನು ವಿತರಣೆ ಮಾಡಿದ್ದಾರೆ, ಅವರು ಹತ್ತಾರು ವರ್ಷಗಳಿಂದ ಅಲ್ಲಿ ಉಳುಮೆ ಮಾಡುತ್ತಿದ್ದಾರೆ. ಇವತ್ತು ರೈತರು, ಹರಿಜನರು, ದಲಿತರು, ಇಂತಹ ಭೂಮಿಯನ್ನು ಅಧಿಕಾರಿಗಳು ತಪ್ಪು ಮಾಹಿತಿಗಳನ್ನು ಕೊಟ್ಟು ಪೊಲೀಸರಿಂದ ಕ್ರಿಮಿನಲ್ ಕೇಸ್‌ಗಳು ದಾಖಲಾಗಿ ಪ್ರತಿನಿತ್ಯ ರೈತರು ಪೊಲೀಸ್ ಠಾಣೆಗೆ ಓಡಾಡುತ್ತಿದ್ದಾರೆ. ರೈತರ ಪರವಾದ ಸರ್ಕಾರ ಎಲ್ಲಿದೆ? ಈ ರೈತರ ಪರವಾಗಿರುವ ಸರ್ಕಾರ, ರೈತರಿಗೆ ಇಂತಹ ಆಘಾತವಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಹಾಗಾಗಿ ಇವತ್ತು ಈ ಅಭಿವೃದ್ಧಿ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬರುವ ಹಣವನ್ನು ತಾರತಮ್ಯವಿಲ್ಲದೇ ಪಕ್ಷಪಾತವಿಲ್ಲದೇ ಹಂಚಿಕೆ ಮಾಡಬೇಕೆಂದು ನಾನು ಎಲ್ಲಾ ಮಂತ್ರಿಗಳಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಬೆಂಗಳೂರು ಗ್ರಾಮಾಂತರದಲ್ಲಿ ನಮ್ಮ ತಾಲ್ಲೂಕಿಗೆ ಆದಷ್ಟು ಅನ್ಯಾಯ, ಯಾವ ತಾಲ್ಲೂಕಿಗೂ ಆಗಿಲ್ಲ. ಸರ್ವ ಶಿಕ್ಷಣ ಅಭಿಯಾನದಲ್ಲಿ ರಾಮನಗರಕ್ಕೆ 50 ಕೊಠಡಿ, ದೇವನಹಳ್ಳಿಗೆ 40 ಕೊಠಡಿ, ಹೊಸಕೋಟೆಗೆ 15 ಕೊಠಡಿ ಕೊಡಲಾಗಿದೆ. ಆದುದರಿಂದ, ದಯಮಾಡಿ ಇನ್ನು ಮೇಲಾದರೂ ಮುಂದಿನ ದಿವಸಗಳಲ್ಲಿ ಆಡಳಿತ ಮಾಡುತ್ತಿರುವ ಸರ್ಕಾರ, ನೀವು ಸಾರ್ವಜನಿಕರಾಗಿ ಕೆಲಸ ಮಾಡಿ. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ. ನಿಮಗೆ ಜನರು ಶಹಭಾಷ್ ಗಿರಿಯನ್ನು ಕೊಡುತ್ತಾರೆ. ಮುಂದಿನ ಚುನಾವಣೆಗಳಲ್ಲಿ ಜನರು ನಿಮ್ಮನ್ನೇ ಅಧಿಕಾರಕ್ಕೆ ತರಲಿ, ನಮ್ಮದೇನೂ ಅಭ್ಯಂತರವಿಲ್ಲ. ನೀವು ಒಳ್ಳೆಯ ಕೆಲಸ ಮಾಡಿ ಜನರು ಶಹಭಾಷ್‌ಗಿರಿ ಕೊಟ್ಟರೆ ನೀವೇ ಅಧಿಕಾರಕ್ಕೆ ಬನ್ನಿ. ಆದರೆ ಪಕ್ಷಪಾತವಾದ ಕೆಲಸವನ್ನು ಮಾಡಬೇಡಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೇ ಈಗ ಉತ್ತರ ಪ್ರಾರಂಭ ಮಾಡೋಣ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, U.T. ಖಾದರ್‌ರವರು ಮೊದಲನೇ ಬಾರಿಗೆ ಆಯ್ಕೆಯಾಗಿ ಬಂದಿದ್ದಾರೆ, ಒಂದೆರಡು ನಿಮಿಷ ಮಾತನಾಡಲಿ.

ಶ್ರೀ ಎಂ.ಪಿ.ಪ್ರಕಾಶ್ : ತಾವು ದಯಮಾಡಿ ನಮ್ಮಲ್ಲಿ ಮೂರು ಜನ ಮಾತನಾಡುವವರು ಇದ್ದುದು ಒಬ್ಬರಿಗೆ ಇಳಿಸಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ನಾಡಿದ್ದು 10 ನಿಮಿಷ ಅಲ್ಲದಿದ್ದರೆ ಅರ್ಧ ಗಂಟೆ ಅವಕಾಶ ಕೊಡಿ, ನಾವೇನು ಬೇಡವೆಂದು ಹೇಳುವುದಿಲ್ಲ. ಅವರು ಹೇಳಿದ ಪ್ರಕಾರವೇ ಮಾಡುತ್ತಿದ್ದೇವೆ. ಒಂದು ಗಂಟೆಗೆ ಸರ್ಕಾರ ಉತ್ತರ ಕೊಡುತ್ತದೆ ಎಂದು ಹೇಳಿದರು.

ಅಧ್ಯಕ್ಷರು : ಎಲ್ಲರೂ ಎದ್ದು ನಿಲ್ಲುತ್ತಾರೆ. ಈ ಕಡೆಯೂ ಎದ್ದು ನಿಲ್ಲುತ್ತಾರೆ, ಕಷ್ಟವಾಗುತ್ತದೆ. ಖಾದರ್‌ರವರೇ ನಾನು ಕರೆದಾಗ ನೀವು ರೆಡಿ ಇಲ್ಲವೆಂದು ಕುಳಿತುಕೊಂಡಿರಿ. ನೀವು ರೆಡಿ ಇದ್ದಾಗ ನಾವು ಕರೆಯಬೇಕಾ? ಖಾದರ್‌ರವರೇ ಐದು ನಿಮಿಷ ಮಾತನಾಡಿ. ಐದು ನಿಮಿಷ ಮಾತನಾಡಿ.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಖಾದರ್‌ರವರು, ಮಾತನಾಡುತ್ತಾರೆ. ಇಲ್ಲಿ ಇರತಕ್ಕಂತಹ ಎಲ್ಲ ಸದಸ್ಯರುಗಳು ಕೂಡ ಯಾರೂ ಅಡ್ಡಿ ಮಾಡಬಾರದು. ಅವರು ಏನೇ ಹೇಳಿದರೂ ಕೂಡ ನಮ್ಮವರು ಯಾರೂ ಆಕ್ಷೇಪಣೆ ಮಾಡಬಾರದು. ಅವರ maiden ಸ್ಪೀಚ್ ಮಾಡುವುದಕ್ಕೆ ತಾವು ಅವಕಾಶ ಕೊಡಿ.

ಶ್ರೀ ಯು.ಟಿ.ಖಾದರ್ (ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ಉಳ್ಳಾಲ ಕ್ಷೇತ್ರದಿಂದ ಶಾಸಕನಾಗಿ ಆಯ್ಕೆಯಾಗಿ ಬಂದು ಪ್ರಥಮ ಬಾರಿಗೆ ಈ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ, ಉಳ್ಳಾಲ ಕ್ಷೇತ್ರದ ವ್ಯಾಪ್ತಿಯ ಜನರ ಸಮಸ್ಯೆ, ಮೂಲಭೂತ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕವಾಗಿ ಈ ಸದನದ ಮುಂದಿಡಲು ಪ್ರಯತ್ನಿಸುತ್ತೇನೆ. ಆ ಕ್ಷೇತ್ರದ ಶಾಸಕನಾಗಿ ನಾನು ಕಳೆದ ಎರಡು ತಿಂಗಳುಗಳ ಹಿಂದೆ ಆರಿಸಿ ಬಂದರೂ ಕೂಡ, ನಮ್ಮ ತಂದೆಯವರ ಶಾಸಕತ್ವದ ಸಮಯದಲ್ಲಿ ಅವರ ಅನುಭವದಿಂದ, ನಮ್ಮ ಪಕ್ಷದ ನಾಯಕರ ಹಾಗೂ ನಮ್ಮ ಕ್ಷೇತ್ರದ ಎಲ್ಲಾ ಜಾತಿ, ಮತ, ವರ್ಗದ ಮತ್ತು ಹಿರಿಯರ

ಮಾರ್ಗದರ್ಶನದಿಂದ ಕ್ಷೇತ್ರ ಮಟ್ಟದ ಸಮಸ್ಯೆಗಳು ಯಾವುವು ಇವೆ, ಜನರು ಯಾವ ರೀತಿಯಲ್ಲಿ ಕಷ್ಟಪಡುತ್ತಾರೆಂಬುದನ್ನು ಈ ಸದನದ ಮುಂದೆ ಇಡುವುದಕ್ಕೆ ಇಚ್ಛಿಸುತ್ತೇನೆ. ಪ್ರಥಮವಾಗಿ ಇವತ್ತು ಉಳ್ಳಾಲದಲ್ಲಿ ವಿಪರೀತವಾಗಿ ಇರುವ ಸಮಸ್ಯೆ ಎಂದರೆ ಕಡಲ ಕೊರೆತದ ಸಮಸ್ಯೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಮುದ್ರ ನಮ್ಮ ರಾಜ್ಯದ ಹಾಗೂ ನಮ್ಮ ದೇಶದ ಸಂಪತ್ತಾಗಿದೆ. ಈ ಸಮುದ್ರದ ಬದಿಯಲ್ಲಿರುವಂತಹ ಮೀನುಗಾರರು, ಮೀನುಗಾರಿಕಾ factoryಗಳು, ಪ್ರವಾಸೋದ್ಯಮದ ಬೀಚ್‌ಗಳು ಹಾಗೂ ವಿವಿಧ ವಿಧಗಳಿಂದ ನಾವು ಸಮುದ್ರವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಸಂಪತ್ತನ್ನು ಕೂಡಿಸಿಕೊಂಡು ಹೋಗಬಹುದು. ಆದರೆ ಇವತ್ತು ಈ ಸಮುದ್ರದ ಅಬ್ಬರವನ್ನು ನಾವು ನಿರ್ಲಕ್ಷಿಸಿದರೆ ಅದು ಅಷ್ಟೇ ಅಪಾಯಕಾರಿ ಎಂದು ನಮಗೆ ಈಗಾಗಲೇ ಗೊತ್ತಾಗಿದೆ. ವಿಶೇಷವಾಗಿ ಮೀನುಗಾರರಿಗೆ ತೊಂದರೆಯಾಗಿದೆ. ಅಲ್ಲಿ ಜೀವಿಸುವಂತಹ ಬಡವರಿಗೂ ಕೂಡ ತೊಂದರೆಯಾಗಿ, ಹಲವಾರು ಮನೆಗಳಲ್ಲಿ ಕಷ್ಟವಾಗಿದೆ. ಆದ ಕಾರಣ ಇವತ್ತು ಸರ್ಕಾರದಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ಈ ಸಮುದ್ರ ಕೊರೆತವನ್ನು ತಡೆಗಟ್ಟುವಂತಹ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ, ಈಗಾಗಲೇ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ 230 ಕೋಟಿ ರೂಪಾಯಿಗಳ ಪ್ರಪೋಸಲ್ ಸಲ್ಲಿಸಿದ್ದಾರೆ. ಆದರೆ ನನ್ನ ಅನಿಸಿಕೆ ಪ್ರಕಾರ ಈ ಪ್ರಪೋಸಲ್ ನಮ್ಮ ಕಡಪಾಡಿಯಿಂದ ಕಾರವಾರದ ತನಕ ಪೂರ್ಣ ಕರಾವಳಿ ಪ್ರದೇಶಗಳಾಗಿದ್ದು, ಅವುಗಳಿಗೆ ತಡೆಗೋಡೆಗಳನ್ನು ಕಟ್ಟಬೇಕಾಗಿದೆ. ಉಳ್ಳಾಲ ಕ್ಷೇತ್ರ ವ್ಯಾಪ್ತಿಯ 1.5 ಕಿ.ಮೀ.ಯಾವುದಿದೆ, ಅದರಲ್ಲಿ ಕೋಟೆಪುರ, ಮೊಗವೀರ ಪಟ್ಟಣ, ಸುಭಾಸ್ ನಗರ, ಕೈಕೂ, ಇಲಿಯಾಸ್ ನಗರ ಈ ಪ್ರದೇಶಗಳಲ್ಲಿ ಕಡಲ ಕೊರೆತವು ಬಹಳ ವಿಪರೀತವಾಗಿದ್ದು, ಅಲ್ಲಿ ಯಾವುದೇ ತಡೆಗೋಡೆ ಕಂಡಿತವಾಗಿ ನಿಲ್ಲುವುದಿಲ್ಲ. ಇದು ನಿಲ್ಲಬೇಕಾದರೆ, ಅಲ್ಲಿ ಮಿನಿ ಬ್ರೇಕ್‌ವಾಟರ್ ನಿಲ್ಲಿಸಿದರೆ ಮಾತ್ರ ಸಾಧ್ಯವಿದೆ. ಈಗಾಗಲೇ ಸಮಿತಿಯವರು ಕೂಡ ವರದಿ ಕೊಟ್ಟಿದ್ದಾರೆ. ಇದಕ್ಕೆ ಬರಬೇಕಾದ 40 ಕೋಟಿ ರೂ.ಗಳಲ್ಲಿ 1/3 ಗ್ರ್ಯಾಂಟ್ 15 ಕೋಟಿ ರೂ. ಅನುದಾನ ಇಟ್ಟರೆ, ಈ ಸಾರಿ ಆ ಕೆಲಸವನ್ನು ಪ್ರಾರಂಭಿಸಬಹುದು ಎಂದು ಅಂದುಕೊಂಡಿದ್ದೆವು. ಈ ಸಲ ಬಜೆಟ್‌ನಲ್ಲಿ ಈ ಹಣ ಇಡದ ಕಾರಣ ನಮಗೆಲ್ಲರಿಗೂ ಬಹಳ ತೊಂದರೆಯಾಗಿದೆ. ಪೂರಕ ಬಜೆಟ್‌ನಲ್ಲಿ ಇದಕ್ಕೆ ಹಣ ಮೀಸಲಿಡುವಂತಹ ಕೆಲಸವನ್ನು ತಾವು ಮಾಡಬೇಕೆಂದು

ಕೇಳಿಕೊಳ್ಳುತ್ತಾ, ಆ ಪ್ರದೇಶದ ಬಡವರ ಕೂಗನ್ನು ಸರ್ಕಾರ ಕೇಳಿಕೊಳ್ಳಬೇಕು. ಇವತ್ತು ನನಗೆ ಆಶ್ಚರ್ಯವಾಗುತ್ತಿದೆ. ನೇತ್ರಾವತಿ ನದಿ ತೀರದಲ್ಲಿ 13,000 ಕೋಟಿ, ಇನ್ನೊಂದು fly-over ಎಂದರೆ 200 ಕೋಟಿ ರೂ. ಇನ್ನು ಯಾರಾದರೂ IT Company ಯವರು ಕೇಳಿದರೆ ಇನ್ನೂ ನೂರು ಕೋಟಿ ರೂ. ಗಳನ್ನು ಕೊಡುವಂತಹ ಸಂದರ್ಭದಲ್ಲಿ ಅಲ್ಲಿಯ ಬಡವರು, ಕಾರ್ಮಿಕರು ಅಥವಾ ಮೀನುಗಾರರು ಕೇಳಿದ ಅವರಿಗೆ ಉಪಕಾರವಾಗುವಂತಹ 12 ಕೋಟಿ ರೂಪಾಯಿಗಳನ್ನು ಸರ್ಕಾರ ಖಂಡಿತವಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತಾ, ನೀಡುವ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತಾ, ಇನ್ನೊಂದು, ಆ ಪ್ರದೇಶದ ನೀರಿನ ಸಮಸ್ಯೆ ಬಗ್ಗೆ ಗಮನ ಸೆಳೆಯುತ್ತೇನೆ. ಇವತ್ತು ಉಳ್ಳಾಲ ಕ್ಷೇತ್ರವು ನೇತ್ರಾವತಿ ದಡದಲ್ಲಿದ್ದರೂ ಕೂಡ, ಅಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟವಾಗಿದೆ. ಉಳ್ಳಾಲ ಕ್ಷೇತ್ರದ ವ್ಯಾಪ್ತಿಯಲ್ಲಿ 9 Corporation ಗಳು ಬಂದರೂ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಕೂಡ ಇವತ್ತು ಎರಡು ದಿವಸಕ್ಕೊಮ್ಮೆ ನೀರು ಬರುವ ಸಾಧ್ಯತೆ ಇದೆ. ತುಂಬೆಯಲ್ಲಿ ನೀರಿನ ವೆಂಟೆಡ್ ಡ್ಯಾಂ ಕಟ್ಟಬೇಕೆಂಬ ಪ್ರಪೋಸಲ್ ಇದ್ದರೂ ಕೂಡ, ಎರಡು ವರ್ಷಗಳಿಂದ ಬೇಡಿಕೆ ಇದ್ದರೂ ಕೂಡ, ಸರ್ಕಾರ ಇನ್ನೂ ಕೂಡ 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಹಳೆಯ ಡ್ಯಾಂಗಳ ಮೇಂಟೇನ್ ಮಾಡುವ ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ, ತುಂಬೆಯಲ್ಲಿ ವೆಂಟೆಡ್ ಡ್ಯಾಂ ಕಟ್ಟಲಿಕ್ಕೆ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಿಟಿಯ ನೀರಿನ ಸಮಸ್ಯೆ ಇಷ್ಟು ಆದರೆ, ನಮ್ಮ ಗ್ರಾಮೀಣ ಪ್ರದೇಶದ ನೀರಿನ ಸಮಸ್ಯೆ ಹೇಗಿರಬಹುದು ಎಂದು ತಾವು ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ರೆಕಾರ್ಡ್‌ಗೆ ತಪ್ಪು ಹೋಗಬಾರದು. 40 ಕೋಟಿ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿದೆ. ಟೆಂಡರ್ ಆಗುವಂತಹ ಪ್ರೋಸೆಸ್‌ನಲ್ಲಿದೆ.

ಶ್ರೀ ಯು.ಟಿ.ಖಾದರ್ : ಆ ಪ್ರೋಸೆಸ್‌ನ್ನು ಸರ್ಕಾರ ಆದಷ್ಟು ಬೇಗ ಮಾಡಬೇಕು. ಏಕೆಂದರೆ ನಮಗೆ ಅಲ್ಲಿ ರಿಸಲ್ಟ್ ಬೇಕು. ಅಲ್ಲಿ ರಿಸಲ್ಟ್ ಸೊನ್ನೆ ಆಗಿದೆ. ನಮಗೆ ರಿಸಲ್ಟ್ ಬರುವಂತಹ ಕೆಲಸವಾಗಬೇಕೆಂದು ಕೇಳಿಕೊಳ್ಳುತ್ತಾ, ಗ್ರಾಮೀಣ ಮಟ್ಟದಲ್ಲಿ ಈ ಸಮಸ್ಯೆ ಬಹಳಷ್ಟು ಇದೆ. ಉಳ್ಳಾಲ ಕ್ಷೇತ್ರದ ಕೆಲವೊಂದು ಗ್ರಾಮಗಳಲ್ಲಿ ಮೂರು ನಾಲ್ಕು ದಿವಸಗಳಿಗೊಮ್ಮೆ ನೀರು

ಬರುವಂತಹ ಪರಿಸ್ಥಿತಿ ಇದೆ. ಆದಕಾರಣ, ತುಂಬೆಯಿಂದಲೇ ಅಲ್ಲಿಗೆ ನೀರು ಕೊಡುವಂತಹ ವ್ಯವಸ್ಥೆ ಆಗಬೇಕೆಂದು ಕೇಳಿಕೊಳ್ಳುತ್ತಾ, ಉಳ್ಳಾಲ ಕ್ಷೇತ್ರದಲ್ಲಿರು ವಂತಹ ಪರಿಸರದಲ್ಲಿ ಕೊಣಾಜೆ ಹತ್ತಿರದಲ್ಲಿ IT park ಗಳು ಬರುತ್ತಿವೆ. Multi-National Company ಗಳು ಬರುತ್ತಿವೆ. ಈ Multi-National Company ಗಳಿಗೆ ತುಂಬೆಯಿಂದ ಏನಾದರೂ ನೀರು ಕೊಡುವಂತಹ ವ್ಯವಸ್ಥೆ ಇದ್ದಿದ್ದರೆ, ಪ್ರಥಮವಾಗಿ ಸುತ್ತಮುತ್ತಲ ಗ್ರಾಮಗಳಿಗೂ ಕೂಡ ನೀರು ಕೊಡಬೇಕು. ನಂತರ IT park ಗೆ ನೀರು ಕೊಡುವಂತಹ ಕೆಲಸ ಆಗಬೇಕೆಂದು ನಿಮಗೆ ಹೇಳುತ್ತಾ, ನಮ್ಮ ಕ್ಷೇತ್ರದ ಬಡ ಜನರಿಗೆ ಯಾವುದೇ ಒಂದು ಸೈಟನ್ನು ಕೂಡ ಕೊಡುವುದಕ್ಕಾಗಲಿಲ್ಲ. ಯಾವುದೇ ಒಂದು ಸರ್ಕಾರದ ಸೈಟನ್ನು ನಾನು ನಮ್ಮ ಬಡ ಜನರಿಗೆ ಕೊಡುವಂತಹ ಪರಿಸ್ಥಿತಿಯಲ್ಲಿಲ್ಲ. ನಾನು ಸ್ಪಷ್ಟವಾಗಿ ಮತ್ತು ಧೈರ್ಯವಾಗಿ ಹೇಳುತ್ತೇನೆ, ಇವತ್ತು ಸಮಾಜದಲ್ಲಿ ಹಿಂದುಳಿದ ವರ್ಗದವರು, ಬಡವರು, ಅಲ್ಪಸಂಖ್ಯಾತರು, ದಲಿತರು, ತಲೆ ಎತ್ತಿ ಜೀವಿಸುತ್ತಿದ್ದರೆ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ಶ್ರೀಮಂತರ ಜಾಗವನ್ನು ವಶಪಡಿಸಿ ಕೊಂಡು ಬಡವರಿಗೆ ಕೊಡುವಂತಹ ಕೆಲಸ ಮಾಡಿದರು. ಈಗಿನ ದಿವಸಗಳಲ್ಲಿ ಬಡವರ ಜಾಗಗಳನ್ನು ವಶಪಡಿಸಿಕೊಂಡು ಬಂಡವಾಳ ಶಾಹಿಗಳಿಗೆ ಕೊಡುವಂತಹ ಪರಿಸ್ಥಿತಿಯಾಗಿದೆ. ಆದಕಾರಣ ಎಲ್ಲಾ ಗ್ರಾಮಗಳಲ್ಲಿ ಯಾವ ಒಂದು ಪ್ರದೇಶಗಳಲ್ಲಿ ಸರ್ಕಾರೀ ಜಾಗವನ್ನು ವಶಪಡಿಸಿಕೊಂಡಿದ್ದಾರೆ, ಅದನ್ನು ಶ್ರೀಮಂತರಿಂದ ತೆಗೆದು ಬಡವರಿಗೆ ಹಂಚುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಇವತ್ತು ಉಳ್ಳಾಲ ಕ್ಷೇತ್ರವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ, ಬಹಳಷ್ಟು ಹಿಂದುಳಿದಿರತಕ್ಕಂತಹ ಸಂದರ್ಭದಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಒಂದೇ ಒಂದು ಸರ್ಕಾರೀ ಪದವಿ ಪೂರ್ವ ಕಾಲೇಜು ಈ ಪ್ರದೇಶದಲ್ಲಿ ಇಲ್ಲ. ಈ ಸಾರಿ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಾರೆಂದು ನನಗೆ ಖಂಡಿತವಾಗಿ ವಿಶ್ವಾಸ ಇದೆ. ವಿಶೇಷವಾಗಿ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ, ಉಳ್ಳಾಲ ಒಂದು ಸೂಕ್ಷ್ಮ ಪ್ರದೇಶವೆಂದು ಚುನಾವಣೆಗೆ ಮುಂಚೆ ಪ್ರಚಾರವಾಗಿದ್ದರೂ ಕಳೆದ

ಚುನಾವಣೆಯಲ್ಲಿ ಎಲ್ಲಾ ಜಾತಿ, ಮತ ಮತ್ತು ವರ್ಗದವರು ಇವತ್ತು ಜಾತ್ಯಾತೀತ ಶಕ್ತಿ ಆ ಪ್ರದೇಶದಲ್ಲಿ ಬೇಕೆಂಬ ಉದ್ದೇಶದಿಂದ ನನಗೆ ಆರಿಸಿ ಕಳುಹಿಸಿದ್ದಾರೆ. ಇವತ್ತು ಆ ಪ್ರದೇಶದಲ್ಲಿ ಒಂದು Circle office ಇಲ್ಲ. ಆದಕಾರಣ ಅಲ್ಲಿ ಒಂದು ಸರ್ಕಲ್ ಆಫೀಸ್ ಸ್ಥಾಪನೆ ಆಗುವಂತಹ ಕೆಲಸ ಆಗಬೇಕಾಗಿದೆ. ಆ ಕ್ಷೇತ್ರದಲ್ಲಿ ಹಿಂದೆ ಕೆಲವೊಂದು ಕಾರಣಗಳಿಂದ ಆದ ಗಲಭೆಗಳ ಸಂದರ್ಭದಲ್ಲಿ ಬಹಳಷ್ಟು ನಿರಪರಾಧಿಗಳು ಇಂದಿಗೂ ಕೂಡ ಆ ಕೇಸ್‌ಗಳನ್ನು ಎದುರಿಸಿದ್ದಾರೆ. ಹಿಂದೆ ನಮ್ಮ ಮಾಜಿ ಶಾಸಕರಾದ ಕುಂಬ್ಳೆ ಸುಂದರರಾವ್‌ರವರ ಕೇಸನ್ನು ಹಿಂದಕ್ಕೆ ಪಡೆದಿದ್ದರು. ನಮ್ಮ ಉಸ್ತುವಾರಿ ಮಂತ್ರಿಗಳ ಕ್ಷೇತ್ರದಲ್ಲಿರುವ ಅನಂತ್ ಕೊಲೆ ಪ್ರಕರಣದ ಗಲಭೆಯಲ್ಲಿ ಯಾವ ರೀತಿಯಿಂದ ಸರ್ಕಾರ ಕೇಸನ್ನು ಹಿಂದಕ್ಕೆ ಪಡೆದಿತ್ತು, ಅದೇ ರೀತಿಯಲ್ಲಿ ಉಳ್ಳಾಲ ಕ್ಷೇತ್ರದ ವ್ಯಾಪ್ತಿಯಲ್ಲಿರುವ ನಿರಪರಾಧಿಗಳು ಯಾರಿದ್ದಾರೆ, ಎಲ್ಲಾ ಜಾತಿ, ಎಲ್ಲಾ ಮತ ಮತ್ತು ಎಲ್ಲಾ ವರ್ಗದವರ ಕೇಸುಗಳನ್ನು ಹಿಂದಕ್ಕೆ ಪಡೆಯಲು ಸರ್ಕಾರ ಮನಸ್ಸು ಮಾಡಿ, ಯುವಕರಿಗೆ ನ್ಯಾಯ ಕೊಡಬೇಕೆಂದು ಕೇಳಿಕೊಳ್ಳುತ್ತಾ, ಗಲಭೆ ಸಂದರ್ಭದಲ್ಲಿ ಅಗರ್‌ವಾಲ್ ಸಮಿತಿ ನೇಮಕವಾಗಿ 15 ದಿವಸಗಳಲ್ಲಿ ಆ ಸಮಿತಿಯ ವರದಿಯನ್ನು ಒಪ್ಪಿಸುತ್ತೇವೆಂದು ಮಾತನ್ನು ಕೊಟ್ಟಿದ್ದರು. ಆದರೆ ಅಗರ್‌ವಾಲ್ ಸಮಿತಿಯ ವರದಿ ಇನ್ನೂ ಕೂಡ ಬಹಿರಂಗವಾಗಿಲ್ಲ. ಆ ಗಲಭೆಯಲ್ಲಿ ನನ್ನನ್ನೂ ಕೂಡ ಬಲಿಪಶು ಮಾಡುವ ಕೆಲಸವಾಗಿತ್ತು. ಆ ಸಂದರ್ಭದಲ್ಲಿ ನನ್ನನ್ನೂ ಕೂಡ ಜೈಲಿಗೆ ತಳ್ಳುವುದಕ್ಕೆ ಪ್ರಯತ್ನ ಪಟ್ಟರು. ಉಳ್ಳಾಲ ಕ್ಷೇತ್ರದ ಮತದಾರರು, ಪಕ್ಷದ ನಾಯಕರು, ಇವತ್ತು ನನಗೆ ವಿಧಾನಸೌಧಕ್ಕೆ ಕಳುಹಿಸಿದ್ದಾರೆಂದು ಹೇಳುವುದಕ್ಕೆ ಇಚ್ಛೆಸುತ್ತಾ, ಆ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಾ, ವಿಶೇಷವಾಗಿ ನಮ್ಮ ಕ್ಷೇತ್ರಕ್ಕೆ ಯಾವುದೇ ಹೊಸ ಯೋಜನೆ ಬಂದರೂ ಅದು ಸಮರ್ಪಕವಾಗಿ ನಮ್ಮ ಕ್ಷೇತ್ರದ ತಳಮಟ್ಟದ ಜನರಿಗೆ ಸಿಗಬೇಕಾದರೆ, ಅಲ್ಲಿಯ ಶಾಸಕರು ಹಾಗೂ ಉಸ್ತುವಾರಿ ಸಚಿವರ ಅನ್ಯೋನ್ಯತೆಯ ಅಗತ್ಯತೆ ಇದೆ. ಉಸ್ತುವಾರಿ ಮಂತ್ರಿಯ ಕಾರ್ಯವ್ಯಾಪ್ತಿ ಏನು, ಅವರ ಮಿತಿ ಏನೆಂದು ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಉಸ್ತುವಾರಿ ಸಚಿವರೆಂದರೆ ಬರೀ ವರ್ಗಾವಣೆ ಮಾಡುವುದಕ್ಕೆ ಮಾತ್ರ ಇರುತ್ತಾರಾ? ಅಥವಾ ನಮ್ಮ ಕ್ಷೇತ್ರದಲ್ಲಿ ನಮಗೆ ಗೊತ್ತಿಲ್ಲದ ಹಾಗೆ ಬಂದು ಶಂಕುಸ್ಥಾಪನೆ ಮಾಡುವುದಕ್ಕೇ ಇರುವುದಾ? ಅಥವಾ ನಾವು ಬೆಂಗಳೂರಿನಲ್ಲಿರುವಾಗ ಅಲ್ಲಿ ಹೋಗಿ ಚೆಕ್ ಕೊಡುವುದಕ್ಕೆ

ಇರುವುದೆ? ಅಥವಾ ಎಲ್ಲಾ ಜನಪ್ರತಿನಿಧಿಗಳ ವಿಶ್ವಾಸವನ್ನು ತೆಗೆದುಕೊಂಡು ಜಿಲ್ಲೆಯ ಉಸ್ತುವಾರಿ ಯನ್ನು ನೋಡಿಕೊಳ್ಳುವಂಥ ಕೆಲಸವನ್ನು ಮಾಡುವುದೋ? ಇದರ ಬಗ್ಗೆ ಸ್ಪಷ್ಟವಾಗಿ ಇವತ್ತು ಹೇಳಬೇಕು. ಏಕೆಂದರೆ ಉಸ್ತುವಾರಿ ಮಂತ್ರಿಯು ಜವಾಬ್ದಾರಿ ಏನೆಂದರೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಆ ಪ್ರದೇಶದ ಅಭಿವೃದ್ಧಿ ಮಾಡಬೇಕು. ಆದರೆ ನಮ್ಮ ಜಿಲ್ಲೆಯಲ್ಲಿನ ಜನಪ್ರತಿನಿಧಿಗಳ ಸಭೆಯನ್ನು ಕರೆಯುವ ಕೆಲಸ ಇದುವರೆಗೂ ಆಗಿಲ್ಲ. ಆದಕಾರಣ ಭವಿಷ್ಯದಲ್ಲಿ ಉಂಟಾಗ ಬಹುದಾದ ಸಂಘರ್ಷ ತಪ್ಪಿಸಿ, ಸಮಾಜದ ಅಭಿವೃದ್ಧಿ ಆಗಬೇಕಾದರೆ ಈ ಸದನವು ಒಂದು ಲಿಖಿತ ಸುತ್ತೋಲೆಯನ್ನು ಹೊರಡಿಸಿ ಉಸ್ತುವಾರಿ ಸಚಿವರ ಕಾರ್ಯವ್ಯಾಪ್ತಿ ಮತ್ತು ಇತಿಮಿತಿಯ ಬಗ್ಗೆ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತಾ ಪ್ರಥಮವಾಗಿ ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ

(4-00 PM)

ಮಾನ್ಯ ಅಧ್ಯಕ್ಷರಿಗೆ ಹಾಗೂ ನಮ್ಮ ನಾಯಕರಿಗೆ ಮತ್ತು ಸದನದ ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನು ಸಲ್ಲಿಸುತ್ತ ನಾನು ಮಾತನಾಡಿರುವುದರಲ್ಲಿ ಏನಾದರೂ ಹೆಚ್ಚು ಕಡಿಮೆ ಇದ್ದರೆ ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಾ, ಮೊನ್ನೆ ಒಂದು ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದಿದ್ದಾರೆ, ವಿಶೇಷವಾಗಿ ಜನರಿಗೆ ಎಲ್ಲ ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆಯನ್ನು ಕೊಟ್ಟಿದ್ದಾರೆ. ಇವತ್ತು ನನ್ನ ಕ್ಷೇತ್ರದ ಜನರು ನನ್ನ ಮುಖಾಂತರ ಸದನದ ನಾಯಕರಾದ ನಿಮ್ಮ ಬಾಯಿಯಿಂದ ಸಿಹಿ ಸುದ್ದಿಯನ್ನು ಕೇಳಲಿಚ್ಛಿಸಿದ್ದಾರೆ. ಆದಕಾರಣ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಒಳ್ಳೆಯ ಸುದ್ದಿ, ಸಿಹಿ ಸುದ್ದಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾ ಎಲ್ಲರಿಗೂ ನನ್ನ ಧನ್ಯವಾದಗಳನ್ನು ಸಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ನನಗೆ ಐದು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು : ನೋಡಿ, ನಿಮಗೆ ಅವಕಾಶ ಕೊಟ್ಟರೆ ಈ ಕಡೆಯಲ್ಲಿ ಇರುವವರು ನಮಗೂ ಕೊಡಿ ಎಂದು ಎಷ್ಟು ಜನರು ಎದ್ದು ನಿಂತುಕೊಳ್ಳುತ್ತಾರೆ ನೋಡಿ. ನಿಮಗೆ ನೆಕ್ಸ್ಟ್ ಟೈಂ ಅವಕಾಶ ಕೊಡುತ್ತೇನೆ. ಈಗ ಕುಳಿತುಕೊಳ್ಳಿ. ಈಗಾಗಲೇ ಆ ಕಡೆಯವರು, ಈ ಕಡೆಯವರು

ಮಾತನಾಡಿಯಾಗಿದೆ. ನಿಮಗೆ ನೆಕ್ಸ್ಟ್ ಟೈಂ ಕೊಡುತ್ತೇನೆ. ಈಗ ಕುಳಿತುಕೊಳ್ಳಿ. ರೇವಣ್ಣನವರೆ, ತಾವು ಈಗ ಉತ್ತರ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ, ಇಂಧನ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದಿಂದ 2007–08ನೇ ಸಾಲಿನ ಮುಂಗಡ ಪತ್ರದ ಮೇಲೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ನಮ್ಮ ಹಿರಿಯ ಸದಸ್ಯರುಗಳಾದಂತಹ ಮಲ್ಲಿಕಾರ್ಜುನ ಖರ್ಗೆ, ಮಾಧುಸ್ವಾಮಿಯವರಿಂದ ಹಿಡಿದು ಬಸವರಾಜ ರಾಯರೆಡ್ಡಿಯವರು ಹಾಗೂ ಇನ್ನಿತರ ಎಲ್ಲ ಹಿರಿಯ ಸದಸ್ಯರುಗಳು ಲೋಕೋಪಯೋಗಿ ಇಲಾಖೆ ಹಾಗೂ ಇಂಧನ ಇಲಾಖೆಯ ಮೇಲೆ ಮಾತನಾಡಿ ಬೆಳಕು ಚೆಲ್ಲಿದ್ದಾರೆ. ಇದರಲ್ಲಾಗಿರುವಂಥ ಲೋಪ ಅಥವಾ ತಾರತಮ್ಯ, ಇವೆಲ್ಲದರ ಬಗ್ಗೆ ಮಾತನಾಡಿದ್ದಾರೆ. ಇಂದು ಈ ಸಭೆಯ ಮುಂದೆ ನಾನು ಎಲ್ಲರಲ್ಲಿಯೂ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ಇದುವರೆಗೂ ಹಿರಿಯ ಸದಸ್ಯರೆಲ್ಲರೂ ಮಾತನಾಡಿದ್ದನ್ನು ನಾನು ತಾಳ್ಮೆಯಿಂದ ಕೇಳಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಐವಾನ್ ನಿಗ್ಲಿಯವರು ತಮಗೆ ಮಾತನಾಡಲು ಅವಕಾಶ ಕೊಡಲಿಲ್ಲವೆಂದು ಹೇಳುತ್ತಾ ಸಭಾತ್ಯಾಗ ಮಾಡಿದರು).

ಅಧ್ಯಕ್ಷರು : ಮಾನ್ಯ ಸಚಿವರೆ, ನೀವು ಉತ್ತರ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಎಲ್ಲ ಹಿರಿಯ ಸದಸ್ಯರಲ್ಲಿಯೂ ಮನವಿ ಮಾಡುವುದೇನೆಂದರೆ, ನಾನು ಎಲ್ಲದರ ಬಗ್ಗೆಯೂ ಪೂರ್ಣವಾಗಿ ಹೇಳುವುದಕ್ಕೆ ಅವಕಾಶ ಕೊಡಲಿ. ಆಮೇಲೆ ಅದರ ಮೇಲೆ ಕ್ಲಾರಿಫಿಕೇಶನ್ ಏನಿದ್ದರೂ ಕೇಳಲಿ. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಈ ಸಭೆಯ ಮುಂದೆ ಏನೇನು ನಡೆದಿದೆ ಎಂಬ ಬಗ್ಗೆ ಎಲ್ಲ ವಿಚಾರವನ್ನು ಮಂಡಿಸುತ್ತೇನೆ. ಆಮೇಲೆ ಏನು ಕ್ಲಾರಿಫಿಕೇಶನ್ ಇದ್ದರೂ ಉತ್ತರ ಕೊಡಲು ತಯಾರಿದ್ದೇನೆ. ನಾನೇನೂ ಕದ್ದು ಓಡಿಹೋಗುವುದಿಲ್ಲ. ಇಲ್ಲೇ ನಮ್ಮ ಧರ್ಮಸಿಂಗ್ ಸಾಹೇಬರು ಕುಳಿತಿದ್ದಾರೆ. ಅವರು ಎಂಟು ಸಾರಿ ಗೆದ್ದು ಬಂದವರು. ನಾನು ಎರಡು ಬಾರಿ ಗೆದ್ದಿದ್ದೇನೆ, ಒಂದು ಬಾರಿ ಸೋತಿದ್ದೇನೆ. ಮಾನ್ಯ ಖರ್ಗೆ ಸಾಹೇಬರೆ, ನೀವೂ ಅಷ್ಟೆ. ನಿಮ್ಮಷ್ಟು ಅನುಭವ ನನಗೆ ಇಲ್ಲ. ನಿಮ್ಮ ಆಶೀರ್ವಾದ ನನಗೆ ಒಂದಿದ್ದರೆ ಅಷ್ಟೇ ಸಾಕು. ಬಾಕಿಯದ್ದೆಲ್ಲವನ್ನೂ ನಾನು ನೋಡಿಕೊಳ್ಳುತ್ತೇನೆ. ನಾನು ಇಂದು ಮೊದಲನೆಯದಾಗಿ

ಲೋಕೋಪಯೋಗಿ ಇಲಾಖೆಯಲ್ಲಿ ಕಟ್ಟಡಗಳ ಬಗ್ಗೆ ಅವರು ಮಾತನಾಡಿರುವುದಕ್ಕೆ ಸಂಬಂಧಪಟ್ಟಂತೆ ಹೇಳಬಯಸುತ್ತೇನೆ. ನಾನು ಮಂತ್ರಿಯಾದ ಮೇಲೆ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಕಟ್ಟಡದ ಕೆಲಸಗಳನ್ನು ತೆಗದುಕೊಂಡಿರುವ ಬಗ್ಗೆ ಮೊಟ್ಟ ಮೊದಲನೆಯದಾಗಿ ಸದನದ ಗಮನಕ್ಕೆ ತರಬಯಸುತ್ತೇನೆ. ಒಂದು ಉದಾರಣೆಯನ್ನು ಹೇಳುವುದಾದರೆ, 1868ನೇ ಇಸವಿಯಲ್ಲಿ ಮೈಸೂರಿನ ಆಯುಕ್ತರಾಗಿದ್ದ ಲೆವಿನ್ ಬೆಥ್ ಎನ್ನುವವರು ಬೌರಿಂಗ್ ಆಸ್ಪತ್ರೆಯನ್ನು ಕಟ್ಟಿಸಿದರು. 1900 ರಲ್ಲಿ ಅಂದಿನ ಮಹಾರಾಣಿಯಾಗಿದ್ದಂಥ ಶ್ರೀಮತಿ ನಂಜಾಮ್ಮಣ್ಣಿಯವರು ವಿಕ್ಟೋರಿಯಾ ಆಸ್ಪತ್ರೆಯನ್ನು ಕಟ್ಟಿಸಿದರು. ಈ ಬೌರಿಂಗ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳನ್ನು ಕಟ್ಟಿ ಸುಮಾರು ನೂರು ವರ್ಷಗಳಾಗಿದೆ. ನೂರು ವರ್ಷಗಳ ಹಿಂದಿನ ಈ ಕಟ್ಟಡಗಳು ಹೇಗಿತ್ತು ಎನ್ನುವುದನ್ನು ನಮ್ಮ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಗಳು ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಮತ್ತು ನಾನು ದಿನಾಂಕ: 07-10-2004 ಮತ್ತು 11-10-2004 ರಂದು ಅಲ್ಲಿಗೆ ಭೇಟಿ ಮಾಡಿ ನೋಡಿದೆವು. ಈ ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆಗಳಿಗೆ ಸಾಹುಕಾರರುಗಳು ಯಾರೂ ಹೋಗುವುದಿಲ್ಲ. ನೂರಕ್ಕೆ ತೊಂಭತ್ತು ಭಾಗ ಬಡವರೇ ಅಲ್ಲಿಗೆ ಚಿಕಿತ್ಸೆಗಾಗಿ ಹೋಗುವುದು. ರಾಜ್ಯದ ಮೂಲೆ ಮೂಲೆಗಳಿಂದ ಬಡವರು ಅಲ್ಲಿಗೆ ಬರುತ್ತಾರೆ. ಇಲ್ಲಿ ಪಿ.ಜಿ.ಸೆಂಟರ್ ಕೂಡ ಇದೆ. ಬಿ.ಎಸ್ಸಿ. (ನರ್ಸಿಂಗ್) ಆದಮೇಲೆ ಎಂ.ಎಸ್ಸಿ. (ನರ್ಸಿಂಗ್) ಕೂಡ ಅಲ್ಲಿದೆ. ಅದರೊಳಗೆ ಹೋದರೆ ದನದ ಕೊಟ್ಟಿಗೆಗಿಂತಲೂ ಹದಗೆಟ್ಟ ಪರಿಸ್ಥಿತಿ ಅಲ್ಲಿತ್ತು. ನಾನು ಬೇಕಾದರೆ ಆ ಫೋಟೋಗಳನ್ನೆಲ್ಲಾ ತಮ್ಮ ಅವಗಾಹನೆಗಾಗಿ ಕೊಡುತ್ತೇನೆ ಅಧ್ಯಕ್ಷರೆ. ಮೊಟ್ಟಮೊದಲ ಬಾರಿ ನಾನು ಅಲ್ಲಿಗೆ ಭೇಟಿ ಕೊಟ್ಟು ಬಂದಿದ್ದೇನೆ. ನಾನೊಬ್ಬನೇ ಇವುಗಳ ಬಗ್ಗೆ ನಿರ್ಣಯ ಮಾಡಬಾರದೆಂದು ಒಂದು ಸಮಿತಿಯನ್ನು ಮಾಡಿದ್ದೆ. ಒಂದು ಹೈಲೆವೆಲ್ ಕಮಿಟಿಯನ್ನು ಮಾಡಿ ಆ ಕಮಿಟಿಯಲ್ಲಿ ಸರ್ಕಾರಿ ಅಧಿಕಾರಿಗಳನ್ನು ಹಾಕಿ ಆ ಕಮಿಟಿಗೆ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಆ ಕಮಿಟಿಯಲ್ಲಿದ್ದ ಇನ್ನಿತರೆಂದರೆ, ಸರ್ಕಾರದ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಇಲಾಖೆ, ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಸರ್ಕಾರದ ಕಾರ್ಯದರ್ಶಿಗಳು-ಲೋಕೋಪಯೋಗಿ ಇಲಾಖೆ, ಆಯುಕ್ತರು-ಬೆಂಗಳೂರು

ಮಹಾನಗರ ಪಾಲಿಕೆ, ಆಯುಕ್ತರು-ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ವ್ಯವಸ್ಥಾಪಕ ನಿರ್ದೇಶಕರು-ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ನಿರ್ದೇಶಕರು-ವೈದ್ಯಕೀಯ ಶಿಕ್ಷಣ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು-ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಸರ್ಕಾರದ ಮುಖ್ಯ ವಾಸ್ತು ಶಿಲ್ಪಿ-ಬೆಂಗಳೂರು, ಅಧೀಕ್ಷಕರು-ಬೌರಿಂಗ್ ಆಸ್ಪತ್ರೆ, ಅಧೀಕ್ಷಕರು-ವಿಕ್ಟೋರಿಯಾ ಆಸ್ಪತ್ರೆ, ಮುಖ್ಯ ಇಂಜಿನಿಯರ್-ಸಂಪರ್ಕ, ಹೀಗೆ ಒಟ್ಟು ಹದಿಮೂರು ಜನರ ಒಂದು ಕಮಿಟಿಯನ್ನು ಮಾಡಿದೆ. ಈ ಕಮಿಟಿಯಿಂದ ವರದಿ ಪಡೆದುಕೊಂಡು ಯೋಜನಾ ವೆಚ್ಚವೆಂದು ಸುಮಾರು 140 ಕೋಟಿ ರೂಪಾಯಿಗಳ ಪ್ರಸ್ತಾವನೆ ಮಾಡಲಾಯಿತು. ಇದು ಒಂದು ಭಾಗ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸನ್ಮಾನ್ಯ ಧರ್ಮಸಿಂಗ್‌ರವರು ಅಂದು ಮುಖ್ಯಮಂತ್ರಿಗಳಾ ಗಿದ್ದರು. ಆಗ ಇದರ ಬಗ್ಗೆ ಅವರ ಗಮನಕ್ಕೆ ತಂದು ನಿಮ್ಮ ಕಾಲದಲ್ಲಿ ಈ ಕಾರ್ಯವನ್ನು ಮಾಡಿಸಿ, ನಿಮ್ಮ ಹೆಸರು ಶಾಶ್ವತವಾಗಿ ಉಳಿದುಕೊಳ್ಳಬೇಕು ಎಂದು ಹೇಳಿದೆ. ಆಗ ಉಪ ಮುಖ್ಯಮಂತ್ರಿಗಳಾಗಿ ಮಾನ್ಯ ಸಿದ್ದರಾಮಯ್ಯನವರು ಇದ್ದರು. ಅವರ ಗಮನಕ್ಕೂ ಕೂಡ ಇದರ ಬಗ್ಗೆ ತಂದು ಈ ಕೆಲಸವನ್ನು ಮಾಡಿಸೋಣ ಸಾರ್ ಎಂದೆ. ಮಾನ್ಯ ಸಿದ್ದರಾಮಯ್ಯನವರೂ ಕೂಡ ಉಪ ಮುಖ್ಯಮಂತ್ರಿಗಳಾಗಿ ಮತ್ತು ಏಳು ವರ್ಷಗಳ ಕಾಲ ಹಣಕಾಸಿನ ಸಚಿವರಾಗಿದ್ದರು. ಇವರ ಗಮನಕ್ಕೂ ಕೂಡ ಸದರಿ ವಿಷಯವನ್ನು ತಂದೆ. ಅವರ ಗಮನಕ್ಕೆ ತಂದರೂ ಕೂಡ ಈ ಕೆಲಸವಾಗಲಿಲ್ಲ. ಏಕೆಂದರೆ ಅಲ್ಲಿ ಪಿ.ಜಿ.ಸ್ಟೂಡೆಂಟ್ಸ್ 95% ತೆಗೆದುಕೊಳ್ಳುತ್ತಾರೆ. ಆ ಸ್ಟೂಡೆಂಟ್ಸ್ ನೋಡಿದರೆ ಎಂ.ಬಿ.ಬಿ.ಎಸ್. ಮಾಡಿ ಪಿ.ಜಿ. ಮಾಡುತ್ತಿರುತ್ತಾರೆ, 95% ಪಡೆದಿರುತ್ತಾರೆ. ದನದ ಕೊಟ್ಟಿಗೆಯೊಳಗೆ ವಾಸ ಮಾಡುತ್ತಿದ್ದರು. ಈ ರಾಜ್ಯದಲ್ಲಿ ಮೊದಲನೆಯ ಸೀಟ್ ಸಿಗುವುದು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ. ಅದೇ ರೀತಿ ನರ್ಸಿಂಗ್‌ನಲ್ಲಿ ಮೊದಲನೆಯ ಸೀಟ್ ಸಿಗುವುದು ಬೆಂಗಳೂರು ನರ್ಸಿಂಗ್ ಕಾಲೇಜಿನಲ್ಲಿ. ಅಲ್ಲಿ ಹೋಗಿ ನೋಡಿದರೆ ದನದ ಕೊಟ್ಟಿಗೆ ಹೇಗೆ ಇರುತ್ತದೋ ಅದಕ್ಕಿಂತ ವರ್ಸ್ಟ್ ಪರಿಸ್ಥಿತಿ ಇತ್ತು. ನೀವು ಬೇಕಾದರೆ ನಮ್ಮ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಗಳನ್ನು ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳನ್ನು ಕೇಳಿ. ಫೋಟೋ ಗಳನ್ನೂ ಕೂಡ ತಮಗೆ ಬೇಕಾದರೆ ಕೊಡುತ್ತೇನೆ. ಇಲ್ಲಿ ಕಟ್ಟಡದ ಕೆಲಸ ಮಾಡಿಸಬೇಕೆಂದು ಸತತವಾಗಿ

ಒಂದರಿಂದ ಒಂದೂವರೆ ವರ್ಷಗಳ ಕಾಲ ಪ್ರಯತ್ನ ಪಟ್ಟರೂ ಆಗಲಿಲ್ಲ. ಆಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳಾದಂಥ ಕುಮಾರಸ್ವಾಮಿಯವರು ಮತ್ತು ಉಪ ಮುಖ್ಯಮಂತ್ರಿಗಳಾದಂಥ ಯಡಿಯೂರಪ್ಪನವರು ಬಂದಮೇಲೆ ಅದಕ್ಕೆ 140 ಕೋಟಿ ರೂಪಾಯಿ ಮಂಜೂರಾತಿ ಮಾಡಿ, ಒನ್-ಥರ್ಡ್ ಗ್ರ್ಯಾಂಟ್ ಇಟ್ಟು ಟೆಂಡರ್ ಕರೆದು ಇವತ್ತು ಅಲ್ಲಿ ಕೆಲಸವನ್ನು ಪ್ರಾರಂಭ ಮಾಡಲಾಗಿದೆ. ನಾನೇನು 2004ರಲ್ಲಿ ಮಾಡಿದೆನೋ ಅದನ್ನು ಇವತ್ತು ಕೇಂದ್ರ ಸರ್ಕಾರ ಪತ್ತೆ ಹೆಚ್ಚಿ All India Institute ದೆಹಲಿಯಲ್ಲೇನಿದೆ ಆ ರ್ಯಾಂಕಿಂಗ್ ಇದಕ್ಕೆ ಕೊಟ್ಟರು. ನಾನು ಏನು ವರದಿ ತಯಾರು ಮಾಡಿದ್ದೆನು, ಅದರ ಆಧಾರದ ಮೇಲೆ ಇವತ್ತು ಕೇಂದ್ರ ಸರ್ಕಾರ 150 ಕೋಟಿ ರೂಪಾಯಿ ಹಣವನ್ನು ಕೊಡುತ್ತಿದ್ದು, ಈಗಾಗಲೇ 100 ಕೋಟಿ ರೂಪಾಯಿ ಹಣ ಬಂದಿದೆ. ನಾನು ಏನು ಮಾಡಿದ್ದೇನೆ? ಯಾರು ಕೇಳಿದರೂ ಕೂಡ ಹೊಳೆನರಸೀಪುರ, ಹಾಸನ, ಶಿಕಾರಿಪುರ, ರಾಮನಗರ ಎನ್ನುವಂತಹ ವಾತಾವರಣವನ್ನು ಈ ರಾಜ್ಯದ ಜನತೆಗೆ ಬರುವಂತಹ ರೀತಿಯಲ್ಲಿ ಸೃಷ್ಟಿ ಮಾಡಬೇಕೆಂದು ಇದೆ. ಅದಕ್ಕೆ ನಾನು ಇದೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ನಾನು ಮಾಡಿಲ್ಲ. ಈ ಒಂದು ಯೋಜನೆ ಹಿರಿಯ ಅಧಿಕಾರಿಗಳ ಕೈಯಲ್ಲಿ ತಯಾರು ಮಾಡಿಸಿ, ಕೇಂದ್ರ ಸರ್ಕಾರದಿಂದ ಇವತ್ತು 150 ಕೋಟಿ ರೂಪಾಯಿ ಹಣ ಬರುತ್ತಿದೆ. ನಮ್ಮ ರಾಜ್ಯ ಸರ್ಕಾರದ್ದು 140 ಕೋಟಿ ರೂಪಾಯಿ ಇದೆ. ಇದು ಒಂದು ಭಾಗ. ಇದನ್ನು ಒಂದು ಕಡೆ ಇಟ್ಟುಬಿಡುತ್ತೇನೆ. ಇವತ್ತು ರಾಜ್ಯದಲ್ಲಿ ಆರು Medical College ಗಳನ್ನು ಸ್ಥಾಪನೆ ಮಾಡಿದ್ದೇವೆ. ಅವುಗಳು ಮಂಡ್ಯ, ಹಾಸನ, ಶಿವಮೊಗ್ಗ, ಬೆಳಗಾಂ, ಬೀದರ್ ಮತ್ತು ರಾಯಚೂರಿನಲ್ಲಿ ಇವೆ. ಇವುಗಳಿಗೆ 20 ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದರು. ಆ 20 ಕೋಟಿ ರೂಪಾಯಿ ಹಣವನ್ನು ತೆಗೆದುಕೊಂಡು ಆರು ಕಾಲೇಜುಗಳಿಗೆ ನಿಗದಿತ ಅವಧಿಯಲ್ಲಿ ಕೆಲಸವನ್ನು ಮಾಡಿಕೊಟ್ಟಿದ್ದೇನೆ. ಆದರೆ ಬೆಳಗಾಂನಲ್ಲಿ Land Army ಯವರಿಗೆ ಕೊಟ್ಟಂತಹ ಕೆಲಸ ಒಂದೆರಡು ತಿಂಗಳು ಹೆಚ್ಚುಕಡಿಮೆಯಾಗಿರಬಹುದು. ಇದು ಬಿಟ್ಟರೆ 120 ಕೋಟಿ ರೂಪಾಯಿಯ ಕೆಲಸವನ್ನು ನಿಗದಿತ ಅವಧಿಯಲ್ಲಿ ನಾನು ಮಾಡಿಕೊಟ್ಟಿದ್ದೇನೆ. ನಂತರ ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದಮೇಲೆ ಈ Medical College ಗಳಿಗೆ 2ನೇ ಹಂತದ ಕಾಮಗಾರಿಯ ಕೆಲಸಗಳನ್ನು ತೆಗೆದುಕೊಂಡು

ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ಮಂಡ್ಯ ಮೆಡಿಕಲ್ ಕಾಲೇಜಿಗೆ 40 ಕೋಟಿ ರೂಪಾಯಿ, ಹಾಸನ ಮೆಡಿಕಲ್ ಕಾಲೇಜಿಗೆ 40 ಕೋಟಿ ರೂಪಾಯಿ, ಶಿವಮೊಗ್ಗ ಮೆಡಿಕಲ್ ಕಾಲೇಜಿಗೆ 40 ಕೋಟಿ ರೂಪಾಯಿ, ಬೆಳಗಾಂ ಮೆಡಿಕಲ್ ಕಾಲೇಜಿಗೆ 40 ಕೋಟಿ ರೂಪಾಯಿ, ಬೀದರ್ ಮೆಡಿಕಲ್ ಕಾಲೇಜಿಗೆ 40 ಕೋಟಿ ರೂಪಾಯಿ ಹಾಗೂ ರಾಯಚೂರು ಮೆಡಿಕಲ್ ಕಾಲೇಜಿಗೆ 40 ಕೋಟಿ ರೂಪಾಯಿ ಒಟ್ಟು 160 ಕೋಟಿ ರೂಪಾಯಿ ಇಟ್ಟಿದ್ದು, ಇದಕ್ಕೆ tender ಕರೆದು finalize ಮಾಡಲಾಗಿದೆ. ಆದರೆ ನಾಳೇ ದಿವಸ ಇದರಲ್ಲಿ ರೇವಣ್ಣ ಏನೋ ಮಾಡಿದರು ಎನ್ನಬಾರದೆನ್ನುವ ಕಾರಣಕ್ಕೆ ಇದನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡು ಹೋಗಿದ್ದೇನೆ. ನಾನು tender ಕರೆದು approve ಮಾಡಲಿಲ್ಲ. ಇದನ್ನು Medical Education Department ಕಡೆಯಿಂದ ಸಚಿವ ಸಂಪುಟದ ಸಭೆಗೆ ತೆಗೆದುಕೊಂಡು ಹೋಗಿದ್ದು, ನಮ್ಮ ಕಾರ್ಯದರ್ಶಿಗಳಾದ ಗೋಕುಲರಾಂರವರು ಇಲ್ಲಿ ಇಲ್ಲ, ಅವರು ದೆಹಲಿಗೆ ಹೋಗಿದ್ದಾರೆ. ಅವರು "ನಿಮಗೆ powers ಇದೆ, ನೀವೇ ಮಾಡಿ" ಎಂದು ನನಗೆ ಹೇಳಿದರು. ನಾಳೆ ಇದರ ವಿಚಾರದಲ್ಲಿ ಏನೂ ಬರಬಾರದು ಎಂದು ಇದನ್ನು Cabinet ಮುಂದೆ ತೆಗೆದುಕೊಂಡು ಹೋಗಿ ಎರಡನೇ ಹಂತಕ್ಕೆ approve ಮಾಡಿಕೊಟ್ಟಿದ್ದೇನೆ. ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನನಗೆ ಕೊಟ್ಟಂತಹ ಕೆಲಸವನ್ನು ನಾನು ಚಾಚೂ ತಪ್ಪದಂತೆ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದ್ದೇನೆ. ಇದಾದನಂತರ ಶಿಕ್ಷಣ ಇಲಾಖೆಯಲ್ಲಿ ತಮ್ಮ ಗಮನಕ್ಕೆ ತರಬೇಕಾದುದು ಎಂದರೆ, ಮಾನ್ಯ ಯಡಿಯೂರಪ್ಪನವರು ಬಜೆಟ್ ಮಂಡನೆ ಮಾಡಿದ ತಕ್ಷಣ ಮೊದನೆಯ ಬಾರಿ ನಾನು ಮಂತ್ರಿಯಾಗಿ react ಮಾಡಲಿಲ್ಲ. ನಾನು ಗ್ರಾಮೀಣ ಪ್ರದೇಶದ ರೈತರ ಜೊತೆ ಓಡಾಡಿರುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ಆರು ತಿಂಗಳು ಮಂತ್ರಿಯಾಗಿಲ್ಲದ್ದಂತಹ ಸಂದರ್ಭದಲ್ಲಿ ಹಾಸನದಲ್ಲಿ ನಾನು ಒಂದು IB ಯೊಳಗೆ ಇದ್ದಾಗ ಒಂದು ಹೆಣ್ಣು ಮಗು ಬಂದಳು. ಅವಳಿಗೆ ಒಂದು Courseಗೆ seat ಬೇಕಾಗಿತ್ತು. ಹಾಸನದಲ್ಲಿ ಇದ್ದಂತಹ ಒಬ್ಬ ಪತ್ರಿಕಾ ವರದಿಗಾರರು ಇದ್ದಾರೆ, ಈ ಪ್ರಕರಣ ಅವರ ಸಮ್ಮುಖದಲ್ಲಿ ನಡೆದಂತಹ ವಿಚಾರವನ್ನು ಹೇಳುತ್ತಿದ್ದೇನೆ. BBM seat ಗೆ ಒಂದು ಲಕ್ಷ ರೂಪಾಯಿ ಕೊಡಬೇಕು. ಈಗ backwards ಗೆ 90% ಇದ್ದರೆ BBM seat ಸಿಗುವುದಿಲ್ಲ.

MBA seat ಗೆ ಒಂದು, ಎರಡು, ಮೂರು, ನಾಲ್ಕು ಲಕ್ಷ ರೂಪಾಯಿ donation. ಆಗ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ. ಆಗ ನಾನು ಮಂತ್ರಿಯಾಗಿರಲಿಲ್ಲ. ಅವರಿಗೆ ಹೇಳಿದೆ, ನಮಗೆ MLA grant ಎಂದು ಒಂದು ಕೋಟಿ ರೂಪಾಯಿ ಕೊಡುತ್ತೀರಿ, ಅದನ್ನು ತೆಗೆದುಕೊಳ್ಳಿ ಎಂದು ಹೇಳಿದೆ. ಒಂದು High School ಮಾಡುವುದಕ್ಕೆ ಎಂಟು ಲಕ್ಷ ರೂಪಾಯಿ ಬೇಕು ಹಾಗೂ PU College ಮಾಡುವುದಕ್ಕೆ 20 ಲಕ್ಷ ರೂಪಾಯಿ ಬೇಕು. ಒಂದು ಕಾಲೇಜು ಮಾಡುವುದಕ್ಕೆ 50 ಲಕ್ಷ ರೂಪಾಯಿ ಬೇಕೆಂದು ಮಾನ್ಯ ಗೋಕುಲರಾಂರವರು ಹೇಳಿದರು. ಅದಕ್ಕೆ ನಾನು ಸ್ವಾಮಿ ನಾವು ಹಾಸನ ಜಿಲ್ಲೆಯಲ್ಲಿ 5 ಜನ MLA ಗಳು ಇದ್ದೇವೆ, ನಾವು 5 ಕೋಟಿ ರೂಪಾಯಿ ಹಣವನ್ನು ವಾಪಸ್ಸು ಕೊಟ್ಟು ಬಿಡುತ್ತೇವೆ. ನಮಗೆ ಕಾಲೇಜು ಕೊಟ್ಟುಬಿಡಿ. ಬೇಕಾದರೆ ಒಂದು ವರ್ಷ ಮಣ್ಣು ಎರಚುವ ಕಾರ್ಯಕ್ರಮವನ್ನು ನಿಲ್ಲಿಸಿಬಿಡೋಣ ಎಂದು ಹೇಳಿದೆ. ಅದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು meeting ಕರೆದರು. ಅವತ್ತು ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ಇವತ್ತು ಉದಾಹರಣೆಗೆ ಹೇಳುವುದಾದರೆ, ಕಳೆದ 50 ವರ್ಷದಲ್ಲಿ ಈ ರಾಜ್ಯದಲ್ಲಿ ಮಂಜೂರಾಗಿರುವಂತಾದ್ದು ಒಟ್ಟು 168 ಸರ್ಕಾರಿ ಕಾಲೇಜು. ಅದರಲ್ಲೂ 15 ವರ್ಷದಲ್ಲಿ ಆಗಿರುವಂತಾದ್ದು, 2000ನೇ ಇಸವಿಯಿಂದ 2004 ರವರೆಗೆ ಆಗಿರುವಂತಾದ್ದರ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. ಒಂದು ಮದ್ದೂರಿನಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದರು, ಅವರು ಊರು. ಎರಡನೆಯದು ಮಧುಗಿರಿ, Higher Education Minister ಇದ್ದರು, ಅದು ಅವರ ಊರು. ಮೂರನೆಯದು ಹುಬ್ಬಳ್ಳಿ, ನಾಲ್ಕನೆಯದು ಸವಲಂಗ, ಐದನೆಯದು ಮಸ್ಕಿ, ಕಡಿದಾಳು, ಬಾಗೂರು, ಆಲೂರು, ಕೊಪ್ಪ. ಎರಡನೆಯದು ಮುಖ್ಯಮಂತ್ರಿಗಳು ಇದ್ದರೆಂದು ಇನ್ನೊಂದು ಕಾಲೇಜು ಮಾಡಿದರು. ಅದು ಬಿಟ್ಟರೆ ಶಾಂತಿನಗರ, ಉಡುಪಿ ಮಹಿಳಾ ಕಾಲೇಜು. ಇಷ್ಟು ಕಾಲೇಜುಗಳಿಗೆ ಮಂಜೂರಾತಿಯನ್ನು ಕೊಟ್ಟರು. ನಾನು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಹಾಗೂ ಆಯುಕ್ತರವರನ್ನು, PU ಯಿಂದ B.Sc., MBBS, other degrees ಗೆ ಎಷ್ಟು admission ಇದೆ ಎಂದು ಕೇಳಿದಾಗ ನೂರಕ್ಕೆ only 11% admission ಇದೆ ಎಂದು ಹೇಳಿದರು. ಹಳ್ಳಿಯ ರೈತರ ಮಕ್ಕಳು ಖಾಸಗಿ ಕಾಲೇಜಿನಲ್ಲಿ BA

ಸೇರುವುದಕ್ಕೆ ಹದಿನೈದು ಸಾವಿರ donation ಕೊಡಬೇಕು. BBM course ಸೇರುವುದಕ್ಕೆ ಐವತ್ತು ಸಾವಿರ ರೂಪಾಯಿ ಅಥವಾ ಒಂದು ಲಕ್ಷ ರೂಪಾಯಿ ಕೊಡಬೇಕು. ನಾನು ಮಂತ್ರಿಯಾಗುವುದಕ್ಕಿಂತ ಮೊದಲೇ ನನಗೆ ಈ ವಿಷಯ ಗೊತ್ತಿತ್ತು. ಗೊತ್ತಾದ ಮೇಲೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಹೋದ ವರ್ಷ ನಾನೇ ಹೋರಾಟ ಮಾಡಿ 15 ಕಾಲೇಜುಗಳನ್ನು ಕೊಡಿಸಿದ್ದೆನು. ಆವತ್ತಿನ ದಿವಸ ಆರ್ಥಿಕ ಇಲಾಖೆಯವರು ಬೇಡವೆಂದು ಹೇಳಿದರು. ಮತ್ತೆ ಇವತ್ತು ಎರಡನೇ ಸಾರಿ 104 ಕಾಲೇಜು ಕೊಡಬೇಕು ಎಂದು ಸಭೆಯಾಯಿತು. ಈ ಬಜೆಟ್ ಮಂಡನೆಯಾದ ಮೇಲೆ ಶಿವಮೊಗ್ಗದ ನಾನು ಮಂತ್ರಿಯಾಗಿ react ಮಾಡಲಿಲ್ಲ. ನಮ್ಮ ಪತ್ರಿಕಾ ಸ್ನೇಹಿತರು ಬಜೆಟ್ ಬಗ್ಗೆ ಏನು ಹೇಳುತ್ತೀರಿ ಎಂದು ಕೇಳಿದರು. ನಾನು ಸಾಮಾನ್ಯ ಸಾರ್ವಜನಿಕನ ಸ್ಥಾನದಲ್ಲಿ ನಿಂತು ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ ಶಿಕ್ಷಣ ಇಲಾಖೆಗೆ ಒತ್ತು ಕೊಡಬೇಕು. ಹಳ್ಳಿಯ ರೈತರ ಮಕ್ಕಳು ಹಾಗೂ ನಗರ ಪ್ರದೇಶದಲ್ಲಿ ಇರುವಂತಹ ಬಡವರ ಮಕ್ಕಳ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಇವತ್ತು ಶಿಕ್ಷಣ ಇಲಾಖೆ ಮತ್ತು ಕೃಷಿ ಇಲಾಖೆಗೆ ಆದ್ಯತೆ ಸಿಕ್ಕಲ್ಲವೆಂದು ನಾನು ಹೇಳಿದ್ದು ನಿಜ. ಇದಾದಮೇಲೆ ಎರಡು ಬಾರಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉಪ ಮುಖ್ಯಮಂತ್ರಿಗಳ ಜೊತೆ ನಾನು meeting ಮಾಡಿಸಿದೆ. ಆವತ್ತು ಕೂಡ ಹಣಕಾಸಿನ ಕಾರ್ಯದರ್ಶಿಗಳು ಕೊಡುವುದಕ್ಕಾಗುವು ದಿಲ್ಲವೆಂದು ಹೇಳಿದರು. ಅಲ್ಲಿ Additional Chief Secretary, Chief Secretary ಯವರು ಎಲ್ಲಾ ಇದ್ದರು. ಬೇಕಾದರೆ ನನ್ನ ಇಲಾಖೆಗೆ ಸಂಬಂಧಪಟ್ಟಂತೆ 50 ಕೋಟಿ ರೂಪಾಯಿಯನ್ನು cut ಮಾಡಿ. ಒಂದು ಹೊತ್ತು ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೂ ಪರವಾಗಿಲ್ಲ, ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕು ಎಂದು ತೀರ್ಮಾನ ಮಾಡಿದೆವು. ಅದಾದ ತಕ್ಷಣ ನಮ್ಮ ACS, ಫಲ್ಗುಣಿ ರಾಜ್‌ಕುಮಾರ್‌ರವರು ಇರಬಹುದು, ನನಗೆ ಸರಿಯಾಗಿ ಯಾರೂ ಅಂತ ಗೊತ್ತಿಲ್ಲ, ನಮ್ಮ ಇಲಾಖೆಯಿಂದ 50 ಕೋಟಿ ರೂಪಾಯಿ ಖರ್ಚು ಮಾಡಿ ಈ ವರ್ಷ 104 ಕಾಲೇಜುಗಳನ್ನು ಕೊಡುವುದಕ್ಕೆ ಅನುಮತಿಯನ್ನು ಕೊಡುತ್ತೇವೆಂದು ಹೇಳಿದರು. ಇಲ್ಲವೆಂದರೆ ಬೇಕಾದರೆ ಕಡತ ತೆಗೆಸಿ, ನೋಡಿ. ನಾನು ಹೇಳಿದೆ, 224 ಕ್ಷೇತ್ರದಲ್ಲಿ ಕಾಲೇಜು ಇರಬೇಕು. 224 ಕ್ಷೇತ್ರದಲ್ಲಿ ಕಾಲೇಜು ಇದೆಯೋ ಇಲ್ಲವೋ

ಎನ್ನುವುದಕ್ಕೆ order copy ತೆಗೆದುನೋಡಿ. ಏಕೆಂದರೆ ಈ ಸದನದಲ್ಲಿ ರೇವಣ್ಣ ಎಲ್ಲಾ ಇಲಾಖೆಯಲ್ಲಿ ಕೈ ಆಡಿಸುತ್ತಾನೆ ಎಂದು ಹೇಳುತ್ತಾರೆ. ನಾನು ಎಲ್ಲಾ ಇಲಾಖೆಯಲ್ಲಿ ಕೈ ಆಡಿಸುವುದಕ್ಕೆ ಹೋಗಿಲ್ಲ ಸ್ವಾಮಿ. ಇಲ್ಲಿ ಬೇಕಾದರೆ ಮಾನ್ಯ ಸಿಂಧ್ಯಾರವರು ಕೈಗಾರಿಕಾ ಮಂತ್ರಿಗಳಾಗಿದ್ದರು. ಮಾನ್ಯ ಸಿದ್ದರಾಮಯ್ಯನವರು ಈಗ ಸದನದಲ್ಲಿ ಇಲ್ಲ, ಅವರು Excise Minister ಆಗಿದ್ದರು. ಈಗ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡು ಅವರು ಕೈಗಾರಿಕಾ ಮಂತ್ರಿಗಳಾಗಿದ್ದಾರೆ. ಮಾನ್ಯ ಯಡಿಯೂರಪ್ಪನವರು Excise Minister ಆಗಿದ್ದಾರೆ. ನಾನು ನಮ್ಮ ರಾಜ್ಯದಲ್ಲಿ ಒಂದು ಗುಂಟೆ ಜಮೀನು ಅಥವಾ ಅರ್ಧ ಅಡಿ ಜಾಗ ಕೊಡಿ ಎಂದು ಯಾರ ಹತ್ತಿರ ಕೂಡ ಅರ್ಜಿಯನ್ನು ಹಾಕಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಗರಾಭಿವೃದ್ಧಿ ಸಚಿವರು ಇದ್ದಾರೆ, ಅವರಿಗೂ ಕೂಡ ಒಂದು ನಿವೇಶನವನ್ನು ಕೊಡಿ ಎಂದು ಕೇಳಿಲ್ಲ. ಇಲ್ಲಿಯವರೆಗೆ ಒಂದು ಸರ್ಕಾರಿ ನಿವೇಶನವನ್ನು ಕೊಡಿ ಎಂದು ಶಾಸಕ ಜೀವನದಲ್ಲಿ ಅರ್ಜಿಯನ್ನು ಹಾಕಿಲ್ಲ, ನಾನು ತೆಗೆದುಕೊಂಡಿಲ್ಲ, ಸ್ವಾಮಿ. ನನ್ನ ಮೇಲೆ COD ಹಾಗೂ CBI ಎಲ್ಲಾ ಕೂಡ ಆಯಿತು. ನಾನು ಆವತ್ತು ಸದನದಲ್ಲಿ ಇರಲಿಲ್ಲ. COD ಏನಾಯಿತು? ಲೋಕಾಯುಕ್ತ ಏನಾಯಿತು? ಎಲ್ಲಾ ರೀತಿ ತನಿಖೆ ನಡೆಯಿತು. ಆದರೆ ನಾನು ಇವತ್ತು ಈ ಸಭೆಯ ಗಮನಕ್ಕೆ ಏನು ತರುತ್ತಿದ್ದೇನೆ ಎಂದರೆ, 50 ವರ್ಷದಲ್ಲಿ ಕೊಟ್ಟಂತಹ ಕಾಲೇಜು 168. ಈ ಸರ್ಕಾರ ಎಂದರೆ ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಯಡಿಯೂರಪ್ಪ ನವರು ಬಂದಮೇಲೆ ಮಂಜೂರಾತಿ ಕೊಟ್ಟಂತಹ ಕಾಲೇಜು ಒಟ್ಟು 182. ಇದಕ್ಕೆ ಸಂಬಂಧಪಟ್ಟ ಕಟ್ಟಡಗಳ ಬಗ್ಗೆ ಹೇಳಬೇಕಾಗುತ್ತದೆ. ಮಹಾರಾಣಿ ಕಾಲೇಜು, ಬೆಂಗಳೂರು, ಇಲ್ಲಿಗೆ ಮಾನ್ಯ ಮುಖ್ಯಮಂತ್ರಿಯವರು ಹೋದರು. ಅಲ್ಲಿನ 3,000 ಸಾವಿರ ಹೆಣ್ಣು ಮಕ್ಕಳು, ನಮಗೆ ಕಾಲೇಜು ಬಿಲ್ಡಿಂಗ್ ಇಲ್ಲವೆಂದು ಹೇಳಿದರು. ಆಗ ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು ಇದ್ದರು. ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇದ್ದರು. ಇಲ್ಲಿ ಬಂದ admission ಅರ್ಜಿಗಳ ಮಹಾರಾಣಿ ಕಾಲೇಜು ಒಂದರಲ್ಲೆ 3,000 ಅರ್ಜಿಗಳು ಇತ್ತು. ಈ 3,000 ಅರ್ಜಿಗಳಲ್ಲಿ 708 ಸೀಟುಗಳನ್ನು ಕೊಡುತ್ತಾರೆ. ಇನ್ನು ಉಳಿದ 2,200 ಜನರು ವಾಪಸ್ಸು ಹೋಗುತ್ತಾರೆ. ಈ 182 ಕಾಲೇಜುಗಳಲ್ಲಿ ತಾರತಮ್ಯವೆಂದು ಹೇಳುತ್ತಾರೆ. ಈ ತಾರತಮ್ಯವೆಂದರೆ ಬೆಂಗಳೂರಿನಲ್ಲಿ ಜೆ.ಡಿ.(ಎಸ್) ಗೆದ್ದಿದೆಯಾ, ಇಲ್ಲ ಮಾನ್ಯ ಕುಮಾರಸ್ವಾಮಿ

ಮುಖ್ಯಮಂತ್ರಿಯವರ ಕಡೆಯವರು ಯಾರಾದರೂ ಗೆದಿದ್ದಾರ? ಇಲ್ಲಿ ಗೆದ್ದಿರುವಂಥಾದ್ದು ಎರಡು ಮೇಜರ್ ಪಕ್ಷಗಳೂ ಅವು ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳು. ಅದರಲ್ಲೂ ಕಾಂಗ್ರೆಸ್ ಮೇಜರ್ ಇದೆ. ನಾವು ರಾಜಾಜಿನಗರಕ್ಕೆ ಒಂದು ಕಾಲೇಜನ್ನು ಕೊಟ್ಟಿದ್ದೇವೆ. ಜಯನಗರಕ್ಕೆ ಒಂದು ಕಾಲೇಜನ್ನು ಕೊಟ್ಟಿದ್ದೇವೆ, ಫ್ರೇಝರ್ ಟೌನ್‌ನಲ್ಲಿ ಒಂದು ಕಾಲೇಜನ್ನು ಕೊಟ್ಟಿದ್ದೇವೆ. ನಾವು ಆರೇಳು ಕಾಲೇಜುಗಳನ್ನು ಬೆಂಗಳೂರು ನಗರಕ್ಕೆ ಕೊಟ್ಟಿದ್ದೇವೆ.

ಶ್ರೀ ಧರ್ಮಸಿಂಗ್ : ತಾವು ಶಿಕ್ಷಣ ಇಲಾಖೆಯದನ್ನು ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಹೇಳಬೇಕಾಗುತ್ತದೆ. ನೀವು ನನ್ನ ಮೇಲೆ ಆಪಾದನೆಯನ್ನು ಮಾಡಿದ್ದೀರಲ್ಲಾ? ನಾನು ಈ ಬಿಲ್ಡಿಂಗ್ ವಿಚಾರಕ್ಕೆ ಆಮೇಲೆ ಬರುತ್ತೇನೆ. ನಾನು Clarification ಕೊಡಬೇಕಲ್ಲಾ? ನಾನು ಏನು ಮಾಡಿದ್ದೇನೆಂಬುದನ್ನು ಹೇಳಬೇಕಲ್ಲಾ? ರೇವಣ್ಣ ಎಲ್ಲಾ ಇಲಾಖೆಗಳಲ್ಲೂ ಕೈ ಆಡಿಸುತ್ತಾನೆಂದು ಹೇಳುತ್ತಾರಲ್ಲಾ? ಇಲ್ಲಿ ಕೈ ಆಡಿಸುವುದು ತಪ್ಪಾ? ನಾನು ಮಾತನಾಡುವುದಕ್ಕೆ ದಯಮಾಡಿ ಅವಕಾಶ ಕೊಡಿ.

ಶ್ರೀ ಧರ್ಮಸಿಂಗ್ : ತಾವು ಚೆನ್ನಾಗಿ ಉತ್ತರವನ್ನು ಕೊಡುತ್ತಿದ್ದೀರಿ. ನಾನು ಅದರ ಬಗ್ಗೆ ಹೇಳುತ್ತಾ ಇಲ್ಲ. ನಾನು ನಿಮ್ಮನ್ನು ಏನೂ ಕೇಳುವುದಿಲ್ಲ. ಇವತ್ತು ತಾವು ರಾಜ್ಯದ ಲೋಕೋಪಯೋಗಿ ಸಚಿವರಾಗಿದ್ದೀರಿ. ನಾವೆಲ್ಲರೂ ಕೇಳುವಂಥಾದ್ದು ಏನೆಂದರೆ, ರಾಜ್ಯದಲ್ಲಿ ಒಂದೇ ಸಮನಾಗಿ ಕೆಲಸವಾಗಿಲ್ಲ. ಇದರಲ್ಲಿ ತಾರತಮ್ಯವಾಗಿದೆ, ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ಆಗಿದೆ. ನಮ್ಮ ಜಿಲ್ಲೆಗಳಿಗೆ ಆಗಿದೆ.

ಅಧ್ಯಕ್ಷರು : ಈಗ ಸಚಿವರು ಏನು ಹೇಳುತ್ತಾರೆಂಬುದನ್ನು ಕೇಳೋಣ, ನಂತರ Clarification ಕೇಳಿ.

ಶ್ರೀ ಧರ್ಮಸಿಂಗ್ : ಇವತ್ತು CRF ನ ಹಣ ಎಷ್ಟು ಬಂದಿದೆ? ಅದನ್ನು ಎಲ್ಲೆಲ್ಲಿ ಕೊಟ್ಟಿದ್ದೀರಿ? ನಬಾರ್ಡ್‌ನ ವಿಚಾರವನ್ನು ಹೇಳಿ. ಮಾನ್ಯ ರೇವಣ್ಣನವರೆ, ಎಲ್ಲಾ ಖಾತೆಗಳು ತಮ್ಮಲ್ಲೇ ಇದೆಯೆಂದು ನಮ್ಮ ಆಪಾದನೆ. ತಾವು ಅದೇ ರೀತಿ ಹೇಳುತ್ತಿದ್ದೀರಿ, ಅದನ್ನು ಏಕೆ ಹೇಳುವುದು?

ಅಧ್ಯಕ್ಷರು : ಸಚಿವರು ಉತ್ತರ ಹೇಳಿದ ಮೇಲೆ, Clarification ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಬಿಲ್ಡಿಂಗ್‌ಗೆ ಏನೇನು ಅನ್ಯಾಯವಾಗಿದೆ, ಇಲ್ಲಿ ಏನಾಗಿದೆಯೆಂಬುದನ್ನು, ಎಳೆ ಎಳೆಯಾಗಿ ಬಿಡಿಸಿ ಹೇಳುತ್ತೇನೆ. ನನಗೆ ಅಷ್ಟು ಅನುಭವವಿಲ್ಲ. ಅವರು ನಮಗೆ ಗುರುಗಳು. ಅವರು 8 ಸಾರಿ ಗೆದ್ದು ಬಂದಿರುವವರು. ನಾನು ಮತ್ತು ಮಾಧುಸ್ವಾಮಿಯವರು ಇದ್ದೆವು. ಮಾಧುಸ್ವಾಮಿಯವರು ಒಂದು ಸಾರಿ ಗೆದ್ದರು, ಎರಡನೆಯ ಸಾರಿ ಸೋತರು. ಈಗ ಮತ್ತೆ ನಾವಿಬ್ಬರೂ ಗೆದ್ದಿದ್ದೇವೆ, ಇಬ್ಬರೂ ಒಟ್ಟಿಗೆ ಇದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದ ಹಾಗೆ 8 ಸಾರಿ ಗೆದ್ದಿದ್ದು, 50 ವರ್ಷಗಳಲ್ಲಿ ಏನೂ ಮಾಡದೇ ಇರುವುದನ್ನು ಈಗ ಅವರು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅವರು 8 ಬಾರಿ ಗೆದ್ದು ಮಾಡಲಾಗದ್ದನ್ನು, ನೀವು ಎರಡು ಬಾರಿಗೆ ಮಾಡಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗ ಉದಾಹರಣೆಗೆ ಹೇಳುವುದಾದರೆ, ಮಹಾರಾಣಿ ಕಾಲೇಜಿಗೆ ನಾವು ಹೋದೆವು. ಅಲ್ಲಿ ಹೆಣ್ಣು ಮಕ್ಕಳಿಗೆ ಬಿಲ್ಡಿಂಗ್ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಾವು ಕಾಲೇಜನ್ನು ಕೊಟ್ಟಿದ್ದೀರೆಂದು ಕೇಳಿಸುತ್ತಿದೆ.

ಅಧ್ಯಕ್ಷರು : ಈಗ ಅವರು ಉತ್ತರವನ್ನು ಹೇಳಲಿ, ಆ ಮೇಲೆ ನೀವು Clarification ಅನ್ನು ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ ನನಗೆ ಮಾತನಾಡುವುದಕ್ಕೆ 10 ನಿಮಿಷ ಕಾಲಾವಕಾಶವನ್ನು ಕೊಡಿ. ಮಹಾರಾಣಿ ಕಾಲೇಜ್ ಬಿಲ್ಡಿಂಗ್ ಅನ್ನು 1930 ರಲ್ಲಿ ಮೈಸೂರು ಮಹಾರಾಜರ ಶ್ರೀಮತಿಯವರು ಕಟ್ಟಿಸಿದರು. ಇವತ್ತಿನವರೆಗೆ ಇಲ್ಲಿ ಹೊಸ ಬಿಲ್ಡಿಂಗ್ ಅನ್ನು ಕಟ್ಟಿಲ್ಲ. 2006–07ರಲ್ಲಿ ಇದಕ್ಕೆ 11 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇಲ್ಲೇ ಮಾನ್ಯ ದಿನೇಶ್ ಗುಂಡೂರಾವ್ ರವರು ಇದ್ದಾರೆ. ದಿನೇಶ್ ಗುಂಡೂರಾವ್ ಅವರ ಕ್ಷೇತ್ರ ಇದೆ. ಇಲ್ಲಿ ಮಾನ್ಯ ದಿನೇಶ್ ಗುಂಡೂರಾವ್ ನನ್ನನ್ನು ಕೇಳಲಿಲ್ಲ. ರಾಜ್ಯದಲ್ಲಿ ಒಂದೇ Home Science College ಇರುವಂಥಾದ್ದು. ಆ ಕಾಲೇಜಿಗೆ ಸುಮಾರು 8 ಕೋಟಿನ್ನೋ, 9 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಅಲ್ಲಿ ಇವತ್ತು ಕೆಲಸ ಆಗುತ್ತಿದೆ. ಈ ಬಗ್ಗೆ ಬೇಕಾದರೆ ಮಾನ್ಯ ದಿನೇಶ್ ಗುಂಡೂರಾವ್‌ರವರನ್ನು ಕೇಳಿ. ನಾನು ಮೂರು ಬಾರಿ ಸ್ಥಳಕ್ಕೆ ಹೋಗಿದ್ದೇನೆ. ನನಗೆ ಇದು ಕಾಂಗ್ರೆಸ್

ಕ್ಷೇತ್ರ, ಅಥವಾ ಜೆ.ಡಿ.ಎಸ್. ಕ್ಷೇತ್ರ, ಬಿ.ಜೆ.ಪಿ. ಕ್ಷೇತ್ರ, ಎನ್ನುವ ಲೆಕ್ಕಾಚಾರ ಇಲ್ಲ. ನಾನು ಖುದ್ದಾಗಿ ಅವರ ಕ್ಷೇತ್ರಕ್ಕೆ ಹೋಗಿದ್ದೇನೆ. ಈಗ ಆ ಕಾಲೇಜಿಗೆ ಒಂದು ರೋಡನ್ನು ಸಹ ಮಾಡುತ್ತಿದ್ದೇನೆ. ಈಗ ಬೇಕಾದರೆ ಮಾನ್ಯ ದಿನೇಶ್ ಗುಂಡೂರಾವ್‌ರವರು ಇಲ್ಲವೆಂದು ಹೇಳಲಿ.

ಶ್ರೀ ದಿನೇಶ್ ಗುಂಡೂರಾವ್ : ಮಾಡಿದ್ದೀರಿ, ಇಲ್ಲವೆಂದು ಹೇಳುತ್ತಾ ಇಲ. ನೀವು Home Science College ಗೆ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಅಭಿನಂದನೆಯನ್ನು ಸಲ್ಲಿಸುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದು ಆದಮೇಲೆ R.C. College ನಲ್ಲಿ ಎಲ್ಲಾ ಬಡವರೆ ಓದುವಂಥಾದ್ದು. ಅಲ್ಲಿಗೆ ಇವತ್ತು ಸುಮಾರು 9 ಕೋಟಿ ರೂಪಾಯಿಗಳಲ್ಲಿ ಬಿಲ್ಡಿಂಗ್ ಮಾಡುತ್ತಿದ್ದೇನೆ. ಅದರ ಪಕ್ಕದಲ್ಲಿ ಸೆಂಟ್ರಲ್ ಕಾಲೇಜ್ ಎದುರಿಗೆ ಒಂದು ಗೌವರ್ನಮೆಂಟ್ ಕಾಲೇಜ್ ಇದೆ. ಅಲ್ಲಿ ಎಲ್ಲಾ ಪರಿಶಿಷ್ಟ ಜಾತಿಯ ಮಕ್ಕಳೇ ಓದುವಂಥಾದ್ದು. ನಾವು ಅಲ್ಲಿಗೆ ಹೋದಾಗ ಅವರೆಲ್ಲಾ ಅಳುತ್ತಾರೆ. ಅಲ್ಲಿಗೆ ನಾನೇ ಖುದ್ದಾಗಿ ಹೋಗಿ, ಅದಕ್ಕೆ ಸುಮಾರು 15 ಕೋಟಿ ರೂಪಾಯಿಗಳ ಅಪ್ರೂವಲ್ ಮಾಡಿಸಿಕೊಳ್ಳಲು, ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರ ಹತ್ತಿರವೂ ಕುಸ್ತಿ, ಮಾನ್ಯ ಮುಖ್ಯಮಂತ್ರಿಯವರ ಹತ್ತಿರವೂ ಕುಸ್ತಿ ಮಾಡಿದ್ದೇನೆ. ನಾನು ಬೇರೆ ಯಾವುದಕ್ಕೂ ಕುಸ್ತಿ ಮಾಡುವುದಕ್ಕೆ ಹೋಗಿಲ್ಲ. ಇಲ್ಲಿ ಬಡವರ ಮಕ್ಕಳು ಓದುವಂಥಾದ್ದಕ್ಕೆ ನಾನು ಕುಸ್ತಿ ಮಾಡುತ್ತಿದ್ದೇನೆ. ಈ ಮಕ್ಕಳು ಓದುವುದಕ್ಕೆ ದುಡ್ಡನ್ನು ಕೊಡಿಯೆಂದು ಕೇಳುತ್ತಿದ್ದೇನೆ. ನೀವು ಬೇಡವೆಂದರೆ, ನಾನು ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳುತ್ತೇನೆ, ಬೇಕಾದರೆ ನನ್ನನ್ನು ಮಂತ್ರಿಗಿರಿಯಿಂದಲೂ ತೆಗೆದು ಹಾಕಿ. ಇದು ಬೆಂಗಳೂರು ನಗರಕ್ಕೆ ಕೊಟ್ಟಂಥಾ ಕೊಡುಗೆಯಾಗಿದೆ. ಇದು ಆದ ಮೇಲೆ, ಇವತ್ತು 2000–2001, 2002–2003, 2003–2004, ಈ ವರ್ಷಗಳಲ್ಲಿ Education Departmentಗೆ ಹಣ ಎಷ್ಟು ಇದೆ? 2000ದಲ್ಲಿ ಒಂದು ರೂಪಾಯಿಯೂ ಇಲ್ಲ. ನಾನು ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಪಟ್ಟಂತೆ ಹೇಳುತ್ತಿರುವಂಥಾದ್ದು. 2003–2004ರಲ್ಲಿ 1 ಕೋಟಿ 75 ಲಕ್ಷ ರೂಪಾಯಿಗಳು, 2004–05ರಲ್ಲಿ 2 ಕೋಟಿ 10 ಲಕ್ಷ ರೂ.ಗಳು, 2005–06ರಲ್ಲಿ ಆರು ಕೋಟಿ ರೂ.ಗಳು 2006–07ರಲ್ಲಿ 2 ಕೋಟಿ

ರೂ.ಗಳು ಕೊಟ್ಟಿದ್ದಾರೆ. ಇವತ್ತು ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಬಿ.ಎಸ್.ಯಡಿಯೂರಪ್ಪ ಬಂದ ಮೇಲೆ 46 ಕೋಟಿ ರೂಪಾಯಿಗಳನ್ನು ಕೊಡಿಸಿದ್ದೇನೆ. ಇನ್ನು ನಬಾರ್ಡ್ ಯೋಜನೆಯನ್ನು ಮಾನ್ಯ ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ಜಾರಿಗೆ ತಂದರು. 1997ರವರೆಗೆ ಗ್ರಾಮೀಣ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕಾಗಲಿ, ರಸ್ತೆಗಾಗಲಿ, ದುಡ್ಡನ್ನು ಕೊಡುವ ಯೋಜನೆ ಇರಲಿಲ್ಲ. ಅದು ಏನು ಇದ್ದರೂ ಬ್ಯಾಂಕ್‌ಗಳಿಗೆ, ಮಾರವಾಡಿಗಳಿಗೆ ಕೊಡುವಂಥಾದ್ದು ಇತ್ತು. ಅದನ್ನು ಮಾನ್ಯ ದೇವೇಗೌಡರು ತೆಗೆದು ಹಾಕಿದರು. ಆಗ ಇದರಲ್ಲಿ 50 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥಾದ್ದು. ಈ ವರ್ಷ ಗ್ರಾಮೀಣ ಪ್ರದೇಶಕ್ಕೆ ಕೊಟ್ಟಿದ್ದೇನೆ. 104 ಕಾಲೇಜಿಗೆ 1/3 ಭಾಗ ಹಾಕಿ, ಗ್ರಾಮೀಣ ಪ್ರದೇಶಗಳಲ್ಲಿ ಬರುವಂತಹ ಕಾಲೇಜಿಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ನಗರ ಪ್ರದೇಶಗಳಲ್ಲಿ ಬರುವಂತಹ 104 ಕಾಲೇಜುಗಳನ್ನು ತೆಗೆದುಕೊಳ್ಳುವುದಕ್ಕೆ ಇವತ್ತು ಕಾರ್ಯಕ್ರಮಗಳನ್ನು ರೂಪಿಸಿದ್ದೇನೆ. ಈ 104 ಕಾಲೇಜುಗಳಲ್ಲಿ ನನ್ನದು ಇದೆಯಾ? ಕಳೆದ 50 ವರ್ಷಗಳಲ್ಲಿ 68 ತಾಲ್ಲೂಕು ಕೇಂದ್ರಗಳಲ್ಲಿ ಕಾಲೇಜುಗಳು ಇರಲಿಲ್ಲ. ಇವತ್ತು 68 ತಾಲ್ಲೂಕು ಕೇಂದ್ರಗಳಲ್ಲಿ ಕಾಲೇಜುಗಳನ್ನು ಕೊಡುವುದಕ್ಕೆ ಮಾನ್ಯ ಕುಮಾರಸ್ವಾಮಿಯವರು ಮತ್ತು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಬರಬೇಕಾಯಿತು. ಅದನ್ನು ಇಲ್ಲಿಯವರೆಗೆ ಏಕೆ ಮಾಡಲಿಲ್ಲವೆಂಬುದನ್ನು ದಯಮಾಡಿ ನೀವು ಹೇಳಿ. ಇವತ್ತು ಇದಕ್ಕೆ ಬಿಲ್ಡಿಂಗ್ ಮತ್ತು ಇದರ ಜೊತೆಗೆ ಹಿಂದೆ 1999 ರಿಂದ 2000 ದಲ್ಲಿ 15 ಕಾಲೇಜುಗಳನ್ನು ಮಾಡಿದ್ದರಲ್ಲಾ, ಅದಕ್ಕೆ teachers appoint ಆಗಿರಲಿಲ್ಲ. ಅವರು ಬೇಕಾದರೆ ಕಡತವನ್ನು ತೆಗೆದು ನೋಡಲಿ. ಅಲ್ಲಿಂದ ಅದಕ್ಕೆ ಬೇಕಾದಂತಹ ಮೂಲಭೂತ ಸೌಕರ್ಯಗಳು ಆಗಿರಲಿಲ್ಲ. ಈ 15 ಕಾಲೇಜುಗಳಿಗೆ ಸುಮ್ಮನೆ ಬೇರೆ ಕಡೆಯಿಂದ deputation ಕೊಟ್ಟ ಹಾಗೆ ಮಾಡಿದ್ದರು. ಮದ್ದೂರು ಕಾಲೇಜಿಗೆ, ಕೊಪ್ಪ ಕಾಲೇಜು, ಮದ್ದೂರು, ಮಧುಗಿರಿಗೆಲ್ಲಾ, ಇಲ್ಲಿ teachers appoint ಯಾವುದಕ್ಕೂ ಇರಲಿಲ್ಲ. ಇವತ್ತು 104 ಕಾಲೇಜುಗಳಿಗೆ ಕಟ್ಟಡವನ್ನು ಮಾಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ. ಇದಕ್ಕೆ ಬೇಕಾದಂತಹ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯೂ ಇವತ್ತು ಆರಂಭವಾಗಿದೆ. ಇದು ಎಲ್ಲಾ ನಾನು ಸರ್ಕಾರಿ ಆದೇಶವಾಗಿರುವಂಥಾದ್ದನ್ನು ಕೊಡುತ್ತಿರುವುದು.

ಇಲ್ಲಿ 68 ಕಾಲೇಜ್ ಬಿಲ್ಡಿಂಗ್ ಮಾಡುತ್ತಿರುವಂಥಾದ್ದು ಸರಿಯೋ, ತಪ್ಪೋ, ಹೇಳಿ. ಇದು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿರುವಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ತಾಂತ್ರಿಕ ಶಿಕ್ಷಣವೆಂದರೆ ಇದು ಹೇಗೆ ಇತ್ತೆಂದರೆ, ನಾನು ಬಿಲ್ಡಿಂಗ್‌ಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತೇನೆ. 1938ರಲ್ಲಿ ಶ್ರೀ ಕೃಷ್ಣ ರಾಜೇಂದ್ರ ಒಡೆಯರ್ ಇದ್ದರು. ಅವರ ಕಾಲದಲ್ಲಿ ಬೆಂಗಳೂರಿನಲ್ಲಿ ಸಿಲ್ವರ್ ಜ್ಯೂಬಲಿ ತಾಂತ್ರಿಕ ಮಹಾ ವಿಶ್ವವಿದ್ಯಾನಿಲಯವೆಂದು ಒಂದು ಕಾಲೇಜ್ ಆಯಿತು. ಆ ಕಾಲೇಜಿಗೆ 70 ವರ್ಷವಾಯಿತು. ಆ 70 ವರ್ಷದ ಕಾಲೇಜಿಗೆ ಯಾರೂ ಬಡವರ ಮಕ್ಕಳು admission ಗೆ ಬರುವ ಹಾಗಿರಲಿಲ್ಲ. ಬಡವರ ಮಕ್ಕಳು Electronics ಓದುವ ಹಾಗಿಲ್ಲ, B.E.(Civil) ಓದುವ ಹಾಗಿಲ್ಲ, Computer ಓದುವ ಹಾಗಿಲ್ಲ. ಇನ್ನೂ ಬೇರೆ 14 ಕೋರ್ಸ್‌ಗಳಿವೆ. ಅವುಗಳು ಯಾವುವು ಎಂದು ನನಗೆ ಹೇಳುವುದಕ್ಕೆ

(4-30 PM)

ಬರುವುದಿಲ್ಲ. ನಾನು ಅಷ್ಟು ಓದಿಲ್ಲ ಸ್ವಾಮಿ. ಬಡವರ ಮಕ್ಕಳು ಅವುಗಳನ್ನು ಓದುವ ಹಾಗಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಇಷ್ಟು ಓದಿ ಈ ಗತಿಯಾಗಿದೆ. ಇನ್ನು ಜಾಸ್ತಿ ಓದಿದ್ದರೆ ನಮೋನಮಃ ಏನೂ ಬಾಕಿ ಇರುತ್ತಿರಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಇದು general replyನೋ ಅಥವಾ ಇಲಾಖೆಯ replyನೋ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಇಲಾಖೆಯ reply ಮಾಡುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : I raise a point of order. ಶಾಲೆ ಕೊಟ್ಟಿದ್ದು, ಕಾಲೇಜು ಕೊಟ್ಟಿದ್ದು, Medical Educationದು ಎಲ್ಲವನ್ನೂ ಅವರೇ ಹೇಳುವುದಾದರೆ, ನಾವು ಯಡಿಯೂರಪ್ಪನವರ ಉತ್ತರವನ್ನು ಕೇಳುವುದಕ್ಕೆ ತಯಾರಾಗಿಲ್ಲ. Here it has to end. ಅವರ general reply ಅನ್ನೇ ನಾವು ಸ್ವೀಕರಿಸಿ ಬಿಡುತ್ತೇವೆ. ನಮಗೇನೂ ಆಗಬೇಕಾಗಿಲ್ಲ. ಎಷ್ಟು ಶಾಲೆ ಕೊಟ್ಟೆವು, ಎಷ್ಟು ಕಾಲೇಜು ಕೊಟ್ಟೆವು ಎನ್ನುವುದನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು building ವಿಚಾರಕ್ಕೇ ಬರುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ : ಎಲ್ಲ ವಿಚಾರಗಳಲ್ಲಿ ತಮ್ಮ ಇಲಾಖೆಯು ಕೊಟ್ಟಿರುವ building ಗಳಿಗೆ ಸಂಬಂಧಪಟ್ಟ ಹಾಗೆ ಅವರು ಹೇಳುತ್ತಿದ್ದಾರೆ. general reply ಅಲ್ಲ. He is replying.

ಶ್ರೀ ಜೆ.ಸಿ.ಮಾಧುಸ್ವಾಮಿ : ಇಷ್ಟು ಕಾಲೇಜುಗಳನ್ನು ಕಟ್ಟಿಸಿದ್ದೇವೆ ಎಂದು ಅವರು ಹೇಳಲಿ. ಅದನ್ನು ಹೇಳಬೇಕಾದರೂ Education Department ನವರು ಅವರಿಗೆ ಬರೆಯಬೇಕು.

ಶ್ರೀ ಹೆಚ್.ಡಿ.ರೇವಣ್ಣ : ನಾನು ಸದಸ್ಯರಲ್ಲಿ ಮನವಿ ಮಾಡುವುದು ಇಷ್ಟೆ. ಇದು ರೇವಣ್ಣ ಒಬ್ಬನ ಪ್ರಶ್ನೆ ಅಲ್ಲ. ಇಡೀ ರಾಜ್ಯದ 5 ಕೋಟಿ ಜನರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ, ಶಾಲಾಕಾಲೇಜುಗಳ ಕಟ್ಟಡಗಳ ಬಗ್ಗೆ ನಾನು ಹೇಳುತ್ತೇನೆ. ದಯಮಾಡಿ ಎಲ್ಲಾ ಸದಸ್ಯರು ತಾಳ್ಮೆಯಿಂದ ಇದ್ದರೆ ನಾನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಟ್ಟಡ ಇಲ್ಲ. ಇರುವುದು ಮೈಸೂರು ಮಹಾರಾಜರು ಕಟ್ಟಿದ ಒಂದೇ ಕಟ್ಟಡ. ಆ ಕಾಲೇಜಿಗೆ ಯಾರಾದರೂ ಮಂತ್ರಿಗಳು ಬಂದಿದ್ದರೇ ಎಂದು ಕೇಳಿದೆ. ಒಂದು ಸಲ ದೇವೇಗೌಡರು ಒಂದು programme ಗೆ ಬಂದಿದ್ದರಂತೆ. ಅದಾದ ಮೇಲೆ ಒಂದು ಸಲ ಮೊನ್ನೆ ನಾವು ಹೋಗಿದ್ದೆವು. ಒಂದು Building division office ಇತ್ತು. ಅದನ್ನೂ shift ಮಾಡುತ್ತಿದ್ದೇವೆ. ಇಲ್ಲಿ ಆ ಕಾಲೇಜಿಗಾಗಿ 43 ಕೋಟಿ ರೂಪಾಯಿಗಳ ಒಂದು building ಕಟ್ಟುತ್ತಿದ್ದೇವೆ. ಇದರ ಜೊತೆಗೆ, ಈ ವರ್ಷ 14 ಹೊಸ ಕೋರ್ಸ್‌ಗಳನ್ನು ಮಾಡುತ್ತಿದ್ದೇವೆ. ಇದಕ್ಕಾಗಿ A.I.C.T.E. ಮುಂದೆ ಅರ್ಜಿ ಕೊಟ್ಟ ತಕ್ಷಣ ಅವರು ಅಲ್ಲೇ, ಕೈಯಲ್ಲೇ order ಕೊಟ್ಟರು. ಸರ್ಕಾರಿ ಕಾಲೇಜಿಗೆ 43 ಕೋಟಿ ರೂಪಾಯಿಗಳನ್ನಿಟ್ಟಿದ್ದೀರಿ. ಈ ರೀತಿ ಮಾಡಿರುವುದು India ದೇಶದಲ್ಲೇ first ಎಂದು ಹೇಳಿ, ತೆಗೆದುಕೊಳ್ಳಿ ಎಂದು ಅಲ್ಲೇ ಕೈಯ್ಯಲ್ಲಿಯೇ order ಕೊಟ್ಟರು. ಈ ವರ್ಷ 14 ಕೋರ್ಸ್‌ಗಳಿಗೆ admission start ಆಗುತ್ತದೆ. ಇಲ್ಲಿಯವರೆಗೆ ತಾಂತ್ರಿಕ ಶಿಕ್ಷಣ ಇಲಾಖೆಗೆ 170 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಯಾವ ಯಾವ ಖಾಸಗಿ ಕಾಲೇಜಿನವರಿಗೆ ಎಷ್ಟೆಷ್ಟು ದುಡ್ಡು ಕೊಟ್ಟಿದ್ದಾರೆ ಎಂದು ದಯಮಾಡಿ ಹೇಳಲಿ. 170 ಕೋಟಿ ರೂಪಾಯಿಗಳು ಹೇಗೆ ವಿನಿಯೋಗವಾಯಿತು ಎನ್ನುವುದನ್ನು ದಯಮಾಡಿ ಈ ಸಭೆಯ ಗಮನಕ್ಕೆ ತರಬೇಕು. ಇದೇ ಹಣವನ್ನು ಕೃಷ್ಣ ರಾಜೇಂದ್ರ ಕಾಲೇಜಿಗೆ 10 ವರ್ಷಗಳ

ಹಿಂದೆ ಕೊಟ್ಟಿದ್ದರೆ, ಅಲ್ಲಿ ಬಡವರ ಮಕ್ಕಳು ಓದುತ್ತಿರಲಿಲ್ಲವೇ? ಒಂದು ಕೋರ್ಸಿಗೆ 50 ಮಕ್ಕಳು ಎಂದರೂ, ನೂರಿನ್ನೂರು ಬಡವರು ಮಕ್ಕಳು ಅಲ್ಲಿ ಓದಿಕೊಂಡು ಬರುತ್ತಿರಲಿಲ್ಲವೇ? 170 ಕೋಟಿ ರೂಪಾಯಿಗಳನ್ನು ಯಾರಿಗೆ ಕೊಟ್ಟರು? ನಮ್ಮ ಸರ್ಕಾರಿ ಅಧಿಕಾರಿಗಳ ಪರಿಸ್ಥಿತಿ ಏನಿದೆ ಎಂದರೆ, ಯಾರು ಖಾಸಗಿ ಕಾಲೇಜಿನವರು ಬರುತ್ತಾರೋ ಅವರಿಗೆ 2 ಕೋಟಿ ರೂಪಾಯಿಗಳ ಗ್ರ್ಯಾಂಟ್ ಕೊಡುತ್ತಿದ್ದರು. ಹೀಗೆ, 170 ಕೋಟಿ ರೂಪಾಯಿ ಯಾರ್ಯಾರಿಗೆ ಹೋಯಿತು ಎಂದು ದಯಮಾಡಿ ಹೇಳಲಿ. ಇವತ್ತು ನಾವು 80 ಕಾಲೇಜುಗಳಿಗೆ ಕಟ್ಟಡ ಕಟ್ಟುತ್ತಿದ್ದೇವೆ. ಕೊಡಗು ಜಿಲ್ಲೆಯ ಕುಶಾಲನಗರ, most backward area ಆದ ಚಾಮರಾಜನಗರ, ಮಾನ್ಯ ಸಭಾಧ್ಯಕ್ಷರ ಕ್ಷೇತ್ರವಾದ ಕೆ.ಆರ್.ಪೇಟೆಗೂ ಒಂದು ಕೊಟ್ಟಿದ್ದೇವೆ. ಇಲ್ಲಿ ಸಭಾಧ್ಯಕ್ಷರು ಎಲ್ಲರಿಗೂ ನ್ಯಾಯ ಕೊಡುತ್ತಾರೆ. ಆದರೆ ಅವರನ್ನೇ ಕೈಬಿಟ್ಟರು ಎಂದು ಹೇಳುವುದು ಬೇಡವೆಂದು ಅವರ ಕ್ಷೇತ್ರಕ್ಕೂ ಒಂದು ಹಾಕಿದ್ದೇವೆ. ಏಕೆಂದರೆ, ಅವರು ಎರಡೂ ಪಕ್ಷದವರನ್ನು ನೋಡಿಕೊಳ್ಳಬೇಕಲ್ಲವೇ. ಜೇವರ್ಗಿಯಲ್ಲಿ ಬೇಡ, ಇಂಜಿನಿಯರಿಂಗ್ ಓದುವವರು ಈಗ ಅಲ್ಲಿ ಯಾರೂ ಇಲ್ಲ ಎಂದಿದ್ದರಿಂದ ಅಲ್ಲಿಗೆ ಕೊಟ್ಟಿಲ್ಲ.

ಶ್ರೀ ಧರ್ಮಸಿಂಗ್ : ಜೇವರ್ಗಿಗೆ ಒಂದು ನಯಾಪೈಸೆಯನ್ನೂ ಕೊಟ್ಟಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಅಲ್ಲಿಗೆ ನಾವೇನಾದರೂ ಹೆಚ್ಚಿಗೆ ಕೊಟ್ಟರೆ, ಧರ್ಮಸಿಂಗ್‌ರವರನ್ನು ಜನರು ದೂರುತ್ತಾರೆ ಎಂದು ಅಲ್ಲಿ ಕೊಟ್ಟಿಲ್ಲ. ಅದೇ ರೀತಿ, ಹೂವಿನ ಹಡಗಲಿ, ಹಾವೇರಿ, ರಾಯಚೂರಿಗೆ ಕೊಟ್ಟಿದ್ದೇವೆ. ಆಮೇಲೆ ನನ್ನದೂ ಒಂದು ಸ್ವಾರ್ಥವಿದೆ, ಹಾಸನಕ್ಕೂ ಒಂದು ತೆಗೆದುಕೊಂಡಿದ್ದೇನೆ. ಅದರಲ್ಲಿ ತಪ್ಪೇನು? ಇಷ್ಟೆಲ್ಲ ಕೆಲಸ ಮಾಡುವಾಗ, ಸರ್ಕಾರದಲ್ಲಿ ಹೋರಾಟ ಮಾಡಿ 250 ಕೋಟಿ ದುಡ್ಡು ತರುವಾಗ ಹಾಸನದ ಕಾಲೇಜಿಗೆ 30 ಕೋಟಿ ರೂಪಾಯಿಗಳನ್ನು ಕೊಟ್ಟರೆ ತಪ್ಪೇನು? ಅದೂ ಸಹ 1/3 ಹಾಕಿ ಈ ವರ್ಷ 10 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ, ಯಾವುದಾದರೂ ರೀತಿಯಲ್ಲಿ ಮಕ್ಕಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಲ್ಲಿ ಇಷ್ಟೆಲ್ಲ ಮಾಡುತ್ತಿದ್ದೇವೆ. ಇನ್ನು ಪಾಲಿಟೆಕ್ನಿಕ್ ಕಾಲೇಜುಗಳ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ 38 ಪಾಲಿಟೆಕ್ನಿಕ್ ಕಾಲೇಜುಗಳಿದ್ದವು. Building ಗಳ ಪರಿಸ್ಥಿತಿ ಏನಿತ್ತು? ಈ ವರ್ಷ 22 ಹೊಸ ಪಾಲಿಟೆಕ್ನಿಕ್ ಕಾಲೇಜುಗಳನ್ನು

ಮಾಡುತ್ತಿದ್ದೇವೆ. ಸುಮಾರು 14–15 ಹೊಸ ಕೋರ್ಸ್‌ಗಳನ್ನು ಕೊಡುತ್ತಿದ್ದೇವೆ. ಮೊದಲು, M.B.A. ಸೀಟು ಬೆಂಗಳೂರಿನಲ್ಲಿ ಒಂದೆರಡು ಕಡೆಗಳಲ್ಲಿ ಬಿಟ್ಟರೆ ಬೇರೆ ಎಲ್ಲೂ ಇರಲಿಲ್ಲ. ಇವತ್ತು 82 ಸೆಂಟರ್‌ಗಳಲ್ಲಿ M.B.A. ಸೀಟು ಮತ್ತು 82 ಸೆಂಟರ್‌ಗಳಲ್ಲಿ M.S. ಸೀಟುಗಳು ಮತ್ತು ಇವುಗಳಿಗೆಲ್ಲ Buildingಗಳನ್ನು ಮಾಡುತ್ತಿದ್ದೇವೆ. ಇದು ಕಾಲೇಜುಗಳಿಗೆ Buildingಗಳನ್ನು ಕೊಟ್ಟಿರತಕ್ಕಂಥ ಒಂದು ಭಾಗ. ಇನ್ನು Higher Education, ಜೂನಿಯರ್ ಕಾಲೇಜುಗಳಿಗೆ ಹಿಂದೆ Buildingಗೆ ಎಷ್ಟು ಹಣವನ್ನು ಕೊಟ್ಟಿದ್ದರು? ಹಿಂದೆ ಒಂದು ಸಮಿತಿಗೆ ಖರ್ಗೆಯವರು ಅಧ್ಯಕ್ಷರಾಗಿದ್ದರು ಎಂದು ಕಾಣುತ್ತದೆ. ನಾನು ಖರ್ಗೆಯವರು ಇಬ್ಬರೂ ಸೇರಿ ಸುಮಾರು 22 ಕೋಟಿ ರೂಪಾಯಿಗಳನ್ನು ನಬಾರ್ಡ್‌ನಲ್ಲಿ ಕೊಟ್ಟಿರಬಹುದು ಎಂದು ಕಾಣುತ್ತದೆ. ಅದಾದ ಮೇಲೆ, ಈಗ ಮೊದಲ ಬಾರಿಗೆ ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳ Buildingಗೆ 500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಬಾರ್ಡ್ ಸಮಿತಿಯ ಸದಸ್ಯರ ಮನವೊಲಿಸಿ, 500 ರೂಪಾಯಿಗಳನ್ನು Buildingಗೆ ಕೊಟ್ಟಿರುವುದು ತಪ್ಪೇ? ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಬಾಕಿಯದಕ್ಕೆಲ್ಲ ಕೊಟ್ಟಿರುವುದನ್ನು ಹೇಳುವುದಕ್ಕೆ ಹೋದರೆ ಸರಿಯಾಗು ವುದಿಲ್ಲ. ಆದ್ದರಿಂದ ಇದನ್ನು ಇಲ್ಲಿಗೇ ನಿಲ್ಲಿಸುತ್ತೇನೆ.

ಇನ್ನು ನ್ಯಾಯಾಲಯಗಳ ಕಟ್ಟಡಗಳ ಬಗ್ಗೆ ಹೇಳುವುದಾದರೆ, ಹಿಂದೆ ನ್ಯಾಯಾಲಯಗಳ ಪರಿಸ್ಥಿತಿ ಏನಿತ್ತು? ಐದು ವರ್ಷಗಳ ಮಾಹಿತಿಯನ್ನೇ ತೆಗೆದುಕೊಳ್ಳುತ್ತೇನೆ. ಕಳೆದ ಐದು ವರ್ಷಗಳಲ್ಲಿ ಕೊಟ್ಟಿದ್ದು 87 ಕೋಟಿ ರೂಪಾಯಿಗಳು. ಧರ್ಮಸಿಂಗ್‌ರವರನ್ನು ನಾನು ದೂರುವುದಿಲ್ಲ. ಆಗ ಅವರನ್ನು ಕೆಲಸ ಮಾಡಲು ಬಿಡುತ್ತಿರಲಿಲ್ಲ. ಅವರು ಮುಖ್ಯಮಂತ್ರಿಗಳಾ ಗಿದ್ದಂಥ ಸಂದರ್ಭದಲ್ಲಿ ಯಾವುದೇ ಸಾರ್ವಜನಿಕ ಕೆಲಸಕ್ಕೂ ಅವರು ಇಲ್ಲ ಎಂದು ಹೇಳಿಲ್ಲ. ಏನು ಬೇಕೋ ಕೊಡಿ. ಕೆಲಸ ಮಾಡಿ ಎಂದಿದ್ದಾರೆ. ಇವತ್ತು ಅವರು ಆ ಕಡೆ ಇರಲಿ. ಎಲ್ಲೇ ಇದ್ದರೂ ಅವರು ನಮ್ಮ ನಾಯಕರು.

ಶ್ರೀ ಜೆ.ಸಿ.ಮಾಧುಸ್ವಾಮಿ : ಎಲ್ಲರೂ ಅವರನ್ನು ಹೊಗಳುತ್ತೀರಿ. ಆದರೆ, ಅವರನ್ನು ಏಕೆ ತೆಗೆದಿರಿ ಎನ್ನುವುದನ್ನು ಯಾರೂ ಹೇಳುವುದಿಲ್ಲವಲ್ಲ. ಧರ್ಮಸಿಂಗ್ ಒಳ್ಳೆಯವರು ಎಂದು ಬಾಯಿ ತುಂಬ ಹೊಗಳುತ್ತೀರಿ, ಆದರೆ ತೆಗೆದಿದ್ದು ಏಕೆಂದು ಹೇಳಿ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರನ್ನು ಹೊಗಳುವುದು ಏಕೆಂದರೆ, ಅವರು ಮಾತನಾಡಬಾರದು. ಏನೂ ಕೇಳಬಾರದು ಎಂದು ಅವರು ಒಳ್ಳೆಯವರು ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್ : ಧರ್ಮಸಿಂಗ್‌ರವರು ಅಧಿಕಾರ ಕಳೆದುಕೊಳ್ಳಲು ಕಾಂಗ್ರೆಸ್ಸಿನವರು ಕಾರಣ. ಮುಕ್ಕಾಲು ಪಾಲು ಕಾಂಗ್ರೆಸ್ಸಿನವರೇ ಕಾರಣ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಇಷ್ಟೆಲ್ಲ ಕೊಟ್ಟಿರುವ ನಿಮಗೆ, ತುಮಕೂರಿನಲ್ಲಿ ಒಂದು ಯೂನಿವರ್ಸಿಟಿ ಇರುವುದು ನಿಮ್ಮ ಕಣ್ಣಿಗೆ ಏಕೆ ಬೀಳಲಿಲ್ಲ?

ಶ್ರೀ ಹೆಚ್.ಡಿ.ರೇವಣ್ಣ : ಅದನ್ನೂ ಮಾಡೋಣ ಬಿಡಿ. ನೀವು ಸರಿಯಾಗಿ ಹೇಳಿಲ್ಲವೆಂದು ಕಾಣುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾನು ಏಕೆ ಹೇಳಬೇಕು? ನಿಮ್ಮ ಪಕ್ಷದಿಂದ 9 ಜನ ಗೆದ್ದು ಬಂದಿದ್ದಾರಲ್ಲ. 9 ಜನ ಎಂ.ಎಲ್.ಎ. ಗಳನ್ನಿಟ್ಟುಕೊಂಡು ಒಂದು ರೂಪಾಯಿಯನ್ನೂ ತುಮಕೂರು ಯೂನಿವರ್ಸಿಟಿಗೆ ಕೊಡಲಿಲ್ಲ.

ಶ್ರೀ ಬಿ. ಶಿವರಾಂ : 1983ರಿಂದ 1985ರವರೆಗೆ, 1985ರಿಂದ 1989ರವರೆಗೆ ದೇವೇಗೌಡರು ಇದ್ದರು. ನಂತರ 1994ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದರು. ಕಾಲೇಜು ಇರಲಿಲ್ಲ ಎನ್ನುವುದ್ಯಾವುದೂ ಆಗ ದೇವೇಗೌಡರಿಗೆ ಗೊತ್ತಾಗಿರಲಿಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ : ದೇವೇಗೌಡರೂ ತಪ್ಪು ಮಾಡಿದ್ದಾರೆ ಎಂದು ಹೇಳೋಣ. ದಯಮಾಡಿ ಒಂದೆರಡು ನಿಮಿಷ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಿ.ಶಿವರಾಂ : ಹಿಂದಿನವರೆಲ್ಲಾ ತಪ್ಪು ಮಾಡಿದ್ದಾರೆ, ಈಗ ನೀವೇ ಎಲ್ಲವನ್ನೂ ಸರಿ ಮಾಡಿದ್ದು. ಮಾಡಿಲ್ಲ, ಮಾಡಿಲ್ಲ ಎಂದು ಬೇರೆಯವರಿಗೆ ಹೇಳುತ್ತಿದ್ದೀರಲ್ಲ?

ಶ್ರೀ ಹೆಚ್.ಡಿ.ರೇವಣ್ಣ : ಧರ್ಮಸಿಂಗ್ ಸಾಹೇಬರನ್ನು ತೆಗೆದವರು ಯಾರು ಎಂದು ನಾನು ಹೇಳುವುದು ಬೇಡ. ಬೇಕಾದರೆ ಧರ್ಮಸಿಂಗ್

ಸಾಹೇಬರನ್ನೇ ಕೇಳಿ. ಯಾರು ತೆಗೆದರು ಎಂದು ಅವರು ಪ್ರಾಮಾಣಿಕವಾಗಿ ಹೇಳಲಿ. ಅವರು ಹೇಳಿಬಿಟ್ಟರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಅದು ಬೇಕಾಗಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾವೇನಾದರೂ ಮಾಡಿದ್ದೇವೆ ಎಂದು ಅವರು ಹೇಳಿದರೆ, ನಾನು ಇವತ್ತೇ ಈ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ.

ಶ್ರೀ ಬಿ.ಶಿವರಾಂ : Assembly ಯ date, time ಅನ್ನು cabinet ನಲ್ಲಿ fix ಮಾಡಿದವರು ನೀವೇ.

ಶ್ರೀ ಧರ್ಮಸಿಂಗ್ : ನನ್ನ ಕಾಲದಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಅವರು ಶ್ರಮ ವಹಿಸಿದ್ದಾರೆ. ನಾವು, ಅನಂತಕುಮಾರ್‌ರವರು ಅಲ್ಲಿಗೆ ಹೋಗಿ ಶಂಕು ಸ್ಥಾಪನೆ ಮಾಡಿದ್ದೇವೆ.

(ಗೊಂದಲ)

ಶ್ರೀ ಧರ್ಮಸಿಂಗ್ : ಬೌರಿಂಗ್ ಮ್ಯಾಪ್ ತೆಗೆದುಕೊಂಡು ಮುಂಜಾನೆ 6 ಗಂಟೆಗೆ ಬರುತ್ತಿದ್ದಿರಲ್ಲ? ಮೆಡಿಕಲ್ ಕಾಲೇಜ್ ಸ್ಥಾಪನೆ ಮಾಡತಕ್ಕಂಥದ್ದು, ಕಡೆಗೆ Private Medical College ಶಿಕ್ಷಣ ಸಂಸ್ಥೆಗಳಿಗೆ ಇದೂ ಒಂದು curb ಮಾಡಬೇಕೆಂದು 7 medical college ಬಗ್ಗೆ dicision ತೆಗೆದುಕೊಂಡಿದ್ದೇವೆ. ನಾವು, ದೇವೇಗೌಡರು ಸೇರಿ ಹೋಗಿ ಹಾಸನದಲ್ಲಿ ಶಂಕುಸ್ಥಾಪನೆ ಮಾಡಿದೆವು. ಹಣ ಕೊಟ್ಟರು. ಬೀದರ್‌ನಲ್ಲಾಯಿತು. ರಾಯಚೂರಿನಲ್ಲಾಗುತ್ತಿದೆ. 2004ರಲ್ಲಿ ನೀವು ಬಹಳ ಜಾಣರು, ಬಿಜೆಪಿಯವರನ್ನು ದೂರವಿಡಬೇಕೆಂದು ನಮ್ಮ ಜೊತೆಯಲ್ಲಿ ಬಂದು ಆಗ ಅಧಿಕಾರದಲ್ಲಿದ್ದಿರಿ, ನಂತರ ನಮ್ಮನ್ನು ಹೊರಗೆ ಹಾಕಿದಿರಿ, ಇವತ್ತು ಅಧಿಕಾರದಲ್ಲಿದ್ದೀರಿ. ಆ ತರಹ ನಡೆಯುತ್ತಿದೆ.

ಶ್ರೀ ಹೆಚ್.ಡಿ.ರೇವಣ್ಣ : ಅದೆಲ್ಲವನ್ನೂ ಆಮೇಲೆ ಮಾತನಾಡೋಣ. ಅದೆಲ್ಲ ಈ ಸದನದಲ್ಲಿ ಬೇಡ. ಅವರೇನು ಹೇಳಿದರೂ ನಮಗದು ಆಶೀರ್ವಾದ ಇದ್ದ ಹಾಗೆ.

ಶ್ರೀ ಆರ್.ವಿ.ದೇಶಪಾಂಡೆ : ನೀವು 50 ವರ್ಷಗಳ ಪೀರಿಯಡ್ ಏನಿದೆ ಅದನ್ನು ಕಂಪೇರ್ ಮಾಡಬೇಡಿ. ಏಕೆಂದರೆ, 50 ವರ್ಷಗಳಲ್ಲಿ ಯಾರ್‍ಯಾರು ಮುಖ್ಯಮಂತ್ರಿಗಳಾಗಿದ್ದರೋ ಆಯಾ ಕಾಲದಲ್ಲಿ ಸಂಪನ್ಮೂಲ ಗಳು ಹೇಗಿದ್ದವು, ಆ ಪ್ರಕಾರ ಕೆಲಸವಾಗುತ್ತಾ ಬಂತು. ನಿಮಗೆ ಎಲ್ಲದಕ್ಕಿಂತ

ದೊಡ್ಡ advantage ಸಿಕ್ಕಿತೆಂದರೆ, ಕಳೆದ 8–10 ವರ್ಷಗಲ್ಲಿ NABARD ಸಂಸ್ಥೆ ಬಂತು. ಒಂದು ಕಾಲದಲ್ಲಿ NABARD ಸಂಸ್ಥೆ ಕೃಷಿ ಸಾಲವಷ್ಟೇ ಕೊಡುತ್ತಿತ್ತು. ಅದರ ನಂತರ NABARD ಸಂಸ್ಥೆ ಕೇಂದ್ರ ಸರ್ಕಾರದ್ದು, ರಾಜ್ಯ ಸರ್ಕಾರದ್ದಲ್ಲ. ನಿಮ್ಮ ಯಜಮಾನರು Chief Minister ಇದ್ದರು. ಹೆಗಡೆಯವರು, ಜೆ.ಹೆಚ್.ಪಟೇಲರು ಇದ್ದರು. NABARD ಸಂಸ್ಥೆ ಏನಿದೆಯಲ್ಲ, ಅದು ಒಂದು ಕಾಲದಲ್ಲಿ ಕೃಷಿ ಸಾಲವನ್ನಷ್ಟೇ ಕೊಡುತ್ತಿತ್ತು. ಕಳೆದ 8–10 ವರ್ಷಗಳಲ್ಲಿ NABARD ಸಂಸ್ಥೆ High School, College, ರಸ್ತೆಗಳಿಗೆ, ಸೇತುವೆಗಳಿಗೆ ಹಣ ಕೊಡಲಿಕ್ಕೆ ಪ್ರಾರಂಭಿಸಿತು. ಮುಂಚೆ ರಸ್ತೆ ಅಷ್ಟೇ ಇತ್ತು. ಈಗ High School ಗೂ ಕೊಡುತ್ತಾರೆ. ಅಂಗನವಾಡಿಗೆ ಎಲ್ಲ ಕೊಡುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್ : Amend ಮಾಡಿದ್ದಾರೆ. ದೇವೇಗೌಡರವರು ಪ್ರಧಾನ ಮಂತ್ರಿಗಳಾಗಿದ್ದಾಗ NABARD ಸಂಸ್ಥೆಯ ರೂಲ್‌ಗಳನ್ನು amend ಮಾಡಿ APMC ಯ ರಸ್ತೆಗಳಿಗೆ ಕೊಡಬೇಕು ಎಂದು ಪ್ರಥಮ ಬಾರಿಗೆ ಪ್ರಾರಂಭ ಮಾಡಿದರು.

ಶ್ರೀ ಆರ್.ವಿ.ದೇಶಪಾಂಡೆ : ದೇವೇಗೌಡರು ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. 50 ವರ್ಷಗಳದ್ದು ಕಂಪೇರ್ ಮಾಡಲಿಕ್ಕೆ ಹೋಗಬೇಡಿ, 7–8 ವರ್ಷಗಳಲ್ಲಿ NABARD ಕ್ಷೇತ್ರ ಕೃಷಿಯಿಂದ ಗ್ರಾಮೀಣಾಭಿವೃದ್ಧಿ ಕಡೆಗೆ ಹೋಯಿತು, High School ಗಳು, ರಸ್ತೆಗಳು, ಸೇತುವೆಗಳು, degree college ಗಳ ಕಡೆಗೆ ಹೋಯಿತು. ಕೇಂದ್ರ ಸರ್ಕಾರದಿಂದ, NABARD ನಿಂದ ತಂದು ಹಣವನ್ನು ತಾವು ಕೊಡುತ್ತಿದ್ದೀರಿ. ಇದೂ ಒಂದು ಮಾತು ಹೇಳಿಬಿಡಿ.

ಶ್ರೀ ಹೆಚ್.ಡಿ.ರೇವಣ್ಣ : ಅದೊಂದು ಕಡೆ ಬಿಟ್ಟುಬಿಡಿ. NABARD ನಲ್ಲಿ ಯಾರು ಕೊಟ್ಟರೋ ದೇವೇಗೌಡರೋ ಕೊಟ್ಟರೋ? ಅದರ ಬಗ್ಗೆ ಆಮೇಲೆ ವಿಚಾರ ಮಾಡೋಣ. ಒಂದು ದಿವಸ ಬೇಕಾದರೆ ಚರ್ಚೆ ಮಾಡೋಣ. ಈಗ ಉದಾಹರಣೆಗೆ ಹೇಳುವುದಾದರೆ, ನಾನು ಬಂದ ಮೇಲೆ ನ್ಯಾಯಾಲಯಗಳಿಗೆ ಸುಮಾರು 250 ಕೋಟಿ ರೂಪಾಯಿಗಳನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. 1994ರಿಂದ 2000 ದವರೆಗೆ ನ್ಯಾಯಾಲಯಗಳಿಗೆ ಕೇವಲ 87 ಕೋಟಿ ರೂಪಾಯಿ ಇತ್ತು. ಏಕೆಂದರೆ,

ನಾವು ಒಂದು ಕಡೆ ಶಿಕ್ಷಣಕ್ಕೆ ಒತ್ತು ಕೊಟ್ಟೆವು. ಇನ್ನೊಂದು ಕಡೆ ಈ ದೇಶದ ರಾಜ್ಯಾಂಗವಿರಬಹುದು, ನಮ್ಮ ವಿಧಾನ ಮಂಡಲವಿರಬಹುದು, ಇಡೀ ರಾಷ್ಟ್ರದಲ್ಲಿ ನ್ಯಾಯಾಂಗಕ್ಕೆ ಇಷ್ಟು ಒತ್ತು ಕೊಟ್ಟಂಥ ಸರ್ಕಾರವಿದ್ದರೆ ಅದು ಈ ಸರ್ಕಾರವೆಂದು ಹೇಳಬೇಕು. ಉದಾಹರಣೆಗೆ ಹೇಳುವುದಾದರೆ, 2007–08ನೇ ಸಾಲಿನಲ್ಲಿ ಸುಮಾರು 126 ಕೋಟಿ ರೂಪಾಯಿ ಕೊಟ್ಟಿದ್ದೇವೆ, ಉದಾಹರಣೆಗೆ ಹೇಳುವುದಾದರೆ, ಧಾರವಾಡ, ಹುಬ್ಬಳ್ಳಿ ಪೀಠ, ತಾವು ಮಾಡಿದ್ದೀರಿ, ಹೇಳುತ್ತೇನೆ.

ಶ್ರೀ ಧರ್ಮಸಿಂಗ್ : ಎಸ್.ಎಂ. ಕೃಷ್ಣರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ನಾನು ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿದ್ದೆ. ದಾಖಲೆ ತರಿಸಿ ನೋಡಿ. ಪ್ರತಿ ಕ್ಷೇತ್ರಕ್ಕೆ ಅದು ಬಿಜೆಪಿ ಇರಲಿ, ಜನತಾ ದಳ ಇರಲಿ, ಯಾರೇ ಇರಲಿ, NABARD ನಿಂದ 5 ಕೋಟಿ ರೂಪಾಯಿ ಕೆಲಸ ಆಗಲೇಬೇಕೆಂಬ ತೀರ್ಮಾನವನ್ನು ನಾನು ಮಾಡಿದ್ದೇನೆ. ದಾಖಲೆಗಳಿವೆ. ನಾವು ತಾರತಮ್ಯ ಮಾಡಿಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ನನ್ನ ತಾಲ್ಲೂಕಿನಲ್ಲಿ 50 ಲಕ್ಷ ರೂ.ಆಗಿದೆ. 5 ವರ್ಷಗಳಲ್ಲಿ ಎಸ್.ಎಂ.ಕೃಷ್ಣರವರು, ನೀವು ಇದ್ದಾಗ 50 ಲಕ್ಷ ರೂ. ಕೊಟ್ಟಿದ್ದೀರಿ. 5 ಕೋಟಿ ರೂ. ಅಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಕೋರ್ಟ್ ವಿಷಯ ಇಷ್ಟು ಹೇಳಿ ಬಿಟ್ಟುಬಿಡುತ್ತೇನೆ. ಸುಮ್ಮನೆ ಜಾಸ್ತಿ argument ಮಾಡುವುದು ಬೇಡ. ನ್ಯಾಯಾಂಗಕ್ಕೆ 250 ಕೋಟಿ ರೂಪಾಯಿ ಕೊಟ್ಟಿದ್ದೇವೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕೋರ್ಟ್‌ಗೆ ಎಲ್ಲೆಲ್ಲಿ ಕೊಟ್ಟಿದ್ದೀರಿ ಹೇಳಿ?

ಶ್ರೀ ಹೆಚ್.ಡಿ.ರೇವಣ್ಣ : ಗುಲ್ಬರ್ಗಾ ಕೋರ್ಟ್‌ಗೆ 65 ಕೋಟಿ ರೂಪಾಯಿ ಕೊಟ್ಟಿದ್ದೇನೆ. ಧಾರವಾಡ ಕೋರ್ಟ್‌ಗೆ 65 ಕೋಟಿ ರೂಪಾಯಿ ಕೊಟ್ಟಿದ್ದೇನೆ.

ಶ್ರೀ ಧರ್ಮಸಿಂಗ್ : ಜಗದೀಶ್ ಶೆಟ್ಟರ್ ಹೇಳುತ್ತಿದ್ದರು. ಎಲ್ಲ ಕಡೆಗೆ ದೊಡ್ಡ delegation ಹೋಯಿತು.

ಶ್ರೀ ಹೆಚ್.ಡಿ.ರೇವಣ್ಣ : ಮಂಜೂರಾತಿ ಯಾವಾಗ ಆಯಿತೆಂದು ನೀವು ತೆಗೆಸಿ ನೋಡಿ.

ಶ್ರೀ ಧರ್ಮಸಿಂಗ್ : 2 High Court Bench ಮಾಡತಕ್ಕಂಥದ್ದಕ್ಕೆ ನಾವು, ನೀವು ಪಾಲುದಾರರೇ. ಜೊತೆಯಲ್ಲಿದ್ದು ಮಾಡಿದ್ದೇವೆ. Sanction ಕೊಟ್ಟಿದ್ದೇವೆ. ಹಣ ಕೊಡಲೇಬೇಕು. ಕೊಟ್ಟಿದ್ದೀರಿ. ಎರಡೂ ಕಡೆ High Court ಪೀಠವನ್ನು ನೀವು ಬಂದ ಮೇಲೆ ಪ್ರಾರಂಭ ಮಾಡಿದ್ದೀರಾ?

ಶ್ರೀ ಹೆಚ್.ಡಿ.ರೇವಣ್ಣ : High Court ಪೀಠವನ್ನು ಪ್ರಾರಂಭಿಸಲು, High Court ಮುಖ್ಯ ನ್ಯಾಯಾಧೀಶರನ್ನೆಲ್ಲ ಒಪ್ಪಿಸಿ ಮಾಡಿದ್ದೆಲ್ಲ ಧರ್ಮಸಿಂಗ್ ಸಾಹೇಬರೇ. ನಾನು ಅದಿಲ್ಲವೆಂದು ಹೇಳುತ್ತಿಲ್ಲ. ನಿಮಗೇ ಗೊತ್ತಿಲ್ಲ, ನೀವು ಸುಮ್ಮನೆ ಹೇಳುತ್ತೀರಿ. ಖಜಾಂಚಿ ನಿಮ್ಮ ಹತ್ತಿರವಿರಲಿಲ್ಲ. ಲಕ್ಷ್ಮಿ ಖಜಾಂಚಿ ಬೇರೆಯವರ ಹತ್ತಿರವಿತ್ತು. ಆಗ ನೀವು ಹೇಳಿದರೂ ಖಜಾಂಚಿ ಬೀಗ ತೆಗೆಯುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾರ ಹತ್ತಿರ ಬೀಗವಿತ್ತು?

ಶ್ರೀ ಹೆಚ್.ಡಿ.ರೇವಣ್ಣ : ವಾಟಾಳ್ ನಾಗರಾಜ್ ಹತ್ತಿರವಿತ್ತು.

ಶ್ರೀ ವಾಟಾಳ್ ನಾಗರಾಜ್ : ರೇವಣ್ಣ, ಕುಮಾರಸ್ವಾಮಿ, ದೇವೇಗೌಡರು ನಮ್ಮ ಕೈಯಲ್ಲಿ ಖಜಾನೆ ಬೀಗವನ್ನು ಕೊಡುವುದಕ್ಕೆ ಸಾಧ್ಯವೇ? ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ನೀವು ಯಡಿಯೂರಪ್ಪನವರ ಮೇಲೆ ದಾಳಿ ಮಾಡಿದ ನಂತರ ಆದೇಶ ಮಾಡಿಕೊಡುತ್ತಾರೆಯೇ?

ಶ್ರೀ ಹೆಚ್.ಡಿ.ರೇವಣ್ಣ : ಯಡಿಯೂರಪ್ಪನವರ ಹತ್ತಿರ ನಾವು ಎಲ್ಲದಕ್ಕೂ ಬೀಗ ತೆಗೆಯಿರಿ ಎಂದು ಹೇಳುವುದಿಲ್ಲ. ಯಾರಾದರೂ ಬಡವರ ಮಕ್ಕಳು ಓದುವುದಕ್ಕೆ ಮಾತ್ರ ಕೇಳುತ್ತಿದ್ದೆವು. PU College ನಿಂದ BA College ಗೆ 11% ಇದೆಯಲ್ಲ, ಹಳ್ಳಿಯ ರೈತರ ಮಕ್ಕಳು 11% ಗೆ ಬಂದು ನಿಂತಿದ್ದಾರಲ್ಲ, ಅವರಿಗೆ 90% Education ಕೊಡಬೇಕು ಎಂದು ಯಡಿಯೂರಪ್ಪನವರೆ ನೀವು ಬೀಗ ತೆಗೆಯಿರಿ ಸ್ವಲ್ಪ, ಹೋದರೂ ಪರವಾಗಿಲ್ಲವೆಂದು ಹೇಳಿ ಬೀಗ ತೆಗೆಸಿದೆವು. ಒಂದೆ ಬೀಗ ಓಪನ್ ಮಾಡಬೇಕಾದರೆ ಕಷ್ಟವಿತ್ತು.

ಶ್ರೀ ವಾಟಾಳ್ ನಾಗರಾಜ್ : ಬೀಗದ ಕೈ ನಿಮ್ಮ ಹತ್ತಿರವಿತ್ತು.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಇಷ್ಟು ಖರ್ಚು ಮಾಡಿದೆವು ಎಂದರೆ, ಕೀ ನಿಮ್ಮ ಹತ್ತಿರವಿಲ್ಲದಿದ್ದರೆ ಮಾಡುತ್ತಿದ್ದರೇ?

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : High School, Degree College ಮಂಜೂರು ಮಾಡಿದ್ದೇವೆಂದು ನೀವೇ ಹೇಳುತ್ತಿದ್ದೀರಿ. ಹಾಗಾದರೆ, ನೀವೇ Finance Minister ಎಂದಾಯಿತಲ್ಲ. ಸಂತೋಷ. ನಮ್ಮದೇನೂ ತಕರಾರಿಲ್ಲ. ಬೀಗದ ಕೈ ನಿಮ್ಮ ಕೈಯಲ್ಲಿದೆ, ಅವರ ಕೈಯಲ್ಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ಭಾವಿ Finance Minister ಆಗುವ ಎಲ್ಲ ಸೂಚನೆಗಳಿವು.

ಶ್ರೀ ಹೆಚ್.ಡಿ.ರೇವಣ್ಣ : ನಾನು ದೇಶಪಾಂಡೆಯವರನ್ನು ಬುದ್ಧಿವಂತರಲ್ಲ. ಅವರು ದೇವೇಗೌಡರ, ರಾಮಕೃಷ್ಣ ಹೆಗಡೆಯವರ. . . .

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮೊದಲು ಕ್ರಿಕೆಟ್ ಟೆಸ್ಟ್‌ನಲ್ಲಿ One day matches ಇರಲಿಲ್ಲ. ನಾಡಕರ್ಣಿ ಎನ್ನುವ ಒಬ್ಬರು player ಇದ್ದರು. ಡ್ರಾ ಮಾಡಬೇಕಾಗಿದ್ದರೆ, ಸೋಲಿನಿಂದ ತಪ್ಪಿಸಿಕೊಳ್ಳಬೇಕಿದ್ದರೆ, ನಾಡಕರ್ಣಿಯವರನ್ನು ಹಾಕಿಬಿಡುತ್ತಿದ್ದರು. ಆತ 100 over bowl ಮಾಡುವುದು, ಅದರಲ್ಲಿ 45 overs maiden overs. ಒಂದು ವಿಕೆಟ್ ಸಿಗುವುದಿಲ್ಲ. 30 ರನ್ ಕೊಡುವುದು. ಮೂರೂವರೆ ದಿವಸ ಬೌಲ್ ಮಾಡುವುದು. Match drawn. ಇವರು ನಾಡಕರ್ಣಿಯನ್ನೂ ಮೀರಿಸುತ್ತಿದ್ದರೆ. ಯಡಿಯೂರಪ್ಪನವರಿಗೆ, ಕುಮಾರಸ್ವಾಮಿಯವರಿಗೆ, ಯಾವ guard ಬೇಕಾಗಿಲ್ಲ. ಯಾವ defence ಬೇಕಾಗಿಲ್ಲ. ಎಷ್ಟು ಯೋಚನೆ ಮಾಡಿದರೋ, ಏನೋ ಗೊತ್ತಿಲ್ಲ. ನಿಮ್ಮಿಬ್ಬರ geniusಗೆ ನಾನು salute ಮಾಡಬೇಕು. You have chosen such a good batsman. ನಾವೀಗ ಯಾವ ಸ್ಥಿತಿಗೆ ತಲುಪಿದ್ದೇವೆಂದರೆ, ನಮ್ಮನ್ನು ಬಿಡಿ ಹೋಗಿಬಿಡುತ್ತೇವೆ, ನೀವು ಬಿಟ್ಟರೆ ಸಾಕು ನಾವು ಹೋಗುತ್ತೇವೆ ಎನ್ನುವ Stage ಗೆ ಬಂದಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ದೇಶಪಾಂಡೆಯವರು ಹಿರಿಯರಿದ್ದಾರೆ. ಅವರು ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ, ದೇವೇಗೌಡರ ಮಂತ್ರಿಮಂಡಲದಲ್ಲಿ, ಜೆ.ಹೆಚ್.ಪಟೇಲರ ಮಂತ್ರಿಮಂಡಲದಲ್ಲಿ, ಎಸ್.ಎಂ.ಕೃಷ್ಣರವರ ಮಂತ್ರಿಮಂಡಲದಲ್ಲಿ, ಧರ್ಮಸಿಂಗ್‌ರವರ ಮಂತ್ರಿ ಮಂಡಲದಲ್ಲಿ ಇದ್ದರು. ಅಷ್ಟು ಅನುಭವ ನನಗಿಲ್ಲ. ದೇವೇಗೌಡರು, ಇವನ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು Housing ಕೊಟ್ಟಿದ್ದರು.

ಯಾವುದೋ ಒಂದು ಸಣ್ಣ ಖಾತೆಯನ್ನು ನಮ್ಮ ಹುಡುಗನಿಗೆ ಕೊಡಿ ಎನ್ನುತ್ತಿದ್ದರು. ನಾವು ಸಣ್ಣ ಖಾತೆಯಿಂದ ಬಂದವರು. ಅವರು ಅರ್ಥ ಮಾಡಿಕೊಳ್ಳಲಿಲ್ಲ. ನಾನು ಹಾಸನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಮಾತ್ರ ಮುಖ್ಯಮಂತ್ರಿಗಳಿಗೆ, ನಮಗೆ 5 ಕೋಟಿ ರೂ. ಇದೆ, ಅದನ್ನು ತೆಗೆದು ಹಾಕಿ, "College High School ಗೆ ಕೊಡಿ ಸ್ವಾಮಿ" ಎಂದು ನಾನು ಕೇಳಿದ್ದೆ ಎಂದು ಹೇಳಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೋರ್ಟ್‌ಗೆ 250 ಕೋಟಿ ರೂ. ಕೊಡಲಾಗಿದೆ. ನಾನು ಮೊನ್ನೆಯೂ ಹೇಳಿದ್ದೇನೆ. ಇನ್ನೂ ಒಂದು ಸಾರಿ ಮುಖ್ಯಮಂತ್ರಿಗಳನ್ನು, ಉಪ ಮುಖ್ಯಮಂತ್ರಿಯವರನ್ನು, ಶಿಕ್ಷಣ ಸಚಿವರನ್ನು ಮನವಿ ಮಾಡುತ್ತಿದ್ದೇನೆ, ಈ ರಾಜ್ಯದ ಜನತೆಯ ಪರವಾಗಿ ಮೊನ್ನೆ Advisory Committee meeting ಆದ ತಕ್ಷಣವೇ ಧರ್ಮಸಿಂಗ್, ಖರ್ಗೆಯವರಿಗೂ ಹೇಳಿದೆ. ಸಾರ್, ಒಂದು ಸಾರಿ ಯಾವ ಪಾರ್ಟಿಗೀರ್ಟಿ ಅಂತ ತಲೆಕೆಡಿಸಿಕೊಳ್ಳುವುದು ಬೇಡ. ಶಿಕ್ಷಣ ಇಲಾಖೆಯಲ್ಲಿ 224 ಕ್ಷೇತ್ರಗಳಲ್ಲಿಯೂ ಎಲ್ಲಾ ಇಲಾಖೆಯಲ್ಲಿ ಬೇಕಾದರೆ 10% ಕಟ್ ಮಾಡಿ, ಅದೆಲ್ಲಿಗೆ ಬೇಕೋ ಅಲ್ಲಿಗೆ ಸುವರ್ಣ ಕರ್ನಾಟಕ ಸಂದರ್ಭದಲ್ಲಿ ಒಂದು ಸಾರಿ ಕೊಟ್ಟು ಬಿಡಿ ಸ್ವಾಮಿ ಎಂದು ಹೇಳಿದೆ. ನಮ್ಮದೇನೂ ಅಭ್ಯಂತರವಿಲ್ಲ. ಯಾರು ಯಾರಿಗೆ ಎಷ್ಟೆಷ್ಟು High School, Collegeಗಳು ಎಲ್ಲೆಲ್ಲಿ ಬೇಕೋ ಕೊಡಿ, ನಮ್ಮದೇನೂ ಇಲ್ಲ. ನಾವೇನೂ ಅದಕ್ಕೆ ವಿರೋಧವಿಲ್ಲ. ಬೇಕಾದರೆ ಹೇಳಲಿ. ಹೊರಟ್ಟಿಯವರಾಗಲಿ. ಶಂಕರಮೂರ್ತಿಯವರಾಗಲಿ, ನಾನು ನಮ್ಮ ಜಿಲ್ಲೆಯ ಮತ್ತು ನಮ್ಮ ಕೆಲವು ಶಾಸಕರು ಹೇಳಿದಾಗ ಹೇಳಬೇಕಾಗುತ್ತದೆ. ಬೇರೆ ಕಡೆ ನನ್ನ ಹಸ್ತಕ್ಷೇಪವಿಲ್ಲ. ಇದನ್ನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುತ್ತೇನೆ. ಏಕೆಂದರೆ, ನಾನು ಇಲ್ಲಿ ಇಲ್ಲದೇ ಇದ್ದಾಗ, ರೇವಣ್ಣನವರು High School ಅನ್ನು ಅಲ್ಲಿ ಕೊಡಿಸಿದರು, ಇಲ್ಲಿ ಕೊಡಿಸಿದರೆಂದು ಹೇಳುವುದು ಅದು ಬಿಡಿ. ಈಗ ಕೋರ್ಟಿನ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಉತ್ತರ ಕರ್ನಾಟಕದಲ್ಲಿ ಕೋರ್ಟ್ ಬಿಲ್ಡಿಂಗ್, ನಮ್ಮ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಬಿಲ್ಡಿಂಗ್ ಮಾಡಿದರು. ಮೊನ್ನೆ ಚೀಫ್ ಜಸ್ಟೀಸ್‌ರವರನ್ನು ಕರೆದುಕೊಂಡು ಹೋಗಿದ್ದರು. ಸುಮಾರು ಐದು ಕೋಟಿ ರೂಪಾಯಿ ಆ ಬಿಲ್ಡಿಂಗ್, ಅದರ ಜೊತೆಗೆ ಮತ್ತೆ ಹತ್ತು ಕೋಟಿ ಮಂಜೂರಾತಿ ಕೊಟ್ಟೆವು, ಬೇಕಾದರೆ ರೆಕಾರ್ಡ್ ತೆಗಿಸಿ ನೋಡಿ. ಟೆಂಡರ್ ಕೂಡ ಒಂದು ವಾರದಲ್ಲಿ ಕರೆದಿದ್ದೇವೆ. ನನಗೇನು ಯಾರೂ

ಕೊಟ್ಟಿಲ್ಲ. ನನಗೇನು ಆ ಭಾಗ ಈ ಭಾಗ ಎನ್ನುವುದೇನಿಲ್ಲ. ಎಲ್ಲವನ್ನು ತೆಗೆದುಕೊಂಡು ಹೋಗಬೇಕೆನ್ನುವ ದೃಷ್ಟಿಯಲ್ಲಿ ನಾನು 250 ಕೋಟಿ ರೂಪಾಯಿ ಹಣವನ್ನು ಈ ಕೋರ್ಟ್ ಒಂದಕ್ಕೆ ಕೊಟ್ಟಿದ್ದೇವೆ. ಇದರಲ್ಲಿ ಸುಮಾರು 200 ಕೋಟಿ ರೂಪಾಯಿ ಉತ್ತರ ಕರ್ನಾಟಕದ ಭಾಗಕ್ಕೆ ಬರುತ್ತದೆ. ಏಕೆಂದರೆ, 900 ಕೋಟಿ, 1000 ಕೋಟಿ ರೂಪಾಯಿಗಳನ್ನು ಬಿಲ್ಡಿಂಗ್‌ಗೆ ಸಂಬಂಧಪಟ್ಟ ಹಾಗೆ ಕೊಟ್ಟಿರುವುದು.

ಶ್ರೀ ಎನ್.ಯೋಗೀಶ್ ಭಟ್ : ಮಂಗಳೂರಿನ ಕೋರ್ಟ್‌ನ ಬಗ್ಗೆ ಹೇಳಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಂಗಳೂರು ಕೋರ್ಟ್ ಬಿಲ್ಡಿಂಗ್ ರೆಡಿ ಇದೆ. ಅಲ್ಲಿ ಜೈಲಿನ ಜಾಗದ್ದು ಸ್ವಲ್ಪ ತೊಂದರೆಯಿದೆ. ಅಲ್ಲಿ ಬಿಲ್ಡಿಂಗ್ ಕೊಡೋಣ. ಈ ಕೆ-ಶಿಪ್ ವಿಚಾರದಲ್ಲಿ ಹೇಳುವುದಾದರೆ, ರಾಜ್ಯದಲ್ಲಿ ರಸ್ತೆಗಳ ಬಗ್ಗೆ ಬೆಳಕು ಚೆಲ್ಲಬೇಕೆಂದು ನಮ್ಮ ಮಾಧುಸ್ವಾಮಿಯವರು, ರಾಯರೆಡ್ಡಿಯವರು, ಎಲ್ಲಾ ಮುಖಂಡರು ಸಹ ಹೇಳಿದ್ದಾರೆ. ಮೊದಲನೆಯದಾಗಿ ನಮ್ಮ ಧರ್ಮಸಿಂಗ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಏಕೆಂದರೆ, 1999 ರಿಂದ 2004 ರವರೆಗೆ ಕೆ–ಶಿಪ್ ಶುರುವಾಯಿತು. 1994 ರಿಂದ 2000 ರವರೆಗೆ ಫಸ್ಟ್ ಫೇಸ್‌ನಲ್ಲಿ ಸುಮಾರು 1770 ಕಿ.ಮೀ. ಕೆ–ಶಿಪ್–1ರಲ್ಲಿ ಶುರುವಾಯಿತು. ನಾನು ಮಾಹಿತಿಯನ್ನು ಸಭೆಯ ಮುಂದೆ ಇಡುತ್ತೇನೆ. 27 ಜಿಲ್ಲೆಯೊಳಗೆ ಆಗಿದ್ದು ಕೇವಲ 17–18 ಜಿಲ್ಲೆಗಳನ್ನು ಮಾತ್ರ ಆಯ್ಕೆ ಮಾಡಿದ್ದರು. ಯಾರೇ ಮಂತ್ರಿಗಳು ಇದ್ದರೂ ಕೂಡ ಅವರ ಕ್ಷೇತ್ರದಲ್ಲಿ ಮಾಡುವ ಕಾರ್ಯ ಇದ್ದೇ ಇರುತ್ತವೆ. ಅವನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಕೆ–ಶಿಪ್–1 ರಲ್ಲಿ 1770 ಕಿ.ಮೀ. ಏನು ತೆಗೆದುಕೊಂಡಿದ್ದರು ಆಗ 1999 ರಿಂದ 2004 ರ ಅವಧಿಯಲ್ಲಿ 356 ಕೋಟಿ ರೂಪಾಯಿ ಖರ್ಚು ಮಾಡಿ 557 ಕಿ.ಮೀ. ಆ ನಾಲ್ಕು ವರ್ಷದಲ್ಲಿ ಕೆಲಸವಾಯಿತು. ನಂತರ ನಾವು ಬಂದ ಮೇಲೆ, ಧರ್ಮಸಿಂಗ್‌ರವರು, ಯಡಿಯೂರಪ್ಪನವರು ಮತ್ತೆ ನಾನು ಎಲ್ಲಾ ಸೇರಿ, 1678 ಕೋಟಿ ರೂಪಾಯಿಯ ಕೆಲಸವನ್ನು ಮಾಡಿಸಿದೆವು. ಉದಾಹರಣೆಗೆ ಹೇಳುವುದಾದರೆ, ಚೆಲುವರಾಯಸ್ವಾಮಿಯವರ ಊರು, ಪಾಡವಪುರದ ಪುಟ್ಟರಾಜುರವರು, ಅವರು ಇಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಅವರ ಊರಿಗೆ ಹೋಗಬೇಕಾದರೆ, ನಮ್ಮ ಪತ್ರಿಕಾ ಸ್ನೇಹಿತರೊಬ್ಬರ ಊರು ಆ ಕಡೆ ಇದೆಯಂತೆ, ಅವರು ಹೋಗುವಾಗ ಬರುವಾಗ ನನ್ನನ್ನು ಕೇಳುತ್ತಿದ್ದರು. ಮತ್ತೆ ನಮ್ಮ ವಿಶ್ವೇಶ್ವರ ಹೆಗಡೆಯವರು ಇಲ್ಲಿ ಇರಬೇಕು, ಆ

ಪ್ಯಾಕೇಜ್ ಎಲ್ಲಾ ನಾನು ಸಾಹೆಬ್ರು ಹತ್ತಿರ ಓಡಾಡಿ ಕ್ಯಾನ್ಸಲ್ ಮಾಡಿದೆ. ಎಷ್ಟೆ ಒತ್ತಡ ಬಂದರೂ ಕೇರ್ ಮಾಡಲಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈ ಸದನದಲ್ಲಿ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ಅವರ ಕಡೆಗೆ ಎಲ್ಲಾ ಧನ್ಯವಾದಗಳನ್ನು ಅರ್ಪಿಸಿದ್ದಾಯಿತು. ಈ ಕಡೆಗೆ ನಿಮ್ಮ ನಾಯಕರಿಗೆ ಎಲ್ಲಾ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಅಭಿನಂದನೆಗಳು ಇಲ್ಲದೇ ಇರುವವರು ನಾವು ಐದು ಜನ ಮಾತ್ರ ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಹೊಗಳಿಸಿಕೊಳ್ಳುವುದಕ್ಕೆ ಇರುವವರು. ರೇವಣ್ಣನವರೆ, ಅವರಿಗೆ ಹೊಗಳಿಕೆಗಳು, ಅಭಿನಂದನೆಗಳು, ನನಗೆ ಮಾತ್ರ ಬೈಗಳು.

ಶ್ರೀ ಹೆಚ್.ಡಿ.ರೇವಣ್ಣ : ಈಗ ನಿಮ್ಮಿಬ್ಬರಿಗೂ ವಿಶೇಷವಾದ ಗ್ರಾಂಟ್ ಕೊಡೋಣ ಬಿಡಿ. ನಿಮ್ಮ ಕೋಲಾರ ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿದೆ. ನಾನೇನು ಮಾನ್ಯ ಧರ್ಮಸಿಂಗ್‌ರವರನ್ನು ದೂಷಿಸುತ್ತಿಲ್ಲ. ನೀವು ಮೊದಲನೆಯ ಕೆ–ಶಿಪ್‌ನಲ್ಲಿ ಹಾಸನಕ್ಕೆ ಕೊಟ್ಟಿದ್ದು ಬರಿ ಏಳೂವರೆ ಕಿ.ಮಿ. ಅಲ್ಲಿಂದ ಬಂದರೆ, ಚಾಮರಾಜನಗರ ಜಿಲ್ಲೆ, ಮಾನ್ಯ ವಾಟಾಳ್ ನಾಗರಾಜ್ ರವರನ್ನು ಮರೆತು ಬಿಟ್ಟಿದ್ದಾರೆ. ಏಕೆಂದರೆ ಅವರು ವಿಧಾನ ಸಭೆಯಲ್ಲಿದ್ದರೆ ಅವರದು ಬರುತ್ತಿತ್ತು. ಅವರು ವಿಧಾನ ಸಭೆಯಲ್ಲಿ ಇಲ್ಲವೆಂದು ಲಿಸ್ಟ್‌ನಿಂದ ಹೊಡೆದು ಹಾಕಿದ್ದಾರೆ. ನೀವು ಹೋದ ಅಸೆಂಬ್ಲಿಯಲ್ಲಿ ಇರಲಿಲ್ಲವಲ್ಲ, ಅದಕ್ಕಾಗಿ ಹೊಡೆದು ಹಾಕಿದ್ದಾರೆ, ಆ ವಿಷಯ ಬಿಡಿ. ಹಂಪನಗೌಡರವರು ನಮಗೇನೂ ಆಗಿಲ್ಲವೆಂದರು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಮಗೆ ಒಂದು ಕಿ.ಮೀ. ಕೊಟ್ಟಿಲ್ಲ. ಆಗಿದೆ ಎಂದು ನೀವು ಹೇಳುವುದಾದರೆ ನಾವು ಆಗಿಲ್ಲವೆಂದು ಹೇಳಬೇಕಲ್ಲವೆ? ನಮ್ಮ ಕ್ಷೇತ್ರದಲ್ಲಿ ಆಗಿಲ್ಲ. ಇದ್ದಿದ್ದನ್ನು ತೆಗೆದು ಹಾಕಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾನೀಗ ಉತ್ತರ ಕೊಡಬೇಕೋ ಬೇಡವೋ ನೀವೇ ಹೇಳಿ. ಈಗ ಇದನ್ನು ಇಲ್ಲಿಗೆ ಬಿಟ್ಟುಬಿಟ್ಟು ಕೆ–ಶಿಪ್–2 ತೆಗೆದುಕೊಳ್ಳೋಣ. ಕೆ–ಶಿಪ್–2 ನಲ್ಲಿ 4,200 ಕೋಟಿ ರೂಪಾಯಿಯ ಯೋಜನೆಯಲ್ಲಿ 3,441 ಕಿ.ಮೀ. ಧರ್ಮಸಿಂಗ್‌ರವರು ಮತ್ತು ನಾವು ಹಾಗೂ ಮಾನ್ಯ ಕುಮಾರ ಸ್ವಾಮಿಯವರ ಸರ್ಕಾರ ಬಂದ ಮೇಲೆ, ಕೆ–ಶಿಪ್–2

ಅನ್ನು ತೆಗೆದುಕೊಂಡಿದ್ದೇವೆ. ನಾನು PWD ಮಂತ್ರಿಯಾದ ಮೇಲೆ, ನಾನು ಹೇಳುತ್ತೇನೆ ಸ್ವಲ್ಪ ಕೇಳಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಪ್ಲಾನ್ ಅನ್ನು ಚೇಂಜ್ ಮಾಡಿದಿರಿ. ನಮ್ಮದು ತೆಗೆದು ಹಾಕಿದಿರಿ. ಅದನ್ನು ನೀವು ಅರ್ಥ ಮಾಡಿದಿರಿ, ನಾನು ಬೇಕಾದರೆ ಯಾವ ಊರು ಎಂದು ಕೂಡ ಹೇಳುತ್ತೇನೆ. ಬೀದರ್ ನಿಂದ–ಚಿಂಚೋಳಿವರೆಗೆ ಮಾಡಿ ಯಾದಗಿರಿಯ ಹತ್ತಿರ ಕಟ್ ಮಾಡಿದಿರಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಅವರೆಲ್ಲರೂ ಮಾತನಾಡುವಾಗ ನಾನು ಸುಮ್ಮನೆ ಕುಳಿತುಕೊಂಡು ಕೇಳಿಲ್ಲವೆ? ಐದು ದಿನ ಪತ್ರಿಕಾ ಸ್ನೇಹಿತರು, ಎಲೆಕ್ಟ್ರಾನಿಕ್ ಮೀಡಿಯಾದವರು, ಏನು ರೇವಣ್ಣ ಮಾಡಿದ್ದಾನೆ, ಏನು ಇದೆ ಎಂದು ಅವರೆಲ್ಲರೂ ಇವತ್ತೇನು ಪಾಪ ನಮ್ಮ ಕಡೆ ನೋಡುತ್ತಿದ್ದಾರೆ ಬೆಳಿಗ್ಗೆ ಏನು ಮಾಡುತ್ತಾರೆ ನೋಡೋಣ ಎಂದು. ಏಕೆಂದರೆ ರೇವಣ್ಣನವರಿಗೆ ಉತ್ತರ ಹೇಳುವುದಕ್ಕೆ ಆಗುತ್ತದೆಯೋ ಇಲ್ಲವೋ ಅಥವಾ ಕದ್ದು ಹೋಗುತ್ತಾರೆ ಎನ್ನುವ ಮಾತಿತ್ತು. ನನಗೆ ಆ ರೀತಿ ಏನೂ ಇಲ್ಲ ಸ್ವಾಮಿ. ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ನಾವು ಮಾತನಾಡುವಾಗ ಸುಮ್ಮನೆ ಕುಳಿತಿರಲಿಲ್ಲ. ನೀವು ಕೂಡ ಐದು ನಿಮಿಷ ನಾವು ಹೇಳಿದರೆ ಹತ್ತು ನಿಮಿಷ ನೀವು ಉತ್ತರ ಕೊಟ್ಟುಕೊಂಡೇ ಬಂದಿದ್ದೀರಿ, ನಿಮ್ಮದೂ ಕೂಡ ಪತ್ರಿಕೆಗಳಲ್ಲಿ, ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಬಂತಲ್ಲವೆ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಮ್ಮಣ್ಣನವರ ಆಶೀರ್ವಾದವಿರುವಾಗ ನಮಗೇನು ಬಿಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಯಾರೂ ಮಾತನಾಡುವುದಿಲ್ಲ, ಸ್ವಾಮಿ. ನಾವು ಒಪ್ಪಿಗೆ ಕೊಟ್ಟಿದ್ದೇವೆ. ಏನು ಸುಮ್ಮನೆ ಹೀಗೆ ಹೇಳಿದರೆ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಇದರಲ್ಲಿ 26 ಜಿಲ್ಲೆಗಳನ್ನು ಸೇರಿಸಿದ್ದೇವೆ. ಉದ್ಧಾಹರಣೆಗೆ ಹೇಳುವುದಾದರೆ, ಕೋಲಾರ ಜಿಲ್ಲೆ. ನಮ್ಮ ಶ್ರೀನಿವಾಸಗೌಡರ ಜಿಲ್ಲೆ. ಏಕೆಂದರೆ, ಅವರು ಜಾಸ್ತಿ ಇರುವುದಿಲ್ಲ. ಅವರ ಕೋಲಾರಕ್ಕೆ

ಅನ್ಯಾಯವಾಗಿದೆ, ಕೇಳುವುದಕ್ಕೆ ಅವರು ಇಲ್ಲಿದ್ದರೆ ತಾನೆ? ಕೃಷ್ಣ ಬೈರೇಗೌಡರವರು ಅವರು ಇದ್ದಾರೆ, ಕೇಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಇವರು ಯಾವಾಗಲೂ ಇರುವುದಿಲ್ಲ. ಇವರು ಅಸೆಂಬ್ಲಿಗೇ ಬರುವುದಿಲ್ಲ. ನನಗೆ ಸುಮ್ಮನೆ ಹೇಳುತ್ತಾರೆ ನೋಡಿ. ಇದು ನ್ಯಾಯವೆ?

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಎಂಎಲ್‌ಎ ಸೆಗ್‌ಮೆಂಟ್ ನೊಳಗೆ ಏನೇನು ಮಾಡಿದಿರಿ ಆ ಮಾಹಿತಿ ತಾವು ಕೊಡಬೇಕು. ನಾನೇನು ಬೇರೆ ಕೇಳಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಮ್ಮ ಬೈರೇಗೌಡರವರು ಇದ್ದರೆ ಖಂಡಿತವಾಗಿ ಕೋಲಾರಕ್ಕೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದರು. ಆದರೆ ಕೆ–ಶಿಪ್‌ನಲ್ಲಿ ಇವತ್ತು ಕೋಲಾರ ಜಿಲ್ಲೆಗೆ 219 ಕಿ.ಮೀ. ರಸ್ತೆಯಾಗಿದೆ. ಅಲ್ಲಿ ಯಾರು ಇದ್ದಾರೆ? ನಮ್ಮ ಸುಧಾಕರ್‌ರವರು ಇದ್ದಾರೆ. ನಮ್ಮ ಹೊಸಕೋಟೆ ನಾಗರಾಜುರವರು ಆಗಲೇ ಹೋದರು. ಏಕೆಂದರೆ, ಅವರು ಇಲ್ಲಿ ಮಾತನಾಡಿದರೆ ಜಮೀನು, ಅವರು ಬಜೆಟ್ ಮೇಲೆ ಮಾತನಾಡಲಿಲ್ಲ.

ಶ್ರೀ ಎಂ.ಟಿ.ಬಿ.ನಾಗರಾಜು : ನಾನು ಇಲ್ಲಿಯೇ ಇದ್ದೇನೆ. ನಾನು ಹೊರಗಡೆ ಹೋಗಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಇಲ್ಲಿಯೇ ಇದ್ದೀರಾ? ನಾನು ನೋಡಲಿಲ್ಲ.

ಶ್ರೀ ಹಂಪನಗೌಡ ಬಾದರ್ಲಿ : ಉತ್ತರ ಕರ್ನಾಟಕಕ್ಕೆ ಎಷ್ಟು ಕೊಟ್ಟಿದ್ದೀರಿ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಮ್ಮ ಕ್ಷೇತ್ರಕ್ಕೆ ಎಷ್ಟು ಮಾಡಿದಿರಿ?

ಶ್ರೀ ಹೆಚ್.ಡಿ.ರೇವಣ್ಣ : ಈಗ ಉತ್ತರ ಕರ್ನಾಟಕಕ್ಕೆ ಎಷ್ಟು ಮಾಡಿದಿರಿ ಎಂದು ಹಂಪನಗೌಡರವರು ಕೇಳುತ್ತಾರೆ.

(5-00 PM)

ಶ್ರೀ ಬಿ.ಶಿವರಾಂ : ರೇವಣ್ಣನವರೇ ಕೆ–ಶಿಪ್–2 ಅನ್ನು ಪ್ರಾರಂಭಿಸಿದ್ದೀರಾ? ಪ್ರಾರಂಭಿಸಿದ್ದೀರಾ ಎಂದು ಕೇಳಿದೆ ಅಷ್ಟೆ.

ಶ್ರೀ ಹೆಚ್.ಡಿ.ರೇವಣ್ಣ : ದಯಮಾಡಿ ಎರಡು ನಿಮಿಷ ಉತ್ತರ ಕೊಡುವವರೆಗೆ ಕೇಳಿ. ನಂತರ ಎಲ್ಲಾ ಹೇಳುತ್ತೇನೆ.

ಶ್ರೀ ಬಿ.ಶಿವರಾಂ : ಅದು ಇನ್ನು ಪ್ರಾರಂಭವೇ ಆಗಿಲ್ಲ, ಪ್ರೋಗ್ರೆಸ್ ಆಗಿದೆ ಎನ್ನುವ ರೀತಿಯಲ್ಲಿ ನೀವು ಹೇಳುತ್ತಿರಲ್ಲ? ಕೆ–ಶಿಪ್ ಇನ್ನು ಪ್ರಪೋಸಲ್ ಫೈನಲ್ ಆಗಿ ಇನ್ನೂ ಸೇರಿಸಿರುವುದನ್ನೇ ಪ್ರೋಗ್ರೆಸ್ ಎನ್ನುವ ರೀತಿಯಲ್ಲಿ ಹೇಳುತ್ತೀರಲ್ಲ. ಕೊಟ್ಟಿರುವ ಪ್ರೋಗ್ರೆಸ್ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ನನಗೆ ಅಷ್ಟು ಅನುಭವವಿಲ್ಲ. ಅವರಿಗೆ ವಿಷಯ ಏನಾಗಿದೆ ಎಂದರೆ, ಯಾವ ವಿಷಯಕ್ಕೆಂದು ನಾನು ಆಮೇಲೆ ಹೇಳುತ್ತೇನೆ. ಈಗೇನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಕೊನೆಗೆ ಬರುತ್ತೇನೆ. ಉತ್ತರ ಕರ್ನಾಟಕದ್ದು ಮೊದಲನೇ ಹಂತದಲ್ಲಿ 1,770 ಕಿ.ಮೀ. ಕೊಟ್ಟಿದ್ದಾರೆ.

ಉತ್ತರ ಕರ್ನಾಟಕದ 12 ಜಿಲ್ಲೆಗಳಿಗೆ ಮೊದಲನೇ ಹಂತದಲ್ಲಿ 1,770 ಕಿ.ಮೀ. ಕೊಟ್ಟಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ 15 ಜಿಲ್ಲೆಗಳಿವೆ. 1,770 ಕಿ.ಮೀ.ನಲ್ಲಿ ಮಾನ್ಯ ಹಂಪನಗೌಡರ ಕ್ಷೇತ್ರದಲ್ಲಿನ 250 ಕಿ.ಮೀ. ಕೂಡ ಸೇರಿದೆ. ಎರಡನೇ ಹಂತದಲ್ಲಿ 600 ಕಿ.ಮೀ. ಇದ್ದಂಥದನ್ನು 1,000 ಕಿ.ಮೀ. ಮಾಡಿ ಈಗ ಸರಿಪಡಿಸಿದ್ದೇವೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಂಜುಂಡಪ್ಪನವರ ವರದಿಯಲ್ಲಿರತಕ್ಕಂಥದನ್ನು ಏನು ಮಾಡಿದ್ದೀರಿ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸೇಡಂ ಶಾಸಕರೆ, ನಂಜುಂಡಪ್ಪನವರ ವರದಿ ಬಗ್ಗೆ ಕೂಡ ಹೇಳುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕೆ–ಶಿಪ್–2ರಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿಗೆ 1 ಕಿ.ಮೀ. ಸಹ ಕೊಟ್ಟಿಲ್ಲ. ಎಲ್ಲವನ್ನೂ ಸರಿಪಡಿಸಿದ್ದೇವೆಂದು ಕೇವಲ ಒಂದೆರಡು ಕಿ.ಮೀ. ತೆಗೆದುಕೊಂಡರೆ..

ಅಧ್ಯಕ್ಷರು : ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರೆ, ದಯವಿಟ್ಟು ಕುಳಿತುಕೊಳ್ಳಿ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ತಾವು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಈ ಸಾರಿ ಕೆ–ಶಿಪ್ ಕೆಲಸಗಳು ಪ್ರಾರಂಭವಾಗಿವೆಯೇ ಎಂದು ಮಾನ್ಯ ಶಿವರಾಂರವರು ಕೇಳಿದರು ಇದಕ್ಕೆ ಈಗಾಗಲೇ ಕ್ಯಾಬಿನೆಟ್ ಅಪ್ರೂವಲ್ ಆಗಿದೆ. ಮತ್ತೆ ಇದಕ್ಕೆ ವಿಶ್ವಬ್ಯಾಂಕ್‌ನವರು ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಶಿವರಾಂ : ಇನ್ನೂ ಕೆ-ಶಿಪ್ ಕೆಲಸಗಳು ಪ್ರಾರಂಭವಾಗಿಲ್ಲವೆಂದು ನಾನು ಹೇಳಿದೆಯಷ್ಟೆ. ಮೊದಲನೆಯ ಹಂತದ ಪ್ರಗತಿಯನ್ನು ಹೇಳುವಾಗ ಎರಡನೆಯದು ಏನಾಗಿದೆ ಎಂಬುದನ್ನು ಸೇರಿಸಿ ತಾವು ಹೇಳುತ್ತಿದ್ದೀರಷ್ಟೆ. ಕೆ-ಶಿಪ್-2ರದ್ದು ಎಷ್ಟು ದಿವಸದಿಂದ ಪ್ರಪೋಸಲ್ ನಡೆದುಕೊಂಡು ಬಂದಿದೆ?

ಶ್ರೀ ಹೆಚ್.ಡಿ.ರೇವಣ್ಣ : ಆಯಿತು ಬಿಡಿ. ಅದನ್ನೆಲ್ಲಾ ಹೇಳಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಕೆ-ಶಿಪ್ ಕೆಲಸದ ಬಗ್ಗೆ ಬಿಟ್ಟು, ಈಗ ನಬಾರ್ಡ್ ಬಗ್ಗೆ ಹೇಳುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕೆ-ಶಿಪ್-2ರಲ್ಲಿ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಅಲ್ಲಿ 1,000 ಕಿ.ಮೀ. ತೆಗೆದುಕೊಂಡಿದ್ದರೂ ಕೂಡ ಅಲ್ಲಿ ನಮಗೆ 500 ಕಿ.ಮೀ. ಸಹ ಕೊಟ್ಟಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಅನ್ಯಾಯವಾಗಿರುವ ಬಗ್ಗೆ ಕ್ಲಿಯರ್ ಮಾಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹಂಪನಗೌಡ ಬಾದರ್ಲಿ : ಕೆ-ಶಿಪ್ ಮೊದಲನೇ ಹಂತದಲ್ಲಿ 5 ಜಿಲ್ಲೆಗಳಲ್ಲಿ 5 ಬೈಪಾಸ್ ರಸ್ತೆಗಳ ಕೆಲಸವನ್ನು ತೆಗೆದುಕೊಂಡಿದ್ದೀರಿ. ನಾನು ಹೇಳುವುದನ್ನು ದಯವಿಟ್ಟು ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮ ಪ್ರಶ್ನೆಗೆ ಕೊನೆಗೆ ಉತ್ತರ ಕೊಡುತ್ತೇನೆ. ತಾವು ಈಗ ದಯವಿಟ್ಟು ಕುಳಿತುಕೊಳ್ಳಿ. ಮೊದಲಿಗೆ 1997ನೇ ಇಸವಿಯಲ್ಲಿ ನಬಾರ್ಡ್ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ನಾನು ಮಂತ್ರಿಯಾಗಿದ್ದೆ. ಮಾನ್ಯ ದೇಶಪಾಂಡೆ ಸಾಹೇಬರು ಅದರಲ್ಲಿ ಮೆಂಬರ್ ಆಗಿದ್ದರು. ಆಗ ಅದಕ್ಕೆ ಮಾನ್ಯ ಸಿದ್ದರಾಮಯ್ಯ ಸಾಹೇಬರು ಅಧ್ಯಕ್ಷರಾಗಿದ್ದರು. 1999-2000ನೇ ಸಾಲಿನಲ್ಲಿ ಮಾನ್ಯ ಧರ್ಮಸಿಂಗ್ ಸಾಹೇಬರು ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿದ್ದರು. ಅವರ ಕಾಲದಲ್ಲಿ 950 ಕೋಟಿ ರೂಪಾಯಿ ನಬಾರ್ಡ್‌ನಿಂದ sanction ಆಯಿತು. ಅಂದರೆ, ನಬಾರ್ಡ್ RIDF-5ರಲ್ಲಿ 140 ಕೋಟಿ ರೂಪಾಯಿ ಮತ್ತು RIDF-6ರಲ್ಲಿ 290 ಕೋಟಿ ರೂಪಾಯಿ, RIDF-7 ರಲ್ಲಿ 170 ಕೋಟಿ ರೂಪಾಯಿ ಮತ್ತು RIDF-9ರಲ್ಲಿ 350 ಕೋಟಿ ರೂಪಾಯಿ, ನಬಾರ್ಡ್ ಪ್ರಾರಂಭವಾದಾಗ ಬಿಡುಗಡೆಯಾಗಿತ್ತು. ಮತ್ತೆ ಧರ್ಮಸಿಂಗ್‌ರವರ ನೇತೃತ್ವದಲ್ಲಿದ್ದಂಥ ಸರ್ಕಾರದಲ್ಲಿ ಎರಡು ಅವಧಿಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು

ಇದ್ದರು. ನಾನು ಆ ಸಂದರ್ಭದಲ್ಲಿ ಮೆಂಬರ್ ಆಗಿದ್ದೆ. 2004ರ ಅವಧಿಯಲ್ಲಿ RIDF-10, RIDF-11 ಸಂದರ್ಭದಲ್ಲಿ ಮಾನ್ಯ ಖರ್ಗೆ ಸಾಹೇಬರಿದ್ದರು. ಅವರ ಕಾಲದಲ್ಲಿ ನಬಾರ್ಡ್‌ನಿಂದ 500 ಕೋಟಿ ರೂಪಾಯಿ ಸಿಕ್ಕಿತು. ಮತ್ತೆ 2006ರಿಂದ RIDF-12 and RIDF-13ಕ್ಕೆ ನಾನಿದ್ದೇನೆ. ನನ್ನ ಅವಧಿಯಲ್ಲಿ 632 ಕೋಟಿ ರೂಪಾಯಿಗಳಷ್ಟು ಹಣವನ್ನು ತೆಗೆದುಕೊಂಡಿದ್ದೇನೆ. ಈ ಲಿಸ್ಟ್‌ನ್ನು ಬೇಕಾದರೆ ಸಭೆಯ ಮುಂದಿಡುತ್ತೇನೆ. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಬೇರೆ ಬೇರೆ ಕ್ಷೇತ್ರಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಕ್ಷೇತ್ರಕ್ಕೆ ನಬಾರ್ಡ್‌ನಿಂದ ಜಾಸ್ತಿ ಕೊಟ್ಟಿದ್ದಾರೆಂದು ಇಲ್ಲಿ ವಾದ ಮಾಡಿದ್ದಾರೆ. ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಧರ್ಮಸಿಂಗ್‌ರವರು ಹಾಗೂ ಮಾನ್ಯ ದೇಶಪಾಂಡೆ ಸಾಹೇಬರು ಇಲ್ಲಿದ್ದಾರೆ ಈಗ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, 1999–2000ನೇ ಇಸವಿಯಲ್ಲಿ ನಬಾರ್ಡ್‌ನಿಂದ 55 ಕ್ಷೇತ್ರಗಳಿಗೆ ಒಂದು ರೂಪಾಯಿ ಸಹ ಕೊಟ್ಟಿಲ್ಲ. 2000–01ನೇ ಸಾಲಿನಲ್ಲಿ 32 ಕ್ಷೇತ್ರಕ್ಕೆ ಒಂದು ರೂಪಾಯಿ ಹಣ ಕೊಟ್ಟಿಲ್ಲ. 2001–02ರಲ್ಲಿ 99 ಕ್ಷೇತ್ರಗಳಿಗೆ ಒಂದು ರೂಪಾಯಿ ಹಣ ಕೊಟ್ಟಿಲ್ಲ. 2002–03ರಲ್ಲಿ 175 ಕ್ಷೇತ್ರಕ್ಕೆ ಒಂದು ರೂಪಾಯಿ ಹಣ ಕೊಟ್ಟಿಲ್ಲ. 2003–04ರಲ್ಲಿ 89 ಕ್ಷೇತ್ರಗಳಿಗೆ ಹಣ ಕೊಟ್ಟಿಲ್ಲ. ಈ ವಿಷಯವನ್ನು ಒಂದು ಕಡೆ ಬಿಡುತ್ತೇನೆ. ಈಗ ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಬೇರೆ ಜಿಲ್ಲೆಗಳ ಬಗ್ಗೆ ನಾನು ಕಾಮೇಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಅರಸೀಕೆರೆಗೆ 3.70 ಕೋಟಿ, ಅರಕಲಗೂಡು 2.2 ಕೋಟಿ, ಬೇಲೂರು 2.16 ಕೋಟಿ, ಗಂಡಸಿ ವಿಧಾನಸಭಾ ಕ್ಷೇತ್ರಕ್ಕೆ 6 ಕೋಟಿ, ಹೆಚ್.ಎನ್.ಪುರ 50 ಲಕ್ಷ ರೂಪಾಯಿ.

ಶ್ರೀ ಬಿ.ಶಿವರಾಂ : ನಬಾರ್ಡ್‌ನಿಂದ ಇಲ್ಲಿಯವರೆಗೆ ಒಟ್ಟು ಮಂಜೂರಾತಿಯಾಗಿರುವ ಬಗ್ಗೆ ಹೇಳುತ್ತಿದ್ದೀರಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ : 2000 ರಿಂದ 2004 ರವರೆಗೆ ಬಿಡುಗಡೆ ಯಾಗಿರುವ ಬಗ್ಗೆ ಹೇಳುತ್ತಿದ್ದೇನೆ. ಹೊಳೆನರಸೀಪುರ ಕ್ಷೇತ್ರಕ್ಕೆ 50 ಲಕ್ಷ ಕೊಟ್ಟಿದ್ದಾರೆ. ಆದರೆ, ನಾಲ್ಕು ವರ್ಷಗಳಿಂದ ನನ್ನ ಕ್ಷೇತ್ರಕ್ಕೆ ಹಣ ಕೊಟ್ಟಿಲ್ಲ. ಮತ್ತೆ ಹಾಸನಕ್ಕೆ 4.86 ಕೋಟಿ ರೂಪಾಯಿ, ಬೆಳಗೊಳಕ್ಕೆ 4.61 ಕೋಟಿ ರೂಪಾಯಿ ಮತ್ತು ಸಕಲೇಶಪುರ 2.56 ಕೋಟಿ ರೂಪಾಯಿ ಕೊಟ್ಟಿದ್ದಾರೆ.

ಏಕೆಂದರೆ, ಮಲೆನಾಡಿನಲ್ಲಿ ಯಾರೂ ಕೂಡ ಓಡಾಡಬಾರದೆಂದು 2.56 ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಬಾರ್ಡ್ ಬಗ್ಗೆ ಇಷ್ಟು ಮಾತ್ರ ಹೇಳಿದ್ದೇನೆ. ಬೇರೆ ಕ್ಷೇತ್ರಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಶಿವರಾಂ : ನಬಾರ್ಡ್ ಬಗ್ಗೆ ಪ್ರಾರಂಭದಿಂದ ಇಲ್ಲಿಯವರೆಗೆ ಮಾತ್ರ ಹೇಳಿದ್ದೀರಿ. ನಿಮ್ಮ ಅವಧಿಯಲ್ಲಿ ಕೊಟ್ಟಿರುವ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ದಯಮಾಡಿ ತಾವು ತಾಳ್ಮೆಯಿಂದ ಕುಳಿತರೆ ನನ್ನ ಅವಧಿಯ ಬಗ್ಗೆ ಕೂಡ ಹೇಳುತ್ತೇನೆ, ಮುಚ್ಚುಮರೆ ಮಾಡುವುದಕ್ಕೆ ಹೋಗುವುದಿಲ್ಲ. 1999 ರಲ್ಲಿ 55 ತಾಲ್ಲೂಕಿಗೆ ಕೊಟ್ಟಿಲ್ಲ ಮತ್ತು 2000ನೇ ಇಸವಿಯಲ್ಲಿ 32 ತಾಲ್ಲೂಕಿಗೆ ಕೊಟ್ಟಿಲ್ಲ. ಈ ವಿಷಯವನ್ನು ಈಗಾಗಲೇ ಹೇಳಿದ್ದೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಧ್ಯಕ್ಷರಾಗಿದ್ದರು. ಅವರ ಬಗ್ಗೆ ಈ ಸಭೆಯಲ್ಲಿ ದೂಷಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಅವರು ಅಧ್ಯಕ್ಷರಾಗಿದ್ದಾಗ 2 ಜಿಲ್ಲೆಗಳನ್ನು ಬಿಟ್ಟರೆ ಉಳಿದಂತೆಲ್ಲಾ ನೀವೇ ನೋಡಿಕೊಳ್ಳಿ ಎಂದು ಹೇಳುತ್ತಿದ್ದರು. ಏಕೆಂದರೆ, ಹೊರಗೊಂದು, ಒಳಗೊಂದು ಹೇಳುವಂಥ ಸ್ವಭಾವ ನನಗೆ ಇಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಅವರು ಈಗ ಇಲ್ಲ. ಆದರೂ ಕೂಡ ಹೇಳುತ್ತೇನೆ. ಅವರು ಗುಲ್ಬರ್ಗಾ ಜಿಲ್ಲೆ ನೋಡಿಕೊಳ್ಳುತ್ತಿದ್ದರು. ಅದರಲ್ಲಿಯೂ ಸೇಡಂ ತಾಲ್ಲೂಕನ್ನು ಸ್ವಲ್ಪ ಜಾಸ್ತಿ ನೋಡಿಕೊಳ್ಳುತ್ತಿದ್ದರು. ಡಾಕ್ಟರ್‌ರವರ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಬಹಳ ಪ್ರೇಮ ಇದೆ. ಆದರೆ, ಮಾನ್ಯ ಧರ್ಮಸಿಂಗ್ ಸಾಹೇಬರ ಮೇಲೆ ಡಾಕ್ಟರ್‌ರವರು ಸರಿಯಾಗಿ ನಿಗಾ ಮಾಡುತ್ತಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಬೇರೆ ಜಿಲ್ಲೆಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ನಮ್ಮ ಅಧಿಕಾರಿಗಳು ಮಾಡಿದ ಪಟ್ಟಿಯನ್ನೇ ಅವರು ಒಪ್ಪಿಕೊಳ್ಳುತ್ತಿದ್ದರು. ಏಕೆಂದರೆ, ಹಿಂದೆ-ಮುಂದೆ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವಿಧಾನಸಭಾ ಕ್ಷೇತ್ರ ಬಿಡದ ಹಾಗೆ ಎಲ್ಲಾ ಕ್ಷೇತ್ರಕ್ಕೆ ನಾನು ಕೊಟ್ಟಿದ್ದೇನೆ. ಬೇಕಾದರೆ ಅವರು ಮಾಹಿತಿಯನ್ನು ತೆಗೆದು ನೋಡಲಿ. ಇದರ ಬಗ್ಗೆ ಮಾನ್ಯ ಡಿ.ಆರ್.ಪಾಟೀಲ್ ಬೇಕಾದರೆ ಹೇಳಲಿ. ಕೆಲವು ತಾಲ್ಲೂಕುಗಳಿಗೆ 5 ವರ್ಷಗಳಿಂದ ಒಂದು ರೂಪಾಯಿ ಕೊಟ್ಟಿಲ್ಲವೆಂಬುದರ ಬಗ್ಗೆ ಈಗಾಗಲೇ ಹೇಳಿದೆ. ಆದರೆ, ನಾನು ಒಂದು ಕೋಟಿ ರೂಪಾಯಿಗಳನ್ನಾದರೂ ಕೊಟ್ಟಿದ್ದೇನೆ. ಅವತ್ತಿನ ದಿವಸ ಮಾನ್ಯ ಖರ್ಗೆಯವರು ಇದ್ದಂಥ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಶಾಸಕರಿಗೆ ಎಷ್ಟು ಕೊಟ್ಟಿದ್ದಾರೆ ಸ್ವಾಮಿ? ಬಿಜೆಪಿ ಶಾಸಕರಿಗೆಲ್ಲ 60 ಲಕ್ಷ 70 ಲಕ್ಷ ಅಥವಾ 80

ಲಕ್ಷ ರೂಪಾಯಿ ಕೊಟ್ಟಿರಬಹುದು. ಏಕೆಂದರೆ, ನಾನು ಇದ್ದ ಹಾಗೆ ಹೇಳಬೇಕಲ್ಲವೇ? ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಶಾಸಕರಿಗೆ ಎಷ್ಟು ಕೊಟ್ಟಿದ್ದಾರೆಂಬುದರ ಬಗ್ಗೆ ಕೂಡ ತಾವು ತೆಗೆದು ಓದಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಟಿ.ನಾಗರಾಜ್ : ಆ ಸಂದರ್ಭದಲ್ಲಿಯೂ ಕೂಡ ನಮಗೆ 50 ಲಕ್ಷ ರೂಪಾಯಿಗಳಷ್ಟೆ ಕೊಟ್ಟಿರುವುದು. ಕಳೆದ ವರ್ಷ 1 ಕೋಟಿ ರೂಪಾಯಿ ಕೊಟ್ಟಿದ್ದಾರಷ್ಟೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಗರಾಜ್‌ರವರೆ ರಸ್ತೆ ಬೇಕಾಗಿಲ್ಲ. ಅವರ ವ್ಯವಹಾರ ಬೇರೆ ಇದೆ. ಅವರು ಬೆಳಗ್ಗೆ ಎದ್ದ ತಕ್ಷಣ ರಸ್ತೆ ಕೇಳುತ್ತಾರೆಯೇ? ಖರೀದಿ ಮಾಡುವುದಕ್ಕೆ ಎಲ್ಲಿ ಜಮೀನು ಇದೆ ಎಂದು ನೋಡುತ್ತಾರೆ. ಆದ್ದರಿಂದ, ಅವರು ರಸ್ತೆ ಕಟ್ಟಿಕೊಂಡು ಏನು ಮಾಡುತ್ತಾರೆ? ಸರ್ಕಾರಿ ಜಮೀನನ್ನು ನೀವು ಕೇಳುತ್ತಿದ್ದೀರೆಂದು ನಾನು ಹೇಳುತ್ತಿಲ್ಲ. ವ್ಯಾಪಾರವನ್ನು ನಾನು ಸಹ ಮಾಡಬಹುದು. ಆದರೆ, ರಸ್ತೆ ವಿಷಯದ ಬಗ್ಗೆ ನೀವು ಅಷ್ಟೊಂದು...

ಶ್ರೀ ಎಂ.ಟಿ.ಬಿ.ನಾಗರಾಜ್ : ನೀವೇ ಈಗ ಹಣ ಕೊಟ್ಟು ವ್ಯಾಪಾರ ಮಾಡುತ್ತಿರುವುದು.

ಶ್ರೀ ಹೆಚ್.ಡಿ.ರೇವಣ್ಣ : ನಾವು ನೀವು ಜೊತೆಯಲ್ಲಿ ಸೇರಿಕೊಳ್ಳೋಣ ಬಿಡಿ. ಮಾನ್ಯ ಹಂಪನಗೌಡರೆ, ತಮಗೆ ಇದೆಲ್ಲಾ ಗೊತ್ತಾಗುವುದಿಲ್ಲ ಸುಮ್ಮನಿರಿ. ಹೊಡೆದಾಟ ಮಾಡಿ ಕ್ಷೇತ್ರದ ಕೆಲಸ ಮಾಡಿಸಿಕೊಳ್ಳುವಂಥದು ಮಾನ್ಯ ಹಂಪನಗೌಡರಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದಲೇ ನೀವು 250 ಕಿ.ಮೀ.ನಷ್ಟು ರಸ್ತೆ ಮಾಡಿಸಿರುವುದು. ಮಾನ್ಯ ಹಂಪನಗೌಡರನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಅವರು ಯಾವುದೇ ಪಾರ್ಟಿಯಲ್ಲಿರಲಿ, ಅವರ ಕ್ಷೇತ್ರದ ಕೆಲಸವನ್ನು ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಯಡಿಯೂರಪ್ಪನವರ ಹತ್ತಿರ ಮಾಡಿಸಿಕೊಳ್ಳುತ್ತಾರೆ. ಹಾಗೆಯೇ ಮಾನ್ಯ ಎಂ.ಪಿ.ಪ್ರಕಾಶ್‌ರವರ ಹತ್ತಿರ ಹೋಗಿ ಯಾವುದೇ ಪತ್ರಕ್ಕೆ ಬೇಕಾದರೂ ಸಹಿ ಮಾಡಿಸಿಕೊಳ್ಳುತ್ತಾರೆ. ಅದು ನಮಗೆ ಬರುವುದಿಲ್ಲ. ಏಕೆಂದರೆ, ನಾವು ನೇರವಾಗಿ ಹೇಳುತ್ತೇವೆ ಅಲ್ಲವೆ? ನಾವು ದಡ್ಡರು ಆಗುತ್ತೇವೆ. ನಬಾರ್ಡ್ ಬಗ್ಗೆ ನನ್ನ ಕಾಲದ ಪಟ್ಟಿಯನ್ನು ಕೂಡ ಇಡುತ್ತೇನೆ. 1994–2000 ರದ್ದು ಎರಡನ್ನು ಪರಿಶೀಲನೆಗೆ ಕೊಟುತ್ತೇನೆ, ಸ್ವಾಮಿ. 224 ಕ್ಷೇತ್ರದಲ್ಲಿ, ನಗರ ಪ್ರದೇಶಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಅದು ಬಿಟ್ಟು ನಾನು ಎಲ್ಲಾ ಕಡೆ ಕೊಟ್ಟಿದ್ದೇನೆ. ಮಾಧುಸ್ವಾಮಿ

ಕ್ಷೇತ್ರಕ್ಕೆ 1.80 ಕೋಟಿ ರೂ.ಗಳನ್ನು ಕೊಟ್ಟಿದ್ದೆ, ಅಲ್ಲಿ 99 ಲಕ್ಷ ರೂ.ಗಳು ಬೇರೆ ಕೆಲಸಕ್ಕೆ ಹೋಗಿದೆ ಎಂದರು. ನಾನು ಅಲ್ಲಿ ದುಡ್ಡು ಕೊಟ್ಟಿದ್ದೇನೆ. ಅಲ್ಲಿ ಸ್ಥಳೀಯ ಕೆಲಸ ಇತ್ತು ಅದನ್ನು ಮಾಡಿಸಿದ್ದೇವೆ. ಅದರ ಬಗ್ಗೆ ಅವರು ಏನು ತಪ್ಪು ತಿಳಿದುಕೊಳ್ಳುವುದು ಬೇಡ. ಯಾರೋ ಬಂದು ಅರ್ಜಿಯನ್ನು ಕೊಡುತ್ತಾರೆ. ಕೊಟ್ಟಾಗ ಅದನ್ನು ಮಾಡಿದ್ದೇನೆ. ನಾನು ಅವರ ತಾಲ್ಲೂಕಿಗೆ ದುಡ್ಡು ಕೊಡುವುದರಲ್ಲಿ ಅನ್ಯಾಯವನ್ನು ಮಾಡಿಲ್ಲ. ನೀವು ಬೇರೆ ಯಾರಿಗಾದರೂ ಕೊಟ್ಟುಕೊಳ್ಳಿ. ನಮಗೆ extra ಗ್ರ್ಯಾಂಟ್ ಕೊಡಿ ಎನ್ನುವ ಒಂದು ಆಪಾದನೆ ಇತ್ತು. ಅದನ್ನು ಸರಿಪಡಿಸುತ್ತೇನೆ ಬಿಡಿ. ನಬಾರ್ಡಿಗೆ ಸಂಬಂಧಪಟ್ಟಂತೆ ಸರಿಪಡಿಸೋಣ. ಮಾನ್ಯ ಧರ್ಮಸಿಂಗ್ ಸಾಹೇಬರಿಗೆ ಬೀಗ ತೆಗೆಯಲು ಬಿಡುತ್ತಿರಲಿಲ್ಲ. ಅವರ ಕಾಲದಲ್ಲಿ 950 ಕೋಟಿ ರೂ.ಗಳು. ಐದು ವರ್ಷದಲ್ಲಿ ಕೊಡಲಾಗಿದೆ. ಸ್ವಾಮಿ. ನಾನು ಮೂರು ವರ್ಷಕ್ಕೆ 1,139 ಕೋಟಿ ರೂ.ಗಳನ್ನು ರಸ್ತೆಗೆ ತೆಗೆದುಕೊಂಡಿದ್ದೇನೆ. ಇದು ಒಂದು ಭಾಗ ನಬಾರ್ಡಿನದ್ದು. ರಾಜ್ಯ ರಸ್ತೆ ನಿಗಮದ ಬಗ್ಗೆ ಹೇಳಬೇಕಾಗುತ್ತದೆ. CRF ಮತ್ತು ನಂಜುಂಡಪ್ಪ ವರದಿಯ ಬಗ್ಗೆ ಮೊದಲು ತಂದು ಬಿಡುತ್ತೇನೆ. ನಂಜುಂಡಪ್ಪ ವರದಿಯನ್ನು ಪ್ರಿಂಟ್ ಮಾಡಿಸಲಾಗಿದೆ. 39 ತಾಲ್ಲೂಕಿನ ಬಗ್ಗೆ ಏನು ಹಣಕಾಸು ಇಲಾಖೆಯವರು ಕೊಟ್ಟರು ಅತೀ ಬ್ಯಾಕ್‌ವರ್ಡ್ ಏರಿಯಾಗೆ 180 ಲಕ್ಷ ರೂ.ಗಳು, ಹಿಂದುಳಿದ ತಾಲ್ಲೂಕಿಗೆ 90 ಲಕ್ಷ ರೂ.ಗಳು ಬ್ಯಾಕ್‌ವರ್ಡ್ ಏರಿಯಾಕ್ಕೆ 71 ಲಕ್ಷ ರೂ.ಗಳು ಎಂದು ಹಣಕಾಸು ಇಲಾಖೆಯವರೇ ಮಾಡಿ ಕಳುಹಿಸಿದ್ದರು. ನಬಾರ್ಡ್‌ದ್ದು ಎಲ್ಲಾ ಜನವರಿ ಮತ್ತು ಫೆಬ್ರವರಿಯಲ್ಲಿಯೇ ಆಗುವುದು. ನಾನು ಈ ವರ್ಷ ನಬಾರ್ಡಿನಲ್ಲಿ 200 ಕೋಟಿ ರೂ.ಗಳನ್ನು extra ತೆಗೆದುಕೊಂಡಿದ್ದೇನೆ. ನಬಾರ್ಡಿನ ದುಡ್ಡಿನಲ್ಲಿ ಏನಾದರೂ ಖರ್ಚು ಮಾಡಿದ್ದರೆ more than 50% PWD ನಲ್ಲಿ ನಾನೇ ಖರ್ಚು ಮಾಡಿರುವುದು. ನನಗೆ ಕೊಟ್ಟಿರುವ ಗ್ರ್ಯಾಂಟಿಗಿಂತ ಕಳೆದ ಸಾರಿ ಇನ್ನು extra 200 ಕೋಟಿ ರೂ.ಗಳನ್ನು ತೆಗೆದುಕೊಂಡಿದ್ದೇನೆ. ಬೇಕಾದರೆ progressನ್ನು ತೆಗೆಸಿ ನೋಡಿ. ಈ ವರ್ಷದ ಮಾರ್ಚ್ 31 ರೊಳಗೆ ನಬಾರ್ಡಿನ RIDF-13 ನ ಕೆಲಸಗಳನ್ನು ಮುಗಿಸಬೇಕೆಂದು ನಮ್ಮ ಅಧಿಕಾರಿಗಳು ಮತ್ತು ನಾವು ಇಲಾಖೆಯಿಂದ ಒಂದು Challenge ತೆಗೆದುಕೊಂಡಿದ್ದೇವೆ. ಏನೇ ಕೆಲಸ ಇರಲಿ,, 1,139 ಕೋಟಿ ರೂ.ಗಳನ್ನು Complete ಆಗಿ ನನ್ನ ಕಾಲದಲ್ಲಿ ಈ ವರ್ಷ ಆ ಎಲ್ಲಾ ಕೆಲಸ

ಮುಗಿಸಬೇಕೆಂದು ಒಂದು ನಿರ್ಣಯವನ್ನು ಮಾಡಿದ್ದೇನೆ. ಇನ್ನು ನಂಜುಂಡಪ್ಪ ವರದಿಯಲ್ಲಿ ಏನು ಇದೆ ಎನ್ನುವುದರ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. ಉದಾಹರಣೆಗೆ ಹೇಳುವುದಾದರೆ ಮಾನ್ಯ ರಾಯರೆಡ್ಡಿಯವರು ಇಲ್ಲ. ಅವರ ಕ್ಷೇತ್ರವು ನಂಜುಂಡಪ್ಪ ವರದಿಯ ತಾಲ್ಲೂಕಿಗೆ ಸೇರಿಕೊಂಡಿದೆ. ಅಲ್ಲಿ ಒಂದು ಕಿ.ಮೀ. ರಸ್ತೆಗೆ ಹೊಸದಾಗಿ ಟಾರ್ ಹಾಕಬೇಕೆಂದರೂ ಸಿಗುತ್ತಿಲ್ಲ. ಬೇಕಾದರೆ ಕೇಳಲಿ ಇದನ್ನು ನಾನು ಹೇಳುವುದು ಅಲ್ಲ. ಈಗ ಮೂರುವರೆ ಮೀಟರ್ ಇರುವುದನ್ನು ಐದುವರೆ ಮೀಟರ್ ಮಾಡುತ್ತಿದ್ದಾರೆ. ಏಕೆಂದರೆ ತೆಗೆದು ನೋಡಲಿ. ಆ 39 ತಾಲ್ಲೂಕಿನ ಗ್ರ್ಯಾಂಟ್‌ನ್ನು ಮೀಸಲಾಗಿ ಇಟ್ಟಿದ್ದೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಆ ಪಟ್ಟಿಯನ್ನು ಯಾರನ್ನು ಕೇಳಿ ಮಾಡಿದ್ದೀರಿ ಅದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಹೇಳುತ್ತೇನೆ, ದಯಮಾಡಿ ಕುಳಿತುಕೊಳ್ಳಿ. ಅವರ ಕ್ಷೇತ್ರದ್ದು ಬಿಟ್ಟು ನಾನು ಏನು ಮಾಡಿಲ್ಲ. ಡಿಪಾರ್ಟ್‌ಮೆಂಟ್‌ನಿಂದ ಬರುತ್ತದೆ. ಯಾರೋ ಹೇಳದವರು, ಕೇಳದವರು ನಿರ್ಗತಿಕರು ಇರುತ್ತಾರೆ. ಅವರು ಹೇಳಿದ ರಸ್ತೆಗಳನ್ನು ಸೇರಿಸಬಾರದೇ ಸ್ವಾಮಿ? ಸೇರಿಸಬಾರದೆಂದು ಏನಾದರೂ ಇದ್ದರೆ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಶ್ರೀ ಎಂ.ಟಿ.ಬಿ.ನಾಗರಾಜ್‌ರವರೆ, ನೀವು ರಸ್ತೆ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳುತ್ತೀರಿ? ಸುಮ್ಮನೆ ಕುಳಿತುಕೊಳ್ಳಿ. CRF ಬಗ್ಗೆ ನಾನು ಬೇರೆ ಜಿಲ್ಲೆಯ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ, ಸ್ವಾಮಿ. ನನ್ನ ಜಿಲ್ಲೆಯಲ್ಲಿ ಹೆಚ್ಚಿಗೆ ದುಡ್ಡು ತೆಗೆದುಕೊಂಡಿದ್ದೇನೆ ಎನ್ನುವ ಒಂದು ಆಪಾದನೆ ಇದೆ. ಹೊಳೆನರಸೀಪುರ, ಹಾಸನ, ಇದಕ್ಕೆ ಒಂದೊಂದಾಗಿ ಉದಾಹರಣೆ ಯನ್ನು ಹೇಳಿಕೊಂಡು ಬರುತ್ತೇನೆ. 2000–2004 ರವರೆಗೆ ಬೇಲೂರು ವಿಧಾನಸಭೆ ಕ್ಷೇತ್ರಕ್ಕೆ 5 ವರ್ಷಕ್ಕೆ 50 ಲಕ್ಷ ರೂ.ಗಳು ಸಕಲೇಶಪುರ ವಿಧಾನಸಭೆ ಕ್ಷೇತ್ರಕ್ಕೆ 72 ಲಕ್ಷ ರೂ.ಗಳು, ಶ್ರವಣಬೆಳಗೊಳ ಕ್ಷೇತ್ರಕ್ಕೆ 3.35 ಕೋಟಿ ರೂ.ಗಳು, ಅರಕಲಗೂಡು ಕ್ಷೇತ್ರಕ್ಕೆ 2.54 ಕೋಟಿ ರೂ.ಗಳು ಹಾಸನ ಕ್ಷೇತ್ರಕ್ಕೆ 2 ಕೋಟಿ ರೂ.ಗಳು ಹೊಳೆನರಸೀಪುರ ಕ್ಷೇತ್ರಕ್ಕೆ 50 ಲಕ್ಷ ರೂ.ಗಳು, ಗಂಡಸಿ ಕ್ಷೇತ್ರಕ್ಕೆ ಮಾನ್ಯ ಶಿವರಾಂರವರು 17.50 ಕೋಟಿ ರೂ.ಗಳನ್ನು 5 ವರ್ಷಕ್ಕೆ ತೆಗೆದುಕೊಂಡಿದ್ದಾರೆ, ಸ್ವಾಮಿ.

(ಗೊಂದಲ)

ಶ್ರೀ ಹೆಚ್.ಎಂ.ವಿಶ್ವನಾಥ್ : ನೀವು 17.50 ಕೋಟಿ ರೂ.ಗಳನ್ನು ತೆಗೆದುಕೊಂಡಿದ್ದೀರಿ, ನಕ್ಸಲೈಟ್ ಕ್ಷೇತ್ರಕ್ಕೆ ಏನು ತೆಗೆದುಕೊಳ್ಳಬೇಡಿ ಎಂದು ಹೇಳುತ್ತೀರಾ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನನ್ನ ತಾಲ್ಲೂಕಿನ ಬಗ್ಗೆ ಕೂಡ ಹೇಳುತ್ತೇನೆ. ನಾನು ಬೇರೆ ಕ್ಷೇತ್ರಕ್ಕೆ ಹೋಗುವುದಿಲ್ಲ. ಸ್ವಾಮಿ. ಒಂದು ಉದಾಹರಣೆ ನನ್ನ ಜಿಲ್ಲೆಯ ಬಗ್ಗೆ ಆಪಾದನೆ ಮಾಡಿರುವ ಬಗ್ಗೆ ಮಾನ್ಯ ಸಭಾನಾಯಕರು ಮುಖ್ಯಮಂತ್ರಿಗಳು ಇರುವುದರಿಂದ ಇವರು ಏನೋ ಮಾಡಿ ಬಿಟ್ಟಿದ್ದಾರೆ ಲೋಕೋಪಯೋಗಿ ಮಂತ್ರಿಗಳು ಎಂದು ಉಪ ಮುಖ್ಯಮಂತ್ರಿಗಳು ಮತ್ತು ನಮ್ಮ ಲಾ ಮಿನಿಸ್ಟರ್ ತಿಳಿದುಕೊಳ್ಳಬಾರದೆಂದು ಅವರ ಸಮ್ಮುಖದಲ್ಲಿ ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ತಪ್ಪು ತಿಳಿದುಕೊಳ್ಳಬಾರದು.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಇವರು ಇಷ್ಟೊಂದು ಹುಷಾರಾಗಬಾರದು ಸ್ವಾಮಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮುಖ್ಯಮಂತ್ರಿಗಳಾಗುವುದಕ್ಕೆ ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡಿದ್ದೀರಿ ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ : ಹಾಸನ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ ಅದನ್ನು ಹೇಳುತ್ತೇನೆ.

ಶ್ರೀ ಧರ್ಮಸಿಂಗ್ : ಈಗ ಡಾ: ಶರಣಪ್ರಕಾಶ್‌ರವರು ನಂಜುಂಡಪ್ಪ ವರದಿಯ ಪ್ರಕಾರ ಎಷ್ಟು ಕೊಟ್ಟಿದೀರಿ ಎಂದು ಕೇಳಿದರು. ಶಾಸಕರು ಕೊಟ್ಟಿದ್ದನ್ನು ಬಿಟ್ಟು ಈವು ಬೇರೆಯವರಿಗೆ ಕೊಡುತ್ತೀರಾ? ಅಲ್ಲಿಯೆ ನೀವು politics ಮಾಡುವುದು. ಅದರ ಬಗ್ಗೆ ನಿಖರವಾಗಿ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ ನಬಾರ್ಡಿನ ದುಡ್ಡು ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ಬಂತು ಎನ್ನುವುದನ್ನು ಸಭೆಯ ಗಮನಕ್ಕೆ ತರುತ್ತೇನೆ. CRF ನಲ್ಲಿ 2000–2001 ರಲ್ಲಿ 33 ಕಾಮಗಾರಿಗಳಿಗೆ 48 ಕೋಟಿ ರೂ.ಗಳು. 2001–02 ರಲ್ಲಿ 103 ಕಾಮಗಾರಿ 39 ಕೋಟಿ ರೂ.ಗಳು 2002–03 ರಲ್ಲಿ 62 ಕಾಮಗಾರಿ 39 ಕೋಟಿ ರೂ.ಗಳು, 2003–2004 ರಲ್ಲಿ 129

ಕಾಮಗಾರಿ 94 ಕೋಟಿ ರೂ.ಗಳು. ನಾಲ್ಕು ವರ್ಷದಲ್ಲಿ ಬಂದಿದ್ದು 258 ಕೋಟಿ ರೂ.ಗಳು. ಇದರ ನಂತರ ನಾವು ಬಂದ ಮೇಲೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳು ಇದ್ದಂಥ ಕಾಲದಲ್ಲಿ 2004–2005 ರಲ್ಲಿ 241 ಕೋಟಿ ರೂ.ಗಳು, 2005–2006ರಲ್ಲಿ 110 ಕೋಟಿ ರೂ. ಗಳು, 2006–07ರಲ್ಲಿ 228 ಕೋಟಿ ರೂ.ಗಳು, ಒಟ್ಟು 484 ಕೋಟಿ ರೂ. ಗಳು. ಅಂದರೆ ಒಂದಕ್ಕೆ ಎರಡು ಪಟ್ಟು ಹಣವನ್ನು ಬರೀ ಮೂರು ವರ್ಷದಲ್ಲಿ ಬಂದಿದೆ. ಇನ್ನೂ ಈ ವರ್ಷದ್ದು ಕೊಟ್ಟಿಲ್ಲ. ಅದನ್ನು ಬೇಕಾದರೂ ಸಭೆ ಮುಂದೆ ಇಡುತ್ತೇನೆ. ಯಾವ್ಯಾವ ಶಾಸಕರಿಗೆ ಎಷ್ಟೆಷ್ಟು ಕೊಟ್ಟಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ಕೋಲಾರದ ಶ್ರೀನಿವಾಸಗೌಡರು ಇಲ್ಲಿಯೇ ಕುಳಿತಿದ್ದಾರೆ. ಅವರ ಕ್ಷೇತ್ರಕ್ಕೆ 3 ಕೋಟಿ ರೂ.ಗಳನ್ನು ಕೊಟ್ಟಿದೆ. ಮಾನ್ಯ ರಮೇಶ್‌ಕುಮಾರ್ ಸಾಹೇಬರು ಸುಮ್ಮನೆ ಕುಳಿತಿದ್ದಾರೆ ಬಿಡಿ ಪಾಪ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ನನಗೆ 324 ರಿಂದ ಹಿಡಿದು 302 ವರೆಗೆ total 18 cases ಕೊಟ್ಟಿದ್ದಾರೆ including a double murder case.

ಶ್ರೀ ಹೆಚ್.ಡಿ.ರೇವಣ್ಣ : ಈಗ Inter-State Connectivity ಯಲ್ಲಿ ಏನು ಮಾಡಿದ್ದೇನೆ ಎನ್ನುವುದನ್ನು ಸಭೆ ಗಮನಕ್ಕೆ ತರಬೇಕಾಗುತ್ತದೆ. 2000–2004 ರವರೆಗೆ ಒಂದೇ ಒಂದು ರೂಪಾಯಿ Inter-State grant ಬಂದಿಲ್ಲ. ಕಳೆದ 4 ವರ್ಷಗಳಲ್ಲಿ Inter-State grant ಒಂದು ರೂಪಾಯಿ ಸಹ ಬಂದಿಲ್ಲ. ಈಚೆಗೆ 2004–05ರಲ್ಲಿ Inter-State grant ಸುಮಾರು 100 ಕೋಟಿ ರೂಪಾಯಿಗಳು ಬಂದಿದೆ. ಅದರಲ್ಲಿ ತೆಗೆದುಕೊಂಡಿರುವಂತಹ ಕೆಲಸಗಳು ಯಾವುದೆಂದರೆ, ಕೊಳ್ಳೇಗಾಲ, ಕೊರಟಗೆರೆ, ಮಳವಳ್ಳಿ, ಮದ್ದೂರು, ತುಮಕೂರು, ಕೊರಟಗೆರೆ ವಿಭಾಗ ರಸ್ತೆಯ ಅಭಿವೃದ್ಧಿಗೆ 13 ಕೋಟಿ 75 ಲಕ್ಷ ರೂಪಾಯಿಗಳು. ಅದೇ ರೀತಿಯಾಗಿ ಗುಬ್ಬಿ ತಾಲ್ಲೂಕು ತುಮಕೂರು ಚೇಳೂರು, ಬುಕ್ಕನಬೆಟ್ಟ 25 ಕಿ.ಮೀ. ರಿಂದ 54 ಕಿ.ಮೀ MDR ಅಭಿವೃದ್ಧಿ 98 ಲಕ್ಷ ರೂಪಾಯಿಗಳು ಹಿರಿಯೂರು, ಬುಕ್ಕನಬೆಟ್ಟ, ಶಿರಾ ಅಭಿವೃದ್ಧಿಗೆ 2 ಕೋಟಿ ರೂಪಾಯಿಗಳು. ಮೂಡಿಗೆರೆಯಿಂದ ಕೋಲಾರದವರೆಗೆ ರಸ್ತೆ ಕೆಲಸದ ಬಾಬ್ತು 56 ಕೋಟಿ ರೂಪಾಯಿಗಳು.

ಶ್ರೀ ಡಿ.ಆರ್.ಪಾಟೀಲ್ : Inter-State Connectivity ಮತ್ತು CRF ಅವು ಎರಡು ಸಹ ಕೇಂದ್ರ ಸರ್ಕಾರದಿಂದ ಬಂದಿದೆಯಲ್ಲಾ, ಆಗ

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಈಗ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಮಾನ್ಯ ಸದಸ್ಯರಾದ ಶ್ರೀ ಡಿ.ಆರ್.ಪಾಟೀಲ್‌ರವರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಆಗ ಬಿಜೆಪಿ ಸರ್ಕಾರ ಇತ್ತು ಎನ್ನುವುದಲ್ಲ. ಒಂದು ಉದಾಹರಣೆಯನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇದು ಮಾನ್ಯ ಕುಮಾರಸ್ವಾಮಿಯವರ ಮತ್ತು ಬಾಲುರವರ ಆತ್ಮೀಯತೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಮಾನ್ಯ ಧರ್ಮಸಿಂಗ್ ರವರು ಸಹ ಚೆನ್ನಾಗಿದ್ದಾರೆ. ಇದರಲ್ಲಿ ನಮ್ಮದು ಏನೂ ಇಲ್ಲ. ಅದರ ಮೇಲೆ ಡಬಲ್ ಹಣ ಬಂದಿದೆ. ನಾನು ಡಿ.ಆರ್.ಪಾಟೀಲ್‌ರವರಿಗೆ ಹೇಳುತ್ತೇನೆ. ರಾಷ್ಟ್ರೀಯ ಹೆದ್ದಾರಿಗೆ ಬಿಜೆಪಿ ಸರ್ಕಾರವಿದ್ದಾಗ 300 ಕೋಟಿ ರೂಪಾಯಿಗಳ ಹಣ ಮೈಂಟೆನೆನ್ಸ್‌ಗೆ ಬರುತ್ತಿತ್ತು. Maintenance ಗೆ ಈಗ ಅದನ್ನು 120-ಕೋಟಿ ರೂಪಾಯಿಗಳಿಗೆ ನಿಲ್ಲಿಸಿದ್ದಾರೆ. ಅದೊಂದು ಕಡೆ ಇರಲಿ ಬಿಡಿ. ಉದಾಹರಣೆಗೆ ಹೇಳುವುದಾದರೆ Nationla Highway Upgradation ಆಗಿರುವುದು ಎಷ್ಟು ಎಂದರೆ ನಮ್ಮಲ್ಲಿ 4 ರಸ್ತೆಗಳನ್ನು ಮಾತ್ರ ಮಾಡಿದ್ದಾರೆ. ಇದು ಯಾವುದೆಂದರೆ, ಬೆಂಗಳೂರು-ಹೊಸೂರು NH-7 ಸುಮಾರು 600 ಕೋಟಿ ರೂಪಾಯಿಗಳ ರಸ್ತೆಗಳು. Dairy circle to Electronic City, Electrinic city ಯಿಂದ ಇಲ್ಲಿಯವರೆಗೆ ತಮ್ಮ ಕಾಲದಲ್ಲಿ ಸುಮಾರು 600 ಕೋಟಿ ರೂ.ಗಳ ವೆಚ್ಚದಲ್ಲಿ ಆಗಿದ್ದು. ಅದೇ ರೀತಿಯಾಗಿ Bangalore-Nelarnangala, 450 ಕೋಟಿ ರೂಪಾಯಿ, Bijapura-Hosakote 194 ಕಿ.ಮೀ. ಅದು ಸುಮಾರು 800 ಕೋಟಿ ರೂಪಾಯಿಗಳು ಡಿಪಿಆರ್ ಆಗುತ್ತಿದೆ. ಕುಂದಾಪುರ-ಸುರತ್ಕಲ್, ಮಂಗಳೂರು-ಕೇರಳಗಡಿ, 18 ಕಿ.ಮೀ. ಕೋಲಾರ-ಮುಳಬಾಗಿಲು ಅದು ಸುಮಾರು 700 ಕೋಟಿ ರೂಪಾಯಿಗಳು. ಬಾಕಿ ನಾವು National Highway Upgradation ಗೆ ಸುಮಾರು 34 ರೋಡ್‌ಗಳನ್ನು ಕಳುಹಿಸಿಕೊಟ್ಟಿದ್ದೇವೆ. ಒಂದು Upgradationನ್ನು ಇವತ್ತಿನವರೆಗೂ ಕೂಡ ಮಾಡಿಲ್ಲ. ಇವತ್ತು ತಮಿಳುನಾಡಿನಲ್ಲಿ ಸುಮಾರು ನಾಲ್ಕು ಸಾವಿರ ಕಿ.ಮೀ.ರಸ್ತೆಗಳು 4 ಪಥದ ರಸ್ತೆಗಳು ಆಗುತ್ತಿದೆ. ಇದು ಎಷ್ಟಾಗುತ್ತದೆ ಎಂದು ತಾವು ಲೆಕ್ಕ ಮಾಡಿ ನೋಡಿ. ಸುಮಾರು 10 ಸಾವಿರ ಕೋಟಿ ರೂಪಾಯಿಗಳು ಬರೀ ರಸ್ತೆಗಳ

ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದಾರೆ. ನಾನು ಯಾರ ಬಗ್ಗೆಯೂ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ವಿ.ಸೋಮಣ್ಣ : ಟೀಕೆಗಳನ್ನು ಮಾಡುವುದಿಲ್ಲವೆಂದು ಹೇಳಿ ತಾವು ಹೇಳುವುದನ್ನೆಲ್ಲಾ ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸೋಮಣ್ಣನವರೆ ಇರುವುದನ್ನು ಇದದ್ ಹಾಗೆ ಹೇಳಬೇಕಲ್ಲವೆ? ನಮಗೆ ಅಷ್ಟು ಅನುಭವ ಇಲ್ಲ. State Highway Ugradation 3,200 ಕಿ.ಮೀ. ಆಗಿದೆ. ಅದರಲ್ಲಿ Upgradation South 17 ಕಿ.ಮೀ.ಆಗಿದೆ. MDR ಮತ್ತು ಎರಡನ್ನು ಸಹ ನಾನು ಹೇಳುತ್ತೇನೆ. ನಾನು ಏನು ಕದ್ದು ಹೋಗುತ್ತಿಲ್ಲ. 3,200 ಕಿ.ಮೀ. North ನಲ್ಲಿ Upgradation ಮಾಡಿದ್ದೇವೆ. ಬೇಕಾದರೆ ನಾನು ಲಿಸ್ಟ್‌ನ್ನು ಕೊಡುತ್ತೇನೆ ತಾವು ಓದಿ ನೋಡಿ. ಇಲ್ಲವೆಂದರೆ ಹೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಎಂಡಿಆರ್ ಮಾಡಿಲ್ಲವೆಂದು ಹೇಳುತ್ತಿದ್ದೇವೆ. State Highway Ugradation ಆಗಿದೆ. ಎಂ.ಡಿ.ಆರ್. ಆಗಿಲ್ಲವೆಂದು ನಾವು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ಅದನ್ನೂ ಮಾಡೋಣ. ಅದಕ್ಕೂ ಹಣಕಾಸು ಇಲಾಖೆಗೆ 10 ಸಾವಿರ ಕಿ.ಮೀ. Ugradation ಗೆ ಪ್ರಸ್ತಾವನೆ ಕಳುಹಿಸಿದ್ದೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಆದರೆ ನೀವು ಮಾಡಿರುವಂತಹ ಎಂಡಿಆರ್ ರಸ್ತೆಗಳು ನಿಮ್ಮ ಶಾಸಕರ ಕ್ಷೇತ್ರಕ್ಕೆ ಮಾತ್ರ ಮಾಡಿದ್ದೀರಿ. Individual ಆಗಿ ಆರ್ಡರ್ ಮಾಡಿದ್ದೀರಿ. ನಾನು ಎಲ್ಲರಿಗೂ ಸರಿಸಮಾನವಾಗಿ ಮಾಡಬೇಕೆಂದು ಹೇಳುತ್ತಿದ್ದೇನೆ. ನಾನು ಮಾಡಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಬಿ.ಶಿವರಾಂ : ತಾವು Upgradation ಮಾಡಿದ್ದೀರಲ್ಲ? ಸರ್ಕಾರವೇ norms ನ್ನು ಮಾಡಿರುವುದು. Norms ನ್ನು ತಾವು follow ಮಾಡಿದ್ದೀರಾ ಎನ್ನುವಂತಹ ಪ್ರಶ್ನೆ ನಮ್ಮದು.

ಶ್ರೀ ಹೆಚ್.ಡಿ.ರೇವಣ್ಣ : Norms ಬಗ್ಗೆ ಚರ್ಚೆ ಮಾಡಬೇಕಾದರೆ ಒಂದು ದಿವಸ ಮಾಡೋಣ.

ಶ್ರೀ ಬಿ.ಶಿವರಾಂ : Follow ಮಾಡುವುದಕ್ಕೆ ಸರ್ಕಾರಕ್ಕೆ ಯಾವುದೇ ಗೈಡ್ ಲೈನ್ಸ್ ಬೇಡ. ಯಾವುದು ಬೇಕೋ ಅದು ಬೆಟ್ಟಕ್ಕೆ 3-4 ಕಿ.ಮೀ. ಅದನ್ನು upgrade ಮಾಡಬಹುದೇ?

ಅಧ್ಯಕ್ಷರು : ತಾವು ಪರಸ್ಪರ ಮಾತನಾಡುವುದು ಬೇಡ. ಮಾನ್ಯ ಮಂತ್ರಿಗಳು ಉತ್ತರ ಹೇಳಲು ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ : 3054 ಎಂದು ಇಟ್ಟುಕೊಳ್ಳಿ, ರಾಜ್ಯದಲ್ಲಿ ಸುಮಾರು ಎಷ್ಟೆಂದರೆ, 35 ಸಾವಿರ ಕಿ.ಮೀ. M.D.R. ರಸ್ತೆ ಇದೆ. ಇದರಲ್ಲಿ 1999-2004ರಲ್ಲಿ 5 ವರ್ಷಗಳ ಅವಧಿಗೆ 600.91 ಕೋಟಿ ರೂಪಾಯಿಗಳು ಮಂಜೂರಾಗಿರುವುದು. ಇದು ಧರ್ಮಸಿಂಗ್ ಅವರ ಕಾಲದಲ್ಲಿ 3054 ನಲ್ಲಿ ಆಗಿರುವುದು. ಅದರಲ್ಲಿ 286 ಕೋಟಿ ರೂಪಾಯಿಗಳನ್ನು ಉತ್ತರವಲಯಕ್ಕೆ ಕೊಟ್ಟಿರುವುದು, ದಕ್ಷಿಣ ವಲಯಕ್ಕೆ 404 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು. ಮತ್ತೆ ಇದೇ ರೀತಿಯಾಗಿ 2004-05ರವರೆಗೆ 230 ಕೋಟಿ ರೂಪಾಯಿಗಳು, 2005-06ರಲ್ಲಿ 135 ಕೋಟಿ ರೂಪಾಯಿಗಳು ಇಟ್ಟರು. ಮಾನ್ಯ ಸಿಂಧ್ಯಾರವರು ಹಣಕಾಸಿನ ಮಂತ್ರಿಯಾದ ಮೇಲೆ ಮತ್ತೆ 150 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. 2006ರಲ್ಲಿ ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ಮೇಲೆ 387 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. 2007-08ಕ್ಕೆ 300 ಕೋಟಿ ರೂ.ಗಳು ಇದೆ. ಕಳೆದ 4 ವರ್ಷಗಳಲ್ಲಿ 1,200 ಕೋಟಿ ರೂಪಾಯಿಗಳು, ಉತ್ತರದಲ್ಲಿ 424 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಿದ್ದೇವೆ. ಸೌತ್‌ನಲ್ಲಿ 778 ಕೋಟಿ ರೂಪಾಯಿಗಳು. 5 ವರ್ಷಗಳಲ್ಲಿ ಏನಾಗಿತ್ತು ಎಂದರೆ ಸೌತ್‌ನಲ್ಲಿ ಕೆಲವು ಕಡೆಗಳಲ್ಲಿ ಯಾವ ಊರಿಗೂ ಕೂಡ ಹೋಗುವುದಕ್ಕಾಗುತ್ತಿರಲಿಲ್ಲ. ಆ ಮಟ್ಟಕ್ಕೆ ರಸ್ತೆಗಳು ಇತ್ತು. ಮಾನ್ಯ ಧರ್ಮಸಿಂಗ್‌ರವರದು ತಪ್ಪು ಎಂದು ಅಲ್ಲ. ಮಳೆಯಿಂದಾಗಿ ಹಾಗೂ ಹೆವಿಟ್ರಕ್‌ಗಳಿಂದಾಗಿ ಎಂಡಿಆರ್ ರಸ್ತೆಗಳಲ್ಲಿ ಯಾವ ಟ್ರಕ್ಕುಗಳು ಓಡಾಡುವುದಕ್ಕಾಗುವುದಿಲ್ಲ. ಆ ಉದ್ದೇಶದಿಂದ ಈ ತರಹ ಆಗಿದೆ. ಇದು ಅಲ್ಲದೇ 2004ರಲ್ಲಿ 300 ಕೋಟಿ ರೂ. ಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ತಮಗೆ ಬೇಕಾದರೆ ಅದರ ಡಿಟೇಲ್ಸ್‌ನ್ನು ಕೂಡ ನಾನು ತರಿಸುತ್ತೇನೆ. ನಾನು ಬಂದ ದಿವಸ 1999-2000 ರಲ್ಲಿ 83 ಕೋಟಿ ರೂಪಾಯಿಗಳನ್ನು ಬಾಕಿ ಇತ್ತು. 2000-01 ರಲ್ಲಿ 83 ಕೋಟಿ

ರೂಪಾಯಿಗಳು ಬಾಕಿ, 2001–02ರಲ್ಲಿ 97 ಕೋಟಿ ರೂಪಾಯಿಗಳು ಬಾಕಿ, 2002–03ರಲ್ಲಿ 25 ಕೋಟಿ ರೂಪಾಯಿಗಳು ಬಾಕಿ, 2003–04 ರಲ್ಲಿ 25 ಕೋಟಿ ರೂಪಾಯಿಗಳು ಬಾಕಿ, ಒಟ್ಟು 385.55 ಕೋಟಿ ರೂಪಾಯಿಗಳು ನಾನು ಬಂದ ದಿವಸ, 2004ರವರೆಗೆ ಬಾಕಿ ಇತ್ತು. ಹಿಂದಿನ ಆರು ವರ್ಷಗಳ ಕಾಲದಲ್ಲಿ 385.55 ಕೋಟಿ ರೂಪಾಯಿಗಳು ಬಾಕಿ ಹಣ 3054 ನಲ್ಲಿತ್ತು. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪೂರ್ತಿ ಹಣವನ್ನು ನಾವು ತೀರಿಸಿ, ಕಳೆದ ನಾಲ್ಕು ಅಥವಾ ಐದು ತಿಂಗಳಿಂದ 80 ಕೋಟಿ ರೂಪಾಯಿಗಳ ಬಿಲ್ ಇರಬಹುದು. ಮತ್ತೆ ಎಲ್ಲಾ ಹೆಡ್‌ನಲ್ಲಿ ಇವತ್ತು ಯಾವುದೂ ಬಾಕಿ ಇರುವುದಿಲ್ಲ. ಎಲ್ಲವನ್ನೂ ನಾವು up-to-date ಮಾಡಿದ್ದೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : Upgradation ಮಾಡಿಲ್ಲವೆಂದು ನಾವು ಹೇಳುತ್ತಿದ್ದೇವೆ. ಉತ್ತರ ಕರ್ನಾಟಕದಲ್ಲಿ ಎಂಡಿಆರ್ ರಸ್ತೆಗಳನ್ನು Upgradation ಮಾಡಿ ಎಂದು ನಾವು ಕೇಳುತ್ತಿದ್ದೇವೆ. ಉತ್ತರ ಕರ್ನಾಟಕದಲ್ಲಿ ನಮ್ಮ ಕ್ಷೇತ್ರಗಳಲ್ಲಿಯೂ ಕೂಡ ಡಾ: ನಂಜುಂಡಪ್ಪನವರ ವರದಿಯ ಪ್ರಕಾರ Upgradation of M.D.R. ಮಾಡಿ ಎಂದು ನಾವು ಹೇಳಿದ್ದರೂ ಕೂಡ ಇದುವರೆಗೂ ಮಾಡಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಈಗ ವೀರಬಸವಂತರೆಡ್ಡಿ ಮುದ್ನಾಳ್‌ರವರ ಕ್ಷೇತ್ರದ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ. ಏಕೆಂದರೆ 5 ವರ್ಷದಲ್ಲಿ ಅವರ ಕೆಲಸ ಎಷ್ಟು ಆಗಿರುವುದು ಎಂದರೆ, ನಮ್ಮ ಇಲಾಖೆಯಲ್ಲಿ 960.00 ಲಕ್ಷ ರೂ.ಗಳು ಅಂದರೆ 9 ಕೋಟಿ 60 ಲಕ್ಷ ರೂ.ಗಳು ನಿಮ್ಮ ಕ್ಷೇತ್ರದ್ದು ಆಗಿರುವುದು. ನಾನು ಮೂರು ವರ್ಷದಲ್ಲಿ 966 ಲಕ್ಷ ರೂ.ಗಳಿಗೆ ಕೆಲಸ ಮಾಡಿದ್ದೇವೆ. ಇನ್ನು 20.00 ಲಕ್ಷ ರೂ.ಗಳು ಜಾಸ್ತಿಯಾಗಿದೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ವೀರಬಸವಂತ ರೆಡ್ಡಿಯವರು ಯಾದಗೀರ್ ಕ್ಷೇತ್ರ ನಮ್ಮದು ಸೇಡಂ.

(ಗೊಂದಲ)

ಶ್ರೀ ನರಸಿಂಹ ನಾಯಕ್ (ರಾಜುಗೌಡ) : ಅವರೆಷ್ಟು ತೆಗೆದುಕೊಂಡಿದ್ದಾರೆ ನೋಡಿ.

(5-30 PM)
(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : 5 ವರ್ಷದಲ್ಲಿ ಮಾಡುವುದಕ್ಕಿಂತ ಇನ್ನೂ 20.00 ಲಕ್ಷ ಮೂರು ವರ್ಷದಲ್ಲಿ ಕೊಟ್ಟಿದ್ದೇನೆ. ಇನ್ನೂ ದುಡ್ಡು ಕೊಡುವುದಿದೆ. ಆ ಮೇಲೆ ರಾಯರೆಡ್ಡಿಯವರು ನಮ್ಮ ಕ್ಷೇತ್ರದಲ್ಲಿ ಕೆಲಸವೇ ಆಗಿಲ್ಲವೆಂದು. ಅವರ ಕ್ಷೇತ್ರದಲ್ಲಿ 34.00 ಕೋಟಿ ರೂ.ಗಳ ಕೆಲಸ ನಡೆದಿದೆ. ಉತ್ತರ ಕರ್ನಾಟಕಕ್ಕೆ ಏನು ಕೆಲಸ ಆಗಿದೆಯೆಂದು ಹೇಳುತ್ತಿದ್ದೇವೆ. ಈಗ ರಸ್ತೆ ನಿಗಮದಲ್ಲಿ..

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಸಚಿವರು ಈಗ up-gradation ಮಾಡುತ್ತೀರೋ, ಇಲ್ಲವೋ? ಉತ್ತರ ಕರ್ನಾಟಕಕ್ಕೆ ನೀವು up-gradation ಮಾಡುತ್ತೀರೋ, ಇಲ್ಲವೋ commit ಮಾಡಿ. ಇಷ್ಟು ಮಾಡುತ್ತೇವೆಂದು commit ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಇಷ್ಟು ಹೇಳಿ ಲೋಕೋಪಯೋಗಿ ಇಲಾಖೆಯದಾಯಿತು, ಈಗ ಇಂಧನ ಇಲಾಖೆಗೆ ಸಂಬಂಧಪಟ್ಟಂತೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಾವು up-gradation ಬಗ್ಗೆ ಕೇಳುತ್ತಿದ್ದೇವೆ. ಉತ್ತರ ಕರ್ನಾಟಕ ಕೇವಲ 17,000 ಕಿ.ಮೀ. ಇದೆ, ದಕ್ಷಿಣ ಕನ್ನಡ 20,000 ಕಿ.ಮೀ. ಇದೆ. ನಮಗೂ ಕೂಡ 5,000 ಅಥವಾ 10,000 ಕಿ.ಮೀ. up-gradation ಮಾಡಿ ಕೊಡಿ ಎಂದು ಕೇಳುತ್ತಿದ್ದೇವೆ. ಹೌಸ್‌ನಲ್ಲಿ ಒಂದು ಸಾರಿ commit ಮಾಡಿದರೆ ಸರಿ. ಆಮೇಲೆ ಕೇಳಿದರೆ ಹೌಸ್‌ನಲ್ಲಿ commit ಮಾಡಿಲ್ಲವೆಂದು ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಈಗ up-gradation ಮಾಡಬೇಕಾದದ್ದು, ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಕನಿಷ್ಠ 100 ಕಿ.ಮೀ.ನಂತೆ 224 ಕ್ಷೇತ್ರಗಳಿಗೂ ಮಾಡಬೇಕು. ಮಾಡಿದ ನಂತರ ದುಡ್ಡಿಲ್ಲ ಎನ್ನುತ್ತಾರೆ. ಉದಾಹರಣೆಗೆ ಹೇಳುವುದಾದರೆ..

ಶ್ರೀ ಕೆ.ಆರ್.ರಮೇಶ್ ಕುಮಾರ್ : ನಮ್ಮದೇನೂ ತಕರಾರಿಲ್ಲ, ನಾವೆಲ್ಲಾ ಒಪ್ಪಿಕೊಂಡಿದ್ದೇವೆ. ನಮಗೆ ಗೊತ್ತಿಲ್ಲದೇ ಕೆಲವು ವಿಚಾರಗಳನ್ನು ಹೇಳಿಬಿಟ್ಟಿದ್ದೇವೆ. ಇನ್ನು ಮುಂದೆ ಏನೂ ಹೇಳುವುದಿಲ್ಲ. ಅರ್ಥವಾಯಿತೆ? ದಯಮಾಡಿ ಮುಗಿಸಿ, ಇನ್ನೊಂದು ಅರ್ಧ ಗಂಟೆ ಅವರು ಉತ್ತರ ಹೇಳಿ

ಮುಗಿಸಿಬಿಡಲಿ, ಸಾಕು. ನಮ್ಮನ್ನು ಬಿಟ್ಟುಬಿಡಿ, ನಮಗೆ ಇಷ್ಟು ಶಿಕ್ಷೆ ಕೊಟ್ಟರೆ ಹೇಗೆ? ನಮ್ಮ ಎರಡು ಕೈಗಳನ್ನು ಮೇಲಕ್ಕೆತ್ತಿ ಶರಣಾಗತರಾಗಿದ್ದೇವೆಂದು ಹೇಳಿದ ಮೇಲೂ ಶಿಕ್ಷೆ ಕೊಡುತ್ತೇವೆಂದರೆ ಹೇಗೆ? ನಮ್ಮನ್ನು ಬಿಡುಗಡೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಇಂಧನ ಇಲಾಖೆಗೆ ಸಂಬಂಧಪಟ್ಟ ಹಾಗೆ..

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ತಾವು ಹೇಳಲೇಬೇಕು. ಉತ್ತರ ಕರ್ನಾಟಕದಲ್ಲಿ 17,000 ಕಿ.ಮೀ M.D.R. ಇದ್ದರೆ, ದಕ್ಷಿಣ ಕರ್ನಾಟಕದಲ್ಲಿ 25,000 ಕಿ.ಮೀ. M.D.R. ಇದೆ. ಉತ್ತರ ಕರ್ನಾಟಕದವರಿಗೆ ಅನ್ಯಾಯವಾಗಿದೆ, ಅದನ್ನು ಸರಿಪಡಿಸಿ ಎಂದು ಮಾನ್ಯ ಸಚಿವರಿಗೆ ಕೇಳುತ್ತಿದ್ದೇವೆ. ಅವರು ಒಪ್ಪಿಕೊಳ್ಳಲಿ. ನಾವು ಕುಳಿತುಬಿಡುತ್ತೇವೆ.

ಶ್ರೀ ನರಸಿಂಹ ನಾಯಕ್ (ರಾಜುಗೌಡ) : ಉತ್ತರ ಕರ್ನಾಟಕದಲ್ಲಿ ಅನ್ಯಾಯ ಆಗಿದೆ ಎಂದು ನಮಗೂ ಗೊತ್ತಿದೆ. ಉತ್ತರ ಕರ್ನಾಟಕಕ್ಕೆ ಅವರೊಬ್ಬರೇ M.L.A., ಅಲ್ಲ, ನಾವೆಲ್ಲ ಬೇರೆ ಭಾಗದವರು ಎನ್ನುವಂತೆ ಮಾತನಾಡುತ್ತಿದ್ದಾರೆ, ..

(ಗೊಂದಲ)

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಾವು ಹಾಗೆ ಹೇಳಿಲ್ಲ. ನಮ್ಮ ಕ್ಷೇತ್ರದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷಗಳಲ್ಲಿ individual ಆಗಿ 150 ಕಿ.ಮೀ. ವರೆಗೆ up-gradation ಮಾಡಿದ್ದಾರೆ. ನಮ್ಮ ಕ್ಷೇತ್ರವನ್ನು ಮಾತ್ರ ಬಿಟ್ಟಿದ್ದಾರೆ. ಅಂದರೆ ನಮ್ಮ ಕ್ಷೇತ್ರದ ವ್ಯಾಪ್ತಿಯನ್ನು ಕಡಿಮೆ ಮಾಡುತ್ತಿರುವಿರಾ?

ಶ್ರೀ ಹೆಚ್.ಡಿ.ರೇವಣ್ಣ : ಹಣಕಾಸಿನ ಸಚಿವರ ಜೊತೆ ಮಾತನಾಡಿ ಈಗ ನಿಮ್ಮ ಕ್ಷೇತ್ರದ್ದು ಸೇರಿಕೊಂಡು ಎಲ್ಲಾ ಕ್ಷೇತ್ರಗಳ ಬಗ್ಗೆ one time up-gradation ಮಾಡಲಿಕ್ಕೆ ಪ್ರಾಮಾಣಿಕವಾಗಿ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನೀವು commit ಮಾಡಿಕೊಂಡರೆ ನಮ್ಮದೇನೂ ಅಭ್ಯಂತರವಿಲ್ಲ. ನೀವು commit ಮಾಡಲಿಕ್ಕೆ ಸಿದ್ಧರಿಲ್ಲವಲ್ಲ.

ಅಧ್ಯಕ್ಷರು : ಮಾಡುತ್ತೇನೆಂದು ಹೇಳುತ್ತಿದ್ದಾರಲ್ಲ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾಡೋಣ ಬಿಡಿ ಏನೂ ಹೇಳಿದರೂ ನಾವು ಮಾಡುತ್ತೇವೆ. ಅದೇನು ದೊಡ್ಡ ವಿಷಯವಲ್ಲ. ಈಗ ಇಂಧನ ಇಲಾಖೆಗೆ ಸಂಬಂಧಪಟ್ಟ ಹಾಗೆ ನಾನು ಎಲ್ಲಾ ಹಿರಿಯ ಸದಸ್ಯರಲ್ಲಿಯೂ ಒಂದು ಮನವಿ ಮಾಡಿಕೊಳ್ಳುತ್ತೇನೆ. ಇದು ರೇವಣ್ಣನೊಬ್ಬನ ಪ್ರಶ್ನೆ ಅಲ್ಲ, ಸರ್ಕಾರದ ಪ್ರಶ್ನೆ ಅಲ್ಲ, ತಾವು ಒಂದು ದಿನ ದಯಮಾಡಿ ವಿಶೇಷವಾಗಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಈ ರಾಜ್ಯದ 224 ಕ್ಷೇತ್ರಗಳಲ್ಲಿ ಮುಂದಿನ 25 ವರ್ಷಗಳಲ್ಲಿ ಇಂಧನ ಇಲಾಖೆಯಲ್ಲಿ ಏನಾಗಬೇಕು ಎನ್ನುವುದರ ಬಗ್ಗೆ ಇದು ರೇವಣ್ಣ ಪ್ರಶ್ನೆಯಲ್ಲ. ಇದಕ್ಕೆ ಒಂದು ದಿನವನ್ನು ಚರ್ಚೆಗೆ ಮೀಸಲಿಡಬೇಕೆಂದು ನಾನು ಹಲವಾರು ಬಾರಿ ಎರಡೂ ಸದನಗಳ ಸದಸ್ಯರಲ್ಲಿ ಮನವಿ ಮಾಡಿದ್ದೇನೆ. ಇವತ್ತು ಸಹ ಮನವಿ ಮಾಡುತ್ತೇನೆ. ಆದರೆ ನಾನು ಬಂದ ನಂತರ ಈ ಇಲಾಖೆಯಲ್ಲಿ ಏನು ಮಾಡಿದ್ದೇನೆ ಎನ್ನುವುದರ ಬಗ್ಗೆ ಹತ್ತು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ಯಾವತ್ತಾದರೂ ಚರ್ಚೆಯನ್ನು ಮಾಡಿ, ನನ್ನದೇನೂ ಅಭ್ಯಂತರವಿಲ್ಲ. ಏಕೆಂದರೆ ಒಂದು ದಿವಸ detail ಆಗಿ ಚರ್ಚೆ ಮಾಡಿ ಏನು ಮಾಡಬೇಕೆಂದು ನಿರ್ಣಯಿಸಲಿ. ರಾಜ್ಯದಲ್ಲಿ 1999–2004 ರವರೆಗೆ ಹಿಂದಿನ 5 ವರ್ಷಗಳಲ್ಲಿ 184 Stations ಮಾಡಿದ್ದೇವೆ. ಈಗ ನಾವು 371 Stations ಮಾಡಲಿಕ್ಕೆ ಕಾರ್ಯಕ್ರಮವನ್ನು ರೂಪಿಸಿ ಒಟ್ಟು 500 Stations ಮಾಡಲಿಕ್ಕೆ ನಿರ್ಣಯಿಸಿದ್ದೇವೆ. ಮಾರ್ಚ್ 31 ರೊಳಗೆ 371 Stations ಕೆಲಸವನ್ನು ಮುಗಿಸುತ್ತೇವೆ. 450 Stations ಕೆಲಸವನ್ನು ಸೆಪ್ಟೆಂಬರ್‌ನಲ್ಲಿ ಮಾಡಿ ಮುಗಿಸಲಿಕ್ಕೆ ಕ್ರಮ ಕೈಗೊಂಡಿದ್ದೇವೆ. 5 ವರ್ಷಗಳಲ್ಲಿ 48,000 Transformers ಹಾಕಿದ್ದೇವೆ. ನಾನು ಬಂದ ಮೇಲೆ ಸುಮಾರು 81,000 Transformers ಹಾಕಿದ್ದೇವೆ. 3,154 ದಲಿತ ಬಸ್ತಿ ಗ್ರಾಮಗಳನ್ನು 5 ವರ್ಷಗಳಲ್ಲಿ ಮಾಡಿದ್ದಾರೆ. ನಾವು ಬಂದ ಮೇಲೆ 9,771 ದಲಿತ ಬಸ್ತಿ ಗ್ರಾಮವನ್ನು ಒಂದಕ್ಕೆ ಮೂರು ಪಟ್ಟು ಮಾಡಿದ್ದೇವೆ. ಅದಾದ ಮೇಲೆ ಈಗ Stations ಎಲ್ಲಿ ಮಾಡುತ್ತಿದ್ದೇವೆಂಬುದನ್ನು ತಮ್ಮ ಗಮನಕ್ಕೆ ಬೇಕಾದರೆ ತರುತ್ತೇನೆ. ರಾಜೀವ್‌ಗಾಂಧಿ ವಿದ್ಯುಚ್ಛಕ್ತಿ ಕಲ್ಯಾಣ ಯೋಜನೆ ಬಗ್ಗೆ ಹೇಳುತ್ತೇನೆ. ಈಗ ಮಹಾರಾಷ್ಟ್ರದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಈ ರಾಜೀವ್ ಗಾಂಧಿ ವಿದ್ಯುತ್ ಕಲ್ಯಾಣ ಯೋಜನೆ ಮಂಜೂರಾತಿ ಆಗಿಲ್ಲವೆಂದು ಅಲ್ಲಿನ ಇಂಧನ ಸಚಿವರು ಹೇಳಿದ್ದಾರೆ. ಅವರೇ ಕೇಂದ್ರ ಸರ್ಕಾರದ ಮಂತ್ರಿಗಳು,

ಆದರೆ ನಾನು ಕೇಂದ್ರ ಸರ್ಕಾರಕ್ಕೆ ಅಭಿನಂದಿಸಬೇಕಾಗುತ್ತದೆ. ಶ್ರೀ ಸಯ್ಯದ್ ಅವರು ನಮ್ಮ ಕಣ್ಮುಂದೆ ಇವತ್ತು ಇಲ್ಲ. ಅವರಿಗೆ ಈ ರಾಜ್ಯದ ಜನತೆಯ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅವರು ಹೋದ ತಕ್ಷಣ ಮೊದಲು 17 ಜಿಲ್ಲೆಗಳಿಗೆ ಮಂಜೂರಾತಿಯನ್ನು ಕೊಟ್ಟರು. ಬಾಕಿ ಉಳಿದ 9 ಜಿಲ್ಲೆಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಇವತ್ತು ಸುಮಾರು ಶೇ.90 ರಷ್ಟು ಅಂದರೆ 613.00 ಕೋಟಿ ರೂ.ಗಳಷ್ಟು ಕೇಂದ್ರ ಸರ್ಕಾರದಿಂದ grant ಬರುತ್ತದೆ. ನಾವು 10% ಮಾತ್ರ ಕೊಡುತ್ತಿದ್ದೇವೆ. 54 ಲಕ್ಷ ಕುಟುಂಬಗಳು ಅಂದರೆ ರಾಜ್ಯದಲ್ಲಿ ಬಡತನದ ರೇಖೆಗಿಂತ ಯಾರು ಕೆಳಗಿದ್ದಾರೆ, ಅವರ ಬಗ್ಗೆ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೇಂದ್ರ ಸಚಿವರ ಜೊತೆ ಮಾತನಾಡಿದ್ದೇವೆ. ನಾವು ಮತ್ತು ಮುಖ್ಯಮಂತ್ರಿಗಳು ಜೊತೆಯಲ್ಲಿ ಹೋಗಿ ಮಾತನಾಡಿದ್ದೇವೆ. ಈಗ ಒಂದು ಕಡೆ ಬಿ.ಪಿ.ಎಲ್.ಪಟ್ಟಿ ಇರುವುದಿಲ್ಲ. ಅದನ್ನು E.O.ಗಳ ಕಡೆ ನಿಜವಾಗಿದ್ದರೆ ಅದನ್ನು ಕೊಟ್ಟರೆ ಅವರಿಗೂ ಮಾಡಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇವೆ. one time ಅದನ್ನು ಮಾಡಲಿಕ್ಕೆ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಅದಕ್ಕೆ ಟೆಂಡರ್ ಕರೆದಿದ್ದೇವೆ. ಆ ಕೆಲಸ ಮಾಡಲಿಕ್ಕೆ ಪ್ರಾರಂಭಿಸುತ್ತೇವೆ. ಬೆಂಗಳೂರು ನಗರವೊಂದನ್ನು ಬಿಟ್ಟು ಉಳಿದ 26 ಜಿಲ್ಲೆಗಳಿಗೂ ಈ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ವಿ.ಸೋಮಣ್ಣ : ದಯಮಾಡಿ ಸಭಾಧ್ಯಕ್ಷರೆ, ಬೆಂಗಳೂರು ನಗರದಲ್ಲಿ ತಾವು ಸಹ ಸುತ್ತಾಡುತ್ತೀರಿ. ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಬಡವರಿಗೆ, ಕೊಳಚೆ ಪ್ರದೇಶದಲ್ಲಿರುವಂತಹ ಬಡವರಿಗೆ ಯಾವುದೇ ರೀತಿಯ ಸೌಲಭ್ಯಗಳು ಇಲ್ಲ. ಬೆಂಗಳೂರು ನಗರದಲ್ಲಿ ಭಾಗ್ಯಜ್ಯೋತಿ ಎಂಬ ಯೋಜನೆ ಮೊದಲಿತ್ತು. ಹತ್ತು ಮನೆಗಳನ್ನು ಕೊಡುತ್ತಿದ್ದರು. ಆರೇಳು ವರ್ಷಗಳಿಂದೀಚೆಗೆ ಅದೂ ಇಲ್ಲ. ಹಾಗಾಗಿ ನಗರದಲ್ಲಿರುವ ಬಡವರ ಗತಿಯೇನಾಗಬೇಕು? ಎರಡನೆಯದಾಗಿ Transformers ಮಾಡಲಿಕ್ಕೆ single pole ಎಂದು ಏನು ಮಾಡುತ್ತಿದ್ದಾರೆ, ಸಣ್ಣ ಪುಟ್ಟ ಪೋಲ್‌ಗಳನ್ನು ಬದಲಾವಣೆ ಮಾಡಲಿಕ್ಕೆ ಇವತ್ತು ABB companyಗೆ ಕೊಟ್ಟು ಅವರ್‍ಯಾರೂ ಇವತ್ತು ಸರಿಯಾಗಿ ಸ್ಪಂದಿಸುತ್ತಿಲ್ಲ. ದಯಮಾಡಿ ಬೆಂಗಳೂರು ನಗರಕ್ಕೂ ಆದ್ಯತೆಯನ್ನು ತಾವು ಕೊಡಬೇಕಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಬೆಂಗಳೂರು ನಗರದಲ್ಲಿ ಇವತ್ತು ವಿದ್ಯುತ್ತಿನ T & D loss 9.94 ಇದೆ. 1999–2004 ರವರೆಗೆ 5 ವರ್ಷಗಳಲ್ಲಿ 71.5 ಮಿಲಿಯನ್ ರಿಂದ 85 ಮಿಲಿಯನ್ ಯೂನಿಟ್ ಕೊಡುತ್ತಿದ್ದರು. ನಾವು ಇವತ್ತು 91 ಮಿಲಿಯನ್ ಯೂನಿಟ್‌ನಿಂದ 136 ಮಿಲಿಯನ್ ಯೂನಿಟ್‌ವರೆಗೆ ತೆಗೆದುಕೊಂಡು ಹೋಗಿದ್ದೇವೆ. ಅಂದರೆ ಮೂರು ವರ್ಷದಲ್ಲಿ ಹೊಸ ಕನೆಕ್ಷನ್ಸ್ ಕೊಟ್ಟಿರುವುದು ಸೇರಿ ಸುಮಾರು 30% ಜಾಸ್ತಿಯಾಯಿತು. ಇದಲ್ಲದೆ T & D loss ಕಳೆದ ಹಿಂದಿನ ವರ್ಷಗಳಿಗೆ ಹೋಲಿಸಿದರೆ 27% ಇವತ್ತಿದೆ. 305 ಇದ್ದಂತಹ T & D loss ಅನ್ನು 27% ಗೆ ಇಳಿಸಿದ್ದೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವತ್ತಿನ ದಿವಸ ನಾವು ಏನು ಹೊಸ ವಿದ್ಯುತ್ತಿನ ಬಗ್ಗೆ ಮಾಡಿದಿರಿ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಇವತ್ತು ಹೊಸದನ್ನು ಮಾಡಿಲ್ಲವೆಂದು ಹೇಳಿದ್ದೀರಿ. ಹಿಂದೆ ಕೆ.ಪಿ.ಸಿ.ಎಲ್. ನಿಂದ ಬಳ್ಳಾರಿಯಲ್ಲಿ 3,300 ಕೋಟಿ ರೂ.ಗೆ ಸೋನಿಯಾಗಾಂಧಿಯವರ ವಿಶೇಷ ಪ್ಯಾಕೇಜ್ ಎಂದು 2001ರಲ್ಲಿ ತೆಗೆದುಕೊಂಡರು. 3 ವರ್ಷ ಅದರ ಕೆಲಸ ನಡೆಯಲಿಲ್ಲ. ಧರ್ಮಸಿಂಗ್ ಸಾಹೇಬರು ಬಂದ ಮೇಲೆ ಅದಕ್ಕೆ ಚಾಲನೆ ಕೊಟ್ಟು ಸುಮಾರು 500 ಮೆಗಾವ್ಯಾಟ್ ವಿದ್ಯುತ್‌ನ್ನು ಮುಂದಿನ ತಿಂಗಳು ಅಥವಾ ಸೆಪ್ಟೆಂಬರ್ ಮೊದಲ ವಾರದಲ್ಲಿ ರಾಜ್ಯದ ಜನತೆಗೆ ನಾವು ಬಂದ ಮೇಲೆ ಇದನ್ನು ಮೊದಲನೆಯದಾಗಿ ಕೊಡುತ್ತಿದ್ದೇವೆ. ಏಕೆಂದರೆ ರೇವಣ್ಣ ಬಂದ ಮೇಲೆ ಒಂದೇ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಿಲ್ಲ ಎಂಬ ಭಾವನೆ ಏನಿತ್ತು ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದಲ್ಲದೆಯೇ ಕೆ.ಪಿ.ಸಿ.ಎಲ್.ನಲ್ಲಿ ಇವತ್ತು ನಾವು ಬಂದ ಮೇಲೆ 26,000 ಮಿಲಿಯನ್ ಯೂನಿಟ್, ಅಂದರೆ 10,000 ಮಿಲಿಯನ್ ಯೂನಿಟ್ ವಿದ್ಯುತ್‌ನ್ನು ಜಾಸ್ತಿ ಉತ್ಪಾದನೆ ಮಾಡುತ್ತಿದ್ದೇವೆ. ಇವತ್ತು ಭಾರತದ ಪ್ರಧಾನ ಮಂತ್ರಿಗಳು ಕೆ.ಪಿ.ಸಿ.ಎಲ್.ಗೆ ಎರಡು ಬಹುಮಾನಗಳನ್ನು ಕೊಟ್ಟಿದ್ದಾರೆ. ಕೆ.ಪಿ.ಟಿ.ಸಿ.ಎಲ್.ಗೆ ಒಂದನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರದ ಪ್ರಧಾನ ಮಂತ್ರಿಗಳು ಇವತ್ತು ಕೆ.ಪಿ.ಟಿ.ಸಿ.ಎಲ್. ಮತ್ತು ಕೆ.ಪಿ.ಸಿ.ಎಲ್.ಗಳಿಗೆ ಉತ್ತಮವಾಗಿ ಕೆಲಸ ಮಾಡುತ್ತಿದೆಯೆಂದು ಬಹುಮಾನವನ್ನು ಕೊಟ್ಟಿದ್ದಾರೆ. ಇದಲ್ಲದೆ ಕೆ.ಪಿ.ಸಿ.ಎಲ್. ನಲ್ಲಿ ಸುಮಾರು ಯೋಜನೆಗಳನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಸುಮಾರು 4,500 ಕೋಟಿ ರೂಪಾಯಿಗಳ ಕೆಲಸ

ಕೆ.ಪಿ.ಸಿ.ಎಲ್.ನಲ್ಲಿ ಪ್ರಾರಂಭ ಮಾಡಿದ್ದೇವೆ. ಅದು ಬಳ್ಳಾರಿ ಎರಡನೆಯ ಹಂತ ಇರಬಹುದು, ವಾರಾಹಿ ಇರಬಹುದು, ರಾಯಚೂರು 8ನೇ ಘಟಕ ಇರಬಹುದು. ಕೆ.ಪಿ.ಸಿ.ಎಲ್.ನಿಂದಲೇ ಕೂಡಿಗೆ ಶಾಖೋತ್ಪನ್ನ ಸ್ಥಾವರ 1200 ಮೆಗಾವ್ಯಾಟ್‌ಗೆ 4,200 ಕೋಟಿ ರೂ, ನಂದೂರು, ಆರ್.ಟಿ.ಪಿ.ಸಿ.ಎಲ್. second ಇವೆಲ್ಲ ಸೇರಿ 5 ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಮಾಡಬೇಕೆಂದು ಸುಮಾರು 20 ಸಾವಿರ ಕೋಟಿಯದನ್ನು ಡಿಪಿಆರ್ ಮಾಡಬೇಕು. ನಾನು ಒಬ್ಬನೇ ಇದನ್ನು ಮಾಡಿದ್ದೇನೆ ಎಂದು ಹೇಳುತ್ತಿಲ್ಲ. ಧರ್ಮಸಿಂಗ್ ಸಾಹೇಬರು ಮತ್ತು ನಾನು ಸೇರಿಯೇ ಮಾಡಿದ್ದು ಎಂದು ಹೇಳುತ್ತಿದ್ದೇನಲ್ಲ. ಹಿಂದಿನವರು ಸೋನಿಯಾ ಗಾಂಧಿಯವರ ಪ್ಯಾಕೇಜ್ 2000 ಇಸವಿಯನ್ನು ಮುಂದಕ್ಕೆ ಹಾಕಿದ್ದಿರಿ. ಅದನ್ನು ಧರ್ಮಸಿಂಗ್ ಸಾಹೇಬರು ನಾವು ಸೇರಿ ಮಾಡುತ್ತಿದ್ದೇವೆ ಎಂದು ಹೇಳುತ್ತಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಸೇರಿ ಮಾಡಿದ್ದೀರಿ ಎಂದು ಹೇಳಿದ್ದೀರಿ. ಆದರೆ ನಮಗೆ ಕೆಮ್ಮುವುದನ್ನು ಕೊಟ್ಟು ಗುಮ್ಮ ತೆಗೆದುಕೊಂಡಂತೆ ಆಗಿದೆ!

ಶ್ರೀ ಕೆ. ಶ್ರೀನಿವಾಸಗೌಡ : ಈಗಲೂ ಇಷ್ಟೆಲ್ಲಾ ಖರ್ಚು ಮಾಡಿ ರೈತರಿಗೆ ಮಾತ್ರ 6 ಗಂಟೆಯ ಮೇಲೆ ವಿದ್ಯುತ್‌ನ್ನು ಕೊಡಲು ಆಗಲಿಲ್ಲವಲ್ಲ?

ಶ್ರೀ ಹೆಚ್.ಡಿ.ರೇವಣ್ಣ : ಆದ್ದರಿಂದ ಶ್ರೀನಿವಾಸಗೌಡರೆ ಇದರ ಬಗ್ಗೆ ಒಂದು ದಿವಸ ಕುಳಿತು ಚರ್ಚೆ ಮಾಡೋಣ. ಏನೇನಿದೆ ಎಂಬ ಬಗ್ಗೆ ಎಲ್ಲವನ್ನು ಹೇಳುತ್ತೇನೆ. ಸೋಲಾರ್ energyಯಲ್ಲಿ ಇಡೀ ಭಾರತ ದೇಶದಲ್ಲಿ first ಇದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸೋಲಾರ್‌ದು ಏನು ಮಾಡಿದ್ದೀರಿ?

ಶ್ರೀ ಹೆಚ್.ಡಿ.ರೇವಣ್ಣ : ನಮ್ಮಲ್ಲಿ ಈಗ ಸೋಲಾರ್ energy water heaterನಲ್ಲಿ ಸುಮಾರು ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತಿದ್ದೇವೆ. ಅದೇ ರೀತಿ ಇವತ್ತು ಮನೆ ದೀಪ 1999 ರಿಂದ 2004ರವರೆಗೆ 6,912 ಆಗಿತ್ತು. ಈ ಸಲ 2004ರಲ್ಲಿ 16,282 ಮನೆಗೆ ಕೊಟ್ಟಿದ್ದೇವೆ. ಬೇಕಾದರೆ ದಾಖಲೆ ತೆಗೆದುನೋಡಿ. ಕೆ.ಪಿ.ಸಿ.ಎಲ್.ನಿಂದ ಇವತ್ತು 9 ಸಾವಿರ ಕೋಟಿ ರೂಪಾಯಿಯ ಕೆಲಸವನ್ನು ಮಾಡುತ್ತಿದ್ದೇವೆ. System improvementಗೆ ಸುಮಾರು 2 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸ Station ಹಾಕಲು ಮಾಡುತ್ತಿದ್ದೇವೆ. ಕೆ.ಪಿ.ಟಿ.ಸಿ.ಎಲ್. ಮತ್ತು

ಕೆ.ಪಿ.ಸಿ.ಎಲ್.ನ ಬಗ್ಗೆ ಪೂರ್ತಿ ಚರ್ಚೆ ಮಾಡೋಣ. ಇದನ್ನು ದಯಮಾಡಿ ಯಾರೂ ಅನ್ಯಥಾ ಭಾವಿಸಬಾರದು. ಏನೇ ಇದ್ದರೂ ದಯಮಾಡಿ ಎಲ್ಲಾ ಹಿರಿಯ ಸದಸ್ಯರೂ ನಮ್ಮ ಇಲಾಖೆಯ ಬಗ್ಗೆ ಇಷ್ಟೆಲ್ಲ ಬೆಳಕು ಚೆಲ್ಲಲು ಅವಕಾಶ ಮಾಡಿದ್ದಾರೆ. ಖರ್ಗೆ ಸಾಹೇಬರು, ಧರ್ಮಸಿಂಗ್ ಸಾಹೇಬರು, ಮಾಧುಸ್ವಾಮಿಯವರಿಗೆ ಸಣ್ಣ ಪುಟ್ಟದ್ದು ಇದ್ದರೆ ಸರಿಪಡಿಸುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಮ್ಮ ಯಾವುದೇ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ.

ಶ್ರೀ ಧರ್ಮಸಿಂಗ್ : Departmental performance budget ಕೊಟ್ಟಂತೆ ಆಯಿತು. ತಾವೂ ಅನುಭವವನ್ನು ಹೊಂದಿರುವವರಾಗಿದ್ದೀರಿ. ಇವತ್ತು ತಮ್ಮ ಖಾತೆಗೆ ಸಂಬಂಧಪಟ್ಟಂತೆ ಎಲ್ಲಾ ಶಾಸಕರು ಕೇಳಿದ್ದಾರೆ. ಉದಾಹರಣೆಗೆ ಶರಣಪ್ರಕಾಶ್ ಪಾಟೀಲ್‌ರವರು ನಮ್ಮ ಆಪಾದನೆ ಇದೆಯೆಂದು ಹೇಳಿದ್ದಾರೆ. ನೀವು ಏನು ಮಾಡಿದ್ದೀರಿ? ನಿಮ್ಮ ನಿಮ್ಮ ಪಕ್ಷದ ಶಾಸಕರಿಗೆ ಹೆಚ್ಚಿನ ಎಂ.ಡಿ.ಆರ್. ರೋಡನ್ನು ಮಾಡಿದ್ದೀರಿ. ಗುಲ್ಬರ್ಗಾ ಜಿಲ್ಲೆಯಲ್ಲಿ ಮಾಡಿದ್ದೀರಿ. ನಮ್ಮ ಕಡೆ ಮಾಡಿಲ್ಲ. ನಾವು ಆ ರೀತಿ ಮಾಡಿರಲಿಲ್ಲ. 2300 ಕಿಲೋಮೀಟರ್ ರಸ್ತೆಯ up-gradation ನಲ್ಲಿ ವಿಶ್ವಬ್ಯಾಂಕ್‌ನ ನೆರವಿನಿಂದ 2,030 ಕೋಟಿ ರೂ, ತೆಗೆದುಕೊಂಡು ನಾವು ಎಲ್ಲಾ ಕಡೆ ಕೆಲಸ ಮಾಡಿದ್ದೇವೆ. ಬೀದರ್‌ನಿಂದ ಬೆಳಗಾಂವರೆಗೆ ಮಾಡಿದ್ದೇವೆ. Karnataka Road Development Corporationನ ವತಿಯಿಂದ ಇವತ್ತು ಬಿಜಾಪುರಕ್ಕೆ ಹೋಗುವ ರಸ್ತೆ, ಸಂಕೇಶ್ವರ ಎಲ್ಲಾ ಕಡೆಗೆ ಹೋಗುತ್ತದೆ. ನೀವು ಒಂದು ಬಜೆಟ್ ಮಂಡನೆ ಮಾಡಿದ್ದೀರಿ. ಬೇಡಿಕೆಗಳನ್ನು ಕೂಡ ಇವತ್ತು ಇಟ್ಟಿದ್ದೀರಿ. ನೀವು ಅದಕ್ಕೆ ನಮ್ಮಿಂದ ಮನ್ನಣೆ ಕೇಳುತ್ತಿದ್ದೀರಿ. You have to tell the Action plan ಎಷ್ಟು ಕಡೆಗೆ ನೀವು up-gradation ಮಾಡುತ್ತೀರಿ? ಎಷ್ಟು ಕಡೆಗೆ C.R.F. ದನ್ನು ಮಾಡುತ್ತಿದ್ದೀರಿ? ಕೆ–ಶಿಪ್–2ರಲ್ಲಿ ಯಾವ್ಯಾವ ರಸ್ತೆಗಳನ್ನು ಸೇರಿಸುತ್ತಿದ್ದೀರಿ? ಇವುಗಳ ಬಗ್ಗೆ ಹೇಳುವುದನ್ನು ಬಿಟ್ಟು ಈಗಾಗಲೇ ಮಾಡಿರುವುದರ ಬಗ್ಗೆಯೇ ಹೇಳಿದರೆ ಹೇಗೆ? ನಿಮಗೆಲ್ಲಾ ಗೊತ್ತಿದೆ. ತಾವು ಜಾಣರಿದ್ದೀರಿ, ಚೆನ್ನಾಗಿ ಹೇಳತಕ್ಕ skill ಇದೆ. We will appreciate you. ಆದರೆ ಇವತ್ತು ಸದನದ ಎಲ್ಲಾ ಶಾಸಕರ ಒತ್ತಾಯವೇನಿದೆ, ಇವತ್ತು ನಮ್ಮ ಭಾಗ, ನಮ್ಮ ಕ್ಷೇತ್ರಕ್ಕೆ ಅನ್ಯಾಯವಾಗಿದೆ

ಎಂಬ ಭಾವನೆ ಇದೆ. ಇವತ್ತು ರಾಜ್ಯದ ಹೆದ್ದಾರಿ ಗುಲ್ಬರ್ಗಾಕ್ಕೆ ಹೋಗುವುದು ಇದೆ. ತಮಗೆ ಅನುಭವವಾಗಿರಬಹುದು, ಮೊನ್ನೆ ತಾವು ಮಣೂರ್‌ಗೆ ಹೋಗಿದ್ದೀರಿ, ಮಣೂರಿನಿಂದ ಗುಲ್ಬರ್ಗಾಕ್ಕೆ ಬರುವ ರಸ್ತೆ ಯಾವ ರೀತಿಯಾಗಿದೆ? ಗುಲ್ಬರ್ಗಾದಿಂದ ಸೇಡಂಗೆ ಬರತಕ್ಕ ರಸ್ತೆ ಹೇಗಿದೆ? ಆದ್ದರಿಂದ ಅಲ್ಲಿ ಹೆಚ್ಚಿನ ರೀತಿಯಲ್ಲಿ ತಾವು ನಿಗಾ ವಹಿಸಿಲ್ಲ. ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಹಣವನ್ನು ಸಹ ಸರಿಯಾಗಿ ವಿತರಣೆ ಮಾಡಿಲ್ಲ. ದಾಖಲೆಗೋಸ್ಕರ ನಿಮ್ಮಲ್ಲಿ ಇಷ್ಟು ನಮ್ಮಲ್ಲಿ ಇಷ್ಟು ಎಂದು ಹೇಳುವ ರೀತಿಯಲ್ಲಿ satisfy ಮಾಡತಕ್ಕದ್ದಲ್ಲ. ಇವತ್ತು ನೀವು ಸರಿಯಾಗಿ ಕರ್ನಾಟಕ ರಾಜ್ಯದ ಲೋಕೋಪಯೋಗಿ ಮಂತ್ರಿಯಾಗಿ ಏನೇನು ಮಾಡಬೇಕು ಏನೇನು scheme ಇದೆ plan of action ಏನಿದೆ ಅದನ್ನು ಸದನಕ್ಕೆ ತಿಳಿಸಬೇಕು. ಮತ್ತು ಈ ನನ್ನ ಕಾರ್ಯಕ್ರಮವನ್ನು ಮುಂದಿನ ವರ್ಷ ಮಾಡುತ್ತೇನೆ. ಅದಕ್ಕೆ ನನ್ನ ಬಜೆಟ್‌ಗೆ ಒಪ್ಪಿಗೆ ಕೊಡಬೇಕೆಂದು ಕೇಳಿದರೆ ಸರಿಯಾಗುತ್ತದೆ. ನಾವೂ ಕೆಲಸ ಮಾಡಿದ್ದೇವೆ. ನೀವು ಹಿಂದಿನ ಕತೆ ಹೇಳಿ ಮಾಡಿಲ್ಲ ಎಂದು ಹೇಳುವುದಲ್ಲ. ಇವತ್ತು building ಬಗ್ಗೆ ಬೇರೆಯವರ ಬಗ್ಗೆ ಹೇಳಿದ್ದೀರಿ. ರಸ್ತೆಗಳ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಈ ಸಮಸ್ಯೆ ಇದೆ. ಅದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಯಾವ ರೀತಿಯಾಗಿ ಮಾಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಬಹಳ ಪ್ರಶ್ನೆಗಳನ್ನು ಇಲ್ಲಿ ಎತ್ತಿದ್ದೆವು. ಅದು ಯಾವುದಕ್ಕೂ ಮಾನ್ಯ ರೇವಣ್ಣನವರು ಉತ್ತರ ಕೊಡಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಹೇಳಿ ಸಾರ್, ಅದು ಯಾವುದು?

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಪುನಹ ಪುನಹ ಭಾಷಣ ಮಾಡಬೇಕಾಗುತ್ತದೆ. ಆವತ್ತು ನಾವು ಹೇಳಿದಾಗ ಬರೆದುಕೊಳ್ಳಬೇಕಾಗಿತ್ತು. ನಾವು ಈ ದಿಕ್ಕಿನಲ್ಲಿ ಬಂದು ಅವರು ಆ ದಿಕ್ಕಿನಲ್ಲಿ ಬಂದು ಉತ್ತರ ಕೊಟ್ಟೆ ಎಂದು ಹೇಳಿಬಿಟ್ಟಿದ್ದಾರೆ. ನಮಗೇಕೆ ಕೆಲಸ ಮಾಡಲಿಲ್ಲ ಎಂದರೆ, ಖರ್ಗೆಯವರ ಕಾಲದಲ್ಲಿ ಆ ರೀತಿ ಆಯಿತು, ಧರ್ಮಸಿಂಗ್‌ರವರ ಕಾಲದಲ್ಲಿ ಈ ರೀತಿ ಆಯಿತು, ಎಸ್.ಎಂ.ಕೃಷ್ಣರವರ ಕಾಲದಲ್ಲಿ ಈ ರೀತಿ ಆಯಿತು ಎಂದು ಹೇಳುವುದು ಉತ್ತರವಲ್ಲ. ಅವರನ್ನು ಎರಡು ವಿಷಯದಲ್ಲಿ ತಾರೀಫ್ ಮಾಡುತ್ತೇನೆ. ಒಂದು, ಎಲ್ಲಾ ಇಲಾಖೆಗಳ ಕೆಲಸ ಅವರಿಂದಲೇ ಆಗುತ್ತಿದೆ, ಕಾಲೇಜು ಎಲ್ಲಿಗೆ ಕೊಡಬೇಕು, ಜೈಲು ಎಲ್ಲಿಗೆ ಕೊಡಬೇಕು, ಕೋರ್ಟ್

ಎಲ್ಲಿಗೆ ಕೊಡಬೇಕು, ಅವರೇ ಅದರ ಬಗ್ಗೆ ಹೇಳಿಬಿಟ್ಟಿದ್ದಾರೆ. ನಾವು ಯಾರೂ ಅದರ ಬಗ್ಗೆ ಕೇಳಲಿಲ್ಲ. He has accepted.

ಶ್ರೀ ಹೆಚ್.ಡಿ.ರೇವಣ್ಣ : ಎಲ್ಲಾ ಇಲಾಖೆ ಎಂದು ನಾನು ಹೇಳಿಲ್ಲ. ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಶಿಕ್ಷಣ ಇಲಾಖೆಗೆ ಮುಖ್ಯಮಂತ್ರಿಗಳನ್ನು ಸ್ಕೂಲ್, ಕಾಲೇಜುಗಳನ್ನು ಕೊಡುವುದರಲ್ಲಿ ಕೇಳಿದ್ದೇನೆ. ಬೇರೆ ಯಾವ ಇಲಾಖೆಗೂ ನಾನು ಕೈ ಹಾಕಲು ಹೋಗಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಕಾಲೇಜು 50 ವರ್ಷದಲ್ಲಿ ಎಷ್ಟು ಇತ್ತು, ಈಗ ಎಷ್ಟು ಮಾಡಿದ್ದೀರಿ, ಮಹಾರಾಣಿ ಕಾಲೇಜು ಎಲ್ಲೆಲ್ಲಿ improvement ಮಾಡಿದ್ದೇವೆ ಎಂದು ಹೇಳಿರುವುದಕ್ಕೆ ನಾವು ಸಂತೋಷಪಡುತ್ತೇವೆ. ಇಷ್ಟು ಜವಾಬ್ದಾರಿ ತೆಗೆದುಕೊಂಡು ರಾಜ್ಯದ ಕೆಲಸ ಮಾಡುತ್ತೀರಿ ಎಂದರೆ ನಾವು ನಿಮ್ಮನ್ನು ತಲೆಯ ಮೇಲೆ ಹೊತ್ತುಕೊಂಡು ಮೆರೆಯಬೇಕು ಎಂದು ಹೇಳಿದ್ದೇನೆ. ಅದು ರೆಕಾರ್ಡ್‌ನಲ್ಲಿದೆ. ಇದರ ಜೊತೆಗೆ ತಾರತಮ್ಯ ಆಗಿರುವುದನ್ನು ಅವರು ಒಪ್ಪಿದ್ದಾರೆ. Economic importance ನಲ್ಲಿ ನೀವು roads ಗಳನ್ನು ಮಾಡಿಕೊಂಡಿದ್ದೀರಿ. ಅದನ್ನು ಈ ಸಭೆಗೆ ಹೇಳುವುದಿಲ್ಲವೇ? ನೀವು CRF ನಲ್ಲಿ ಏನಾದರೂ ಕ್ಲಿಯರ್ ಆಗಿ ಹೇಳಿದ್ದೀರಾ? 3054 ರದ್ದು ಮಾಡಿದ್ದೇವೆ, CMGSY ಮಾಡಿದ್ದೇವೆಂದು ನೀವು ಮೊದಲನೇ ವರ್ಷ ಹೇಳಿಕೆ ಕೊಟ್ಟವರು, ಆಮೇಲೆ 3054 ಅನ್ನು ನೀವು revive ಮಾಡಿ, ಬೇಕಾದ ಕಡೆಗಳಿಗೆ ಮಾಡಿಕೊಂಡಿರುವುದರ ಬಗ್ಗೆ ಹೇಳಿದ್ದೀರಾ? NABARD ಯೋಜನೆಯಡಿ ಎಷ್ಟು ಸೇತುವೆಗಳನ್ನು ಮಾಡಿದ್ದೀರಿ ಎಂಬುದನ್ನು ಕೇಳಿದ್ದೇವೆ. ನೀವು ಹೇಳಿದ್ದೀರಾ? ಇನ್ನು up-gradation. ಯಾವ ಆಧಾರದ ಮೇಲೆ ಮಾಡಿದ್ದೀರಿ? What is the mode? What is the policy ಎಂದು ನಾವು ಕೇಳಿದ್ದೇವೆ. ಇಂತಹ ಆಧಾರದ ಮೇಲೆ village roads ಅನ್ನು, MDR ಗಳನ್ನು, ODR ಗಳನ್ನು ಮಾಡುತ್ತೇವೆಂದು, ಸಭೆಗೆ ಹೇಳಬೇಕಲ್ಲ? ನಮಗೆ ಹೇಳಬೇಕಲ್ಲ? ನಮ್ಮಲ್ಲಿ traffic ಇಲ್ಲದಿದ್ದರೆ, ನಮ್ಮ ರಸ್ತೆಗಳಿಗೆ ಅರ್ಹತೆ ಇಲ್ಲದಿದ್ದರೆ, ಬೇಡ. ನಾವೇನೂ ಕೇಳುವುದಿಲ್ಲ. ನಮ್ಮದು ಒಂದೇ concern. ತಾವು PWD ಗೆ ಮಂತ್ರಿ. ತಾವು ರಾಜ್ಯದ ಮಂತ್ರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ನಾವು ಮಾತನಾಡಿದ್ದೇವೆ. ಶಿವರಾಮುರವರು ಏನೋ 17 ಕೋಟಿ ಮಾಡಿಕೊಂಡಿದ್ದಾರೆಂದರೆ, ಅವರು ಮಂತ್ರಿಯಲ್ಲ,

MLA. ಅದು ಅವರ capacity. We have to appreciate. ಮಂತ್ರಿಯಾಗಿ ಏಕೆ ತಾರತಮ್ಯ ಮಾಡಿದ್ದೀರಿ? ನಮ್ಮ ಕ್ಷೇತ್ರಗಳನ್ನು ಏಕೆ ಬಿಟ್ಟಿದ್ದೀರಿ ಎಂಬುದಕ್ಕೆ ತಾವು ನೇರವಾಗಿ ಉತ್ತರಿಸಿಲ್ಲ. ಎರಡನೆಯದಾಗಿ, ಸಿದ್ದರಾಮಯ್ಯನವರು ಬಜೆಟ್‌ನಲ್ಲಿಟ್ಟ ದಿವಸ, 50 ಕೋಟಿ ರೂಪಾಯಿ toll road ಅನ್ನು ಚಿಕ್ಕನಾಯಕನಹಳ್ಳಿಯಿಂದ ಹಾಸನ ರಸ್ತೆಯವರೆಗೆ, ನಿಮ್ಮ ಕ್ಷೇತ್ರಕ್ಕೆ ಮಾಡುತ್ತೇವೆ, ಲಾರಿಗಳವರ ಹತ್ತಿರ toll ತೆಗೆದುಕೊಳ್ಳುತ್ತೇವೆ ಎಂದರು. ಆದರೆ, ಇವತ್ತಿನವರೆಗೂ ಒಂದು ಇಂಚಿನಷ್ಟೂ ಕೆಲಸವಾಗಿಲ್ಲ. ಇದು ನನ್ನ ಮೇಲಿನ ದ್ವೇಷಕ್ಕೋ, ಸಿದ್ದರಾಮಯ್ಯನವರ ಮೇಲಿನ ದ್ವೇಷಕ್ಕೋ? ಹೇಳಬೇಕಲ್ಲ. When it is a budgeted work, ನಾವು ಕೇಳಿಲ್ಲ. ಈ ಬಜೆಟ್ ನಲ್ಲಿ spill-over ಮಾಡಿರುವ ಕೆಲಸವನ್ನು ತೆಗೆದುಕೊಳ್ಳಲು ತಾವು ಇವತ್ತಿನ ವರೆಗೆ ಏಕೆ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ? ದ್ವೇಷಕ್ಕೆ ಹಾಕಿಕೊಳ್ಳಲಿಲ್ಲವೇ? ಆಗ ಇಷ್ಟೆಲ್ಲಾ ಕೆಲಸಗಳನ್ನು ಮಾಡುವಾಗ ಅದು ಬಜೆಟ್‌ನಲ್ಲಿ ಸೇರಿದೆಯೆಂದು ಗೊತ್ತಿರಲಿಲ್ಲವೇ? Toll road ಆಗುತ್ತದೆ. Mines ನಿಂದ ಹಿಡಿದು ಆಗುಂಬೆ ವರೆಗೂ ಬೈಪಾಸ್ ಆಗುತ್ತದೆಂದು ನಾವು ಇಲ್ಲಿ ಹೇಳಿದ್ದೇವಲ್ಲ? ಏನಾಯಿತು ಆ ಕೆಲಸಗಳು ಹೇಳಬೇಕಲ್ಲ? ಯಾವುದರ ಬಗ್ಗೆಯೂ ಹೇಳಲಿಲ್ಲ. ಬಿಡ್ರಿ, ಮುಂದೆ ಮಾಡಿಕೊಂಡರೆ ಆಗುತ್ತದೆಂದು ಈಗ ಅವರು ಹೇಳುತ್ತಾರೋ, ಏನೋ? ಕೀ ಇರುವುದು ಅವರ ಹತ್ತಿರ. ಖಜಾನೆ ಇರುವುದು ಯಡಿಯೂರಪ್ಪನವರ ಹತ್ತಿರವೆಂದು ನಮಗೆ ಗೊತ್ತು. ಇದೆಲ್ಲವನೂ ಸರಿಪಡಿಸಿ ನಮಗೆ ಮಾಡಿಕೊಡುತ್ತಾರೆ ಎಂಬಷ್ಟರ ಮಟ್ಟಿಗೆ ನಾವು ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇವೆ, ಸಂತೋಷ. ಆದರೆ, ನಮ್ಮ concern ಏನೆಂದರೆ, ರೇವಣ್ಣನವರು ಇನ್ನೂ ಬೆಳೆಯಬೇಕು. ಕುಮಾರಸ್ವಾಮಿಯವರ ಮುಖ್ಯಮಂತ್ರಿ ಅವಧಿ ಮುಗಿಯುತ್ತಿದ್ದಂತೆಯೇ, ಮುಖ್ಯಮಂತ್ರಿಯೋ, ಉಪ ಮುಖ್ಯಮಂತ್ರಿಯೋ ಆಗಲು ಹೊರಟಿರುವವರು. ರಾಜ್ಯವೆಲ್ಲವೂ ಒಂದು ಎಂಬುದನ್ನು ನೀವು ನೋಡಿ. ನೀವು ನಮ್ಮನ್ನೂ ತಮ್ಮ ಜೊತೆಯಲ್ಲಿಟ್ಟುಕೊಳ್ಳಬೇಕು. ಬರೀ ಒಂದೇ ಊರಿಗೆ ಆಗಿಬಿಟ್ಟರೆ, 224 ಜನರಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಆಗುವುದಕ್ಕಾಗುತ್ತದೆಯೇ? ನಮ್ಮನ್ನೂ ಜೊತೆಯಲ್ಲಿಟ್ಟುಕೊಳ್ಳಿ. ತುಮಕೂರು ಯೂನಿವರ್ಸಿಟಿ ಆಗಿ ಎಷ್ಟು ದಿವಸಗಳಾದವು, ಸರ್? ಒಂದು ರೂಪಾಯಿಯನ್ನು ಕೊಟ್ಟಿಲ್ಲವಲ್ಲ ಸರ್. ನೀವು ಆಗುಂಬೆಯಲ್ಲಿ ಇನ್ನೊಂದು ಯೂನಿವರ್ಸಿಟಿ ಮಾಡುತ್ತೇವೆಂದು

ಭಾಷಣ ಮಾಡುತ್ತೀರಲ್ಲ, ಯಾವ ಯೂನಿವರ್ಸಿಟಿ ಎತ್ತಿಸುವುದಕ್ಕೆ ಹೊರಟಿದ್ದೀರೆಂದು ಹೇಳಬೇಕಲ್ಲ? ಲ್ಯಾಂಡ್ ಕೊಡಲಿಲ್ಲ. ಪಾಪ! ಅವರು ಅಲ್ಲಿಗೆ ಹೋಗಿ open ಮಾಡಿ ಬಂದರು. ಹಾಗಾದರೆ, ಕುಮಾರಸ್ವಾಮಿ ಯವರು ಅಲ್ಲಿಗೆ ಹೋಗಿ ಉದ್ಘಾಟನೆ ಮಾಡಿ ಬಂದದ್ದು ನಿಮಗೆ ಗೊತ್ತಿಲ್ಲವೇ? ಇವತ್ತಿನವರೆಗೂ ಅಲ್ಲಿನ ಯೂನಿವರ್ಸಿಟಿ Government High School ನಲ್ಲಿ ನಡೆಯುತ್ತಿದೆ! ನಿಮಗೆ ಮಹಾರಾಣಿ ಕಾಲೇಜು ಕಾಣುತ್ತದೆ, ನಿಮಗೆ GAS College ಕಾಣುತ್ತದೆ. ಪಕ್ಕದಲ್ಲಿರುವ ನಾವುಗಳು ನಿಮಗೆ ಕಾಣುವುದಿಲ್ಲವೇ? ಹೇಳಿ ಸರ್? ತುಮಕೂರಿನಲ್ಲಿ ಏನೇನು ಮಾಡಿದ್ದೀರಿ? ಬೆಂಗಳೂರಿನ ಪಕ್ಕವಿದ್ದು ನಮಗೇಕೆ ಈ ನ್ಯಾಯ? ನಾನೊಬ್ಬನೇ ಬೇರೆ. ಇನ್ನು ಹೆಚ್ಚು-ಕಡಿಮೆ ನಾನು, ಪರಮೇಶ್ವರ್‌ರವರು ಬಿಟ್ಟು ಬಿಟ್ಟರೆ, ಇಡೀ 11 ಜನ ಶಾಸಕರು ಇವತ್ತು ನಿಮ್ಮ ಜೊತೆಯಲ್ಲಿ ತುಮಕೂರಿನಲ್ಲಿರುವುದು ಅಪರಾಧವೇ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ನಾನು ಅವರ ಹತ್ತಿರ ಹೆಚ್ಚು ವಿಷಯ ಕೇಳುವುದಿಲ್ಲ. ನಮಗೆ ಶಿರಾಡಿ, ಚಾರ್ಮಾಡಿ ಘಾಟ್‌ಗಳಿಂದ ಯಾವಾಗ ಮುಕ್ತಿ ಕೊಡಿಸುತ್ತೀರೆಂದು ಕೇಳುತ್ತಿದ್ದೇನೆ. Mine Lorryಗಳನ್ನು ನಿಲ್ಲಿಸಿ ಎಂದರೆ, ನಿಲ್ಲಿಸುವುದಿಲ್ಲ. ಮಳೆ ಬರುವಾಗ Mine Lorry ಗಳು over-load ಆಗಿ ಸಂಚರಿಸುವುದರಿಂದ ರಸ್ತೆಗಳೆಲ್ಲವೂ ಕಿತ್ತು ಹೋಗುತ್ತಿವೆ. ಇದರಿಂದ ಘಾಟ್ ಸೆಕ್ಷನ್‌ಗಳಲ್ಲಿ ಬಸ್ಸುಗಳಲ್ಲಿ ಓಡಾಡುವುದಕ್ಕಾಗುವುದಿಲ್ಲ. ನಾವಾದರೂ flightನಲ್ಲಿ ಬರುವುದಕ್ಕೆ TA/DA ಕೊಡುವುದರಿಂದ ಸ್ವಲ್ಪ ಉಳಿಸಿಕೊಂಡು ಬರುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಜನರ ಪರಿಸ್ಥಿತಿ ಏನಾಗಬೇಕು? ನಮ್ಮ ಊರಿನಲ್ಲಿ ಮೊದಲು ಅದನ್ನೇ ಕೇಳುವುದು. ಘಾಟ್ ಯಾವಾಗ ರಿಪೇರಿ ಮಾಡಿಸಿಕೊಡುತ್ತೀರಿ? ಯಾವಾಗ ಮಾಡಿಕೊಡುತ್ತೀರೆಂದು ನಾನು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : .....ನಾನು ಮಾತನಾಡುವಾಗ ನೇರವಾದ ಪ್ರಶ್ನೆ ಪ್ರಸ್ತಾಪಿಸಿದ್ದೆ.

ಶ್ರೀ ಹೆಚ್.ಎಂ.ವಿಶ್ವನಾಥ್ : ..... ಇನ್ನೂ ಬಂದಿಲ್ಲ, Contrator ನಮ್ಮ ಜೀವ ತಿನ್ನುತ್ತಿದ್ದಾರೆ. ಅದು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕು.

Single tender ಆಯಿತೆಂದು tender cancel ಮಾಡಿದ್ದಾರೆ. ಈಗ ಯಾರು ಘಾಟಿಗೆ ಹಾಕುವುದಿಲ್ಲ. ಹಾಕುವವರು ಯಾರು ಇದ್ದಾರೆಂಬುದನ್ನು ಹೇಳಿ? ಒಬ್ಬರು ಹಾಕಿದ್ದಕ್ಕೆ ಕೇಂದ್ರ ಸರ್ಕಾರದವರು ದುಡ್ಡು ಕೊಡಲಿಲ್ಲ. ರಾಜ್ಯ ಸರ್ಕಾರವನ್ನು ಹೊಣೆಗಾರಿಕೆ ಮಾಡುತ್ತೇವೆ. ಕೇಂದ್ರ ಸರ್ಕಾರ ಆಗುವುದಿಲ್ಲ ವೆಂಬುದನ್ನು ಹೇಳಲಿ. ಮಾಡುತ್ತೇವೆ. ಕೇಂದ್ರ ಸರ್ಕಾರದವರು ಮಾಡುವುದಕ್ಕೆ ಆಗುವುದಿಲ್ಲವೆಂದರೆ, ನೀವು ದುಡ್ಡು ಕೊಡಿ. ನೀವ್ಯಾಕೆ ಅದನ್ನೆಲ್ಲಾ ಇಟ್ಟುಕೊಳ್ಳುತ್ತೀರಿ?

ಶ್ರೀ ಬಿ.ಶಿವರಾಮು : ಚಿಕ್ಕನಾಯಕನಹಳ್ಳಿಯಿಂದ ಶಿರಾಡಿ ಘಾಟಿಗೆ ಹೋಗಬೇಕಾದರೆ, ಮಧ್ಯದಲ್ಲಿ ಗಂಡಸಿ ಊರಿನ ಮೇಲೆ ಹಾದು ಹೋಗಬೇಕಾಗುತ್ತದೆ. ಆ ಕೆಲಸ ಪೂರ್ತಿ ನಿಂತು ಹೋಗಿದೆ. ಅಲ್ಲಿಂದಲೇ ಪ್ರಾರಂಭವಾಗುವುದು. ಕೇಂದ್ರ ಸರ್ಕಾರದಿಂದ ಅನುದಾನ ಏಕೆ ಬಂದಿಲ್ಲವೆಂದು ಸಚಿವರು ಹೇಳಬೇಕು. ಅಲ್ಲಿ ಕೆಲಸವಾಗಬೇಕು. ಅಲ್ಲಿ toll gate ಮಾಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದರು. ಆದರೆ, ಗಂಡಸಿಯೂ ಸೇರಿದಂತೆ toll gate ಮಾಡಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸರ್, ನಾವು toll ಕೊಡಿಸುತ್ತೇವೆ, ಲಾರಿಗಳವರ ಹತ್ತಿರ ದುಡ್ಡು ಕೊಡಿಸುತ್ತೇವೆಂದರೂ, ಅದನ್ನು ಮಾಡಿಲ್ಲವಲ್ಲ. ಅದು ಬಜೆಟ್‌ನಲ್ಲಿ ಸೇರಿರುವ ಕೆಲಸವಾಗಿದೆ.

ಶ್ರೀ ಬಿ.ಶಿವರಾಮು : ಲಾರಿಗಳನ್ನೂ ನಿಲ್ಲಿಸಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು ಸಮಯ ಕೊಟ್ಟಾಗ ನಾನು ಮಾತನಾಡುವಾಗ ಕೆಲವೊಂದು ಆರೋಪಗಳನ್ನು ಮಾಡಿದ್ದೆ ಮತ್ತು ಸಲಹೆಗಳನ್ನೂ ಕೊಟ್ಟಿದ್ದೆ. ಮಾನ್ಯ ರೇವಣ್ಣನವರು ಇತ್ತ ಗಮನವನ್ನು ಕೊಡಬೇಕು. ಹೋದ ಸಲ ಲೈನ್‌ಮನ್‌ಗಳ recruitment ಆಯಿತು. ಅಧ್ಯಕ್ಷರೆ, ತಾವೂ ಕೂಡ ಸ್ವಲ್ಪ ಗಮನ ಕೊಡಬೇಕು. ನಾನು ಮಾತನಾಡುವಾಗ ಆರೋಪಗಳನ್ನು ಮಾಡಿದ್ದೆ. ಏನೆಂದರೆ, ಗುಲ್ಬರ್ಗಾ ಭಾಗದಲ್ಲಿ 1,000 ಲೈನ್‌ಮನ್‌ಗಳ recruitment ಆಯಿತು. ಆಗ ಏನು ಮಾಡಿದ್ದಾರೆಂದರೆ, ನಾನು ಮಾತನಾಡುವಾಗ ನೇರವಾಗಿ ಹೇಳಿದ್ದೇನೆ. ಪೆನ್ಸಿಲ್‌ನಿಂದ ಮಾರ್ಕ್ಸ್ ಹಾಕಿಕೊಂಡು ಬಂದು ಅದೇ ದಿವಸ ಲಿಸ್ಟ್ ಹಚ್ಚಿ ಎಂದರೆ, ಹಚ್ಚಲಿಲ್ಲ. ನಾನು Chief Engineer ಅವರಿಗೆ direct ಆಗಿ phone ಮಾಡಿ ಹೇಳಿದೆ. ಲಿಸ್ಟ್ ಹಚ್ಚಿ ಎಂದರೆ, ಅವರು ಹಚ್ಚಲಿಲ್ಲ. ಇಲ್ರಿ, ಕಾವೇರಿ

ಭವನದಿಂದ ನಮಗೆ direction ಇದೆಯೆಂದರು. ಇದನ್ನು ನಾನು ಮಾನ್ಯ ಸಚಿವರ ಗಮನಕ್ಕೂ ತಂದೆ. ಮಾನ್ಯ ಅಧ್ಯಕ್ಷರೆ, ಅದರಲ್ಲಿ ಅವ್ಯವಹಾರವಾಗಿದೆ. ನಿಮ್ಮ candidate ಯಾರಾದರೂ ಇದ್ದಾರೆಯೇ ಎಂದು ಕೇಳಿದರು. ನನ್ನದು ಯಾವುದೇ candidate ಇಲ್ಲ, ಎಲ್ಲರೂ ಬಡ ಹುಡುಗರಿದ್ದಾರೆ. ನೇರವಾಗಿ ಆವತ್ತೇ ಸಾಯಂಕಾಲವೇ ಲಿಸ್ಟ್ ಹಚ್ಚಿ. ಮಂಗಳೂರಿನಲ್ಲಿ ಅಂದು ಸಾಯಂಕಾಲವೇ ಲಿಸ್ಟ್ ಹಚ್ಚುತ್ತಾರೆ. ಆದರೆ, ಗುಲ್ಬರ್ಗಾದಲ್ಲಿ ಲಿಸ್ಟ್ ಹಚ್ಚುವುದಕ್ಕೆ ಸಿದ್ಧರಿಲ್ಲ. ಏಕೆಂದರೆ, ಯಾವುದೇ ಬಡಪಾಯಿಗಳು ಕೇಳಲು ಸಿದ್ಧರಿರುವುದಿಲ್ಲ, ಪಾಪ! ಆ ಎಲ್ಲ ಬಡ ಹುಡುಗರು ನನ್ನ ಬಳಿ ಬಂದಿದ್ದರು. ಏನು ಸರ್? Merit undermine ಆಗುತ್ತದೆಂದು ಅವರು ಲಿಸ್ಟ್ ಹಚ್ಚುತ್ತಿಲ್ಲ ಎಂದರು. ಇದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೂ ತಂದೆ. ಅಲ್ಲಿ ವಾರದವರೆಗೂ ಕೂಡ ಲಿಸ್ಟ್ ಹಚ್ಚಲಿಲ್ಲ. ನೋಟೀಸ್ ಬೋರ್ಡ್‌ನಲ್ಲಿ ಮಾರ್ಕ್ಸ್ ಹಚ್ಚಿದರೆ, next selection list ನಲ್ಲೂ, marks numbers ಹಾಕುವುದಿಲ್ಲ. Direct ಆಗಿ ಹೋಗುತ್ತದೆ. ಈ ರೀತಿಯಾದಲ್ಲಿ, ಇದಕ್ಕೇನಾದರೂ ಪಾರದರ್ಶಕತೆ ಇದೆಯೇ? ಮಾನ್ಯ ರೇವಣ್ಣನವರು ಹೇಳುತ್ತಾರೆ. ನೀವು ಅಭಿವೃದ್ಧಿ ಮಾಡುವುದು ಬೇರೆ. ಬಡ ಜನರಿಗೆ ಅನ್ಯಾಯವಾಗುತ್ತಿರುವುದನ್ನು ನೀವೂ ನೋಡಬೇಕು. ಈ ಇಲಾಖೆಯಲ್ಲಿ, ನೀವು ಮಾಡುವುದರಲ್ಲಿ ಪಾರದರ್ಶಕತೆ ಇದೆಯೇ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಈಗ ಮಾಧುಸ್ವಾಮಿ ಯವರು ರಸ್ತೆ ನಿಗಮದ ಬಗ್ಗೆಯೂ ಸ್ವಲ್ಪ ಸವಿಸ್ತಾರವಾಗಿ ಮಾತನಾಡಿದ್ದಾರೆ. ಮಾಧುಸ್ವಾಮಿಯವರ ಭಾಷಣದ ವಿವರಗಳನ್ನು ನೋಡಿದೆ. ತಾವು ಮಾತನಾಡಿರುವುದಕ್ಕೆ ಉತ್ತರ ಕೊಟ್ಟಿಲ್ಲವೆಂದು ಹೇಳಿದ್ದಕ್ಕೆ ನಾನು Clarification ಕೊಡುತ್ತೇನೆ. ರಸ್ತೆ ನಿಗಮವೆಂದರೆ, ಕುಮಾರಸ್ವಾಮಿ, ರೇವಣ್ಣ, ಅನಂತರ, ಸದನದಲ್ಲಿ ಇಲ್ಲದಿರುವವರ ಹೆಸರನ್ನೂ ಹೇಳಿದ್ದಾರೆ. ನನ್ನ ಹೆಸರನ್ನು ಹೇಳಲಿ. ನನ್ನದೇನೂ ಅಭ್ಯಂತರವಿಲ್ಲ. ನನಗೆ ಉತ್ತರ ಕೊಡುವ ಶಕ್ತಿ ಇದೆ. ಆದರೆ, ಸದನದಲ್ಲಿ ಇಲ್ಲದಿರುವವರ, ಬೇರೆಯವರ ಹೆಸರನ್ನು ಪ್ರಸ್ತಾಪಿಸಲು ನೀವು ಹೇಗೆ allow ಮಾಡಿದಿರೋ ನನಗೆ ಗೊತ್ತಿಲ್ಲ. ನಾನು ಅಷ್ಟು ಸಂಸದೀಯ ಪಟುವಲ್ಲ. ಇದು ಒಂದು ಕಡೆ ಇರಲಿ. ಅವರು ಮಾತನಾಡುತ್ತಾ, ಚಿಕ್ಕನಾಯಕನಹಳ್ಳಿಯಿಂದ ಹಾಸನದವರೆಗೆ ರಸ್ತೆ ಏನಾಗಿದೆ ಎಂದರು. ರಸ್ತೆ ಉದ್ದ 74 ಕಿಲೋಮೀಟರ್. ತುಮಕೂರು ಜಿಲ್ಲೆಯನ್ನು

ಹಾದು ಹೋಗುವ ರಸ್ತೆ ಇದಾಗಿದೆ. 31 ಕಿಲೋಮೀಟರ್ ಇದೆ. ಅದರಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 7 ಕಿಲೋಮೀಟರ್, ತಿಪಟೂರು ತಾಲ್ಲೂಕಿನಲ್ಲಿ 24 ಕಿಲೋಮೀಟರ್, ಹಾಸನ ಜಿಲ್ಲೆಯಲ್ಲಿ ಹಾದು ಹೋಗುವುದು 43 ಕಿಲೋಮೀಟರ್. ಅರಸೀಕೆರೆ ತಾಲ್ಲೂಕಿನಲ್ಲಿ 16 ಕಿಲೋಮೀಟರ್, ಹಾಸನ ತಾಲ್ಲೂಕಿನಲ್ಲಿ 27 ಕಿಲೋಮೀಟರ್. ಇದು 210 ಕೋಟಿ ರೂ, 43 ಕೋಟಿ ರೂಪಾಯಿಗೆ ಎಂದು ಹೇಳಿದಿರಲ್ಲ. 43 ಕೊಟಿ ರೂಪಾಯಿಗಳಿಗೆ ಆಗುವುದಿಲ್ಲ. 210 ಕೋಟಿ ರೂಪಾಯಿಗಳಿಗೆ BOT ಆಧಾರದ ಮೇಲೆ ಕೈಗೆತ್ತಿಕೊಳ್ಳುವುದಕ್ಕೆ ಈ ರಸ್ತೆ ಕುರಿತ ಪ್ರಸ್ತಾವನೆಯನ್ನು ಈಗಾಗಲೇ ಸಿದ್ಧಪಡಿಸಿ ಹಣಕಾಸು ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇನೆ. ಇದೇ ರೀತಿ ಸುಮಾರು ಇನ್ನು ಆರು ರಸ್ತೆಗಳಿವೆ. ಕಳೆದ ಬಜೆಟ್‌ನಲ್ಲಿ 43 ಕೋಟಿ ರೂಪಾಯಿಗಳಷ್ಟು ದುಡ್ಡು ಇಟ್ಟು, ಹೆಸರನ್ನು ಹೇಳಿದರೇ ವಿನಾ ಅದಕ್ಕೆ ಹಣ ಒದಗಿಸಲಿಲ್ಲ. ಬೇಕಾದರೆ, ತೆಗೆದು ನೋಡಿ.

ಶ್ರೀ ಬಿ.ಶಿವರಾಮು : ಈಗಲೂ ಕೂಡ ಅದು Finance Department ಗೆ ಹೋಗಿ ನಾಲ್ಕು ತಿಂಗಳಾಯಿತು. ಇನ್ನೂ ಅಲ್ಲಿಯೇ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಅಲ್ಲಿಂದ ಬಂದರೆ, ಈಗ ಚಿಕ್ಕನಾಯಕನಹಳ್ಳಿ ಒಂದು ರಸ್ತೆಗೆ ಸಂಬಂಧಿಸಿದಂತೆ approval ಕೊಟ್ಟಿವು. ಟೆಂಡರ್ ಕರೆಸಿದ್ದೇನೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು 13.90 ಕಿಲೋಮೀಟರ್‌ಗಳಿಗೆ ಸಂಬಂಧಿಸಿದಂತೆ, 3 ಕೋಟಿ 50 ಲಕ್ಷಕ್ಕೆ ಟೆಂಡರ್ ಕಾಮಗಾರಿಗೆ ನಮಗೆ ಆರ್ಥಿಕ ಇಲಾಖೆಯಿಂದ ಅನುಮತಿ ಕೊಟ್ಟರೆ, ನಮ್ಮದರಲ್ಲೇ ನಾವು ಮಾಡಿದ್ದೇವೆ. ನಾನು ಅದನ್ನೂ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇದಾದ ನಂತರ, ಚಿಕ್ಕನಾಯಕನಹಳ್ಳಿ ರಸ್ತೆ ಬಗ್ಗೆ ಹೇಳುವುದಾದರೆ ಹಣಕಾಸು ಸಚಿವರೂ ಇಲ್ಲಿದ್ದಾರೆ. ಅವರಲ್ಲಿ ಮನವಿ ಮಾಡುತ್ತೇನೆ. ಏಕೆಂದರೆ, ಅಲ್ಲಿ 15,000 ಲಾರಿಗಳು ಹೋಗುತ್ತಿವೆ. ಅಲ್ಲಿ ಒಂದಲ್ಲ, ಎರಡಲ್ಲ, ಲಾರಿಗಳು ಹೋಗುತ್ತಿರುವುದು, Toll ಮಾಡಿದರೆ, immediate ಆಗಿ ಸರ್ಕಾರಕ್ಕೆ ದುಡ್ಡಾದರೂ ಬರುತ್ತದೆ. ಇವತ್ತು ಉದಾಹರಣೆಗೆ ಹೇಳುವುದಾದರೆ, ಒಂದು ದಿವಸಕ್ಕೆ 15,000 ಲಾರಿಗಳು ಹೋಗುತ್ತಿವೆ. 5,000 ಲಾರಿಗಳು ಹೋಗುತ್ತವೆ, 5,000 ಲಾರಿಗಳು ಬರುತ್ತವೆ. ಅವೆಲ್ಲವೂ ಮೈನ್ಸ್ ಲಾರಿಗಳೇ ಆಗಿವೆ. 15 ಟನ್, 20 ಟನ್, 30 ಟನ್, 40 ಟನ್ ಗಳಷ್ಟು ಭಾರ ಹಾಕಿಕೊಂಡು ಚಲಿಸುತ್ತವೆ. ಈಗ ಶಿವರಾಮುರವರು ಹೇಳುತ್ತಿದ್ದರು. ಅರಸೀಕೆರೆ ರಸ್ತೆಗೆ

ಸಂಬಂಧಿಸಿದಂತೆ ಸುಮಾರು 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಾನೇ ರಸ್ತೆ ಮಾಡಿಸಿದ್ದೇನೆ. 18 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 40 ಟನ್‌ಗಳಷ್ಟು ಭಾರವಿರುವ ಲಾರಿಗಳು ಹೋದರೆ, ಯಾವ ರಸ್ತೆಯೂ ಉಳಿಯುವುದಿಲ್ಲ. ಆ Standardಗೆ ಮಾಡದೇ ಹೋದರೆ, ಯಾವುದೇ

(6-00 PM)

ರಸ್ತೆಗಳನ್ನು ಮಾಡಿದರೂ ಉಳಿಯುವುದಿಲ್ಲ. BOT ಆಧಾರದ ಮೇಲೆ ಮಾಡುತ್ತಿರುವುದು ಇದೊಂದು ಭಾಗವಾಗಿದೆ. ಇವತ್ತು ಇದೇ ರೀತಿ ಬರೀ ರೇವಣ್ಣನವರು KRDCLನಿಂದ Southನಲ್ಲಿ 502 ಕೋಟಿ ರೂಪಾಯಿಗಳ ಕೆಲಸ ತೆಗೆದುಕೊಂಡಿದ್ದಾರೆ, ಅತ್ತ ಕಡೆ 300 ಕೋಟಿ ರೂಪಾಯಿಗಳ ಕೆಲಸ ತೆಗೆದುಕೊಂಡಿದ್ದಾರೆಂದು ಖರ್ಗೆ ಸಾಹೇಬರು ಹೇಳಿದರು. ಅದನ್ನೂ ತಮ್ಮ ಗಮನಕ್ಕೆ ತಂದು ಬಿಡುತ್ತೇನೆ. ನಾನು ಅದರ ಡೀಟೈಲ್ಸ್ ಅನ್ನೂ ಕೂಡ ಕೊಟ್ಟುಬಿಡುತ್ತೇನೆ. ಈ 500 ಕೋಟಿ ರೂ.ಗಳ work ನಾನು ಬರುವುದಕ್ಕೆ ಮುಂಚೆಯೇ Cabinetನಲ್ಲಿ approve ಆಗಿತ್ತು. ಈಗ ಉದಾಹರಣೆಗೆ ಹೇಳುವುದಾದರೆ, ಮೈಸೂರಿನಿಂದ ಹಿಡಿದು ಕುಶಾಲನಗರದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ನಾನು ಬರುವುದಕ್ಕಿಂತ ಮುಂಚೆಯೇ ಅಪ್ರೂವ್ ಆಗಿತ್ತು. ಇದು ತಮಗೆ ಗೊತ್ತಿರಬಹುದು. ಸಚಿವ ಸಂಪುಟದ ಸಭೆಯಲ್ಲಿ ಕುಶಾಲನಗರದಿಂದ ಸಂಪಾಜೆವರೆಗೆ 107 ಕೋಟಿ ರೂ.ಗಳು, ಮತ್ತು ಬೆಂಗಳೂರು–ಮೈಸೂರು 91 ಕೋಟಿ ಅಪ್ರೂವ್ ಆಗಿತ್ತು. ಮೈಸೂರು–ಬೆಂಗಳೂರು ರೋಡ್ ಇದಕ್ಕೇ ಸೇರಿದೆ. ಒಟ್ಟು ಈ ಎರಡರಿಂದ 201 ಕೋಟಿ ರೂ.ಗಳಾಗುತ್ತದೆ. ಬರೀ ಮೈಸೂರಿನಿಂದ ಕುಶಾಲನಗರಕ್ಕೆ 103 ಕೋಟಿ ರೂ.ಗಳು, ಕುಶಾಲನಗರದಿಂದ ಸಂಪಾಜಿಗೆ 97 ಕೋಟಿ ರೂ.ಗಳು ಆಗುತ್ತದೆ. ಅದೇ ರೀತಿ ನಾವು package works, ಆಂಧ್ರದ ಗಡಿ ಮೇಡಕ್‌ನಿಂದ ರಾಮಸಮುದ್ರವರೆಗೆ 58 ಕೋಟಿ ರೂ.ಗಳು, ಯಾದಗಿರಿಯಿಂದ ಶಹಾಪುರದವರೆಗೆ 56 ಕೋಟಿ ರೂ.ಗಳಿಗೆ ಅಪ್ರೂವ್ ಆಗಿತ್ತು. ಮಾನ್ಯ ಸಭಾಧ್ಯಕ್ಷರೆ, ಇದು ಹಳೆಯದೇ. ಅದರ ಕೆಲಸವೇ ಈಗ ನಡೆಯುತ್ತಿದೆ. ನಾವೇನೂ ಹೊಸದಾಗಿ ಅಂಗೀಕಾರ ಕೊಟ್ಟಿಲ್ಲ.

ಶ್ರೀ ಧರ್ಮಸಿಂಗ್ : ಹಿಂದೆ ಮಾಡಿದ್ದು ಬೇಡ. ಈಗ ನೀವೇನು ಮಾಡುತ್ತಿದೀರಿ? ಯಾವ್ಯಾವ ರಸ್ತೆಗಳಿಗೆ ಎಷ್ಟೆಷ್ಟು ದುಡ್ಡು ಕೊಡುತ್ತಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮಾಧುಸ್ವಾಮಿಯವರು, KRDCL ಅನ್ನು ಕರ್ನಾಟಕ ಧರ್ಮಸಿಂಗ್ ರಸ್ತೆ ಅಭಿವೃದ್ಧಿ ನಿಗಮ ಎಂದೇ ಹೇಳಬೇಕಾಗಿತ್ತು.

ಶ್ರೀ ಧರ್ಮಸಿಂಗ್ : ಆ ತರಹದ ಹೇಳಿಕೆ ನಮಗೇನೂ ಬೇಕಾಗಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮ ಕಾಲದಲ್ಲಿ ಮಾಡಿರುವುದನ್ನೇ ನಾನು ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಈಗೇನು ಮಾಡುತ್ತಿದ್ದೀರಿ ಎಂಬುದನ್ನು ಹೇಳಿ. What is your course of action? ನೀವೇನು ಪ್ಲಾನ್ ಮಾಡಿದ್ದೀರಿ ಎಂಬುದನ್ನು ಹೇಳಬೇಕಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ : ಈಗ ನಾನು ಅದನ್ನೇ ಹೇಳಲಿಕ್ಕೆ ಹೊರಟ್ಟಿದ್ದೇನೆ. ನನಗೆ ಹೇಳುವುದಕ್ಕಾದರೂ ಸ್ವಲ್ಪ ಅವಕಾಶ ಕೊಡಿ. ಈಗ ಉದಾಹರಣೆಗೆ ಹೇಳುವುದಾದರೆ,.....

(ಗೊಂದಲ)

ಎರಡು ನಿಮಿಷ ನಾನು ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ರೇವಣ್ಣನವರೇ, ತಾವು ಹೇಳಿದ್ದು ಬಹಳಷ್ಟು ನಾವು ಕೇಳಿದ್ದೇವೆ. ನಾವು ಮಧ್ಯೆ ಮಾತೇ ಆಡಿಲ್ಲ. ನಾವು ಕೆಲವೊಂದು ಅಂಕಿಅಂಶಗಳನ್ನು ಕೋಟ್ ಮಾಡಿ ಹೇಳಿದ್ದೇವೆ ಅದು ನಮ್ಮ ಮನೆಯಿಂದ ತಂದಿದ್ದಲ್ಲ. ಅದನ್ನು ನೀವೇ provide ಮಾಡಿರುವಂತಾದ್ದು, print ಮಾಡಿರುವಂತಾದ್ದು. ನಿಮ್ಮ ಇಲಾಖೆಯಿಂದ ಬಿಡುಗಡೆಯಾದ ಹಣದ ಬಗ್ಗೆ ಮತ್ತು Road upgradation ಎಲ್ಲದರ ಬಗ್ಗೆ ನೀವೇ ಸವಿಸ್ತಾರವಾಗಿ ಹೇಳಿದ್ದೀರಿ. ನಾನು building ಎಲ್ಲಿ ಕಟ್ಟಿದೆ? ನಾನು ಏಕೆ ಹೋದೆ? ಬಡವರ ಮಕ್ಕಳು, ನನಗೆ ಅನುಕಂಪ ಬಂತು, ಮುಂತಾಗಿ ಹೇಳಿದಿರಿ. ಅದೆಲ್ಲಾ ಸರಿ. ನೀವು ಎಲ್ಲೆಲ್ಲಿ ಮಾಡಿದ್ದೀರಿ ಎಂಬುದನ್ನು ನೀವೇ ಹೇಳಿದ್ದೀರಿ. ಅದರಲ್ಲೇ ನಮಗೆ ವ್ಯತ್ಯಾಸ ಆಗಿದೆಯೋ ಇಲ್ಲವೋ ಎಂದು ಉತ್ತರ ಸಿಕ್ಕಿದೆ. ಈಗ ಪುನಃ ಪುನಃ ನಾವು ಅದನ್ನೇ ಕೇಳಿದರೆ, ನೀವು ಅದನ್ನೇ ಹೇಳುತ್ತೀರಿ. 50 ಲಕ್ಷ ರೂ.ಗಳನ್ನು ಅಲ್ಲಿ ಕೊಟ್ಟೆ, 17 ಕೋಟಿ ರೂ.ಗಳನ್ನು ಇಲ್ಲಿ ಕೊಟ್ಟೆ ಎಂದೆಲ್ಲಾ ನೀವು ಹೇಳುತ್ತೀರಿ. ನೀವು ಒಂದಲ್ಲ, ಎರಡನ್ನು ಮಾಡಿಕೊಳ್ಳಿ. ಸರ್ವಾಂಗೀಣ ಉನ್ನತಿಗಾಗಿ ಎಲ್ಲರಿಗೂ ಸೇರಬೇಕಾಗಿರುವುದನ್ನು ಸೇರಿಸುತ್ತೇನೆ, ಅದನ್ನು ಸರಿಪಡಿಸುತ್ತೇನೆ ಎನ್ನತಕ್ಕಂಥ

ಒಂದು ಮಾತನ್ನು ಹೇಳಿಬಿಡಿ. ಪುನಃ ಪುನಃ ನಾವು ನೂರು ಸಾರಿ ಅದನ್ನೇ ಕೇಳುವುದು, ನೀವು ನೂರು ಸಾರಿ ಅದೇ ಉತ್ತರವನ್ನೇ ಹೇಳುವುದು ಬೇಡ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ : ಮಾನ್ಯ ಸಚಿವರಲ್ಲಿ ನನ್ನದು ಒಂದೇ request ಇದೆ. ನನ್ನ ಧಾರವಾಡ ಮತಕ್ಷೇತ್ರದಿಂದ Goa road main connectivity ಇರುವುದೇ Dharwad-Goa Road. ಆ ರಸ್ತೆಯನ್ನೂ ಅಭಿವೃದ್ಧಿ ಪಡಿಸಲು ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ರೇವಣ್ಣನವರಿಗೆ ಸಾಕಷ್ಟು ಸಲ pressure ಹಾಕಿಸಿದ್ದೆ ಮತ್ತು ಹೇಳಿಸಿದ್ದೆ. ಆದರೂ ಇವತ್ತಿಗೂ ಅದನ್ನು ತೆಗೆದುಕೊಂಡಿಲ್ಲ. ಅದನ್ನು BOT ಮೇಲೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಇನ್ನೂವರೆಗೂ ಅದನ್ನು ತೆಗೆದುಕೊಂಡಿಲ್ಲ. ಅಲ್ಲಿ ದಿನಕ್ಕೆ 5–6 ಸಾವಿರ Manganese ಲಾರಿಗಳು ಅಲ್ಲಿ ಓಡಾಡುತ್ತವೆ. ಇಷ್ಟೊಂದು ಕಠಿಣವಾದಂತಹ ಪರಿಸ್ಥಿತಿ ಅಲ್ಲಿದೆ.

(ಗೊಂದಲ)

ಇನ್ನೊಂದು ವಿಚಾರವನ್ನು ನಾನು ಹೇಳಿಬಿಡುತ್ತೇನೆ. ಹುಬ್ಬಳ್ಳಿಯಿಂದ ನಾವು ಬೆಂಗಳೂರಿಗೆ ಬರಬೇಕಾದರೆ, ಅಲ್ಲಿಯ ರಸ್ತೆ ಸಂಪೂರ್ಣ ಹಾಳಾಗಿದೆ. ಇದು ರಾಜ್ಯದ ವ್ಯಾಪ್ತಿಗೆ ಬರುವುದಿಲ್ಲ. ಅದು National Highway ಆಗಿದೆ. ಅದು ನನಗೆ ಗೊತ್ತಿದೆ. ಆದರೂ ಇದನ್ನು ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ನಾನು ಈ ಬಗ್ಗೆ request ಮಾಡಿಕೊಳ್ಳುತ್ತೇನೆ. ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರಬೇಕಾದರೆ ನಾವು ಬಹಷ್ಟು ಕಷ್ಟಪಡಬೇಕಾಗುತ್ತದೆ. ಅದಲ್ಲದೆ ಈ ರಸ್ತೆಯಲ್ಲಿ ಸಾಕಷ್ಟು ಅಪಘಾತಗಳಾಗುವುದನ್ನು ನಾವು ನೋಡುತ್ತಿರುತ್ತೇವೆ. ಆ ರಸ್ತೆಯಲ್ಲಿ ಓಡಾಡಲೂ ಆಗದಂತಹ ಒಂದು ರೀತಿಯ ಭಯದ ವಾತಾವರಣ ಇದೆ. ಹುಬ್ಬಳ್ಳಿ–ಬೆಂಗಳೂರು ರಸ್ತೆಗಳನ್ನು ತಕ್ಷಣ ಅಭಿವೃದ್ಧಿ ಪಡಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ಇದನ್ನು clear ಮಾಡಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರೇನು ಹೇಳಿದರು, ಬೆಳಗಾಂನಿಂದ ಕೋಲಾರ ರಸ್ತೆಗೆ ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆ. ಅದಕ್ಕೆ 75 ಕೋಟಿ ರೂ.ಗಳಾಗಿದೆ.

(ಗೊಂದಲ)

ಶ್ರೀ ಎ.ಬಿ.ಪಾಟೀಲ್ : ಅವರು ಕೇಳಿದ್ದು ಬೆಳಗಾಂ-ಕೋಲಾರ ರಸ್ತೆಯಲ್ಲ. ಧಾರವಾಡದಿಂದ ಗೋವಾಗೆ ಹೋಗುವ ರಸ್ತೆ ಬಗ್ಗೆ ಅವರು ಕೇಳಿದರು.

ಶ್ರೀ ಹೆಚ್.ಡಿ. ರೇವಣ್ಣ : ಸಾರ್, ಧಾರವಾಡ ರಸ್ತೆಯ ಬಗ್ಗೆಯೂ ಸಹ ಹೇಳುತ್ತಿದ್ದೇನೆ. ಬೆಳಗಾಂನಿಂದ ಕೋಲಾರಕ್ಕೆ ಹೋಗುವ ರಸ್ತೆಗೆ 75 ಕೋಟಿ ರೂ.ಗಳಿಗೆ ಕೆಲಸ ಪ್ರಾರಂಭ ಮಾಡಲಿಕ್ಕೆ agency fix ಮಾಡಲಾಗಿದೆ. ಅದೇ ರೀತಿ ಧಾರವಾಡ-ಅಳ್ನಾವರ-ರಾಮನಗರ ರಸ್ತೆಗೆ 161 ಕೋಟಿ ರೂ.ಗಳಲ್ಲಿ BOT ಆಧಾರದ ಮೇಲೆ ರಸ್ತೆ ಕಾಮಗಾರಿ ತೆಗೆದುಕೊಳ್ಳಲು ಟೆಂಡರ್ ಕರೆಯುತ್ತಿದ್ದೇವೆ. ಹಾಗೆಯೇ ನಮ್ಮ ಸೇಡಂ ಶಾಸಕರು ಹೇಳಿದ ಹಾಗೆ, ಮಹಾರಾಷ್ಟ್ರ ಗಡಿ ರಿಬ್ಬನ್ ಪೇಟೆ ಆಂಧ್ರಪ್ರದೇಶದ ರಸ್ತೆ, ಅದನ್ನೂ ಸಹ ಸುಮಾರು 197 ಕೋಟಿ ರೂ.ಗಳ ವೆಚ್ಚದಲ್ಲಿ BOT ಆಧಾರದ ಮೇಲೆ ತೆಗೆದುಕೊಳ್ಳಲು ಟೆಂಡರ್ ಕರೆಯುತ್ತಿದ್ದೇವೆ. ಬರದಿರುವುದನ್ನೆಲ್ಲಾ ಹಣಕಾಸಿನ ಇಲಾಖೆಗೆ ಕೊಟ್ಟು ನೋಡೋಣ. ಅದರ ಬಗ್ಗೆ ಈಗ ಬೇಡ. ನಾನು ಕಾಲೇಜ್ ಬಿಲ್ಡಿಂಗ್ ಬಗ್ಗೆ ಸವಿಸ್ತಾರವಾಗಿ ಎಲ್ಲವನ್ನೂ ಹೇಳಿದ್ದೇನೆ. ಎಲ್ಲಾದರೂ ತಾರತಮ್ಯ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ.

(ಗೊಂದಲ)

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಂಗಳೂರು-ಶಿರಾಡಿ ಘಾಟ್ ರಸ್ತೆ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಹೆಚ್.ಡಿ.ರೇವಣ್ಣ : ಮಂಗಳೂರು-ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ ಬಗ್ಗೆ ನಾನು 2-3 ಸಲ ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಹೇಳಿದ್ದೇನೆ. ಅಲ್ಲಿ 5 ಸಾರಿ ಟೆಂಡರ್ ಹಾಕಿದರೂ ಒಬ್ಬರೂ ಬರಲಿಲ್ಲ. ಮತ್ತೆ ಟೆಂಡರ್ ಕರೆದು, ಅದಷ್ಟೇ cost ಇದ್ದರೂ ನಾವು ಮಾಡುತ್ತೇವೆಂದು ಕೇಂದ್ರಕ್ಕೆ ಹೇಳಿದ್ದೇವೆ.

(ಗೊಂದಲ)

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಟೆಂಡರ್ ಕರೆದಾಗ ಯಾರೂ ಬರದಿದ್ದರೆ, ಇಲಾಖೆಯಿಂದಲಾದರೂ ರಸ್ತೆ ಅಭಿವೃದ್ಧಿ ಮಾಡಿಸಿ. ಆಗುಂಬೆ ಘಾಟಿ, ಶಿರಾಡಿ ಘಾಟಿ, ಬಾಳೇಬರಿ ಯಾವುದರಲ್ಲೂ ಹೋಗಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಅದು National Highway ಗೆ ಬರುತ್ತದೆ. ಅಲ್ಲಿ ದಿನಕ್ಕೆ 15 ಸಾವಿರ ಲಾರಿಗಳು ಹೋಗುತ್ತಿದ್ದವು. ಈಗ ಲಾರಿಗಳನ್ನು ನಿಲ್ಲಿಸಿದ್ದೇವೆ. ಅದನ್ನು ಕೇಂದ್ರ ಸರ್ಕಾರದವರು ವಾಪಸ್ ನಮಗೆ ಕಳುಹಿಸಿಕೊಟ್ಟರೆ, ನಾವೇ ಅದನ್ನು ಮಾಡುತ್ತೇವೆ. ಇಲ್ಲದಿದ್ದರೆ ನಾನೇನು ಮಾಡಲಿ? ಅದನ್ನು ರಾಜ್ಯ ಸರ್ಕಾರದಿಂದ ಮಾಡಲಿಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದಿಂದ ದುಡ್ಡು ಪಡೆದುಕೊಂಡು ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲಿ ತಾರತಮ್ಯವಾಗಿದೆ ಅಲ್ಲಿ ಸರಿಪಡಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಎಲ್ಲವನ್ನೂ ಸರಿಪಡಿಸೋಣ, ಮಾನ್ಯ ಖರ್ಗೆ ಸಾಹೇಬರು ಹೇಳಿದಂತೆಯೇ ಮಾಡೋಣ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ತಾರತಮ್ಯವಾಗಿದೆ ಎಂಬ ಬಗ್ಗೆ ಉತ್ತರವೇ ಬರಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮಾಧುಸ್ವಾಮಿಯವರೆ, ಯಾವ್ಯಾವುದು ಇದೆಯೋ, ಅದೆಲ್ಲವನ್ನೂ ಸರಿಪಡಿಸೋಣ. 200 ಕೋಟಿ ರೂ.ಗಳದ್ದೇ ಸರಿಪಡಿಸಿದ ಮೇಲೆ ಇನ್ನೇನು ತಾರತಮ್ಯದ ಪ್ರಶ್ನೆ ಬರುತ್ತದೆ?

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು up-gradationನಲ್ಲಿ ತಾರತಮ್ಯ ಮಾಡಿದೀರಿ ಎಂದು ನಾವು ಹೇಳಿದ್ದೆವು.

ಶ್ರೀ ಹೆಚ್.ಡಿ.ರೇವಣ್ಣ : ತಾರತಮ್ಯ ಇದ್ದರೆ ಅದನ್ನು ಸರಿಪಡಿಸೋಣ ಸಾರ್.

ಶ್ರೀ ಕೆ.ಶ್ರೀನಿವಾಸಗೌಡ : ತಾರತಮ್ಯ ಸರಿಪಡಿಸುತ್ತೇವೆಂದು ಒಂದು ಮಾತು ತಾವು ಹೇಳಿಬಿಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಯಾವುದಿದ್ದರೂ ಸರಿಪಡಿಸೋಣ. ಮಾನ್ಯ ಶ್ರೀನಿವಾಸಗೌಡರು ಕೆಲಸ ಮಾಡಿರುವ ಬಗ್ಗೆ ಏನೂ ಹೇಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಸರಿಪಡಿಸುವುದು ಅವರ ಕರ್ತವ್ಯ, ಅದನ್ನು ಮಾಡುತ್ತಾರೆ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಯಾವುದಾದರೂ ತಾರತಮ್ಯ ಮಾಡಲಿಕ್ಕೆ ಹೋಗಿಲ್ಲ. ಅಂತಹದ್ದು ಏನಾದರೂ ಇದ್ದರೆ, ಅದನ್ನು ಸರಿಪಡಿಸೋಣ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ರೇವಣ್ಣನವರೇ, ಸುಮ್ಮನೆ ವಾದ ವಿವಾದ ಏಕೆ ಮಾಡುತ್ತೀರಿ? ತಾರತಮ್ಯವಾಗಿದೆ, ಅದನ್ನು ಸರಿಪಡಿಸುತ್ತೇನೆಂದು ಸುಮ್ಮನೆ ಒಪ್ಪಿಕೊಂಡು ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಸರಿಪಡಿಸೋಣ ಬಿಡಿ ಸಾರ್.

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೇ, ತಮ್ಮ reply ಆಯಿತೇ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಆಯಿತು.

(ಗೊಂದಲ)

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಮ್ಮ ಬಿಜಾಪುರ–ಹುಬ್ಬಳ್ಳಿ ನ್ಯಾಷನಲ್ ಹೈವೇ ಪರಿಸ್ಥಿತಿಯನ್ನು ಮಾನ್ಯ ಸಚಿವರು ನೋಡಬೇಕು. ಅದನ್ನು ಯಾವುದಾದರೂ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಬೇಕು. 600 ಕಿ.ಮೀ. ನಮ್ಮ ರಸ್ತೆಯನ್ನು UKP ಯವರು ತೆಗೆದುಕೊಂಡಿದ್ದಾರೆ. ಅವರೂ ಅದನ್ನು ಅಭಿವೃದ್ಧಿ ಪಡಿಸುತ್ತಿಲ್ಲ ಅಥವಾ ಪುನಃ ನಿಮ್ಮ ಇಲಾಖೆಯವರಿಗೂ ಸಹಿತ ಕೊಡುತ್ತಿಲ್ಲ. ಈ ಎರಡು ವಿಚಾರಗಳ ಬಗ್ಗೆ ತಾವು ನಮಗೆ ಸ್ಪಷ್ಟೀಕರಣ ಕೊಡಬೇಕು. ಮಾನ್ಯ ರೇವಣ್ಣನವರು ಇವತ್ತು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಇವತ್ತು ಯಾವ ಕೀಲಿ ಇಟ್ಟುಕೊಂಡು ಬಂದಿದ್ದೀರೋ ಗೊತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶಿವಾನಂದ್ ಪಾಟೀಲ್‌ರವರು ಹೇಳುತ್ತಿರುವ ರಸ್ತೆ ಬಹಳ important ಆಗಿದೆ. ಅದರ ಬಗ್ಗೆ ನಾನು ಕೇಂದ್ರ ಸರ್ಕಾರದ ಮಂತ್ರಿಗಳ ಹತ್ತಿರ ಮಾನ್ಯ ಶಿವಾನಂದ್ ಪಾಟೀಲ್‌ರವರನ್ನೂ ಸಹ ಕರೆದುಕೊಂಡು ಒಟ್ಟಿಗೇ ಹೋಗುತ್ತೇನೆ.

ಶ್ರೀ ಶಿವಾನಂದ ಎಸ್.ಪಾಟೀಲ್ : ನಮ್ಮನ್ನು ಯಾವಾಗ ಕರೆದುಕೊಂಡು ಹೋಗುತ್ತೀರಿ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾನು ಹೋಗಬೇಕಾದರೆ ನಿಮ್ಮನ್ನೇ ಕರೆದುಕೊಂಡು ಹೋಗುತ್ತೇನೆ. ಇದರಲ್ಲೇನೂ ರಾಜಕೀಯ ಇಲ್ಲ. ರಾಜ್ಯದ ಹಿತದೃಷ್ಟಿಯಿಂದ 224 ಕ್ಷೇತ್ರಗಳೂ ಸಹಿತ ಬೆಳವಣಿಗೆಯಾಗಬೇಕು. ಆ ದಿಕ್ಕಿನಲ್ಲಿ ಈ ಸರ್ಕಾರ ಚಿಂತನೆ ಮಾಡುತ್ತಿದೆ. ಇನ್ನು ಕಾಲೇಜ್ ಬಿಲ್ಡಿಂಗ್ ಬಗ್ಗೆ ಮಾಡುತ್ತೇವೆಂದು ನಾವು ಈಗಾಗಲೇ ಹೇಳಿದೆವು. ಅದೇ ರೀತಿ ಏನೇನು ತಾರತಮ್ಯ ಇದೆಯೋ, ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಮುಂದಿನ ಬಾರಿ ನಾನು ಮಾನ್ಯ ಹಣಕಾಸಿನ ಸಚಿವರ ಮನವೊಲಿಸಿ, ಇನ್ನೂ ಹೆಚ್ಚು ಹಣವನ್ನು ರಸ್ತೆಗಳ ಅಭಿವೃದ್ಧಿಗೆ ಕೊಡುವಂತೆ ಮಾಡಿ, ರಾಜ್ಯದ 224 ಕ್ಷೇತ್ರಗಳನ್ನೂ ಅಭಿವೃದ್ಧಿಪಡಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಪಡುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಸೋಮವಾರ ಬೆಳಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಸಂಜೆ 6 ಗಂಟೆ 10 ನಿಮಿಷಗಳಿಗೆ ಮುಂದೂಡಲಾಯಿತು.
ಸದನವು ಪುನಃ ದಿನಾಂಕ: 30ನೇ ಜುಲೈ 2007ರಂದು ಬೆಳಗ್ಗೆ 11 ಗಂಟೆಗೆ
ಸೇರಲು ತೀರ್ಮಾನಿಸಿತು)